# ಹೊಸ ಮನುಷ್ಯ


ಸಮಾಜವಾದಿ ಮಾಸಿಕ

ಆಗಸ್ಟ್ ೨೦೧೪ (ವಾರ್ಷಿಕ ವಿಶೇಷ ಸಂಚಿಕೆ)

ರಸಲ್ ಮೀನ್ಸ್
ರಾಮಮನೋಹರ ಲೋಹಿಯಾ
ಯು.ಆರ್. ಅನಂತಮೂರ್ತಿ
ಸುರೇಂದ್ರ ಕೌಲಗಿ
ಮಸ್ತ್‌ರಾಂ ಕಪೂರ್
ಕೋಣಂದೂರು ಲಿಂಗಪ್ಪ
ಗಿರೀಶ್ ಕಾಸರವಳ್ಳಿ
ಜಯಂತ ಕಾಯ್ಕಿಣಿ
ರಾಜೇಂದ್ರ ಚೆನ್ನಿ
ಇಂದಿರಾ ಬಿ.ಕೃಷ್ಣಪ್ಪ
ಜಿ.ಪಿ. ಬಸವರಾಜು
ಎಸ್. ಮಂಜುನಾಥ
ಎಸ್.ಚಂದ್ರಶೇಖರಯ್ಯ
ಸವಿತಾ ನಾಗಭೂಷಣ
ಮೀನಾ ಪಾಟೀಲ
ವಿನಯಾ ವಕ್ಕುಂದ
ವಿಜಯೇಂದ್ರ ಪಾಟೀಲ
ಸಿ. ರವೀಂದ್ರನಾಥ್
ವಾಸುದೇವ ಬೆಳ್ಳಿ
ಬಸವರಾಜ ಹೂಗಾರ
ಎಂ.ಎಸ್. ರುದ್ರೇಶ್ವರ ಸ್ವಾಮಿ
ಅಪೂರ್ವ ಡಿ'ಸಿಲ್ವ



ಬೆಲೆ
ರೂ.೫೦




ಆಧುನಿಕ ನಾಗರೀಕತೆಯೂ ಈ ಭೂಮಿಯೂ...

ನಾವು ಉಳಿಯಲು ಯೂರೋಪ್ ಸಾಯಬೇಕು!














# ಪುಸ್ತಕ ಪ್ರಕಾಶನ

91, 9ನೇ ಮುಖ್ಯರಸ್ತೆ
ಸರಸ್ವತಿಪುರಂ,
ಮೈಸೂರು–570009
ಫೋನ್: 0821–2545774

ಅಂಚೆ ಮೂಲಕ ತರಿಸಿಕೊಳ್ಳುವವರಿಗೆ:

**ಪುಸ್ತಕ ಪ್ರಕಾಶನ**
ಬುಕ್‌ಪೋಸ್ಟ್ ಸರ್ವಿಸ್, ಪಿ.ಬಿ.ನಂ.58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ–577132
ಫೋನ್: 08263–228353,240202,
ಮೊಬೈಲ್: 94482 03730
e-mail: raghu202@bsnl.in


## ಪುಸ್ತಕ ಬೆಲೆ ಪಟ್ಟಿ – *2015**

| | |
|---|---|
| **ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ:** | |
| ಕಿರಗೂರಿನ ಗಯ್ಯಾಳಿಗಳು | ...90.00 |
| ಕರ್ವಾಲೋ | ...105.00 |
| ಚಿದಂಬರ ರಹಸ್ಯ | ...165.00 |
| ಸಹಜ ಕೃಷಿ | ...60.00 |
| ಪರಿಸರದ ಕತೆ | ...105.00 |
| ಮಿಸ್ಸಿಂಗ್ ಲಿಂಕ್ | ...87.00 |
| ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ | ...114.00 |
| ಜುಗಾರಿ ಕ್ರಾಸ್ | ...165.00 |
| ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು | ...63.00 |
| ಫ್ಲೈಯಿಂಗ್ ಸಾಸರ್ಸ್ (1) | ...75.00 |
| ಫ್ಲೈಯಿಂಗ್ ಸಾಸರ್ಸ್ (2) | ...81.00 |
| ಕಾಡಿನ ಕತೆಗಳು(1) | ...72.00 |
| ಕಾಡಿನ ಕತೆಗಳು(2) | ...72.00 |
| ಕಾಡಿನ ಕತೆಗಳು(3) | ...75.00 |
| ಕಾಡಿನ ಕತೆಗಳು(4) | ...75.00 |
| ರುದ್ರಪ್ರಯಾಗದ ಭಯಾನಕ ನರಭಕ್ಷಕ | ...105.00 |
| ಕನ್ನಡನಾಡಿನ ಹಕ್ಕಿಗಳು (1)–ಮಿಂಚುಳ್ಳಿ | ...81.00 |
| ಕನ್ನಡನಾಡಿನ ಹಕ್ಕಿಗಳು (2)– | ...81.00 |
| ಹೆಜ್ಜೆ ಮೂಡದ ಹಾದಿ | ...90.00 |
| ಹಕ್ಕಿ–ಪುಕ್ಕ | ...369.00 |
| ಅಣ್ಣನ ನೆನಪುಗಳು | ...180.00 |
| ಹುಲಿಯೂರಿನ ಸರಹದ್ದು | ...105.00 |
| ಅಬಚೂರಿನ ಪೋಸ್ಟಾಫೀಸು | ...90.00 |
| ಮಿಲನಿಯಮ್(1)– ಹುಡುಕಾಟ | ...81.00 |
| ಮಿಲನಿಯಮ್(2)– ಜೀವನ ಸಂಗ್ರಾಮ | ...72.00 |
| ಮಿಲನಿಯಮ್(3)– ಪೆಸಿಫಿಕ್ ದ್ವೀಪಗಳು | ...78.00 |
| ಮಿಲನಿಯಮ್(4)– ಚಂದ್ರನ ಚೂರು | ...81.00 |
| ಮಿಲನಿಯಮ್(5)– ನೆರೆಹೊರೆಯ ಗೆಳೆಯರು | ...81.00 |
| ಮಿಲನಿಯಮ್(6)– ಮಹಾಯುದ್ಧ (1) | ...87.00 |
| ಮಿಲನಿಯಮ್(7)– ಮಹಾಯುದ್ಧ (2) | ...87.00 |
| ಮಿಲನಿಯಮ್(8)– ಮಹಾಯುದ್ಧ (3) | ...81.00 |
| ಮಿಲನಿಯಮ್(9)– ದೇಶ ವಿದೇಶ (1) | ...81.00 |
| ಮಿಲನಿಯಮ್(10)–ದೇಶ ವಿದೇಶ (2) | ...81.00 |
| ಮಿಲನಿಯಮ್(11)–ದೇಶ ವಿದೇಶ (3) | ...81.00 |
| ಮಿಲನಿಯಮ್(12)–ದೇಶ ವಿದೇಶ (4) | ...81.00 |
| ಮಿಲನಿಯಮ್(13)–ವಿಸ್ಮಯ ವಿಶ್ವ (1) | ...72.00 |
| ಮಿಲನಿಯಮ್(14)–ಮಹಾಪಲಾಯನ | ...87.00 |
| ಮಿಲನಿಯಮ್(15)–ವಿಸ್ಮಯ ವಿಶ್ವ (2) | ...72.00 |
| ಮಿಲನಿಯಮ್(16)–ಅಡ್ವೆಂಚರ್ | ...72.00 |
| ಮಾಯಾಲೋಕ–1 | ...216.00 |
| The Stories of My Environment | ...144.00 |
| ಪಾಕ ಕ್ರಾಂತಿ ಮತ್ತು ಇತರ ಕತೆಗಳು | ...72.00 |
| ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ | ...60.00 |

| | |
|---|---|
| ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು | ...60.00 |
| ವಿಮರ್ಶೆಯ ವಿಮರ್ಶೆ | ...162.00 |
| ಮಾಯೆಯ ಮುಖಗಳು (ಚಿತ್ರ ಲೇಖನ) | ...600.00 |
| ಹೊಸ ವಿಚಾರಗಳು | ...60.00 |
| ಕಾಡು ಮತ್ತು ಕ್ರೌರ್ಯ | ...405.00 |
| ಹಕ್ಕಿಗಳ ಗ್ರೀಟಿಂಗ್ ಕಾರ್ಡ್ (6 ಬಗೆಯವು) | ಬರಲಿದೆ |
| ಒಂದು ಕಾರ್ಡಿನ ಬೆಲೆ | ...15.00 |
| **ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:** | |
| ವಿಸ್ಮಯ(1), (2), (3) ಪ್ರತಿಯೊಂದು | ...78.00 |
| ಪ್ಯಾಪಿಲಾನ್ (1), (2) ಪ್ರತಿಯೊಂದು | ...147.00 |
| **ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಡಾ.ವಿ.ವಿ.ಬೆಳವಾಡಿ** | |
| ನಡೆಯುವ ಕಡ್ಡಿ! ಹಾರುವ ಎಲೆ! | ...63.00 |
| **ಶ್ರೀ ಪ್ರದೀಪ ಕೆಂಜಿಗೆ:** ಬರ್ಮುಡಾ ಟ್ರ್ಯಾಂಗಲ್ | ...72.00 |
| ಅದ್ಭುತ ಯಾನ | ...108.00 |
| ಹೆಬ್ಬಾವಿನೊಡನೆ ಹೋರಾಟ | ...120.00 |
| **ಶ್ರೀ ಎಂ.ಶಿವಕುಮಾರ್:** ಸೈಕಲ್‌ವಾಲ | ...40.00 |
| ಕಂಪ್ಯೂಟರ್ ಕಲಿಯಿರಿ | ...147.00 |
| ಗಡಿಯಾರ ವಿಕಾಸದ ಹಾದಿಯಲ್ಲಿ | ...66.00 |
| **ವಿದ್ವಾನ್ ಶ್ರೀ ಕೊಳಂಬೆ ಪುಟ್ಟಣ್ಣಗೌಡರು** | |
| ಅಚ್ಚಗನ್ನಡ ನುಡಿಕೋಶ | ...360.00 |
| **ಶ್ರೀ ನರೇಂದ್ರ ರೈ ದೇರ್ಲ:** ಸಾವಯವ ಕೃಷಿ | ...51.00 |
| **ಶ್ರೀ ಕೃಪಾಕರ–ಸೇನಾನಿ** | |
| ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು | ...93.00 |
| **ಶ್ರೀ ಕೃಷ್ಣ ಆಲನಹಳ್ಳಿ:** ಗೋಡೆ | ...66.00 |
| **ಡಾ.ಎಸ್.ಎಂ.ವೃಷಭೇಂದ್ರಸ್ವಾಮಿ:** | |
| ತರಗತಿಗಳಲ್ಲಿ ಕುವೆಂಪು | ...198.00 |
| **ಶ್ರೀ ದೇವನೂರು ಮಹದೇವ:** | |
| ಕುಸುಮಬಾಲೆ | ...60.00 |
| ದ್ಯಾವನೂರು ಹಾಗೂ ಒಡಲಾಳ | ...96.00 |
| **ಶ್ರೀಮತಿ ತಾರಿಣಿ ಚಿದಾನಂದ:** | |
| ಮಗಳು ಕಂಡ ಕುವೆಂಪು | ...330.00 |
| **ಶ್ರೀಮತಿ ಪದ್ಮಾ ಶ್ರೀರಾಮ:** | |
| ಗಿಡಗಂಟೆಯ ಕೊರಳು | ...78.00 |
| **ಡಾ.ಕೆ.ಚಿದಾನಂದಗೌಡ:** | |
| ಬದುಕು.. ಬೆಳಕು.. ಚುಟುಕು..! ಭಾಗ–1 | ...89.00 |
| ಬದುಕು.. ಬೆಳಕು.. ಚುಟುಕು..! ಭಾಗ–2 | ...90.00 |
| **ಶ್ರೀಮತಿ ರಾಜೇಶ್ವರಿ ತೇಜಸ್ವಿ:** | |
| ನನ್ನ ತೇಜಸ್ವಿ | ...369.00 |

*ಹೊಸ ಆವೃತ್ತಿ (Edition) ಬಿಡುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರುವುದು.

# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಆಗಸ್ಟ್, ೨೦೧೪(ವಾರ್ಷಿಕ ವಿಶೇಷಾಂಕ)** **ಸಂಪಾದಕ : ಡಿ.ಎಸ್.ನಾಗಭೂಷಣ** **ಸಂಪುಟ: ೪ ಸಂಚಿಕೆ: ೧**

**ವಾರ್ಷಿಕ ಚಂದಾ:** ರೂ. ೧೫೦/–(ವ್ಯಕ್ತಿಗಳಿಗೆ) ರೂ. ೩೦೦/–(ಸಂಸ್ಥೆಗಳಿಗೆ) **ಬೆಲೆ:** ಬಿಡಿ ಪ್ರತಿ: ರೂ. ೫೦/– ಪುಟ: ೮೪



**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಮೂರು ವರ್ಷಗಳ ಹಿಂದೆ ಪತ್ರಿಕೆಯನ್ನು ಆರಂಭಿಸಿದಾಗ, ಪತ್ರಿಕೆ ಒಂದು ವರ್ಷವನ್ನಾದರೂ ಯಶಸ್ವಿಯಾಗಿ ದಾಟುವ ನಂಬಿಕೆ ನನಗೇ ಇರಲಿಲ್ಲ ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಕಾರಣ ನನ್ನಲ್ಲಿನ ಆತ್ಮ ವಿಶ್ವಾಸದ ಕೊರತೆಯಾಗಿರಲಿಲ್ಲ. ಓದುಗ ಗೆಳೆಯರ ಹಣಕಾಸಿನ ಬೆಂಬಲದ ಬಗೆಗಿನ ಅಪನಂಬಿಕೆಯೂ ಅಲ್ಲ. ನನ್ನ ಅಪನಂಬಿಕೆ, ಪತ್ರಿಕೆಯನ್ನು ಸಮಾಜವಾದಿ ಮಾಸಿಕ ಎಂದು ಕರೆದು ಅದನ್ನು ಸಮಾಜವಾದಕ್ಕೆ ಬದ್ಧವನ್ನಾಗಿ ಮಾಡಿದ್ದಕ್ಕೆ ಸಂಬಂಧಿಸಿದ್ದು. ಏಕೆಂದರೆ ಇದು ಸಮಾಜವಾದದ ಕಾಲವಲ್ಲ; ಸಮಾಜವಾದದ ಆಕರ್ಷಣೆ ಇಳಿಮುಖವಾಗುತ್ತಿರುವ ಕಾಲ ಎಂಬ ಸಾರ್ವತ್ರಿಕ ನಂಬಿಕೆ. ಆದರೆ ಪತ್ರಿಕೆ ಮೂರು ವರ್ಷಗಳ ನಂತರವೂ ಉಳಿದಿದೆ. ಅಷ್ಟೇ ಅಲ್ಲ, ತನ್ನ ಪ್ರಭಾವ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಗಟ್ಟಿ ನೆಲದ ಮೇಲೆ ನಿಲ್ಲುವಂತಾಗಿದೆ. ಇದು ಸೋಜಿಗದ ಸಂಗತಿ ಮಾತ್ರವಲ್ಲದೆ, ತನ್ನದೇ ರೀತಿಯಲ್ಲಿ ಸಮಾಜವಾದದ ಅರ್ಥಪೂರ್ಣತೆ ಮತ್ತು ಪ್ರಸ್ತುತತೆಯ ಪುನರುಚ್ಚಾರವೇ ಆಗಿದೆ ಎಂದು ನಾನು ಭಾವಿಸಿದ್ದೇನೆ.

ಹಾಗೆಂದ ಮಾತ್ರಕ್ಕೆ ನಾವು ಸಾಂಪ್ರದಾಯಿಕವಾಗಿ ಸಮಾಜವೆಂದರೇನು ಎಂದು ನಂಬಿರುವೆವೋ ಅದು ಆ ರೂಪದಲ್ಲೇ, ಆ ಶೈಲಿಯಲ್ಲೇ ಇನ್ನೂ ಜೀವಂತವಿದೆ ಅಥವಾ ಅದು ತನ್ನ ಪ್ರಸ್ತುತತೆ ಕಳೆದುಕೊಂಡಿಲ್ಲ ಎಂದಲ್ಲ. ಬದಲಿಗೆ ಸಮಾಜವಾದ ತನ್ನ ಮೂಲ ಗುರಿಯಾದ ಶೋಷಣಾರಹಿತವಾದ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ತಾನು ಈವರೆಗೆ ಸವೆಸಿ ಬಂದ ದಾರಿಯನ್ನು ಹಿಂದೊಮ್ಮೆ ತಿರುಗಿ ನೋಡಿ ಪುನರ್ವಿಮರ್ಶಿಸಿಕೊಳ್ಳುವ ಅನಿವಾರ್ಯತೆಯನ್ನು ಕಂಡುಕೊಂಡಿದೆ. ಇದಕ್ಕಾಗಿ ಅದು ಶೋಷಣೆ ಮತ್ತು ಸಮಾನತೆಗಳ ಅರ್ಥವನ್ನೂ ತನ್ನ ಅನುಭವಗಳ ಹಿನ್ನೆಲೆಯಲ್ಲಿ ಪುನರ್ಶೋಧಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಈ ತಿಳುವಳಿಕೆಯೊಂದಿಗೆ ನಮ್ಮ ಪತ್ರಿಕೆ ತನ್ನ ಹೆಜ್ಜೆಗಳನ್ನು ಹಾಕುತ್ತಿದ್ದು, ನಮ್ಮ ಪತ್ರಿಕೆಯನ್ನು ಇತರ ಎಡಪಂಥೀಯ ಪತ್ರಿಕೆಗಳೊಂದಿಗೆ ಹೋಲಿಸಿ ನೋಡಿದಾಗ ನನ್ನ ಈ ಮಾತುಗಳು ಇನ್ನಷ್ಟು ಸ್ಪಷ್ಟವಾಗಬಹುದು.

ಸಮಾಜವಾದಿ ರಾಜಕಾರಣದ ಅಧ್ಯಾಯದ ಒಂದು ವಿಷಾದದ ಸಂಗತಿ ಎಂದರೆ, ಸಮಾಜವಾದ ವಿಫಲವಾಗಿದೆ ಎನ್ನುತ್ತಿರುವವರಲ್ಲಿ ಸಮಾಜವಾದದ ಲಾಭ ಪಡೆದಿರುವ ಸಮುದಾಯವೂ ಈಗ ಸೇರಿಕೊಂಡಿದೆ ಎಂಬುದು. ಮನಮೋಹನ ಸಿಂಗ್‌ರ ಹೊಸ ಆರ್ಥಿಕತೆಯಿಂದ ಲಾಭ ಮಾಡಿಕೊಂಡವರೇ, ಮತ್ತಷ್ಟು ಲಾಭದಾಸೆಯಲ್ಲಿ ಅವರ ವಿರುದ್ಧ ತಿರುಗಿಬಿದ್ದ ಹಾಗೆ. ಅದೇನೇ ಇರಲಿ, ಸಮಾಜವಾದದ ವೈಫಲ್ಯದ ಬಗ್ಗೆ ಮಾತಾಡುತ್ತಿರುವವರು ಅದು ಸೋಲುತ್ತಿರುವಾಗಲೇ ಅದು ಮಾಡಿದ ಸಾಧನೆಗಳನ್ನು ಗಮನಿಸದೆ ಈ ಮಾತುಗಳನ್ನಾಡುತ್ತಿದ್ದಾರೆ ಎಂದಷ್ಟೇ ನಾನು ಹೇಳುತ್ತಿರುವುದು. ನನ್ನ ಈ ಮಾತಿನಲ್ಲಿ ಯಾರಿಗಾದರೂ ವಿರೋಧಾಭಾಸ ಕಂಡರೆ ಅದಕ್ಕೆ ನಾವು ಸಮಾಜವಾದವನ್ನು ಅರ್ಥೈಸಿಕೊಂಡ ಬಗೆಯೇ ಕಾರಣವಾಗಿದೆ ಎಂದೆನಿಸುತ್ತದೆ. ಹಲವು ಬಗೆಗಳ ಸಮಾಜವಾದಗಳ ಕಾಲವಾಗಿದ್ದ ಕಳೆದ ಶತಮಾನದಲ್ಲಿ ಎಲ್ಲರೂ ಅವುಗಳ ಒಂದೊಂದು ಕಲಸುಮೇಲೋಗರದ ಸಮರ್ಥಕರಾಗಿ ಒಂದಿಷ್ಟು ಸಾಧನೆಗೆ ಕಾರಣವಾದದ್ದರ ಜೊತೆಗೇ, ಅದರ ಬಗೆಗೆ ಸಾಕಷ್ಟು ಗೊಂದಲ ಮತ್ತು ಅಪನಂಬಿಕೆಗಳಿಗೂ ಕಾರಣರಾದರು. ಇದಕ್ಕೆ ಮುಖ್ಯ ಕಾರಣ, ಸಮಾಜವಾದದ ಆಧಾರ ಪರಿಕಲ್ಪನೆಗಳಾದ ಶೋಷಣೆ ಮತ್ತು ಸಮಾನತೆಗಳನ್ನು ಅವುಗಳ ಚಲನಶೀಲ ಅರ್ಥಗಳಲ್ಲಿ ಅರಿಯದೆ ಜಡ ರಾಜಕಾರಣ ಮಾಡಿದ್ದು. ಉದಾಹರಣೆಗೆ ಸಮಾನತೆ ಎಂದರೆ ನಿಜವಾಗಿ ಏನು? ಸಮಾನತೆ ಎಂದರೆ ಯಾರೊಂದಿಗೆ? ಮತ್ತು ಅದರ ತರ್ಕ ನಮ್ಮನ್ನು ಒಂದು ಸಮಾಜವಾಗಿ ಎಲ್ಲಿಗೆ ಕೊಂಡೊಯ್ಯುತ್ತದೆ? ಶೋಷಣೆ ಎಂಬುದರ ಬೇರುಗಳನ್ನು ಕೇವಲ ಚಾರಿತ್ರಿಕವಾಗಿ ನೋಡಿದರೆ ಸಾಕೆ? ಅವುಗಳ ಬಿಳಲುಗಳು ವರ್ತಮಾನದಲ್ಲಿ ಜೋತಾಡುತ್ತಿಲ್ಲವೇ? ಈ ಪ್ರಶ್ನೆಗಳನ್ನು ವಾಸ್ತವ ರಾಜಕಾರಣದೊಳಕ್ಕೆ ಬಿಟ್ಟುಕೊಳ್ಳದಂತಹ ಕುರುಡು ರಾಜಕಾರಣ ಸಮಾಜವಾದದ ಹೆಸರಲ್ಲಿ ನಡೆಯಿತಲ್ಲವೇ? ಪತ್ರಿಕೆ ಆಳದಲ್ಲಿ ಈ ಪ್ರಶ್ನೆಗಳನ್ನು ಕೇಳಿಕೊಂಡು ಮುನ್ನಡೆದಿದೆ. ಹಾಗಾಗಿಯೇ ಅದು ಈ ಕಾಲದಲ್ಲೂ ಸಮಾಜವಾದಿ ಎನಿಸಿಕೊಂಡೂ ಉಳಿದಿದೆ ಮತ್ತು ಮುನ್ನಡೆದಿದೆ.

ಪತ್ರಿಕೆಯ ಈ ಉಳಿವು ಮತ್ತು ಆತ್ಮವಿಶ್ವಾಸದ ಹಿಂದೆ ಹಲವು ರೀತಿಯ ಬೆಂಬಲದ ಕೈಗಳು ಕೆಲಸ ಮಾಡಿವೆ. ಕೆಲವನ್ನಷ್ಟೇ ಹೆಸರಿಸಬಹುದಾದರೆ, ಚಾಮರಾಜನಗರದ ಅಪೂರ್ವ ಡಿ'ಸಿಲ್ವ, ಹಾಸನದ ಬಿ.ಶಿವಕುಮಾರ್, ತುಮಕೂರಿನ ಕೆ.ಪಿ.ನಟರಾಜ್, ದಾವಣಗೆರೆಯ ಡಿ.ಜಿ.ಪುಟ್ಟರಾಜು, ಧಾರವಾಡದ ಬಿ.ವಿ.ಸುರೇಂದ್ರ, ರಾಮದುರ್ಗದ ಹಸನ್ ನಯೀಂ ಸುರಕೋಡ ಹಾಗೂ ಗೋಕಾಕದ ಅಜ್ಜಪ್ಪ ಬಿರಡಿಯವರನ್ನು ಇಲ್ಲಿ ಹೆಸರಿಸಲೇಬೇಕು. ಹಾಗೇ ನಮ್ಮ ಈ ಸಣ್ಣ ಸಾಹಸದ ಪ್ರಯಾಣದಲ್ಲಿ ಸಾಥ್ ನೀಡುತ್ತಿರುವ ಹಲವು ಲೇಖಕ–ಲೇಖಕಿ ಮತ್ತು ಅನುವಾದಕ–ಅನುವಾದಕಿಯರ ಬೆಂಬಲವನ್ನು ಜೊತೆಗೆ ಪತ್ರಿಕೆ ತನ್ನ ಕಟ್ಟುನಿಟ್ಟಾದ ಗಡುವಿನಲ್ಲಿ ಮುದ್ರಣವಾಗಿ ಓದುಗರ ಕೈಸೇರುವಂತೆ ನನ್ನೊಂದಿಗೆ ಕೈಜೋಡಿಸುತ್ತಿರುವ ಇಳಾ ಮುದ್ರಣದ ಗುರು ಮತ್ತು ತಮ್ಮ ಸಾಮಾಜಿಕ ಬದ್ಧತೆ ಎಂಬಂತೆ ಇದಕ್ಕೆ ಅನುವು ಮಾಡಿಕೊಟ್ಟಿರುವ ಅವರ ತಾಯಿ ವಿಜಯಮ್ಮನವರನ್ನು ಇಲ್ಲಿ ನೆನೆಯಬೇಕು.

ಈ ಒಂದು ವರ್ಷದಲ್ಲಿ ಪತ್ರಿಕೆಗೆ ಓದುಗ ಗೆಳೆಯರಿಂದ ಹಲವು ಸಲಹೆಗಳು ಬಂದಿವೆ. ಈ ಸಂಚಿಕೆಯಲ್ಲೂ ಅವು ದಾಖಲಾಗಿವೆ. ಅವರ ಪ್ರೀತಿ–ವಿಶ್ವಾಸಗಳಿಗೆ ಪತ್ರಿಕೆ ಋಣಿಯಾಗಿದೆ. ಉದಾಹರಣೆಗೆ ಚಂದಾ ಹೆಚ್ಚಿಸಿ ಪುಟ ಜಾಸ್ತಿ ಮಾಡಿ ಎಂಬುದು ಈ ಸಲಹೆಗಳಲ್ಲಿ ಒಂದಾಗಿದೆ, ಸಂಪಾದಕರಾದ ನೀವು ಹೆಚ್ಚು ಬರೆಯದೆ, ಇತರರಿಂದ ಬರೆಯಿಸಿ ಎಂಬುದು ಇನ್ನೊಂದು. ಈ ಸಂಬಂಧವಾಗಿ ನಾನು ಮೊದಲಿಗೇ ಹೇಳಿಬಿಡಬೇಕಾದ ಮಾತೆಂದರೆ, ನನಗೆ ಮುದ್ರಣ ದಿನಾಂಕದ ಗಡುವು ಬರುತ್ತಿದ್ದಂತೆ ನನ್ನ ಆರೋಗ್ಯ ಏರುಪೇರಾಗತೊಡಗುತ್ತದೆ. ಈಗಿರುವ ೨೦ ಪುಟಗಳನ್ನು (ಎರಡು ಪುಟಗಳ ಜಾಹೀರಾತು ಸೇರಿ) ತುಂಬಿಸುವುದೇ ಹೆಚ್ಚೂ ಕಡಿಮೆ ಪ್ರತಿ ತಿಂಗಳೂ ಒಂದು ಹರಸಾಹಸವಾಗುತ್ತಿದೆ. ಈ ಪತ್ರಿಕೆ ವಾಣಿಜ್ಯೋದ್ದೇಶದ ಒಂದು ಸಾರ್ವತ್ರಿಕ ಪತ್ರಿಕೆಯಲ್ಲ. ಈ ಪತ್ರಿಕೆ ಒಂದು ಚೌಕಟ್ಟಿನಲ್ಲಿ, ಒಂದು ಉದ್ದೇಶದೊಂದಿಗೆ ಮತ್ತು ಅ ಉದ್ದೇಶದ ಬಗ್ಗೆ ಸಿನಿಕತೆಯೇ ಹೆಚ್ಚಾಗಿರುವ ದಿನಗಳಲ್ಲಿ ನಡೆಯಬೇಕಾಗಿದೆ. ಜೊತೆಗೆ ಇದಕ್ಕೊಂದು ಕಾರ್ಯಾಲಯವಾಗಲೀ, ಯಾವುದೇ ಸಿಬ್ಬಂದಿಯಾಗಲೀ ಇಲ್ಲ. ಎಲ್ಲ ನಾನೇ; ಸಂಚಿಕೆಯ ಆಯೋಜನೆ, ಲೇಖನ ಸಂಗ್ರಹ, ಪುಟ ವಿನ್ಯಾಸ, ಚಂದಾ ಆಂದೋಲನ ಮತ್ತು ನವೀಕರಣ, ಕೊನೆಯಲ್ಲಿ

ಸಂಚಿಕೆಗಳನ್ನು ಅಂಚೆಗೆ ಸಿದ್ಧಪಡಿಸಿ ಅವನ್ನು ಅಂಚೆ ಕಛೇರಿಗೆ ಒಯ್ಯುವವರೆಗೆ! ಇದರಲ್ಲಿ ನನ್ನ ಪತ್ನಿ ಮತ್ತು ಕೆಲ ಸ್ಥಳೀಯ ಆಪ್ತರು ಸ್ವಲ್ಪ ಮಟ್ಟಿಗೆ ನೆರವಾಗುವುದರ ಹೊರತಾಗಿ. ಇದು ಬಹುಶಃ ಹೀಗೇ ನಡೆಯಬೇಕು ಮತ್ತು ಇದಕ್ಕೊಂದು ಔಪಚಾರಿಕ ಸ್ವರೂಪ ದೊರೆಯತೊಡಗಿದರೆ, ಅದರ ಭಾರಗಳಿಂದಾಗಿ ಪತ್ರಿಕೆ ನಿಂತುಹೋಗುವ ಸಂಭವವೇ ಹೆಚ್ಚೆಂದು ನನ್ನ ಭಾವನೆ. ಅದೇನೇ ಇರಲಿ, ಗೆಳೆಯರಿಗೊಂದು ಪ್ರೀತಿಪೂರ್ವಕ ಆಹ್ವಾನ; ನೀವು ಲೇಖನಗಳನ್ನು ಬರೆದು ಮತ್ತು ಬರೆಯಬೇಕೆಂದು ಬಯಸುವ ಲೇಖಕರಿಂದ ಬರೆಸಿ ಕಳಿಸತೊಡಗಿರಿ. ಹಾಗೇ ನಿಮ್ಮ ಗೆಳೆಯರನ್ನು ಪತ್ರಿಕೆಗೆ ಚಂದಾದಾರರನ್ನೂ ಮಾಡಿ. ಆಗ ಖಂಡಿತ ನಿಮ್ಮ ಸಲಹೆಗಳು ತಂತಾನೇ ಜಾರಿಯಾಗುತ್ತವೆ. ಸಂಪಾದಕರು ಹೆಚ್ಚು ಬರೆಯಬಾರದು ಎಂಬ ಸಲಹೆಯೂ ಸೇರಿದಂತೆ. ಆದರೆ ಒಂದು ಮಾತು; ಪತ್ರಿಕೆ ಒಂದು ಸಾರ್ವತ್ರಿಕ ಪತ್ರಿಕೆಯಾಗಬಯಸುವುದಿಲ್ಲ ಮತ್ತು ಏನೇ ಆದರೂ ತನ್ನ ಒಂದು ಮಟ್ಟದ ಗುಣಾತ್ಮಕತೆಯನ್ನು ಕಾಪಾಡಿಕೊಳ್ಳಬಯಸುತ್ತದೆ.

ಇಲ್ಲೇ ಇನ್ನೊಂದು ಸಂಗತಿಯನ್ನು ಪ್ರಸ್ತಾಪಿಸಬೇಕು. ಇತ್ತೀಚೆಗೆ ಕೆಲ ಗೆಳೆಯರು ನಮ್ಮ ಪತ್ರಿಕೆಯನ್ನು ಲಂಕೇಶ್ ಕಾಲದ 'ಲಂಕೇಶ್ ಪತ್ರಿಕೆ'ಗೆ ಹೋಲಿಸಿ ಪತ್ರಗಳನ್ನು ಬರೆಯುತ್ತಿದ್ದಾರೆ. ಹೋಲಿಸಲು ನೀವು ಸ್ವತಂತ್ರರು. ಆದರೆ ಈ ಪತ್ರಿಕೆಯನ್ನು ನಾನು ವೈಯಕ್ತಿಕ ಸಾಹಸವಾಗಿ(ಮತ್ತು ನನ್ನ ಒಂದು ಬೌದ್ಧಿಕ ಅಗತ್ಯವಾಗಿ ಕೂಡ) ಆರಂಭ ಮಾಡಿದಾಗ ಆ ಪತ್ರಿಕೆ ನನಗೆ ಆದರ್ಶವಾಗಿರಲಿಲ್ಲ. ಲಂಕೇಶರ ಪ್ರತಿಭೆ, ಶೈಲಿ, ಉದ್ದೇಶಗಳು ಬೇರೆ. ನನ್ನವೇ ಬೇರೆ. ಅವರನ್ನು ಓರ್ವ ಲೇಖಕನನ್ನಾಗಿ ನಾನು ಗೌರವಿಸಿದಷ್ಟು ಪತ್ರಕರ್ತನನ್ನಾಗಿ ಗೌರವಿಸಲಾರೆ. ಅವರು ಪತ್ರಕರ್ತರಾಗುತ್ತಾ ಪತ್ರಿಕೋದ್ಯಮಿಯೂ ಆಗಿದ್ದು ಇದಕ್ಕೆ ಒಂದು ಕಾರಣವಿರಲೂಬಹುದು. ಹಿಂದೊಮ್ಮೆ ಹೇಳಿರುವಂತೆ, ನಾನೆಂದೂ–ಅವರ ಪತ್ರಿಕೆಯಲ್ಲಿ ಅವರೊಂದಿಗೆ ಸ್ವಲ್ಪ ಕಾಲ ಕೆಲಸ ಮಾಡಿದ ಹಿನ್ನೆಲೆಯೊಂದಿಗೂ–ಅವರ ರಾಜಕೀಯ ಪತ್ರಿಕಾ ಬರವಣಿಗೆಯನ್ನು ಅದರ ತಿರುಳಿನ ದೃಷ್ಟಿಯಿಂದಾಗಲೀ, ಶೈಲಿಯ ದೃಷ್ಟಿಯಿಂದಾಗಲೀ ಪೂರ್ಣ ಒಪ್ಪಿದವನಲ್ಲ. ಇದಕ್ಕೆ ಕಾರಣ, ರಾಜಕಾರಣದ ವಿಷಯದಲ್ಲಿ ಸಾಹಿತ್ಯಿಕವಾಗಿ ಆಕರ್ಷಕವಾಗಲು ಹವಣಿಸುವ ಬರವಣಿಗೆ ತಂತಾನೇ ಆಳದಲ್ಲಿ ಸತ್ಯದೊಂದಿಗೆ ರಾಜಿ ಮಾಡಿಕೊಳ್ಳತೊಡಗುತ್ತದೆ ಎಂದೇ ನನ್ನ ಭಾವನೆ. ಅದೇನೇ ಇರಲಿ, ನೀವು ಇಷ್ಟಪಡಿ, ಬಿಡಿ, ಇದು 'ಹೊಸ ಮನುಷ್ಯ' ಮಾತ್ರ. ಬೇರೇನೂ ಆಗಬಯಸುವುದಿಲ್ಲ. ಅದು ತನ್ನದೇ ಮಿತಿಗಳಲ್ಲೇ ಇರಬಯಸುತ್ತದೆ. ಹೇಗೂ ನಾನೀಗ ಅರ್ಥ ಮಾಡಿಕೊಂಡಿರುವಂತೆ ಸಮಾಜವಾದದ ಮುಖ್ಯ ಆಶಯ ಈಗ 'ಹಿತ ಮಿತ' ಎಂದಾಗಬೇಕು ಮತ್ತು ಅದರ ಮೂಲಕವೆ ಸಮಾನತೆಯ ಆಶಯದತ್ತ ನಾವು ಸಾಗಬೇಕು.

ಇನ್ನು ಈ ಸಂಚಿಕೆಯ ಬಗ್ಗೆ ಇಲ್ಲಿ ವಿಶೇಷವಾಗಿ ಹೇಳುವುದು ಏನೂ ಇಲ್ಲ. ಎಲ್ಲವನ್ನೂ ಲೇಖನಗಳೇ ಸ್ಪಷ್ಟವಾಗಿ ಹೇಳುತ್ತವೆ ಮತ್ತು ಅವು–ಜಯಂತ ಕಾಯ್ಕಿಣಿಯವರ ಸಣ್ಣ ಕಥೆಯೂ ಸೇರಿದಂತೆ–ಸಮಜವಾದದ ಸತ್ಯಗಳನ್ನೇ ಪುನರುಚ್ಚರಿಸುತ್ತಿರುವುದನ್ನು ಓದುಗರು ಗಮನಿಸಬಹುದು. ವಿಶೇಷ ಗಮನಕ್ಕೆ ಅರ್ಹವಾದ ಲೇಖನವೆಂದರೆ ತಮ್ಮನ್ನು ತಾವು ಅಮೆರಿಕನ್ ಇಂಡಿಯನ್‌ರೆಂದೇ ಕರೆದುಕೊಳ್ಳಲು ಹೆಮ್ಮೆಪಡುವ ರೆಡ್ ಇಂಡಿಯನ್‌ರ (ದಿವಂಗತ) ನಾಯಕ ರಸೆಲ್ ಮೀನ್ಸ್ ಅವರ 'ನಾವು ಉಳಿಯಬೇಕಾದರೆ ಯೂರೋಪ್ ಸಾಯಬೇಕು' ಲೇಖನ. ಇದು ಈ ಸಂಚಿಕೆಯ ಪ್ರಧಾನ ಲೇಖನವೂ ಹೌದು. ವಿಜ್ಞಾನ–ತಂತ್ರಜ್ಞಾನಗಳನ್ನು ಆಧರಿಸಿದ ಆಧುನಿಕ ನಾಗರೀಕತೆಯೆಂದು ಕರೆಯಲಾಗುವ ಪಶ್ಚಿಮದ–ಯೂರೋಪಿನ–ನಾಗರೀಕತೆಯ ಆಧಾರ ನಂಬಿಕೆಗಳನ್ನೇ ಅಲುಗಾಡಿಸುವ ಈ ಕುತೂಹಲಕಾರಿ ಲೇಖನ ಗಾಂಧೀಜಿಯ "ಹಿಂದ್ ಸ್ವರಾಜ್"ನಲ್ಲಿನ ಚಿಂತನೆಗೆ ಬಹು ಹತ್ತಿರವಾದದ್ದು. ಲೋಹಿಯಾ ಸಮಾಜವಾದ ಇಂದಿನ ಸವಾಲುಗಳೆದುರು ತನ್ನನ್ನು ತಾನು ಪುನರನ್ವೇಷಿಸಿಕೊಳ್ಳಲು ಅದು ತಾನು ವಿಮರ್ಶಿಸಲು ಹೊರಟಿದ್ದೇನೆಂದು ಹೇಳಿಕೊಂಡ ಗಾಂಧಿ ಚಿಂತನೆಗೆ ಈಗ ವಿನಯಪೂರ್ವಕವಾಗಿ ಮರಳಬೇಕಾಗಿರುವ ಇಂದಿನ ತುರ್ತು ಅಗತ್ಯದ ಹಿನ್ನೆಲೆಯಲ್ಲಿ ಸಮಾಜವಾದಿ ಗೆಳೆಯರಿಗೆ ಬಹು ಮುಖ್ಯವೆನಿಸಬೇಕಾದ ಲೇಖನ ಕೂಡ ಇದು. ತಂತ್ರಜ್ಞಾನ ಕುರಿತ ಎಸ್. ಮಂಜುನಾಥ ಅವರ ಲೇಖನವನ್ನು ಇದರ ಜೊತೆಯಲ್ಲೇ ಓದಿಕೊಂಡರೆ ಎರಡೂ ಲೇಖನಗಳ ಅರ್ಥಪೂರ್ಣತೆ ಮತ್ತು ಪ್ರಸ್ತುತತೆ ಹೆಚ್ಚು ಮನದಟ್ಟಾಗಬಹುದು. ಇನ್ನು ಹಿರಿಯ ಲೇಖಕ ಯು.ಆರ್. ಅನಂತಮೂರ್ತಿಯವರೊಡನೆಯ ಸಂದರ್ಶನ ನಮ್ಮ ಕಾಲದ ಸಾಹಿತ್ಯ ಚರಿತ್ರೆಯ ಹಲವು ಮುಖ್ಯ ಸತ್ಯಗಳನ್ನು ಹೇಳುತ್ತಾ ಅದನ್ನು ಪುನರ್ನಿರೂಪಣೆಗೆ ಒಳಪಡಿಸುವಂತಿರುವುದರಿಂದ ಮುಖ್ಯವೆನಿಸಬಹುದು.

ಈ ಬಾರಿ ರಾಜಕೀಯ ಟಿಪ್ಪಣಿಗಳಿಗೆ ಬಿಡುವು ಕೊಡುವ ಮನಸ್ಸಿದೆಯಾದರೂ, ಕೇಂದ್ರ ಮತ್ತು ರಾಜ್ಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ನಾಲ್ಕು ಮಾತು ಬರೆಯಲೇಬೇಕೆನ್ನಿಸಿದೆ. ನಾವು ಅದನ್ನು ಒಪ್ಪಲಿ ಬಿಡಲಿ, ಮೋದಿ ಗೆದ್ದದ್ದು ಜನರಲ್ಲಿ ಅಭಿವೃದ್ಧಿಯ ಹೊಸ ಕನಸನ್ನು ಬಿತ್ತುವ ಮೂಲಕ. ಆದರೆ ಈಗ ತಾವು ಭರವಸೆ ಕೊಟ್ಟ 'ಅಚ್ಛೇ ದಿನ'ಗಳನ್ನು ಸೃಷ್ಟಿಸಲಾಗದ ಮೋದಿಯವರು ಈವರೆಗೆ ಸಾಂಸ್ಕೃತಿಕ ಸಂಘಟನೆಯ ಮಾರುವೇಷದಲ್ಲಿ ರಾಜಕಾರಣ ಮಾಡುತ್ತಾ ಬಂದಿರುವ ಮತ್ತು ಯಾವುದೇ ಸಾಂವಿಧಾನಿಕ ಮಾನ್ಯತೆ ಇಲ್ಲದೆ ಆರೆಸ್ಸೆಸ್ ಮಾರ್ಗದರ್ಶನದಲ್ಲಿ ಜನರ ಭಾವನೆಗಳನ್ನು ಕೆರಳಿಸುವಂತಹ ರಾಜಕೀಯ ನೀತಿ ನಿರ್ಧಾರಗಳನ್ನು ಕೈಗೊಳ್ಳಹೊರಟಂತಿದೆ. ಸರ್ಕಾರದ ಹಲವು ಮುಖ್ಯ ನೇಮಕಾತಿಗಳಲ್ಲಿ ಅದರ ಪ್ರಭಾವ ನಿಚ್ಚಳವಾಗಿ ಕಾಣತೊಡಗಿದೆ. ಶಿವಸೇನೆ, ಹಿಂದೂ ಸೇನೆ ಮುಂತಾದ ಅತಿವಾದಿ ಸಂಘಟನೆಗಳ ನಾಯಕರ ಅತಿ ವರ್ತನೆಗಳಿಗೆ ಪ್ರಭುತ್ವದ ಮೌನ ಸಮ್ಮತಿ ಇರುವ ಲಕ್ಷಣಗಳೂ ಕಾಣತೊಡಗಿದೆ. ಇದನ್ನು ಜನ ಗಮನಿಸುತ್ತಿದ್ದಾರೆ ಮತ್ತು ಇದರ ವಿರುದ್ಧ ಧ್ವನಿ ಎತ್ತುವ ಕಾಲ ದೂರವಿಲ್ಲ.

ಇನ್ನು ನಮ್ಮ ರಾಜ್ಯ ಲೈಂಗಿಕ ಅತ್ಯಾಚಾರಗಳ ರಾಜ್ಯವಾಗುತ್ತಿದೆ ಎಂದು ಮಾಧ್ಯಮಗಳೂ, ಇದಕ್ಕೆ ಸಿದ್ಧರಾಮಯ್ಯನವರ ಸರ್ಕಾರವೇ ಹೊಣೆಯೆಂದು ವಿರೋಧ ಪಕ್ಷಗಳೂ ಬೊಬ್ಬೆ ಹೊಡೆಯುತ್ತಿರುವುದನ್ನು ನೋಡಿದರೆ ಕರ್ನಾಟಕದ ಜನರ ಬುದ್ಧಿಗೆ ಯಾವ ಗರ ಬಡಿದಿದೆ ಎಂದು ಆಶ್ಚರ್ಯವಾಗುತ್ತದೆ. ಇದು ರೋಗ ಲಕ್ಷಣವೇ ಹೊರತು ರೋಗವಲ್ಲ; ಈ ರೋಗವನ್ನು ನಾವು ಗುರುತಿಸಬೇಕಾಗಿರುವುದು ನಾವು ಕಳೆದ ಇಪ್ಪತ್ತು ವರ್ಷಗಳಲ್ಲಿ ಎರಡಂಕಿಯ ಪ್ರಗತಿಯ ರುಚಿಯ ಹಿಂದೆ ಬಿದ್ದು ಅದಕ್ಕೆ ಬೇಕಾದ 'ಆಧುನಿಕ' ಮನಃಸ್ಥಿತಿಯ ಹೆಸರಿನಲ್ಲಿ ನಮ್ಮ ಮನೆ–ಮನಗಳನ್ನು ಎಷ್ಟು ಭ್ರಷ್ಟಗೊಳಿಸಿಕೊಂಡಿದ್ದೇವೆ ಮತ್ತು ಇದಕ್ಕೂ ಹೆಚ್ಚುತ್ತಿರುವ ಅತ್ಯಾಚಾರಗಳಿಗೂ ಏನಾದರೂ ಸಂಬಂಧವಿದೆಯೇ ಎಂದು ಯೋಚಿಸದೆ ಬೇದಿ ಬೇದಿಗೊಂದು ಮಹಿಳಾ ಪೋಲಿಸ್ ಠಾಣೆಯ, ಮೂಲೆ ಮೂಲೆಗೊಂದು ಸಿ.ಸಿ.ಟಿವಿ ಅಳವಡಿಕೆಯ, ಗೂಂಡಾ ಕಾಯಿದೆ ತಿದ್ದುಪಡಿಯ ಮಾತನಾಡುತ್ತಿರುವುದನ್ನು ನೋಡಿದರೆ ಈ ನಮ್ಮ ಪ್ರಗತಿಪರ ಸಮಾಜ ಪ್ರದರ್ಶಿಸುತ್ತಿರುವ ಆತ್ಮದ್ರೋಹ ಆತಂಕವನ್ನು ಹುಟ್ಟಿಸುತ್ತದೆ. ರಾಜ್ಯದ ರಾಜಧಾನಿ ಬೆಂಗಳೂರಿನ ಬೀದಿಗಳಲ್ಲಿ ಒಟ್ಟಲ್ಪಡುತ್ತಿರುವ ಕಸದ ನಿರ್ವಹಣೆಯ ಸಮಸ್ಯೆಯು, ಕರ್ನಾಟಕದ ಜನರ ಮನಸ್ಸಿನಲ್ಲಿ ಒಟ್ಟಲ್ಪಟ್ಟಿರುವ ಕಸದ ನಿರ್ವಹಣೆಯ ಸಮಸ್ಯೆಯ ರೂಪಕ ಮಾತ್ರವಾಗಿದೆ ಎಂಬುದನ್ನು ಅರಿಯದಿದ್ದಲ್ಲಿ ಈ ಲೈಂಗಿಕ ವಿಕೃತಿಯನ್ನು ಕಾನೂನು ಮತ್ತು ಶಿಸ್ತಿನ ಸಮಸ್ಯೆಯಂತೆ ಬಹುಕಾಲ ನಿರ್ವಹಿಸಲಾಗದು ಎಂಬುದು ಜನಕ್ಕೆ ಗೊತ್ತಾಗಬೇಕಿದೆ. ಅದು ಗೊತ್ತಾಗುವಷ್ಟು ಮೈಮನಗಳ ಎಚ್ಚರ ರಾಜ್ಯದ ಜನತೆಗೆ ಮತ್ತು ಸರ್ಕಾರಕ್ಕೆ ಇದೆಯೇ? ಕಾದು ನೋಡಬೇಕು.

ಇರಲಿ, ಈ ವಿಶೇಷಾಂಕ ಹೇಗಿದೆ ಎಂದು ಬರೆಯಿರಿ. ಈ ಸಂಚಿಕೆಯ ಸಮೃದ್ಧಿಗೆ ಕಾರಣರಾದವರು ಹಿರಿ–ಕಿರಿಯ ಲೇಖಕ ಗೆಳೆಯರು ಮತ್ತು ಅಭಿಮಾನವಿಟ್ಟು ಜಾಹೀರಾತುಗಳನ್ನು ನೀಡಿದ ಮತ್ತು ಒದಗಿಸಿಕೊಟ್ಟ ಮಿತ್ರರು. ಇವರೆಲ್ಲರಿಗೆ ಧನ್ಯವಾದಗಳು.

**–ಸಂಪಾದಕ**

**ಈ ಸಂಚಿಕೆ**

ರಕ್ಷಾಪುಟ ವಿನ್ಯಾಸ: **ರವಿಪ್ರಸಾದ್**
ರಕ್ಷಾಪುಟದ ಚಿತ್ರಗಳು: ***ರೆಡ್ ಇಂಡಿಯನ್ ಕಲಾ ಸಂಪುಟ***
ಒಳಪುಟ ರೇಖಾ ಚಿತ್ರಗಳು :
ಸಿ. **ರವೀಂದ್ರನಾಥ್** ಮತ್ತು **ರೂಪ ಹಾಸನ**
ಸಂಪಾದಕೀಯ ಸಹಕಾರ:
**ಸವಿತಾ ನಾಗಭೂಷಣ** ಮತ್ತು **ಟಿ.ಎಲ್ ರೇಖಾಂಬ**
ಪುಟ ವಿನ್ಯಾಸ ಮತ್ತು ಸಂಪಾದನೆ:
**ಡಿ.ಎಸ್. ನಾಗಭೂಷಣ**
ಮುದ್ರಣ: **ಇಳಾ ಮುದ್ರಣ, ಬೆಂಗಳೂರು**

## ವರ್ಷದ ಪತ್ರಗಳು

ಪ್ರಿಯ ಸಂಪಾದಕರೇ

### ' ತತ್ಕಾಲೀನತೆಯನ್ನು ದಾಟಿ ತಾತ್ವಿಕತೆಯೆಡೆಗೆ ತುಡಿತ

ಹೊಸ ಮನುಷ್ಯ' ಮೂರು ವರ್ಷಗಳಿಂದ ನಿಯಮಿತವಾಗಿ, ಬದ್ಧತೆಯಿಂದ ನಡೆಸಿಕೊಂಡು ಬಂದ ಸಂಪಾದಕ ಡಿ.ಎಸ್. ನಾಗಭೂಣ ಅವರನ್ನು ಮೊಟ್ಟಮೊದಲು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಇದು ಒಂದು ದೃಷ್ಟಿಯಿಂದ ಅವರ 'ಸಮಾಜವಾದಿ ಸಂಕಥನಗಳ' ಮುಂದುವರಿಕೆಯೆನ್ನಬಹುದು.

ಪ್ರತಿ ತಿಂಗಳು ಇಪ್ಪತ್ತು ಪುಟಗಳಲ್ಲಿ(ಎರಡು ಪುಟಗಳ ಜಾಹೀರಾತುಗಳನ್ನು ಹೊರತುಪಡಿಸಿ) ಸಮಜವಾದಿ ತಳಹದಿಯ ಮೇಲೆ ಎಲ್ಲ ವಿಚಾರಗಳನ್ನೂ ಮಂಡಿಸುವುದೆಂದರೆ ಸಾಮಾನ್ಯ ಸಂಗತಿಯಲ್ಲ. ಅದಕ್ಕಾಗಿ ಇದ್ದುದರಲ್ಲಿಯೇ ವೈವಿಧ್ಯವನ್ನು ಸಾಧಿಸಲಾಗಿದೆ. ಪ್ರಚಲಿತ ರಾಜಕೀಯ ವಿದ್ಯಮಾನಗಳಲ್ಲಿ ಪ್ರಮುಖವೆನಿಸಿದ್ದರ ಬಗ್ಗೆ ವಿಮರ್ಶಾತ್ಮಕವಾದ ಸಂಪಾದಕೀಯ ಟಿಪ್ಪಣಿ, 'ನಮ್ಮ ಸಮಾಜವಾದಿಗಳು' ಮಾಲಿಕೆಯಲ್ಲಿ ವ್ಯಕ್ತಿಚಿತ್ರ, ಪ್ರೊ. ಬಿ.ಕ್ರಿಷ್ಣಪ್ಪ ಕುರಿತು 'ನೆನಪಿನ ಮಾಲೆ' ನಾಲ್ಕೈದು ಓದುಗರ ಅಭಿಪ್ರಾಯಗಳು(ಅರ್ಧ ಪುಟ), ಚರ್ಚಾತ್ಮಕವಾದ ಗಂಭೀರ ಲೇಖನಗಳ ಅನುವಾದ, 'ಸಮಕಾಲೀನ' ಅಂಕಣ, ಪುಸ್ತಕಾವಲೋಕನ ಇತ್ಯಾದಿಗಳನ್ನು ಹೆಸರಿಸಬಹುದು. ಇಂತಹ ವಿಶ್ಲೇಷಣೆಯ ಮೂಲಕವೇ ಈ ಬಗೆಯ ಲೇಖನಗಳು ತತ್ಕಾಲೀನತೆಯನ್ನು ದಾಟಿ ತಾತ್ವಿಕತೆಯೆಡೆಗೆ ತುಡಿಯುವುದನ್ನು ಓದುಗರು ಗಮನಿಸಬಹುದು.

ಕಳೆದ ಸಂಚಿಕೆಯನ್ನೇ(ಸಂಪುಟ: ೩, ಸಂಚಿಕೆ:೧೨) ಒಂದು ಮಾದರಿಯಾಗಿ ನೋಡಬಹುದು. ಪ್ರದಾನ ಮಂತ್ರಿ ನರೇಂದ್ರ ಮೋದಿ (ಒಂದು ತಿಂಗಳು) ಹಾಗೂ ರಾಜ್ಯದ ಮುಖ್ಯ ಮಂತ್ರಿ ಸಿದ್ಧರಾಮಯ್ಯ(ಒಂದು ವರ್ಷ) ಇವರಿಬ್ಬರ ಕಾರ್ಯಶೈಲಿಗಳನ್ನು ಅನುಮಾನಾಸ್ಪದ ಆತಂಕಗಳೊಂದಿಗೇ ಸಂಪಾದಕರ ಟಿಪ್ಪಣಿಗಳಲ್ಲಿ ವಿವೇಚಿಸಲಾಗಿದೆ. ಸಿದ್ಧರಾಮಯ್ಯನವರ ಆಡಳಿತದ ಬಗ್ಗೆ ನಿರಾಶೆಗೊಂಡಿದ್ದರೂ, ಒಳ್ಳೆಯ ಸಮಾಜವಾದಿಯಾಗಿ ಮಾದರಿ ಆಡಳಿತಕ್ಕೆ ಇದು ಸಕಾಲ ಎಂಬ ಸೂಚನೆಯೂ ಇದೆ. ಗಾಂಧಿ, ಅಂಬೇಡ್ಕರ್ ಮತ್ತು ಮೋದಿ ಕುರಿತ ಲೇಖನದಲ್ಲಿ ಒಳನೋಟಗಳೊಡನೆ ಪರಸ್ಪರ ತಿಕ್ಕಾಟವೂ ಇದೆ.'ಅಗಲಿದ ಜೋಗಿ ಕೆ.ಎಂ. ಶಂಕರಪ್ಪನವರನ್ನು ನೆನೆಯುತ್ತಾ' ಸಂಪಾದಕರನ್ನೂ ಒಳಗೊಂಡು ಇನ್ನೂ ಮೂವರು ಹತ್ತಿರದಿಂದ ಬಲ್ಲವರು ಬರೆದು ಇಡಿಯಾಗಿ ಅವರ ವ್ಯಕ್ತಿತ್ವವನ್ನು ಚಿತ್ರಿಸಲಾಗಿದೆ.(ಬೆಂಗಳೂರಿನ ಕುರುಬರ ಹಾಸ್ಟೆಲಿನಲ್ಲಿ ಅವರು ಸರಳ ಮದುವೆ ಮಾಡಿಕೊಂಡ ಸಂದರ್ಭದಲ್ಲಿ ಪ್ರತಿಜ್ಞಾ ವಿಧಿಯನ್ನು ನಾನು ನೆರವೇರಿಸಿದ್ದು ನೆನಪಾಯಿತು)

'ಸಾಹಿತ್ಯ-ಸಂಸ್ಕೃತಿ-ಪ್ರಶಸ್ತಿ ರಾಜಕಾರಣ ಇತ್ಯಾದಿ' ಲೇಖನದಲ್ಲಿ ನಾಗಭೂಷಣರು ಸರ್ಕಾರಿ ಪ್ರಶಸ್ತಿಗಳ ಸಂಖ್ಯೆಯನ್ನು ಆದಷ್ಟೂ ಕಡಿಮೆ ಮಾಡಿಸಲು ಉದ್ಯುಕ್ತರಾಗಲು ಸಾಹಿತ್ಯ ಕ್ಷೇತ್ರದ ಹಿರಿಯರಿಗೆ ಸೂಚಿಸಿರುವುದು ಸೂಕ್ತವಾಗಿದೆ. ಅನಂತಮೂರ್ತಿ-ಕಲ್ಬುರ್ಗಿ ಪ್ರಕರಣದಲ್ಲಿ ಲೇಖಕರು ಅನಂತಮೂರ್ತಿಯವರ ಬಗ್ಗೆ ಹೆಚ್ಚು ಸಹಾನುಭೂತಿ ತೋರಿಸಿರುವುದು ಸಹಜವೇ. ಕಲ್ಬುರ್ಗಿಯವರು ಕೆಲಮಟ್ಟಿಗೆ 'ರಭಸಮತಿ'ಗಳಾಗಿದ್ದರೂ, ಅವರು ಈ ಪ್ರಸಂಗದಿಂದ ಬೇಸರಗೊಂಡು ಖಿನ್ನರಾದದ್ದು ನಿಜ. ನಾಗಭೂಣರೆಂದಂತೆ ಕೆಲ ಪತ್ರಿಕೆಗಳು ಮತ್ತು ಟಿ.ವಿ. ವಾಹಿನಿಗಳು ವಿವಾದವನ್ನು ವಿಕೃತಗೊಳಿಸಿ, ಅಗ್ಗದ ಚರ್ಚೆಗಳ ಮೂಲಕ ಜನರನ್ನು ಪ್ರಚೋದಿಸಿದವು. ಇಂತಹ ಬೇಜವಾಬ್ದಾರಿ ವರ್ತನೆಗೆ ಕಡಿವಾಣ ಹಾಕುವವರು ಯಾರು? ಏನೇ ಇರಲಿ, ಅನಂತಮೂರ್ತಿ ಮತ್ತು ಕಲ್ಬುರ್ಗಿಯವರು ಈ ಪ್ರಕರಣದ ಬಗ್ಗೆ ಪುನರಾಲೋಚನೆಗೆ ತೊಡಗುವುದು ಒಳ್ಳೆಯದು.

ರವೀಂದ್ರ ರೇಷ್ಮೆಯವರ 'ಬಂದೇ ಬಂದರು ಮೋದಿ!' ಆಸಕ್ತಿ ಕೆರಳಿಸುವಂತಿದೆ. ಸದ್ಯಕ್ಕಂತೂ ಇದು ಅಪರೂಪದ ವಿದ್ಯಮಾನವೇ. ಸಂಪಾದಕರ ಟಿಪ್ಪಣಿಗೆ ಇದು ಪೂರಕವೆನ್ನುವಂತಿದೆ.

**-ಚೆನ್ನವೀರ ಕಣವಿ, ಧಾರವಾಡ**

### ಜನಪರ ತುಡಿತ, ಜೀವಪರ ಕಾಳಜಿ, ಸಾಮಾಜಿಕ ಬದ್ಧತೆ

'ಹೊಸ ಮನುಷ್ಯ' ಮಾಸಿಕ ಪತ್ರಿಕೆ ಪ್ರಾರಂಭವಾದಂದಿನಿಂದ ಇಂದಿನ ತನಕ ಬಂದಿರುವ ಸಂಚಿಕೆಗಳಲ್ಲಿ ಐದಾರನ್ನು ಬಿಟ್ಟರೆ ಎಲ್ಲವನ್ನೂ ಓದಿರುವ ಅನುಭವದಿಂದ ಕೆಲವು ಮಾತುಗಳನ್ನು ಬರೆಯುತ್ತಿದ್ದೇವೆ.

ಈ ಬಗೆಯ ವೈಚಾರಿಕ ಬರಹಗಳಿಗೆ ಮುಡಿಪಿಟ್ಟಿರುವ ಪತ್ರಿಕೆಗಳು ತುಂಬಾ ವಿರಳ. ಕನ್ನಡದಲ್ಲಿ ಬೆರಳೆಣಿಕೆಯಷ್ಟಾದರೂ ಇವೆ ಎಂಬುದು ಕನ್ನಡ ಮನಸುಗಳ ಪ್ರಬುದ್ಧತೆಗೆ ಸಾಕ್ಷಿ. ಹೊಸ ಮನುಷ್ಯ ಎಂಬ ಹೆಸರು ಅರ್ಥಪೂರ್ಣವಾಗಿದೆ. ಅದನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾ ಪರಿಭಾವಿಸಿದಷ್ಟೂ ಅದರ ಹುರುಳು ಅರಳುತ್ತದೆ. ಸಂಪಾದಕರು ಪಡುತ್ತಿರುವ ಶ್ರಮ, ವಹಿಸುತ್ತಿರು ಕಾಳಜಿ ಪ್ರತಿ ಸಂಚಿಕೆಯಲ್ಲೂ ಪ್ರತಿಫಲಿತವಾಗುತ್ತಿದೆ. ಈ ಏಕಾಂಗ ವೀರನಿಗೆ ಯಾವ ಭಿಡೆಯೂ ಇಲ್ಲ, ಯಾವ ಪಕ್ಷಪಾತ-ಮುಲಾಜೂ ಇಲ್ಲ. ಜನಪರ ತುಡಿತ, ಜೀವಪರ ಕಾಳಜಿ, ಸಾಮಾಜಿಕ ಬದ್ಧತೆ- ಇವು ಈ ಪತ್ರಿಕೆಯ ಬರಹಗಳ ನಿಜ ದನಿ.

ಕನ್ನಡದಲ್ಲಿ ಅಚ್ಚಾದ ಮಾತ್ರಕ್ಕೆ ಈ ಪತ್ರಿಕೆಯ ಚೌಕಟ್ಟು ಕರ್ನಾಟಕಕ್ಕಷ್ಟೇ ಸೀಮಿತವಾಗಿಲ್ಲ. ರಾಷ್ಟ್ರವ್ಯಾಪಿ ಆಗುಹೋಗುಗಳತ್ತ ಹದ್ದಿನ ದೃಷ್ಟಿ ಹಾಯಿಸುತ್ತಾ ಅನ್ಯಾಯವನ್ನು, ವ್ಯಕ್ತಿ-ಸಂಸ್ಥೆ-ರಾಜ್ಯ ಅಥವಾ ಕೇಂದ್ರ ಸರ್ಕಾರ ಯಾರೇ ಎಸಗಿದ್ದರೂ, ವಸ್ತುನಿಷ್ಠತೆಯಿಂದ ಖಂಡಿಸುವ ವ್ಯಾಪಕತೆ ಇರುವ ಪತ್ರಿಕೆ ಎಂಬುದು ನಮಗೆ ಮನವರಿಕೆಯಾಗಿದೆ. ಇದರ ಕೆಲವು ಮೌಲಿಕ ಬರಹಗಳನ್ನು ಸಂಕಲಿಸಿ ಪ್ರತ್ಯೇಕ ಪುಸ್ತಕ ತರುವುದು ಸೂಕ್ತ.

**-ಪ್ರೊ. ಕಮಲಾ ಹಂಪನಾ, ಪ್ರೊ. ಹಂಪನಾ,** ಬೆಂಗಳೂರು

### ಮರುಭೂಮಿಯಲ್ಲಿ ಓಯಸಿಸ್‌ನಿಂದ ಬೀಸುವ ತಂಗಾಳಿ

ಒಂದು ದಶಕದ ಹಿಂದೆ ನಾಯಕರೊಬ್ಬರು ರಾಜಧಾನಿಯಲ್ಲಿ ಇದ್ದಕ್ಕಿದ್ದಂತೆ ಎಲ್ಲ ವರದಿಗಾರರನ್ನು ಗೋಷ್ಠಿಯೊಂದಕ್ಕೆ ಆಹ್ವಾನಿಸಿದಾಗ, ಸುದ್ದಿ ಸ್ಫೋಟದ ನಿರೀಕ್ಷೆಯಲ್ಲಿದ್ದ ವರದಿಗಾರರಿಗೆ ಅಲ್ಲಿ ಲಭಿಸಿದ್ದು ಸಮೃದ್ಧ ಉಪಾಹಾರ, ಫಲತಾಂಬೂಲ ಮತ್ತು ಒಂದು ಲಕೋಟೆ. ಅವೆಲ್ಲ ಆ ನಾಯಕರು ಇಂದು ನನ್ನ ಜನ್ಮದಿನವೆಂದು ಅಪರೂಪದ ಮುಗುಳ್ನಗೆಯೊಂದಿಗೆ ಪ್ರಕಟಿಸಿ ನೀಡಿದ 'ಕೊಡುಗೆಗಳು'. ಇದು ಪ್ರಮುಖ ಪತ್ರಿಕೆಯೊಂದರಲ್ಲಿ ಸುದ್ದಿಯಾಗಿ ಪ್ರಕಟವಾಯಿತಾದರೂ, ಯಾವ ಪತ್ರಕರ್ತನ ಆತ್ಮಸಾಕ್ಷಿಯನ್ನೂ ನಿಜವಾಗಿ ಕೆಣಕಿದಂತಿರಲಿಲ್ಲ. ಏಕೆಂದರೆ, ಯಾವ ಲಕೋಟೆಯೂ ಬಂದ ಸ್ಥಳಕ್ಕೆ ಮರಳಲಿಲ್ಲ!

ಈಗ ಉದ್ಯಮ ಮತ್ತು ಚಿತ್ರರಂಗಗಳಲ್ಲಿ ಆಯ್ದ ಪತ್ರಕರ್ತರನ್ನು ಕರೆಸಿಕೊಂಡು ಆಮಿಷಗಳ ಬಲೆಗೆ ಕೆಡವಿ ತಮಗೆ ಬೇಕಾದಂತೆ ಬರೆಸಿಕೊಳ್ಳುವ ಮತ್ತು ಪ್ರಸಾರ ಮಾಡಿಸಿಕೊಳ್ಳುವ ಘಟನೆಗಳು ಈಗ ಅಪರೂಪ ಅಥವಾ ಅಪವಾದಗಳಾಗೇನೂ ಉಳಿದಿಲ್ಲ. ಮಾಧ್ಯಮ ರಂಗದವರ ಆತ್ಮಸಾಕ್ಷಿಗೆ ತುಕ್ಕು ಹಿಡಿದು, 'ಅರ್ಥ'ವಿಲ್ಲದ ಸುದ್ದಿ ಗೋಷ್ಠಿಗಳಲ್ಲಿನ ಮಾಹಿತಿಗೆ ಪ್ರಾಮುಖ್ಯತೆಯೇ ಇಲ್ಲವಾಗಿದೆ. ಮತ್ತೀಗ ಕ್ರಯಿತ-ಪ್ರಲೋಭಿತ ಸುದ್ದಿಗಳೇನೂ ಚುನಾವಣಾ ಸಮಯಕ್ಕಷ್ಟೇ ಸೀಮಿತವಾಗುಳಿದಿಲ್ಲ! ಪತ್ರಿಕಾ ಧರ್ಮ ಮರೆಯಾಗಿ ವ್ಯಷ್ಟಿಹಿತ, ವ್ಯಷ್ಟಿ-ಪಕ್ಷನಿಷ್ಠತೆಗಳೇ ಆದ್ಯವಾಗಿ ರೋಚಕತೆ, ವೈಭವೀಕರಣಗಳ ವಿಜೃಂಭಣೆಯಲ್ಲಿ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿಪ್ರಾಮಾಣಿಕತೆಯನ್ನು ದುರ್ಬೀನು ಹಿಡಿದು ಹುಡುಕುವಂತಾಗಿದೆ.

ಈ ನೆಲೆಯಲ್ಲಿ 'ಹೊಸ ಮನುಷ್ಯ' ಭಿನ್ನವಾಗಿ ಎದ್ದು ನಿಲ್ಲುತ್ತದೆ.ನಿಮ್ಮ ನಿರ್ಭಿಡೆಯ,ವಸ್ತುನಿಷ್ಠ ಟಿಪ್ಪಣಿಗಳು, ವಿಶ್ಲೇಣೆ ತಪ್ಪಾಗಿದ್ದಲ್ಲಿ ಅದನ್ನು ಮುಂದೆ ತಿದ್ದಿಕೊಳ್ಳುವ ಪ್ರಾಂಜಲತೆಗಳು ಮರುಭೂಮಿಯಲ್ಲಿ ಓಯಸಿಸ್‌ನಿಂದ ಬೀಸುವ ತಂಗಾಳಿಯಂತೆ ಮುದ ನೀಡುತ್ತವೆ. ಅಭಿವೃದ್ಧಿಪರ ಮತ್ತು ಸಮುದಾಯಗಳ ನಡುವೆ ಸಾಮರಸ್ಯದ ಸೇತುವೆ ನಿರ್ಮಿಸುವಂತಹ ಲೇಖನ, ವರದಿಗಳಿಂದ ಪತ್ರಿಕೆ ಇನ್ನಷ್ಟು ಮೈದುಂಬಿಕೊಳ್ಳಲಿ.. ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ?...' ಎಂದ ವಚನಕಾರರನ್ನು ನೆನೆಯುತ್ತ ನಿಮ್ಮ/ನಮ್ಮ ಪತ್ರಿಕೆಯ ಜ್ಯೋತಿ ಬೆಳಗುತ್ತಿರಲು ತೈಲವನ್ನೆರೆಯುವವರ ಸಂಖ್ಯೆ ವಿಫುಲವಾಗಿ, ಮಾಧ್ಯಮಕ್ಕೆ ಕವಿದ ಭ್ರಷ್ಟತೆಯ ಕಾವಳವನ್ನು ಆದಷ್ಟೂ ಹೋಗಲಾಡಿಸುವ ಕಾಯಕ ಮುಂದುವರೆಯಲಿ. ವ್ಯಷ್ಟಿಹಿತ ಮರೆಸಿ ಸಮಷ್ಟಿಹಿತದತ್ತ ಆರೋಗ್ಯವಂತ ಮನಸ್ಸುಗಳನ್ನು ತೊಡಗಿಸಲಿ.

**-ಎನ್. ಗುರುರಾಜ್,** ಪರ್ಕಳ(ದ.ಕ.)
(ಮಾಜಿ ಸಂಪಾದಕರು: 'ಉದಯವಾಣಿ')

## ಸಂಪಾದಕರು ಕೂಡ ಪತ್ರಿಕೆಯ ಇನ್ನೊಬ್ಬ ಓದುಗರು ಮಾತ್ರ!

೧. ಪತ್ರಿಕೆಯಲ್ಲಿ ಸಾರ್ವಜನಿಕದ ಪ್ರಜ್ಞೆ ತೀವ್ರವಾಗಿದೆ. ರಾಜಕೀಯ ಮತ್ತು ಸಾಮಾಜಿಕ ಸಂಗತಿಗಳ ಮೂಲಕ ಬದುಕಿನ ಸೌಂದರ್ಯವನ್ನು, ಶೀಲವನ್ನು ಹೆಚ್ಚಿಸುವ ಕಾಳಜಿ ಎಲ್ಲ ಸಂಚಿಕೆಗಳಲ್ಲೂ ಇದೆ. PUBLIC LIFE MUST BE SPIRITUALISED ಎಂಬ ಗೋಖಲೆಯವರ ಮಾತು ಪತ್ರಿಕೆಯನ್ನು ಗಮನಿಸುವಾಗ ಮತ್ತೆ ಮತ್ತೆ ನೆನಪಾಗುತ್ತದೆ.

೨. ಪತ್ರಿಕೆಗಳು ಸಾರ್ವಜನಿಕರ ಅಭಿಪ್ರಾಯವನ್ನು ರೂಪಿಸಬೇಕು, ನಿಜ. ಅಷ್ಟೇ ಮುಖ್ಯವಾಗಿ ಸಾರ್ವಜನಿಕರನ್ನು, ಓದುಗರನ್ನು ಗೌರವಿಸಬೇಕು ಕೂಡ. ಭಾಜಪ ಮತ್ತು ಮೋದಿಯನ್ನು ಎಷ್ಟೇ ಟೀಕಿಸಿದ್ದರೂ ಚುನಾವಣೆಯ ನಂತರ ಸಾರ್ವಜನಿಕ ಅಭಿಪ್ರಾಯವನ್ನು ಗೌರವಿಸಿದ ರೀತಿಯಲ್ಲಿ ಪ್ರಾಮಾಣಿಕತೆಯಿತ್ತು, ಒಳಿತು ಇವರಿಂದಲೂ ಆಗುವುದಿದ್ದರೆ ಆಗಲಿ ಎಂಬ ಆರೋಗ್ಯಕರ ನಿಲುವಿತ್ತು.

೩. ಕೇಜ್ರಿವಾಲ್ ಸಂಘಟನೆ ಮತ್ತು ಹೋರಾಟವನ್ನು ಬೆಂಬಲಿಸುವಾಗಲೂ ಪತ್ರಿಕೆ ಈ ಗುಂಪಿನ ನಡಾವಳಿಯ ಬಗ್ಗೆ ವಿಮರ್ಶಾತ್ಮಕವಾಗಿಯೇ ಇತ್ತು. ಕೇಜ್ರಿವಾಲ್ ವಿಚಾರಗಳನ್ನು ಬೆಂಬಲಿಸುತ್ತೇವೆ, ಆದರೆ ಚುನಾವಣೆಯಲ್ಲಿ ಮಾತ್ರ ಕಾಂಗ್ರೆಸ್‌ಗೆ, ನೀಲಕೇಣಿಗೆ ನಾವು ಮತ ಹಾಕುತ್ತೇವೆ. ನೀವೂ ಹಾಕಬೇಕು ಎಂಬ ಹಾಸ್ಯಾಸ್ಪದ ನಿಲುವಿನ ಹಿನ್ನೆಲೆಯಲ್ಲಿ ಕೇಜ್ರಿವಾಲ್ ಗುಂಪಿನ ಬಗ್ಗೆ ಪತ್ರಿಕೆ ತಳೆದ ವಿಮರ್ಶಾತ್ಮಕ ನಿಲುವು ಪ್ರಬುದ್ಧವಾದದ್ದು – ಆರೋಗ್ಯಕರವಾದದ್ದು.

೪. ಪತ್ರಿಕೆಯ ಅಂಕಣಗಳಲ್ಲಿ ನನಗೆ ತುಂಬಾ ಇಷ್ಟವಾದದ್ದೆಂದರೆ ಹಳೆಯ ಸಮಾಜವಾದಿಗಳ, ಜನನಾಯಕರ ವ್ಯಕ್ತಿಚಿತ್ರಗಳು. ಈ ವ್ಯಕ್ತಿಚಿತ್ರಗಳು ಸಂಗ್ರಹವಾಗಿ ಪ್ರಕಟವಾಗುವ ದಿನಕ್ಕೆ ಕಾಯುತ್ತಿದ್ದೇನೆ. ಒಂದೇ ತಿದ್ದುಪಡಿ. ಇಂತಹ ನಿಸ್ಪೃಹ ಜನನಾಯಕರು ೧೯೭೦ರ ತನಕ ಎಲ್ಲ ರಾಜಕೀಯ ಪಕ್ಷಗಳಲ್ಲು ಸಿಗುತ್ತಿದ್ದರು.

೫. ಸಮೂಹ ಮಾಧ್ಯಮ, ದೊಡ್ಡ ಪತ್ರಿಕೆಗಳಲ್ಲಿ ಸದಾ ಸುದ್ದಿಯಲ್ಲಿರುವವರು, ಪ್ರಾಮುಖ್ಯತೆ ಪಡೆಯುವವರು, ಮತ್ತೆ "ಹೊಸ ಮನುಷ್ಯ"ದಲ್ಲು ಪಡಯಬೇಕೆ? ಹೀಗಾದರೆ ನಮ್ಮ ರಾಜೇಂದ್ರ ಸಿಂಗ್, ಹಿರೇಮಠ, ಸುರೇಂದ್ರ ಕೌಲಗಿ, ಚರಕದ ಪ್ರಸನ್ನ – ಇವರೆಲ್ಲರ ನಿಲುವು, ವಿಚಾರಗಳು ಎಲ್ಲಿ ಪ್ರಾಮುಖ್ಯತೆ ಪಡೆಯಬೇಕು. ಸಾರ್ವಜನಿಕ ಬದುಕಿನಲ್ಲಿ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವವರು ಎಷ್ಟೇ ಪ್ರತಿಭಾವಂತರು, ಪ್ರಸಿದ್ಧರಾದರೂ, ಮಾಧ್ಯಮಗಳಲ್ಲಿ ಎಷ್ಟೇ ಪ್ರಾಮುಖ್ಯತೆ ಪಡೆದರೂ ಸಾರ್ವಜನಿಕ ಚಿಂತನೆ ಮತ್ತು ಬದುಕಿನ ಮೇಲೆ ಇವರ ಪ್ರಭಾವವಿರುವುದಿಲ್ಲ. ನೀವು ಇವರನ್ನು ಟೀಕಿಸಿದರೂ ಏನೂ ಪ್ರಯೋಜನವಾಗುವುದಿಲ್ಲ. ಪತ್ರಿಕೆಯ ಕೆಲವೇ ಕೆಲವು ಅಮೂಲ್ಯ ಪುಟಗಳನ್ನು ಇಂತವರಿಗಾಗಿ ಪೋಲು ಮಾಡಬೇಡಿ.

೬. ಅನುವಾದಿತ ಲೇಖನಗಳಿಗೆ ಸಂಪರ್ಕ ವಿವರ, ವೆಬ್ ವಿಳಾಸ ಒದಗಿಸಿಕೊಟ್ಟರೆ ಸಾಕು. ಪೂರ್ಣ ಪಠ್ಯದ ಅಗತ್ಯವಿಲ್ಲ.

೭. ಒಂದು ಸಂಚಿಕೆಗೆ ಸಂಪಾದಕರ ಟಿಪ್ಪಣಿ, ಬರಹ ಒಂದಿದ್ದರೆ ಸಾಕು. ಬೇರೆ ಬೇರೆ ಶೀರ್ಷಿಕೆಯಡಿ ಹೆಚ್ಚಿನ ಟಿಪ್ಪಣಿಗಳು ಬೇಡ. ಸಂಪಾದಕರು ಕೂಡ ಪತ್ರಿಕೆಯ ಇನ್ನೊಬ್ಬ ಓದುಗರು ಮಾತ್ರವಷ್ಟೆ – ಪತ್ರಿಕೆ ಪ್ರಕಟವಾದ ನಂತರ.

**–ಕೆ. ಸತ್ಯನಾರಾಯಣ,** ಬೆಂಗಳೂರು

## ಸದಾ ಮೂರನೇ ದಾರಿಯ ಹುಡುಕಾಟದಲ್ಲಿರುವ ಪತ್ರಿಕೆ

ತನ್ನ ಕಾಲಕ್ಕೆ ತೀವ್ರವಾಗಿ ಮತ್ತು ನೈತಿಕವಾಗಿ ಸ್ಪಂದಿಸುವ ಪತ್ರಿಕೆಗಳು ಅಗತ್ಯ. ಅಂಥದ್ದೊಂದು ಗುಣ 'ಹೊಸ ಮನುಷ್ಯ' ಪತ್ರಿಕೆಯಲ್ಲಿದೆ. ಬೌದ್ಧಿಕ ಚರ್ಚೆಗಳನ್ನು ಒಣ ಗಂಭೀರಗೊಳಿಸದೆ ಅಥವಾ ಸರಳೀಕರಿಸದೆ ಓದುಗರಿಗೆ ತಲುಪಿಸಲು ಯತ್ನಿಸಿದೆ. ಕನ್ನಡದ ಇಂದಿನ ಬಲಪಂಥೀಯ ಮತ್ತು ಎಡಪಂಥೀಯ ಲೇಖಕರಿಗೆ ಸಾಧ್ಯವಾಗದ ಹದವಾದ, ಎಚ್ಚರದ ಸೂಕ್ಷ್ಮ ನೋಟಗಳು ಪತ್ರಿಕೆಯಲ್ಲಿದ್ದವು. ಸಾಂಪ್ರದಾಯಿಕತೆಯ ಹುಸಿತನವನ್ನೂ, ಪ್ರಗತಿಪರತೆಯ ಜಡತ್ವವನ್ನೂ ಏಕಕಾಲಕ್ಕೆ ಸರಿಯಾದ ರೀತಿಯಲ್ಲಿ ಪ್ರಶ್ನಿಸಿದ, ಒರೆಗಲ್ಲಿಗೆ ಹಚ್ಚಿದ ಲೇಖನಗಳಿಲ್ಲಿ ಹರಡಿಕೊಂಡಿವೆ. ಸದಾ ಮೂರನೇ ದಾರಿಯ ಹುಡುಕಾಟದಲ್ಲಿರುವಂತೆ ಕಾಣುವ ಪತ್ರಿಕೆ ಡಿ.ಎಸ್.ನಾಗಭೂಷಣ ಅವರ ನೈತಿಕ ಎದೆಗಾರಿಕೆಯಿಂದಾಗಿ ತನ್ನ ಸ್ವೋಪಜ್ಞತೆ ಕಾಪಾಡಿಕೊಂಡಿದೆ.

**–ವಿಕ್ರಮ ವಿಸಾಜಿ,** ಗುಲ್ಬರ್ಗ

## ಪತ್ರಿಕೆ ಹೀಗೇ ನಡೆಯಲಿ; ಅಬ್ಬರದಲ್ಲಿ ಎಚ್ಚರ ತಪ್ಪದಿರಲಿ!

ನಿಮ್ಮ ಪ್ರತಿಯೊಂದು ಸಂಚಿಕೆಯು ಬಗೆಗೂ ವಿವರವಾಗಿ ಮಾತನಾಡಬೇಕು. ಕೆಲವು ಲೇಖನಗಳಂತೂ ವಿಶೇಷ ಆಸಕ್ತಿ, ಮನನವನ್ನು ಬೇಡುತ್ತವೆ. ನನ್ನನ್ನು ನಿಮ್ಮ ಸಂಚಿಕೆಗಾಗಿ ಕಾಯುವಂತೆ ಮಾಡುವುದು ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಮತ್ತು 'ಸಮಕಾಲೀನ'ದಲ್ಲಿ ಯಾವ ವಿಷಯ ಚರ್ಚೆಗೆ ಎತ್ತಿಕೊಂಡಿದ್ದೀರಿ ಎಂಬುದು. ಕೆಲವು ಲೇಖನಗಳಿಗೆ ನೀವು 'ಇಂಟ್ರೋ' ಮಾದರಿಯಲ್ಲಿ ಕೊಡುವ ದಿಕ್ಸೂಚಿಗಳೇ ಹೊಸ ಒಳನೋಟಗಳನ್ನು ಅನಾವರಣಗೊಳಿಸುತ್ತವೆ, ಇರಲಿ.

. ವರ್ತಮಾನಕ್ಕೆ ತಾವು ಸ್ಪಂದಿಸುವ ಬಗೆಯೇ ಒಂದು ಅಚ್ಚರಿ. ಸಿದ್ಧರಾಮಯ್ಯನವರು ಅಧಿಕಾರಕ್ಕೆ ಬರುವುದು ನಿಮ್ಮಂತೆ ನನಗೂ ಖುಷಿಯ ಸಂಗತಿಯಾಗಿತ್ತು. ಆದರೆ ಕಾಂಗ್ರೆಸ್ ಬಗ್ಗೆ ಒಲವಿರಲಿಲ್ಲ. ಗೊಂದಲದಲ್ಲಿದ್ದೆ. ತಮ್ಮ ಸಂಪಾದಕೀಯಗಳು ನನ್ನೊಳಗಿನ ಗೊಂದಲಗಳನ್ನು ತಿಳಿಗೊಳಿಸಿದ್ದೂ ಇದೆ. ತಮ್ಮ ಫೆಬ್ರವರಿ, ೨೦೧೪ರ ಸಂಚಿಕೆಯ ಸಂಪಾದಕೀಯದಲ್ಲಿ ಸಿದ್ಧರಾಮಯ್ಯನವರ ಅಧಿಕಾರದ ಆಸೆಯನ್ನು ಮೀರಿ ನಿಜವಾದ ಜನಸೇವೆಗಾಗಿ ರಾಜಕಾರಣ ಮಾಡಬಲ್ಲ ಗೈರತ್ತಿನ ಗೈರುಹಾಜರಿ ಗುರುತಿಸಿದ ಬಗೆ ಇಷ್ಟವಾಯಿತು. ಹೇಳುವುದನ್ನು ನೇರವಾಗಿ, ಸ್ಪಷ್ಟವಾಗಿ, ನಿಷ್ಠುರವಾದರೂ ಸತ್ಯವನ್ನು ಹೇಳುವ ನಿಮ್ಮ ನಿಲುವು ಖುಷಿ ತರುತ್ತದೆ.

ಬೇರೊಂದು ಪರ್ಯಾಯವಿಲ್ಲದಾಗ ವಿಧಿಯಿಲ್ಲದೆ ಇನ್ನೂ ಶೈಶವಾವಸ್ಥೆಯಾದರೂ, ಅಪಕ್ವವೇ ಆದರೂ 'ಆಮ್ ಆದ್ಮಿ'ಯನ್ನು ಬೆಂಬಲಿಸಿದಿರಿ. ಆದರೆ ಅನಂತರ ಬೆಳವಣಿಗೆಗಳನ್ನು ತಾವು ಗುರುತಿಸಿದ ರೀತಿ, ಆಮ್‌ಆದ್ಮಿ ಪಕ್ಷದ ದೋಷಗಳನ್ನು ಅತಿ ಪ್ರಚಾರದಿಂದ ತಲೆ ತಿರುಗಿದ್ದಿರಬಹುದೆಂಬ ಟೀಕೆಯ ಮೂಲಕ ಬಿಡಿಸಿಟ್ಟಾಗ ನಿಮ್ಮ ನಿಲುವುಗಳಲ್ಲಿದ್ದ ನಿಷ್ಪಕ್ಷಪಾತ ಗುಣ ನಿಮ್ಮ ಬಗ್ಗೆ ಗೌರವವನ್ನು ಹೆಚ್ಚಿಸಿತು. ಮನಸ್ಸು ನಿರಾಳವಾಯಿತು.

'ಸಮಕಾಲೀನ'ದಲ್ಲಿ ಅಶೀಶ್ ನಂದಿ, ಜಿ. ರಾಜಶೇಖರ್ ಮೊದಲಾದವರು 'ಸೆಕ್ಯುಲರಿಸಂ' ಬಗ್ಗೆ ಮೂಡಿಸಿದ ಅಭಿಪ್ರಾಯಗಳು ಅವರ ನಿಲುವುಗಳನ್ನು ಗುಮಾನಿಯಿಂದ ನೋಡಿದ ಕೆಲವರ ಅಭಿಪ್ರಾಯಗಳು ಬಹುಕಾಲ ಕಾಡುವಂತೆ ಮನಸ್ಸಿನಾಳಕ್ಕೆ ಇಳಿದಿವೆ.

ತಾವು ಮತೀಯ ಭಯೋತ್ಪಾದನೆಯನ್ನು ಕುರಿತಂತೆ ಎತ್ತಿದ ಪ್ರಶ್ನೆಗಳು ಮತ್ತು ಯಾಸಿನ್ ಭಟ್ಕಳ್ ವಿಚಾರಣೆಯ ಕೆಲವು ಸತ್ಯ ಸಂಗತಿಗಳನ್ನು ಹೊರಹಾಕಿ ತೆರೆಮರೆಗೆ ಸರಿಯುತ್ತಿರುವ ಮೂಲಭೂತ ಕಾರಣಗಳತ್ತ ಕ್ಷ–ಕಿರಣ ಬೀರಿದ್ದು ನಿಜಕ್ಕೂ ಗಮನಾರ್ಹ. ಮುಂದುವರಿದ 'ಕೋಮುವಾದ : ಬೇರು ಮತ್ತು ಬಿಳಿಲುಗಳು' ವಿಷಯದ ಚರ್ಚೆಗೆ ನಿಮ್ಮ 'ಇಂಟ್ರೋ'ದಲ್ಲಿ ಮುಂದಿಟ್ಟ ವಿಚಾರಗಳು ಜನರ ಆಲೋಚನೆಯನ್ನು ಸತ್ಯದ ಆಳಕ್ಕೆ ಇಳಿಸುವ ಪ್ರಯತ್ನವಾಗಿ ಕಾಣಿಸಿತು.

ನಮ್ಮ ಮಾರ್ಗದರ್ಶಕರಾದಾರು ಎಂದುಕೊಂಡವರನ್ನು, ಆಗಾಗ ದಿಕ್ಕು ತಪ್ಪಿಸುವಂಥ ಹೇಳಿಕೆ ನೀಡುತ್ತ ಅಚ್ಚರಿಗೊಳಿಸುವ ಅನಂತಮೂರ್ತಿಯವರನ್ನು ಸರಿಯಾಗೇ ತರಾಟೆಗೆ ತೆಗೆದುಕೊಂಡಿದ್ದೀರಿ. ಅವರ ಬಗ್ಗೆ ಅಪಾರವಾದ ಗೌರವ, ವಿನಯವನ್ನು ಉಳಿಸಿಕೊಂಡಿದ್ದೀರಿ. ಇದು ತುಂಬಾ ಖುಷಿ ಕೊಡುತ್ತದೆ.

ಅತ್ಯಾಚಾರ ಕುರಿತಂತೆ ನೀವು ನ್ಯಾಯಮೂರ್ತಿ ಗಂಗೂಲಿ ಮತ್ತು ತರುಣ್ ತೇಜ್‌ಪಾಲ್‌ರ ಬಗೆಗಿನ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಕೆಲವು ಗಂಭೀರವಾದ ಪ್ರಶ್ನೆಗಳನ್ನು ಎತ್ತಿದ್ದಿರಿ. ಅತಿಯಾದ ಪ್ರಚಾರ ಇತ್ಯಾದಿಗಳ ಹಿಂದೆ ಇರಬಹುದಾದ ರಾಜಕಾರಣವನ್ನು ಕುರಿತು ಹೇಳಿದ್ದಿರಿ. ಈಗ ಮತ್ತಷ್ಟು ಭುಗಿಲೆದ್ದಿದೆ. ನನಗೆ ನಿಮ್ಮ ಮಾತಿನ ಹಿಂದಿರುವ ಸತ್ಯ ಈಗ ಇನ್ನಷ್ಟು ಸ್ಪಷ್ಟವಾಗುತ್ತಿದೆ.

'ಹೊಸ ಮನುಷ್ಯ'ದಲ್ಲಿ ತುಂಬ ಪ್ರೀತಿಯಿಂದ ಓದುವ ಇನ್ನೊಂದು ಬರಹ ಆತ್ಮೀಯ ಮಿತ್ರ ಕೃಷ್ಣಪ್ಪನವರ ಬಗ್ಗೆ ಇಂದಿರಾ ಅವರ ನೆನಪುಗಳು. ಆ ಲೇಖನಗಳು ಮರೆತು ಹೋಗುತ್ತಿರುವ ಅನೇಕ ಸಂಗತಿಗಳನ್ನು ನೆನಪಿಗೆ ತರುತ್ತಿವೆ.

ಇತ್ತೀಚಿನ ಸಂಚಿಕೆಯಲ್ಲಿ ಕೆ.ಎಂ. ಶಂಕರಪ್ಪನವರನ್ನು ನೆನಪು ಮಾಡಿಕೊಂಡಿದ್ದೀರಿ. ನನಗೆ ಇದೊಂದು ಅಪರೂಪದ ಸಂಗತಿ. ಶಂಕರಪ್ಪನವರ ಬಗ್ಗೆ ಎಷ್ಟು ಬರೆದರೂ ಮುಗಿಯದು. ನನ್ನಂಥವರ ಕಷ್ಟದಲ್ಲಿ ಧೈರ್ಯ ತುಂಬಿದರು. ಹಿತೈಷಿಯಗಿ ನೆರವಾದರು. ನಮ್ಮ ಮುದ್ರಣಾಲಯ ಪ್ರಾರಂಭಿಸಿದಾಗ ಅದಕ್ಕೆ ಇಳಾ ಎಂದು ಕರೆದದ್ದು ಅವರೇ. ಜೆ.ಪಿ. ಚಳುವಳಿಯಲ್ಲಿ ನಮ್ಮನ್ನು ತೊಡಗಿಸಿದವರು ಅವರೇ. ತುರ್ತು ಪರಿಸ್ಥಿತಿಯ ದಿನಗಳಲ್ಲಿ ಹಗಲಿರುಳೆನ್ನದೆ ಒಟ್ಟಾಗಿ ದುಡಿದೆವು.

ನನಗೆ ನಿಮ್ಮನ್ನು ಯಾವ 'ಕ್ರಾಂತಿಕಾರಿ' ಪತ್ರಕರ್ತನಿಗೂ ಹೋಲಿಸಲು ಇಷ್ಟವಿಲ್ಲ. ಯಾರ್ಯಾರು ಪತ್ರಿಕೆಗಳ ಮೂಲಕ ಏನೇನು ಮಾಡಿದರು ಎಂಬುದೂ ನನಗೆ ಗೊತ್ತಿದೆ. ನೀವು ನೀವಾಗೇ ಇರಬೇಕೆಂಬುದು ನನ್ನ ಅಪೇಕ್ಷೆ. ಪತ್ರಿಕೆ ಹೀಗೇ ನಡೆಯಲಿ. ಅಧಿಕ ಪ್ರಸಾರ, ಅಧಿಕ ಜನಪ್ರಿಯತೆ, ವಿನ್ಯಾಸಗಳ ಅಬ್ಬರದಲ್ಲಿ ಎಚ್ಚರ ತಪ್ಪದಿರಿ. ಪತ್ರಿಕೆ ಹೊರತರುವುದರ ಹಿಂದಿರುವ ಕಷ್ಟ ನನಗೆ ಗೊತ್ತಿದೆ. ನನ್ನ ಬೆಂಬಲ ಪತ್ರಿಕೆ ಇರುವಷ್ಟು ಕಾಲವೂ ನಿಮಗಿದೆ. ಆಮಿಷಗಳನ್ನು, ಹೇಳಬೇಕೆನಿಸುತ್ತಿರುವ ಎಷ್ಟೋ ಮಾತುಗಳನ್ನು ಇನ್ನೂ ಉಳಿಸಿಕೊಂಡೇ ಪತ್ರ ಮುಗಿಸುತ್ತಿದ್ದೇನೆ.

ಭ್ರಮ ನಿರಸನ, ನಿರಾಶೆಯಿಂದ ತಣ್ಣಗಾಗತೊಡಗಿರುವ ಅನೇಕ ಮನಸ್ಸುಗಳನ್ನು ಎಚ್ಚರಿಸುತ್ತ, ಮತ್ತೆ ಮತ್ತೆ ಏನಾದರೂ ಮಾಡಲು ತೊಡಗಿಕೊಳ್ಳಲು ಪ್ರೇರಿಸುತ್ತಿರುವ ನಿಮಗೆ ನನ್ನ ಕೃತಜ್ಞತೆಗಳಿವೆ.

**–ಡಾ. ವಿಜಯಾ,** ಬೆಂಗಳೂರು

## ಸಮಗ್ರತೆಯನ್ನು ಮೈಗೂಡಿಸಿಕೊಂಡು ವ್ಯಾಪಕತೆ ಪಡೆಯಲಿ

ನಾಲ್ಕನೇಯ ವರ್ಷದಲ್ಲಿ ಪಾದಾರ್ಪಣೆ ಮಾಡುತ್ತಿರುವ 'ಹೊಸ ಮನುಷ್ಯ' ಪತ್ರಿಕೆಗೆ ಶುಭಾಶಯ ತಿಳಿಸುತ್ತಾ, ಕಳೆದು ೩ ವರ್ಷಗಳನ್ನು, ಸಂಕೀರ್ಣ ದಾರಿಯಲ್ಲಿ ಯಶಸ್ವಿಯಾಗಿ ಪೂರೈಸಲು ಕಾರಣರಾದ ಸಂಪಾದಕರಿಗೆ ಮೊದಲು ಅಭಿನಂದನೆಗಳನ್ನು ಹೇಳಬಯಸುತ್ತೇನೆ.

ಬದಲಾದ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ, ಅಭಿವೃದ್ದಿ, ಆರ್ಥಿಕ ಉನ್ನತಿ ಆದ್ಯತೆ ಪಡೆದುಕೊಂಡಿದೆ. ಸಮಾಜದ ಬಹುಪಾಲು ಜನತೆ ಸ್ವಹಿತಾಸಕ್ತಿಯ ಸುಖದ ಕನಸು ಬೆನ್ನಟ್ಟಿದೆ. ಇಂತಹ ಜನತೆಯನ್ನು ರಸ್ತೆ ತಡೆಗಳಂತೆ ತಡೆದು ತನ್ನ ನಡೆಯನ್ನು ವಿಮರ್ಶಿಸಿಕೊಳ್ಳಲು ಪ್ರೇರೇಪಿಸುವಲ್ಲಿ ಪತ್ರಿಕೆ ದೃಢವಾದ ಹೆಜ್ಜೆಗಳನ್ನಿಡುತ್ತಿದೆ. ಸಮಾಜವಾದಿ ಆಶಯವಾದ ಸಮಾನತೆಯ ತಾತ್ವಿಕ ಹಿನ್ನೆಲೆಯಲ್ಲಿ ಪ್ರಾರಂಭವಾದ ಪತ್ರಿಕೆ, ಇಂದಿನ ಬದಲಾದ ಸನ್ನಿವೇಶದಲ್ಲಿ ಸಮಾಜವಾದಿ ಸಿದ್ಧಾಂತ ನಿರ್ವಹಿಸಬೇಕಾದ ಪಾತ್ರ ಕುರಿತು ಸಂಪಾದಕರು ಮರು ಪರಿಶೀಲನೆಗೆ ಹಿಂದೆಗೆಯದೆ ವಾಸ್ತವಿಕ ಘಟನೆಗಳಿಗೆ ನಿರ್ಭಿಡೆಯಿಂದ ಪ್ರತಿಕ್ರಿಯಿಸುತ್ತಿರುವುದನ್ನು ಗಮನಿಸಬಹುದು. ಇದರಿಂದ ಗತಕಾಲದ ತಾತ್ವಿಕತೆಯ ನೆರಳಿನ ಆಶ್ರಯದಲ್ಲಿ ಮಂಪರು ನಿದ್ರೆಗೆ ಜಾರಿರುವ ಸಿದ್ಧಾಂತಿಗಳು ಎಚ್ಚರಗೊಳ್ಳುವಂತಾಗಿದೆ ಎಂದು ಹೇಳಬಹುದು.

ಪತ್ರಿಕೆ ಆಕಾರ, ಕಾರ್ಯಕ್ಷೇತ್ರದ ಹರಿವು ಚಿಕ್ಕದಾದರೂ, ಇದು ಪ್ರತಿಪಾದಿಸುತ್ತಿರುವ ವಿಚಾರಗಳ ಮತ್ತು ಸಾಮಾಜಿಕ, ರಾಜಕೀಯ, ಧಾರ್ಮಿಕ ಆಯಾಮಗಳಲ್ಲಿ ಪ್ರಕಟಿಸಿರುತ್ತಿರುವ ಲೇಖನಗಳ ಜ್ಞಾನದ ಹರಿವು ವಿಶಾಲವಾದದ್ದಾಗಿದೆ. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಜಾಗತಿಕ ಮಟ್ಟದಲ್ಲಿ ಜರುಗುತ್ತಿರುವ, ಪರ–ವಿರೋಧಿ, ಆಶಯ–ಹುನ್ನಾರಗಳನ್ನು ಸ್ಥೂಲವಾಗಿಯಾದರೂ ವಿವೇಚಿಸಿ ಓದುಗನ ಜ್ಞಾನದ ಮಟ್ಟವನ್ನು ಪತ್ರಿಕೆ ಎತ್ತರಿಸಿದೆ. ಅದರಂತೆ ಸಂಪಾದಕರು ಜನಪರ ಚಳುವಳಿಗಳಿಗೆ ಒತ್ತಾಸೆಯಾಗುವದರ ಜೊತೆಗೆ ಅವುಗಳ ನಾಯಕರುಗಳ ತಪ್ಪು ನಡೆಗಳನ್ನು ಹಾಗೂ ಆಡಳಿತಗಾರರ ಜನ ವಿರೋಧಿ ನಿಲುವುಗಳನ್ನು ಯಾವುದೆ ಪೂರ್ವಾಗ್ರಹಗಳಿಲ್ಲದೆ ನಿರ್ಭಿಡೆಯಿಂದ ವಿಮರ್ಶಿಸುತ್ತಾ ಸಾಗಿರುವುದು ಪತ್ರಿಕೆಯ ಮೌಲ್ಯ ಹೆಚ್ಚಿಸಿದೆ. ಜ್ಞಾನದ ಹಸಿವನ್ನು ತಣಿಸಬೇಕಾದ ಬಹುಪಾಲು ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾಲಯಗಳು ಇಂದು ಕೇವಲ ಉದ್ಯೋಗ ತರಬೇತಿ ಕೇಂದ್ರಗಳಾಗಿರುವ ವಿಷಮ ಸನ್ನಿವೇಶದಲ್ಲಿ ಪತ್ರಿಕೆ ಓದುಗರ ಜ್ಞಾನದ ಹಸಿವನ್ನು ತಣಿಸುವಲ್ಲಿ ತನ್ನ ಶಕ್ತಿಮೀರಿ ಪ್ರಯತ್ನಿಸುತ್ತಿದೆ ಇದು ಆಶಾದಾಯಕವಾಗಿದೆ.

ಅದರಂತೆ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳ ಕುರಿತು ಪತ್ರಿಕೆ ಅತ್ಯಂತ ಮೌಲಿಕವಾಗಿ ಪ್ರತಿಕ್ರಿಯಿಸಿದೆ. ಜನೇವರಿ ೨೦೧೮ರ ಸಂಚಿಕೆಯಲ್ಲಿ ಸಂಪಾದಕರ ಟಿಪ್ಪಣಿ ಹೆಣ್ಣು–ಗಂಡಿನ ಸಂಬಂಧಗಳ ಕುರಿತು ಪ್ರಸ್ತಾಪಿಸುತ್ತಾ, ಸಮಾನತೆಯನ್ನು ಸಾಧಿಸುವ ಆತುರದಲ್ಲಿ, ಪ್ರಾಕೃತಿಕ ಆಶಯಗಳನ್ನು ಧಿಕ್ಕರಿಸುತ್ತಾ ಹೆಣ್ಣು, ಗಂಡಾಗಲು ಯತ್ನಿಸುತ್ತಿರುವ ವಿದ್ಯಮಾನವನ್ನು ವಿಶ್ಲೇಷಿಸಿರುವರೀತಿ ಮನನೀಯವಾಗಿದೆ.

ಹೀಗೆ ಪತ್ರಿಕೆ, ಪ್ರಶ್ನಿಸುವವರನ್ನು ಪ್ರೋತ್ಸಾಹಿಸುತ್ತಾ, ಟೀಕಿಸುವವರನ್ನು ಗೌರವಿಸುತ್ತಾ, ತುದಿ–ಬಾಲಗಳನ್ನೊಳಗೊಂಡ ಸಮಗ್ರತೆಯನ್ನು ಮೈಗೂಡಿಸಿಕೊಂಡು ವ್ಯಾಪಕತೆಯನ್ನು ಪಡೆಯಬೇಕಾಗಿದೆ. ಇದಕ್ಕೆ ಪೂರಕವಾಗಿ ಸಮಾನ ಮನಸ್ಕರೆಲ್ಲರು ಸಂಪಾದಕರ ಶಕ್ತಿಕುಂದದಂತೆ ಎಚ್ಚರಿಕೆ ವಹಿಸಬೇಕಾಗಿದೆ.

**–ಅಜ್ಜಪ್ಪ ಬಿರಡಿ,** ಗೋಕಾಕ

## ತಾತ್ವಿಕ ವಿಶ್ಲೇಷಣೆಗಳು ಕೂಡ ಬೇಕು

'ಹೊಸ ಮನುಷ್ಯ'ದ ಕಳೆದ ವರ್ಷದ ತಕ್ಷಣ ಸಿಕ್ಕಿದ ಸಂಚಿಕೆಗಳನ್ನು ಮತ್ತೆ ನೋಡಿದಾಗ ಅದರಲ್ಲಿ ನಮ್ಮ ಸಮಾಜ, ರಾಜ್ಯ ಮತ್ತು ರಾಷ್ಟ್ರದ ಆಗುಹೋಗುಗಳ ಬಗ್ಗೆ ವೈವಿಧ್ಯಮಯವಾದ, ಮಾಹಿತಿಪೂರ್ಣವಾದ ಲೇಖನಗಳು ಮತ್ತು ಚರ್ಚೆಗಳು ಪ್ರಕಟವಾಗಿರುವುದು ಕಂಡಿತು.

ಪತ್ರಿಕೆ ನನಗೆ ಇಷ್ಟವಾಗಿರುವುದಕ್ಕೆ ಅದರಲ್ಲಿ ಪ್ರತಿ ತಿಂಗಳು ಸಮಕಾಲೀನ ವಿದ್ಯಮಾನಗಳ ಬಗೆಗಿನ ಸಂಪಾದಕರ ವಿಶಿಷ್ಟ ಹಾಸ್ಯ ಮತ್ತು ವ್ಯಂಗ್ಯ ಚಟಾಕಿಗಳಿಂದ ಕೂಡಿದ ತೀಕ್ಷ್ಣವಾದ ವಿಶ್ಲೇಷಣೆಗಳಿಂದ ಕೂಡಿದ ಬರಹಗಳು, ಜೊತೆಗೆ ರಾಜ್ಯದ ಮತ್ತು ರಾಷ್ಟ್ರದ ಪ್ರಮುಖ ಚಿಂತಕರ ವಿಚಾರ ಮಂಡನೆಗಳು. ಇಂತಹ ವಿಚಾರ ಪ್ರಚೋದಕ ಬರಹಗಳ ಜೊತೆಗೆ ಕೆಲವು ತಾತ್ವಿಕ ವಿಶ್ಲೇಷಣೆಗಳು ಕೂಡ ಬೇಕು ಎಂದು ನನಗೆ ಅನಿಸಿದೆ. ಉದಾಹರಣೆಗೆ ನಮ್ಮಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ವಿಫಲವಾಗಿರುವುದಕ್ಕೆ ನಮ್ಮ ಜನರು ಡೆಮೊಕ್ರ್ಯಾಟಿಕ್ ವ್ಯವಸ್ಥೆ ಅಪೇಕ್ಷಿಸುವ ಜವಾಬ್ದಾರಿಗಳನ್ನು ಹೊರಲು ತಯಾರಾಗಿಲ್ಲದಿರುವುದೇ ಮುಖ್ಯ ಕಾರಣವಲ್ಲವೇ? ಹಾಗೆಯೇ, ನಮ್ಮ ಸುಶಿಕ್ಷಿತ ಮಧ್ಯಮವರ್ಗ ಶಿಕ್ಷಣ ಕ್ಷೇತ್ರದಲ್ಲಿ ದೇಶೀ ಭಾಷಾ ಮಾಧ್ಯಮವನ್ನು ಬೆಂಬಲಿಸದೇ ಇರುವುದಕ್ಕೆ ಅವರಿಗೆ ಸಮಾನತೆಯ ಮೌಲ್ಯದ ಬಗ್ಗೆ ಇರುವ ವಿರೋಧವೇ ಕಾರಣವಲ್ಲವೇ? ಇಂತಹ ವಿಷಯಗಳು ಹೊಸ ಮನುಷ್ಯ ಚರ್ಚಿಸುವಂತಾಗಲಿ.

**–ಗಿರೀಶ್. ವಿ. ವಾಘ್,** ಬೆಂಗಳೂರು

'ಹೊಸ ಮನುಷ್ಯ' ಪತ್ರಿಕೆಯಲ್ಲಿ ನೀವು ಬರೆಯುವ ರಾಜಕೀಯ ವಿಶ್ಲೇಷಣೆಗಳು ದೃಶ್ಯ ಮಾಧ್ಯಮದಲ್ಲಿ *ಸೋ ಕಾಲ್ಡ್* ಪತ್ರಕರ್ತರು ರಾಜಕೀಯ ವಿಶ್ಲೇಷಕರು ಆಡುವ 'ತೌಡು ಕುಟ್ಟುವ' ಮಾತುಗಳಿಗಿಂತ ತುಂಬ ಅರ್ಥಪೂರ್ಣವೂ, ಪ್ರಬುದ್ಧವೂ ಆಗಿವೆ. ಹಾಗೇ, ಸಾಹಿತ್ಯ ಲೋಕದ ವಿಶ್ಲೇಷಣೆ ಕೂಡ ವಸ್ತುನಿಷ್ಠತೆಯಿಂದಲೂ ಮತ್ತು ನಿರ್ಮಮಕಾರದಿಂದಲೂ ಕೂಡಿರುತ್ತದೆ. ಅಭಿನಂದನೆಗಳು

**–ಎಂ.ಜಿ. ಚಂದ್ರಶೇಖರಯ್ಯ,** ದೊಡ್ಡಬಳ್ಳಾಪುರ

ಜಾಗೃತ ಮನದ ಪ್ರತೀಕವಾಗಿ ಪ್ರತಿ ತಿಂಗಳೂ ಕೈಸೇರುತ್ತಿರುವ 'ಹೊಸ ಮನುಷ್ಯ' ವಿನೂತನ, ಉಪಯುಕ್ತ. ನಿವೃತ್ತಿಯ ನಂತರ ನೀವು ತೋರುತ್ತಿರುವ ಜೀವನೋತ್ಸಾಹ ಶ್ಲಾಘನೀಯ. ಶುಭಾಶಯಗಳು.

**–ಡಾ. ಡಿ.ಬಿ. ರಾಮಚಂದ್ರಾಚಾರ್,** ಬೆಂಗಳೂರು

'ಹೊಸ ಮನುಷ್ಯ' ಚೆನ್ನಾಗಿ ಬರುತ್ತಿದೆ. ಒಂದೊಂದು ವಿಷಯವನ್ನೂ ತೆಗೆದುಕೊಂಡು ಆ ಬಗ್ಗೆ ಒಂದು ಪುಟ್ಟ ಸಂವಾದವನ್ನೇರ್ಪಡಿಸುತ್ತಿರುವುದು ಆಯಾ ವಿಷಯದಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ತರುವಂತದ್ದಾಗಿದೆ. ಪತ್ರಿಕೆಗೆ ಮತ್ತು ನಿಮಗೆ ಶುಭ ಹಾರೈಕೆಗಳು.

**–ಡಾ. ಡಿ. ರಘುನಾಥ ರಾವ್,** ಬೆಂಗಳೂರು

ಜುಲೈ ಸಂಚಿಕೆಯಲ್ಲಿ ಪ್ರಧಾನಿ ಮೋದಿಯವರ ಬಗ್ಗೆ ನಿಮ್ಮ ಒಲವು ನನಗೆ ಸರಿ ಕಾಣಿಸಲಿಲ್ಲ. ಹಾಗೆಯೇ, ರೇಷ್ಮೆಯವರ ಲೇಖನ ಕೂಡ. ವಾಸ್ತವ ಸಂಗತಿಗಳಿಗಿಂದ ಪೂರ್ವ ನಿಶ್ಚಿತ ಅಭಿಪ್ರಾಯಗಳಿಗೇ ಪ್ರಧಾನ ಅವಕಾಶ ಇರುವಂತಿದೆ.

**–ಎಚ್.ಎಲ್ ಕೇಶವಮೂರ್ತಿ,** ಮಂಡ್ಯ


ಜೂನ್ ಸಂಚಿಕೆಯಲ್ಲಿನ 'ಕವಲು ದಾರಿಯಲ್ಲಿ ಭಾರತದ ಮುಸ್ಲಿಮರು' ಲೇಖನ ಮುಸ್ಲಿಂ ಬಂಧುಗಳು ಎದುರಿಸುತ್ತಿರುವ ದೇಶೀಯ ಮತ್ತು ಜಾಗತಿಕ ಸಮಸ್ಯೆಗಳನ್ನು ವೈಚಾರಿಕವಾಗಿ ವಿಶ್ಲೇಷಣೆ ಮಾಡಿದೆ. ಅವರ ಕಣ್ಣುಗಳನ್ನು ತೆರೆಸುವಂತಿದೆ. ಒಂದು ಕಡೆ ಆಳುವ ಸರ್ಕಾರಗಳು ಅವರನ್ನು ಓಟ್ ಬ್ಯಾಂಕ್ ಮಾಡಿಕೊಂಡು ಅವರನ್ನು ಶೋಷಿಸುತ್ತಿದ್ದರೆ, ಇನ್ನೊಂದು ಕಡೆ ಮೌಲ್ವಿ–ಮುಲ್ಲಾಗಳು ತಮ್ಮ ಧರ್ಮವನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನ ಮಾಡುತ್ತಾ ಅವರನ್ನು ತಮ್ಮ ವಶದಲ್ಲಿ ಹಿಡಿದಿಟ್ಟುಕೊಂಡಿದ್ದಾರೆ. ಮುಸ್ಲಿಮರೇ ಹೆಚ್ಚಿನ ಸಂಖ್ಯೆಯಲ್ಲಿರುವ ಪಾಕಿಸ್ತಾನ, ಬಂಗ್ಲಾದೇಶ, ಇಂಡೋನೇಷ್ಯಾ ಮತ್ತು ಮಲೇಷ್ಯಾದಂತಹ ದೇಶಗಳುಕಾಲಕ್ಕೆ ತಕ್ಕಂತಹ ಮುಸ್ಲಿಂ ಸಮಾಜಿಕ ಮತ್ತು ಕೌಟುಂಬಿಕ ಕಾನೂನು ಕಟ್ಟಳೆಗಳನ್ನು ರೂಪಿಸಿ ಈ ಜನಾಂಗದ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತಿರುವಾಗ ಇಲ್ಲಿ ಯಥಾಸ್ಥಿತಿಯನ್ನೇ ಆಗ್ರಹಿಸುತ್ತಿರುವುದು ವಿಪರ್ಯಾಸವೇ ಸರಿ!

**–ಎಂ. ಸುದರ್ಶನ ರಾಜ,** ಧಾರವಾಡ

## ನಮ್ಮ ಸಮಾಜವಾದಿಗಳು

# ಹೋರಾಟದ ಬದುಕಿನ ಅಮ್ಮೆಂಬಳ ಬಾಳಪ್ಪ

–ಡಾ. ವಾಸುದೇವ ಬೆಳ್ಳೆ



**ಕೋ**ಮುವಾದ ಮತ್ತು ಬಂಡವಾಳ ಕೇಂದ್ರಿತ ಅಭಿವೃದ್ಧಿ ಪ್ರಕ್ರಿಯೆಗೆ ಒಳಗಾಗುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಒಂದು ಕಾಲಕ್ಕೆ ಸಮಾಜವಾದಿ ಹೋರಾಟಗಳಿಗೆ ಹೆಸರುವಾಸಿಯಾಗಿತ್ತು. ಹಲವಾರು ಮಂದಿ ಮಾರ್ಕ್ಸ್‌ವಾದಿ ಮತ್ತು ಸಮಾಜವಾದಿ ಹೋರಾಟಗಾರರು ಈ ಜಿಲ್ಲೆಯಲ್ಲಿ ಆಗಿ ಹೋಗಿದ್ದಾರೆ. ಇತ್ತೀಚೆಗೆ ಅಗಲಿದ ಡಾ. ಅಮ್ಮೆಂಬಳ ಬಾಳಪ್ಪ ಇಂಥ ಬದ್ಧತೆಯುಳ್ಳ ಪ್ರಮುಖ ಸಮಾಜವಾದಿ ಹೋರಾಟಗಾರರಲ್ಲಿ ಒಬ್ಬರಾಗಿದ್ದಾರೆ.

ರಾಷ್ಟ್ರೀಯ ಹೋರಾಟದ ಜೊತೆಗೆ ಬೆಳೆದುಬಂದ ಮಾರ್ಕ್ಸ್‌ವಾದ ಮತ್ತು ಸಮಾಜವಾದಿ ಹೋರಾಟ ಮತ್ತು ಚಿಂತನೆಗಳು ಭಾರತವನ್ನು ದುರ್ಬಲರ ಪರವಾಗಿ ನಿರೂಪಿಸಲು ಪ್ರಯತ್ನಪಟ್ಟವು. ಈ ಹೋರಾಟಗಳಿಗೆ ಭಾರತದ ಸ್ವಾತಂತ್ರ್ಯಕ್ಕಿಂತಲೂ, ಜನರು ಸ್ವತಂತ್ರರಾಗುವುದು, ಸ್ವಾವಲಂಬಿಗಳಾವುದು, ಏಳ್ಗೆಯ ದಾರಿ ಹಿಡಿಯುವುದು ಮುಖ್ಯವಾಗಿತ್ತು. ಲೋಹಿಯಾ, ಜೆ.ಪಿ., ಮುಂತಾದ ಮಹಾನ್ ನಾಯಕರು ಭಾರತವನ್ನು ಸಮಾಜವಾದಿ ಭೂಮಿಕೆಯಲ್ಲಿ ರೂಪಿಸಲು ಪ್ರಯತ್ನಪಟ್ಟರು. ಸ್ವಾತಂತ್ರ್ಯ, ಸಮಾನತೆ, ಸಮಪಾಲು, ಸಮಬಾಳು ಇವರ ಆದರ್ಶಗಳಾಗಿದ್ದವು. ಜಾತಿ, ಬಡತನ, ಜನರ ನೋವು ಸಂಕಟಗಳು ಇವರ ಹೋರಾಟದ ಮುಖ್ಯ ವಿಷಯಗಳಾಗಿದ್ದವು. ಈ ಬಗೆಯ ಮಹಾನ್ ನಾಯಕರಿಂದ ಆಕರ್ಷಿತರಾಗಿ ಆಸಕ್ತರ ಬದುಕನ್ನು ಸುಧಾರಿಸಲು ದುಡಿದ ಅಮ್ಮೆಂಬಳ ಬಾಳಪ್ಪ ಸ್ಮರಣೀಯ ವ್ಯಕ್ತಿಯಾಗಿದ್ದಾರೆ.

ಡಾ. ಅಮ್ಮೆಂಬಳ ಬಾಳಪ್ಪ ೧೯೨೨ ಫೆಬ್ರವರಿ ೨೩ರಂದು ತನಿಯ ಮೂಲ್ಯ ಹಾಗೂ ಅಬ್ಬಕ್ಕು ಅವರ ಮಗನಾಗಿ ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿನ ಕುರ್ನಾಡು ಗ್ರಾಮದ ದೇವಸ್ಯ (ಅಮ್ಮೆಂಬಳ) ಎಂಬಲ್ಲಿ ಹಿಂದುಳಿದ ಕುಲಾಲ(ಕುಂಬಾರ) ಜಾತಿಯಲ್ಲಿ ಹುಟ್ಟಿದರು. ಇವರದು ಬಡ ಕುಟುಂಬ. ಜಮೀನ್ದಾರಿ ಪದ್ಧತಿ ಪ್ರಬಲವಾಗಿದ್ದ ಕಾಲ ಅದು. ಶೂದ್ರರ ಶಿಕ್ಷಣಕ್ಕೆ ಮಾನ್ಯತೆ ಇರಲಿಲ್ಲ. ಹಾಗಾಗಿ ಬಾಳಪ್ಪ ಓದಲು ಅವಕಾಶ ಸಿಗಲಿಲ್ಲ. ಮಾತ್ರವಲ್ಲದೇ ಇವರದ್ದು ಒಂದು ಅವಿಭಕ್ತ ಕುಟುಂಬವಾಗಿದ್ದು ಜಮೀನು ಎಲ್ಲ ದೊಡ್ಡಪ್ಪನ ಕೈಯಲ್ಲಿ ಇತ್ತು. ಬಾಳಪ್ಪರ ತಂದೆಗೆ ಮಗ ಓದಬೇಕೆಂಬ ಆಸೆ ಇದ್ದರೂ ಓದಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಬಾಳಪ್ಪ ಅವರಿಗೆ ಊರಲ್ಲಿ ಒಂದು ವರ್ಷ ಮಾತ್ರ ಶಾಲೆಗೆ ಹೋಗಲು ಸಾಧ್ಯವಾಯಿತು. ನಂತರ ಬಾಳಪ್ಪ ತನ್ನ ಎಂಟನೇ ವಯಸ್ಸಿಗೆ ಮಂಗಳೂರಿಗೆ ಬರುತ್ತಾರೆ. ಅಲ್ಲಿ ಬಂಧುಗಳ ಮನೆಯಲ್ಲಿದ್ದುಕೊಂಡು ಹೋಟೆಲಿನಲ್ಲಿ ದುಡಿಯುತ್ತಾರೆ. ಮಂಗಳೂರಿನ ವಾತಾವರಣದಲ್ಲಿ ಶಿಕ್ಷಣದ ಮಹತ್ವ ಅರಿವಿಗೆ ಬಂದು ಪುನ: ಶಾಲೆ ಕಲಿಯಲು ಆರಂಭಿಸುತ್ತಾರೆ. ಬಾಳಪ್ಪ ಕಲಿತದ್ದು ನಾಲ್ಕನೇ ತರಗತಿಯವರೆಗೆ ಮಾತ್ರ.

ಮಂಗಳೂರಿನ ಡೊಂಗರಕೇರಿಯಲ್ಲಿದ್ದ ಮಂಗಳೂರು ಮುನ್ಸಿಪಲ್ ಹೆಲ್ತ್ ಆಫೀಸರ್ ಒಬ್ಬರಿಗೆ ತನ್ನ ಅನಾರೋಗ್ಯ ಪೀಡಿತ ವೃದ್ಧ ತಂದೆಯವರನ್ನು ನೋಡಿಕೊಳ್ಳಲು ಒಬ್ಬ ಹುಡುಗನ ಅವಶ್ಯಕತೆ ಇದ್ದುದರಿಂದ, ಬಾಳಪ್ಪ ಆ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ವೃದ್ಧನ ಸ್ನಾನ, ಉಪಚಾರ ಮುಂತಾದ ಕೆಲಸಗಳ ಜೊತೆಗೆ, ಪತ್ರಿಕೆ ಓದಿ ಹೇಳುವ ಕೆಲಸವನ್ನು ಅವರು ಮಾಡಬೇಕಾಯಿತು. ಹೀಗೆ ಪತ್ರಿಕೆಗಳಿಂದ ಹಲವಾರು ವಿಚಾರಗಳು ಬಾಳಪ್ಪರಿಗೆ ತಿಳಿದು ಬಂತು. ವೃದ್ಧರ ನಿಧನಾನಂತರ ಬಾಳಪ್ಪರ ಕೆಲಸದ ನಿಯತ್ತು ಗಮನಿಸಿದ್ದ ಹೆಲ್ತ್ ಆಫೀಸರ್ ಅವರಿಗೆ ಮುನ್ಸಿಪಲ್‌ನಲ್ಲಿ ಮೇಸ್ತ್ರಿ ಕೆಲಸ ಕೊಡಿಸಿದರು.

ಆಗ ಮಂಗಳೂರಿನಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಭಾವ ಜಾಸ್ತಿಯಾಗಿತ್ತು. ಹಲವಾರು ಮಂದಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು. ಮಾರ್ಕ್ಸ್‌ವಾದಿ, ಸಮಾಜವಾದಿ ಸಿದ್ಧಾಂತಗಳ ಹೋರಾಟಗಾರರ ಪ್ರಭಾವದಿಂದ ಬಾಳಪ್ಪ ಕೂಡಾ ಸ್ವಾತಂತ್ರ್ಯ ಸಿಗಬೇಕು, ಜಾತಿ ಭೇದ ದೂರವಾಗಬೇಕು, ಬಡವರು ಏಳ್ಗೆ ಹೊಂದಬೇಕೆನ್ನುವ ವಿಚಾರಗಳನ್ನು ಬೆಳೆಸಿಕೊಂಡರು.

ಬ್ರಿಟಿಷರ ಇಚ್ಛೆಯಂತೆ ೨ನೇ ಜಾಗತಿಕ ಯುದ್ಧಕ್ಕೆ ಭಾರತ ಸಹಾಯ ನೀಡಬಾರದೆನ್ನುವುದು ಗಾಂಧಿಯ ನಿಲುವಾಗಿತ್ತು. ಯುದ್ಧಕ್ಕೆ ಸಹಾಯ ನೀಡದಿರುವುದು ಅಪರಾಧ ಎಂಬ ಬ್ರಿಟಿಷರ ಕಾನೂನನ್ನು ಮುರಿಯಲು ಗಾಂಧಿ ಸತ್ಯಾಗ್ರಹ ಮತ್ತು ಚಳುವಳಿಯ ದಾರಿ ಹಿಡಿದಿದ್ದರು. ನಿರೀಕ್ಷೆಯಂತೆ ಗಾಂಧಿಯ ಬಂಧನವಾಯಿತು. ಇದರಿಂದ ದೇಶದಾದ್ಯಂತ ಜನರಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಜ್ಞೆ ಬೆಳೆಯಿತು. ಹೀಗೆ ೧೯೪೨ರ 'ಕ್ವಿಟ್ ಇಂಡಿಯಾ' ಚಳುವಳಿಗೆ ಅಪಾರ ಜನ ಬೆಂಬಲ ಸಿಕ್ಕಿತು. ಮದ್ರಾಸ್ ಸ್ಥಳೀಯ ಸರಕಾರದಲ್ಲಿ ಸಚಿವರಾಗಿದ್ದ ಮಂಗಳೂರಿನ ಕೆ.ಆರ್. ಕಾರಂತರ (ಶಿವರಾಮ ಕಾರಂತರ ಅಣ್ಣ) ಬಂಧನವಾಯಿತು. ಆದರೂ ಕಾಂಗ್ರೆಸ್ ಸಭೆಯ ತೀರ್ಮಾನದಂತೆ ಆಜಾದ್ ಮೈದಾನದಲ್ಲಿ ಆಗಸ್ಟ್ ೯ರ ಬೆಳಿಗ್ಗೆ ಶ್ರೀಮತಿ ಅರುಣಾ ಅಸೀಫಲಿ, ಅಚ್ಯುತ್ ಪಟವರ್ಧನ್ ಧ್ವಜಾರೋಹಣ ಮಾಡುವಲ್ಲಿ ಸಫಲರಾದರು. ಇದರಿಂದ ಉತ್ಸಾಹಗೊಂಡ ದ.ಕ. ಜಿಲ್ಲೆಯಲ್ಲಿ ಚಳವಳಿ ತೀವ್ರಗೊಂಡಿತು. ಅದೇ ದಿನ ಕಾರ್ಕಳ ತಾಲೂಕಿನ ಮುದ್ರಾಡಿಯವರಾದ ಎಂ.ಡಿ. ಅಧಿಕಾರಿ ಅವರ ನೇತೃತ್ವದಲ್ಲಿ ಮಂಗಳೂರಿನಲ್ಲಿ ಕೋರ್ಟ್ ಪಿಕೆಟಿಂಗ್ ಮಾಡಲಾಯಿತು. ತನ್ನ ೨೦ನೇ ವಯಸ್ಸಿನಲ್ಲಿ ಬಾಳಪ್ಪ ತನ್ನ ಸ್ನೇಹಿತರೊಂದಿಗೆ ಸೇರಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಜಿಲ್ಲೆಯಲ್ಲಿ ವಿಧಿಸಲಾಗಿದ್ದ ೧೪೪ನೇ ಕಲಂ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಾವಿರಾರು ಕಾರ್ಯಕರ್ತರು ಮೆರವಣಿಗೆಯಲ್ಲಿ ಸೆಂಟ್ರಲ್ ಮೈದಾನಕ್ಕೆ ಬಂದು ಸಾರ್ವಜನಿಕ ಸಭೆ ನಡೆಸಿದರು. ಎಂ.ಡಿ. ಅಧಿಕಾರಿಯವರು ಭಾಷಣ ಮಾಡುವಾಗ ಪೊಲೀಸರು ಲಾಠಿ ಪ್ರಹಾರ ಮಾಡಿದರು. ತಲೆಗೆ ತೀವ್ರ ಹೊಡೆತ ಬಿದ್ದು ಅಧಿಕಾರಿಯವರು ಪ್ರಜ್ಞೆ ತಪ್ಪಿ ಬಿದ್ದರು. ಬಾಳಪ್ಪರ ಮಿತ್ರ ಲೋಕಯ್ಯ ಶೆಟ್ಟಿ ಅಧಿಕಾರಿಯವರನ್ನು ಎತ್ತಿಕೊಂಡು ಆಸ್ಪತ್ರೆಗೆ ಧಾವಿಸಿದರು. ಈ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ಬಾಳಪ್ಪನವರ ಬಂಧನವಾಯಿತು. ಒಂದು ತಿಂಗಳ ಶಿಕ್ಷೆಯ ನಂತರ ಬಿಡುಗಡೆಗೊಂಡರು. ಜೈಲಿನಿಂದ ಹೊರಬಂದಾಗ ಬಾಳಪ್ಪ ಕೆಲಸ ಕಳೆದುಕೊಂಡಿದ್ದರು.

ನಂತರ ಜೀವನೋಪಾಯಕ್ಕಾಗಿ ಅವರು ಹಂಪನಕಟ್ಟಾದಲ್ಲಿದ್ದ ಕೆನರಾ ಮೆಡಿಕಲ್ಸ್‌ನಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸಕ್ಕೆ ಸೇರಿದರು. ಈ ಕೆಲಸದ ಜೊತೆಗೆ ಹೋರಾಟದ ಕೆಲಸಗಳು ಮುಂದುವರಿದವು. ಅನೇಕ ವರ್ಷಗಳ ಕಾಲ ಔಷಧಾಲಯ, ಫಾರ್ಮಸಿಯಲ್ಲಿ ದುಡಿದ ಬಾಳಪ್ಪ ಅವರಿಗೆ ಅನುಭವದ ಆಧಾರದಲ್ಲಿ ಆ ಕಾಲದಲ್ಲಿ ವೈದ್ಯ ವೃತ್ತಿ ನಿರ್ವಹಿಸಲು ನೀಡುತ್ತಿದ್ದ ಆರ್.ಎಂ.ಪಿ ಲೈಸನ್ಸನ್ನು ೧೯೬೮ರಲ್ಲಿ ಪಡೆದು ಡಾಕ್ಟರ್ ಅಮ್ಮೆಂಬಳ ಬಾಳಪ್ಪ ಆದರು.

'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿದ ಬಾಳಪ್ಪ ತನ್ನ ಸ್ನೇಹಿತರೊಂದಿಗೆ ಸೇರಿ ಹಲವು ವಿಧ್ವಂಸಕ ಚಟುವಟಿಕೆಗಳನ್ನು ನಡೆಸಿದರು. ಬೋಳೂರಿನ ವ್ಯಾಯಾಮ ಶಾಲೆಯ ಮುಖ್ಯಸ್ಥರಾಗಿದ್ದ ಪೈಲ್ವಾನ್ ಬಿ.ಎಲ್. ಪುತ್ರನ್, ಎಂ. ಲೋಕಯ್ಯ ಶೆಟ್ಟಿ ಮುಂತಾದವರೊಂದಿಗೆ ಸೇರಿ ಉಳ್ಳಾಲದ ರೈಲ್ವೆ ಸೇತುವೆ ಸ್ಫೋಟಿಸುವ ಸಂಚನ್ನು ರೂಪಿಸಿದರು. ರಾತ್ರಿ ಸೇತುವೆಯ ಕಂಬಕ್ಕೆ ಡೈನಮೈಟ್ ಇಡಲು ತೂತು ಕೊರೆಯುವ ಕೆಲಸ ಮಾಡಿ ಮರುದಿನ ಸೇತುವೆ ಸ್ಫೋಟಿಸಲು ಬಂದಾಗ ಪೋಲೀಸರು ಕಾವಲು ಕಾಯುತ್ತಿದ್ದುದರಿಂದ ಈ ಯೋಜನೆ ವಿಫಲವಾಯಿತು. ನಂತರ ಕೈಡೇಲು ತಿಮ್ಮಪ್ಪ ಶೆಟ್ಟಿ, ಎಂ. ಲೋಕಯ್ಯ ಶೆಟ್ಟಿ ಮುಂತಾದವರೊಂದಿಗೆ ಸೇರಿ ಬಾಳಪ್ಪನವರು ೧೯೪೨ ಡಿಸೆಂಬರ್ ೪ ರಂದು ಮಧ್ಯರಾತ್ರಿ ಜಿಲ್ಲಾ ನ್ಯಾಯಾಲಯದ ಪಕ್ಕಾಸಿಗೆ ಬೆಂಕಿ ಕೊಟ್ಟು ಓಡಿದರು. ಈ ಘಟನೆಯಲ್ಲಿ ಬಾಳಪ್ಪನವರನ್ನು ಬಂಧಿಸಲಾಯಿತು. ಪೋಲೀಸರು ಕ್ರೂರ ಹಿಂಸೆ ನೀಡಿದರು. ವಿಚಾರಣೆ ನಂತರ ೧೯೪೩ ಜನವರಿ ೨೩ರಂದು ಮದರಾಸಿನ ವೆಲ್ಲೂರು ಜೈಲಿಗೆ ಹಾಕಿದರು. ಜೈಲಿನಲ್ಲಿರುವಾಗ ಹಿಂದಿ, ಇಂಗ್ಲೀಷ್ ಭಾಷೆಗಳನ್ನು

ಕಲಿಯುವುದರೊಂದಿಗೆ ಸಮಾಜವಾದಿ ಚಿಂತನೆಗಳನ್ನು ತಿಳಿದುಕೊಂಡರು. ೧೯೪೪ ಫೆಬ್ರವರಿಯಲ್ಲಿ ಅವರ ಬಿಡುಗಡೆಯಾಯಿತು.

ಈ ಹೊತ್ತಲ್ಲಿ ಗಾಂಧಿಯವರು ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿಗಳಲ್ಲಿ ಜನರ ಕೆಲಸ ಮಾಡುವಂತೆ ಕರೆಕೊಟ್ಟಿದ್ದರು. ಈ ಸಂದರ್ಭದಲ್ಲಿ ಗಾಂಧಿಯವರ ಪತ್ನಿ ಕಸ್ತೂರ್ಬಾ ನಿಧನರಾಗಿದ್ದರಿಂದ ಅವರ ಸ್ಮರಣಾರ್ಥ ಕಾರ್ಕಳ ತಾಲೂಕಿನ ಅತ್ಯಂತ ಕುಗ್ರಾಮವಾಗಿದ್ದ ಮುದ್ರಾಡಿಯಲ್ಲಿ ಎಂ.ಡಿ. ಅಧಿಕಾರಿಯವರು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಬಾಳಪ್ಪ ಜೈಲುವಾಸದ ಸಂದರ್ಭದಲ್ಲಿ ಹಿಂದಿ ಭಾಷೆ ಕಲಿತಿದ್ದರಿಂದ, ಅವರನ್ನು ಶಾಲೆಯಲ್ಲಿ ಹಿಂದಿ ಶಿಕ್ಷಕರಾಗಿ ನೇಮಿಸಲಾಯಿತು. ೧೯೪೬ರವರೆಗೆ ಅಲ್ಲಿ ಶಿಕ್ಷಕರಾಗಿ ದುಡಿದು ನಂತರ ಮಲೇರಿಯಾ ಕಾಯಿಲೆಯಿಂದ ಮಂಗಳೂರಿಗೆ ಮರಳಿ ಬಂದರು. ನಂತರ ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಕ ಸಂಘಟನೆಗಳಲ್ಲಿ ತೊಡಗಿಸಿಕೊಂಡರು. ಆಗ ಕಾಂಗ್ರೆಸ್ ಸೊಶಿಯಲಿಸ್ಟ್ ಪಾರ್ಟಿಯ ನೇತಾರರಾಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರ ಮೆಚ್ಚುಗೆಗೆ ಪಾತ್ರರಾದರು.

ಬಾಳಪ್ಪ ಗಾಂಧಿಯವರಿಂದ ಬಹಳ ಪ್ರಭಾವಿತರಾಗಿದ್ದರು. ಅವರ ಸರಳತೆ, ಸತ್ಯ, ಅಹಿಂಸೆ, ಹೋರಾಟದ ಆದರ್ಶಗಳನ್ನು ಅಳವಡಿಸಿಕೊಂಡಿದ್ದರು. ಯಾವಾಗಲೂ ಖಾದಿ ಬಟ್ಟೆಗಳನ್ನೇ ಧರಿಸುತ್ತಿದ್ದರು. ನಂತರದ ದಿನಗಳಲ್ಲಿ ಬಾಳಪ್ಪ ಹೆಚ್ಚು ಸಮಾಜವಾದಿ ಚಿಂತನೆಗಳ ಕಡೆಗೆ ಒಲಿದರು. ಪ್ರಜಾ ಸೋಶಿಯಲಿಸ್ಟ್ ಪಕ್ಷದ ಜಿಲ್ಲಾ ನಾಯಕರಾದರು. ಅವರು ಸಮಾಜವಾದಿಯಾಗಿ ಜಿಲ್ಲೆ ರಾಜ್ಯ ಮಾತ್ರವಲ್ಲದೇ ರಾಜ್ಯದ ಹೊರಗೂ ಹೋಗಿ ಹೋರಾಟಗಳನ್ನು ನಡೆಸಿದ್ದಾರೆ. ಗೋವಾ ವಿಮೋಚನೆಯ ಹೋರಾಟಕ್ಕೆ ತಂಡ ಕಟ್ಟಿಕೊಂಡು ಹೋಗಿ ಪೋಲೀಸರ ಹೊಡೆತಗಳನ್ನು ಎದುರಿಸಿದ್ದಾರೆ.

ಕಾರ್ಮಿಕ ನಾಯಕರಾದ ಜಾರ್ಜ್ ಫರ್ನಾಂಡಿಸ್ ಅವರ ಗುರು ಡಾ. ಅಮ್ಮೆಂಬಳ ಬಾಳಪ್ಪ. ಮಂಗಳೂರಿನ ಬಿಜೈನವರಾದ ಜಾರ್ಜ್ ಫರ್ನಾಂಡಿಸ್ ಮೈಸೂರಿನಲ್ಲಿ ಥಿಯಾಲಜಿ ಕಲಿಯಲು ಸೇರಿ, ಅಲ್ಲಿ ವೈಚಾರಿಕ ಭಿನ್ನಾಭಿಪ್ರಾಯದೊಂದಿಗೆ ಹಿಂತಿರುಗಿ ಬಂದು ಮನೆಯಿಂದಲೂ ಹೊರಹಾಕಲ್ಪಟ್ಟು ಅಲೆದಾಡುತ್ತಿದ್ದ ಕಾಲದಲ್ಲಿ ಅವರಿಗೆ ಬಾಳಪ್ಪನವರ ಪರಿಚಯವಾಯಿತು. ನಂತರ ಮಂಗಳೂರಿನ ಫೆಲಿಕ್ಸ್ ಪೈ ಬಜಾರದಲ್ಲಿದ್ದ ಸಮಾಜವಾದಿ ಪಕ್ಷದ ಕಾರ್ಯಾಲಯ ಇವರ ಮನೆಯಾಗಿತ್ತು. ಬಾಳಪ್ಪನವರ ಸಹಚರಿಯಾಗಿದ್ದ ಜಾರ್ಜ್ ಕೂಡಾ ಕಾರ್ಮಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡರು. ಮಂಗಳೂರಿನ ಹೋಟೆಲ್ ಕಾರ್ಮಿಕರು, ಸಾರಿಗೆ ಕಾರ್ಮಿಕರು ಮುಂತಾದ ಕಾರ್ಮಿಕ ಸಂಘಟನೆಗಳಲ್ಲಿ ಬಾಳಪ್ಪ ಅವರ ಪಾತ್ರ ದೊಡ್ಡದಾಗಿತ್ತು. ಖಾಸಗಿ ಕಂಪೆನಿಗಳ ಒಡೆತನದಲ್ಲಿರುವ ಸಾರಿಗೆಯ ಚಾಲಕ, ನಿರ್ವಾಹಕರ ಹಕ್ಕು ಸವಲತ್ತುಗಳಿಗಾಗಿ ಒಮ್ಮೆ ಜಿಲ್ಲೆಯಲ್ಲಿ ಬೃಹತ್ ಮಟ್ಟದ ಮುಷ್ಕರ ನಡೆಸಿದರು. ಈ ಮುಷ್ಕರ ಇಡೀ ಜಿಲ್ಲೆಯನ್ನು ಸ್ತಬ್ಧಗೊಳಿಸುವಷ್ಟು ಪರಿಣಾಮಕಾರಿಯಾಗಿತ್ತು. ಈ ಮುಷ್ಕರಕ್ಕೆ ನಾಯಕತ್ವ ನೀಡಿದ ಮಂಗಳೂರಿನವರೇ ಆದ ಮುಂಬೈನ ಕಾರ್ಮಿಕ ಮುಖಂಡ ವಿ. ಡಿಮೆಲ್ಲೋ ಅವರು ಜಾರ್ಜ್ ಫರ್ನಾಂಡಿಸ್ ಅವರನ್ನು ಮುಂದೆ ಮುಂಬೈಗೆ ಕರೆದುಕೊಂಡು ಹೋದರು. ಬಾಳಪ್ಪ ಅವರು ತನಗೆ ನೀಡಿದ ಆಸರೆ-ಬೆಂಬಲಗಳನ್ನು ಕೇಂದ್ರ ಸಚಿವರಾಗಿ ಮಂಗಳೂರಿಗೆ ಬಂದಾಗಲೆಲ್ಲ ಜಾರ್ಜ್ ಫರ್ನಾಂಡಿಸ್ ಸಾರ್ವಜನಿಕ ಸಭೆಗಳಲ್ಲಿ ನೆನಪಿಸಿಕೊಳ್ಳುತ್ತಿದ್ದರು.

ಸಮಾಜವಾದಿ ಪಕ್ಷ ಜೆಪಿಯವರ ಸಂಪೂರ್ಣ ಕ್ರಾಂತಿ ಆಂದೋಲನದ ಪರಿಣಾಮವಾಗಿ ೧೯೭೭ರಲ್ಲಿ ಉದಯವಾದ ಜನತಾ ಪಕ್ಷದಲ್ಲಿ ಲೀನವಾದ ನಂತರ ಜನತಾ ಪಕ್ಷದಲ್ಲಿ ತನ್ನನ್ನು ತೊಡಗಿಸಿಕೊಂಡ ಬಾಳಪ್ಪ ಅವರು ಜನತಾ ಪಕ್ಷ ಜನತಾ ದಳವಾದಾಗ ಆ ಪಕ್ಷದಲ್ಲಿದ್ದರು. ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಬಾಳಪ್ಪ ಭೂ ಸುಧಾರಣೆಯ ಕಾನೂನಿನ ಲಾಭವನ್ನು ಜನರಿಗೆ ದೊರಕಿಸಿಕೊಡಲು ಅವಿರತವಾಗಿ ಪ್ರಯತ್ನಪಟ್ಟರು. ವಿಶೇಷವಾಗಿ ಹಿಂದುಳಿದ ಜಾತಿಗಳ ಸಂಘಟನೆಗಳನ್ನು ನಡೆಸಲು ತೊಡಗಿದರು. ರೈತರ ಸಂಘಟನೆಗಾಗಿ ಕೋಟ ರಾಮಕೃಷ್ಣ ಕಾರಂತ, ವಿ. ಶ್ರೀನಿವಾಸ ಶೆಟ್ಟಿ, ಬೈಕಾಡಿ ಶೀನಪ್ಪ ಶೆಟ್ಟಿ ಮುಂತಾದವರ ಜೊತೆಗೆ ಜಿಲ್ಲೆಯಾದ್ಯಂತ ಸುತ್ತಾಡಿದರು. ಅವರ ಬದ್ಧತೆಯುಳ್ಳ ಹೋರಾಟ ಮತ್ತು ಜನಪರ ಕೆಲಸಗಳಿಂದ ಬಿ.ಎಸ್. ಕಕ್ಕಿಲಾಯ, ಸೂರ್ಯನಾರಾಯಣ ಅಡಿಗ ಮುಂತಾದವರಿಗೆ ತುಂಬಾ ಅಚ್ಚುಮೆಚ್ಚಿನವರಾದರು. ದ.ಕ. ಜಿಲ್ಲೆಯ ಅಸ್ಪೃಶ್ಯರು, ಮೊಯಿಲಿ, ಬಿಲ್ಲವ, ಸಫಳಿಗ, ನೇಕಾರ, ಕುಂಬಾರ ಮುಂತಾದ ಶೋಷಿತ ಸಮುದಾಯಗಳು ಸಂಘಟಿತಗೊಂಡು ತಮ್ಮನ್ನು ತಾವು ಉದ್ಧಾರ ಮಾಡಿಕೊಳ್ಳಬೇಕೆಂಬ ಇಂಗಿತವನ್ನು ಅವರು ವ್ಯಕ್ತಪಡಿಸಿದರು. ಜಿಲ್ಲೆಯ ಹಿಂದುಳಿದ ವರ್ಗಗಳ ಒಕ್ಕೂಟ ರಚನೆಗೂ ಪ್ರಯತ್ನಪಟ್ಟರು. ೧೯೭೫ರಿಂದ ೮೮ರವರೆಗೆ ಈ ಮೂರು ಅವಧಿಗಳಲ್ಲಿ ಅವರು ಭೂನ್ಯಾಯ ಮಂಡಳಿಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದರು. ಈ ಕೆಲಸಗಳಿಂದ ಮಂಗಳೂರಿನ ಬಂಟ್ವಾಳ ತಾಲೂಕಿನ ಗೇಣಿದಾರರ ಪಾಲಿಗೆ ಸ್ಮರಣೀಯರಾದರು.

ರೈತರ, ಗೇಣಿದಾರರ ಸಮಸ್ಯೆಗಳ ತಳಮಟ್ಟದ ತಿಳುವಳಿಕೆ ಅವರಿಗೆ ಇತ್ತು. ಭೂಮಿಯನ್ನು ಅಳತೆ ಮಾಡುವ ಕೆಲಸದಲ್ಲಿ ಅಪಾರ ಅನುಭವ ಪಡೆದಿದ್ದರು. ಭ್ರಷ್ಟರಾಗದೇ ದುಡಿದ ಬಾಳಪ್ಪ ಭೂಮಾಲಿಕರಿಗೆ ಸಿಂಹಸ್ವಪ್ನರಾಗಿದ್ದರು. ಅರ್ಜಿಕೊಡಲು ಭಯ ಪಡುತ್ತಿದ್ದ ಅಸ್ಪೃಶ್ಯರಿಗೆ ಧೈರ್ಯ ತುಂಬಿದರು. ಅವರನ್ನು ಮನೆಯ ಒಳಗೆ ಕರೆದು ಅರ್ಜಿ ಬರೆದು ಕೊಡುತ್ತಿದ್ದರು.

ಭೂ ಮಸೂದೆ ಜಾರಿಯಾದ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಒಕ್ಕಲುದಾರರು ಭೂಮಾಲಿಕರ ನಡುವೆ ಘರ್ಷಣೆಗಳು ಆಗಾಗ ನಡೆದವು. ಕಮ್ಯುನಿಸ್ಟರು, ಸಮಾಜವಾದಿ ಹೋರಾಟಗಾರರು ಗೇಣಿದಾರರ ಪರವಾಗಿ ಅವಿರತವಾಗಿ ಹೋರಾಟ ನಡೆಸಿದರು. ಗೇಣಿದಾರರನ್ನು ಹತ್ತಿಕ್ಕಲು ಧಣಿಗಳು ಗೂಂಡಾಗಳನ್ನು ಇಟ್ಟು ಕೊಂಡಿದ್ದರು. ಮಂಗಳೂರಿನ ಹತ್ತಿರದ ನೀರುಮಾರ್ಗ ಎಂಬಲ್ಲಿ ಇಂತಹ ಘರ್ಷಣೆ ನಡೆದಾಗ ಅಲ್ಲಿಯ ರೈತರನ್ನು ಸಂಘಟಿತಗೊಳಿಸಲು ಬಾಳಪ್ಪ ಪ್ರಯತ್ನಪಟ್ಟರು. ಅಲ್ಲಿನ ಒಂದು ರೈತ ಗೇಣಿದಾರರ ಸಭೆಗೆ ಭಾಷಣಕಾರರಾಗಿ ಹೋಗಿ ಹಿಂತಿರುಗುತ್ತಿದ್ದಾಗ ಗೂಂಡಾಗಳು ಬಾಳಪ್ಪರ ತಲೆಗೆ ಹೊಡೆದರು. ತಲೆಗೆ ಏಟು ಬಿದ್ದ ಬಾಳಪ್ಪರನ್ನು ಗೆಳೆಯ ಐತಪ್ಪ ಸಾಲ್ಯಾನ್ ರಕ್ಷಣೆ ಮಾಡಿದರು. ತನ್ನ ಹಿಂದುಳಿದ ಜಾತಿಗಳ ಸಂಘಟನೆಯ ಕೆಲಸಗಳಿಗಾಗಿ ಅವರು ೧೯೫೦ರ ದಶಕದಲ್ಲಿ 'ಮಿತ್ರ' ಎಂಬ ಕನ್ನಡ ವಾರಪತ್ರಿಕೆ, ೧೯೭೦ರ ದಶಕದಲ್ಲಿ 'ತುಳುಸಿರಿ' ಎಂಬ ತುಳು ಮಾಸಿಕವನ್ನು ಆರಂಭಿಸಿದ್ದರು.

ಕಾಲೇಜಿನ ಸಾಹಿತ್ಯ ಸಮಾರಂಭವೊಂದರಲ್ಲಿ ಮಾತನಾಡುತ್ತಿರುವ ಬಿ.ಕೃಷ್ಣಪ್ಪ

೧೯೮೩-೮೬ರಲ್ಲಿ ಕರ್ನಾಟಕ ಸರಕಾರ ವೆಂಕಟಸ್ವಾಮಿಯವರ ನೇತೃತ್ವದಲ್ಲಿ ೨ನೇ ಹಿಂದುಳಿದ ಆಯೋಗ ರಚಿಸಿದಾಗ ಬಾಳಪ್ಪ ಅದರ ಸದಸ್ಯರಾಗಿ ನೇಮಿಸಲ್ಪಟ್ಟರು. ಈ ದಿಸೆಯಲ್ಲಿ ಅವರು ಕರ್ನಾಟಕದಾದ್ಯಂತ ಓಡಾಟ ನಡೆಸಿ ದುರ್ಬಲ ಸಮುದಾಯಗಳ ಅಧ್ಯಯನ ನಡೆಸಿ, ವರದಿ ತಯಾರಿಸಲು ಶ್ರಮ ವಹಿಸಿದರು. ಸ್ನೇಹಿತರೊಂದಿಗೆ ಸೇರಿ ತನ್ನ ಸಮುದಾಯದ ಕುಲಾಲ ಸಂಘವನ್ನು ಸ್ಥಾಪಿಸಿದರು. ೧೯೮೦ರಲ್ಲಿ ಗೆಳೆಯರ ಸಹಕಾರದಿಂದ ಬಂಟ್ವಾಳದಲ್ಲಿ ಕುಲಾಲರ ಸಹಕಾರಿ ಬ್ಯಾಂಕ್ ಪ್ರಾರಂಭಿಸಿದರು. ಬಾಳಪ್ಪರ ಬ್ಯಾಂಕ್ ಎಂದೇ ಕರೆಯಲ್ಪಡುವ ಇದು ಇಂದು ಹಲವಾರು ಶಾಖೆಗಳನ್ನು ಹೊಂದಿದೆ. ಜಾರ್ಜ್ ಫರ್ನಾಂಡಿಸ್ ಕೇಂದ್ರ ರಕ್ಷಣಾ ಮಂತ್ರಿಯಾಗಿದ್ದಾಗ ಅವರು ಬಾಳಪ್ಪನವರನ್ನು ಆಗ ತಾವಿದ್ದ ಸಮತಾ ಪಕ್ಷಕ್ಕೆ ಆಹ್ವಾನಿಸಿ ಉನ್ನತ ಹುದ್ದೆಯ ಆಶ್ವಾಸನೆ ನೀಡಿದರಾದರೂ, ಬಾಳಪ್ಪ ಕೋಮುವಾದಿ ಪಕ್ಷದ ಸಹವಾಸವನ್ನು ಧಿಕ್ಕರಿಸಿ ಆಹ್ವಾನವನ್ನು ತಿರಸ್ಕರಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಬಂಟ್ವಾಳ ತಾಲೂಕು ಕಾನೂನು ನೆರವು ಸಮಿತಿ ಸದಸ್ಯರಾಗಿ, ಮಂಗಳೂರು ನಗರ ಯೋಜನಾ ಪ್ರಾಧಿಕಾರದ ಸದಸ್ಯರಾಗಿ, ದ.ಕ. ಜಿಲ್ಲಾ ಕೃಷಿ ಅಭಿವೃದ್ಧಿ ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರಾಗಿ, ಬಂಟ್ವಾಳ ತಾಲೂಕು ಭೂ ಅಭಿವೃದ್ಧಿ ಬ್ಯಾಂಕ್‌ನ ಆಡಳಿತ ಮಂಡಳಿ ಸದಸ್ಯರಾಗಿ ದುಡಿದಿದ್ದಾರೆ.

ಬ್ರಹ್ಮಚಾರಿಯಾಗಿದ್ದ ಬಾಳಪ್ಪ ಜೀವನಪೂರ್ತಿ ಸಮಾಜಕ್ಕಾಗಿ ಅರ್ಪಿಸಿಕೊಂಡು ಜನರ ಏಳಿಗೆಗೆ ಶ್ರಮಿಸಿದರು. ವಿಶೇಷ ಆರ್ಥಿಕ ವಲಯಗಳ ಮೂಲಕ ವೇಗವಾಗಿ ಕೈಗಾರಿಕೀಕರಣಕ್ಕೆ ಒಳಗಾಗುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಯ ಸ್ವರೂಪವನ್ನು ವಿವಿಧ ಸಮುದಾಯಗಳ ಅಳಿವು-ಉಳಿವುಗಳ ದೃಷ್ಟಿಯಿಂದ ನೋಡುವ ಅಗತ್ಯ ಇರುವ ಇಂದಿನ ದಿನಗಳಲ್ಲಿ, ಬಾಳಪ್ಪನಂಥ ವ್ಯಕ್ತಿತ್ವ, ಮತ್ತು ಚಿಂತನೆಗಳು ಹೆಚ್ಚು ಪ್ರಸ್ತುತವಾಗಿದೆ.

(ಲೇಖನ ತಯಾರಿಸಲು ಮಾಹಿತಿ ನೀಡಿ ಸಹಕರಿಸಿದ ಡಿ.ಎಂ. ಕುಲಾಲ್ ಬಂಟ್ವಾಳ ಅವರಿಗೆ ಕೃತಜ್ಞತೆಗಳು)



*(ಲೇಖಕ ಡಾ. ವಾಸುದೇವ ಬೆಳ್ಳೆಯವರು ಅಂಬೇಡ್ಕರ್ ಚಿಂತನೆಗಳ ವಿದ್ವಾಂಸರು. ಸದ್ಯ ಮಂಗಳೂರಿನಲ್ಲಿ ಸರ್ಕಾರಿ ಪ.ಪೂ. ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ.)*

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ - ೨೨

–ಇಂದಿರಾ ಬಿ. ಕೃಷ್ಣಪ್ಪ

### ‘ಬಂಡಾಯ’ದ ಬಿಸಿಯುಸಿರಿನಲ್ಲಿ..



**ಕುವೆಂಪು, ದೇಜಗೌ ಮುಂತಾದವರೊಂದಿಗೆ ಬಿ.ಕೃಷ್ಣಪಪ್ಪ(ಕುಳಿತವರಲ್ಲಿ ಮೊದಲಿಗರು) ತಮ್ಮ ಭದ್ರಾವತಿ ಕಾಲೇಜಿನ ರಂಗತಂಡದೊಂದಿಗೆ**

ಮಾರ್ಚ್ ೧೦, ೧೧ – ೧೯೭೯ ಬಂದೇ ಬಿಟ್ಟಿತು. ಬೆಂಗಳೂರಿನ ದೇವಾಂಗ ಸಂಘದ ಛತ್ರದಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ತೆಲುಗಿನ ಮಹಾಕವಿ ಶ್ರೀಶ್ರೀ ನೆರವೇರಿಸಿದರು. ಒಂದನೇ ಗೋಷ್ಠಿ ಯನ್ನು ಮರಾಠಿ ದಲಿತ ಲೇಖಕ ದಯಾ ಪವಾರ್ ನಿರ್ವಹಿಸಿದರು. ಎರಡನೇ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕೃಷ್ಣಪ್ಪ ಮಾತನಾಡುತ್ತ ಹೇಳಿದ ಮಾತುಗಳು ಹೀಗಿದ್ದವು:

‘ಇಂದು ಬೆಂಗಳೂರಿನಲ್ಲಿ ಸಮಾವೇಶಗೊಂಡಿರುವ ಬಂಡಾಯ ಸಾಹಿತ್ಯ ಸಮ್ಮೇಳನ ನಮ್ಮೆಲ್ಲರಿಗೂ ಒಡ್ಡಿರುವ ಅಗ್ನಿಪರೀಕ್ಷೆ, ಬೆಂಕಿಯ ಸವಾಲು; ಇದನ್ನು ಎಷ್ಟು ಜನ ಎದುರಿಸುತ್ತಾರೋ ಕಾದು ನೋಡಬೇಕಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಈ ಹಿಂದೆ ಆಗಿಹೋದ ನವೋದಯ, ನವ್ಯಕಾವ್ಯ ಪಂಥಗಳು ತಮ್ಮ ಪರಿಮಿತ ಉದ್ದೇಶಗಳಿಂದ, ಸಾಮಾಜಿಕ ಹೊಣೆಗೇಡಿತನದಿಂದ, ದೇಶದ ಸಮಷ್ಠಿ ಅನ್ಯಾಯಗಳಿಗೆ ಪ್ರತಿಭಟಿಸದೆ ಹೋದವು. ಸಾಹಿತ್ಯವೆಂದರೆ ಸೌಂದರ್ಯೋಪಾಸನೆ, ರಸಾನಂದ, ಭೂಮಾನುಭೂತಿ ಎಂಬ ಹೆಸರಿನಿಂದ *ಲಗ್ಷುರಿಯಾದ* ನವ್ಯಪಂಥ; ಹೊಲದಲ್ಲಿ ಉಳುವ, ಕಾರ್ಖಾನೆಯಲ್ಲಿ ದುಡಿಯುವ, ಒಡೆಯನ ಮನೆಯಲ್ಲಿ ಜೀತ ಮಾಡುವ, ರಸ್ತೆಯಲ್ಲಿ ಕಲ್ಲೊಡೆಯುವ ಶ್ರಮಜೀವಿಗಳ ಪಾಲಿಗೆ ಅರ್ಥಹೀನವಾದುವು. ಎಲ್ಲಿ ರಮ್ಯ–ನವ್ಯ ಪಂಥಗಳು ಸೋತಿವೆಯೋ, ಅಲ್ಲಿ ಬಂಡಾಯ ತನ್ನ ಹೊಣೆಗಾರಿಕೆಯನ್ನು ಗುರುತಿಸಿಕೊಂಡಿರುವುದು ಗಮನಾರ್ಹ. ಅದು ನಿಜವಾಗಿಯೂ ದುಡಿವ ಕೂಲಿಕಾರನ ಉಸಿರು. ಪ್ರಾಣಮಿತ್ರ; ಬಂಡಾಯ ಒಂದು ಸಾಮಾಜಿಕ ಕ್ರಿಯೆ. ಆದ್ದರಿಂದ ಬಂಡಾಯ ಸಾಹಿತ್ಯವೆಂದರೆ ಅದೊಂದು ಸಾಮಾಜಿಕ ಸಮತೋಲನ. ಇಂದು ನಮ್ಮ ಸಮಾಜವನ್ನು ಕಿತ್ತು ತಿನ್ನುತ್ತಿರುವ, ಅಧೋಗತಿಗೆ ತಳ್ಳಿರುವ ಯಜಮಾನ ಸಂಸ್ಕೃತಿಯ ಎರಡು ಮುಖ್ಯ ಅಂಗಗಳಾದ ಜಾತಿ–ವರ್ಗಗಳ ವಿರುದ್ಧ, ಶೋಷಣೆಯ ವಿರುದ್ಧ ಶ್ರಮಜೀವಿಗಳನ್ನು ಬಂಡಾಯಕ್ಕೆ ಅಣಿಗೊಳಿಸುವ ಗುರಿ ಬಂಡಾಯ ಸಾಹಿತ್ಯದ್ದು. ಆದ್ದರಿಂದಲೇ ಬಂಡಾಯ ಸಾಹಿತ್ಯ ಭಾವೋಪಶಮನವಲ್ಲ; ಭಾವೋಜ್ವಲನ ಅಗ್ನಿಕುಂಡ. ಶೋಷಕರ ವಿರುದ್ಧ ಶೋಷಿತರನ್ನು ಬಡಿದೆಬ್ಬಿಸುವ ಚಾಟಿ. “ಇಕ್ರಲಾ ಒದಿರ್ಲಾ, ಈ ನನಮಕ್ಕಳ ಚರ್ಮ ಎಬ್ರಲಾ” ಎಂದು ಕಿಡಿಗಾರುವ ಬೆಂಕಿ.’

ಮುಂದುವರಿದು ಮಾತನಾಡುತ್ತಾ ‘ಆರ್ಥಿಕವಾಗಿ ಮುಂದುವರಿದ ಭೂಮಾಲಿಕ ಗೌಡ, ಲಿಂಗಾಯಿತರಿಗೆ ಬ್ರಾಹ್ಮಣನನ್ನು ಕೆಳಕ್ಕೆ ಉರುಳಿಸಿ, ಆ ಸ್ಥಾನವನ್ನು ತಾವು ಆಕ್ರಮಿಸಿಕೊಳ್ಳಬೇಕೆಂಬ ಆಸೆ ಬಲವತ್ತರವಾಗಿದೆ. ಹಾಗೆಂದು ಇದುವರೆಗಿನ ನಮ್ಮ ಅನುಭವಗಳು ನಿಚ್ಚಳಪಡಿಸಿವೆ. ಬರಿ ಜಾತಿ ನಾಶವಾದ ಮಾತ್ರಕ್ಕೆ, ವರ್ಗಗಳೇನೂ ನಾಶವಾಗುವುದಿಲ್ಲ. ವರ್ಗನಾಶ ಕ್ರಾಂತಿಯಿಂದ ಮಾತ್ರ ಸಾಧ್ಯ. ಆದ್ದರಿಂದ ಇಂದು ಜಾತಿ–ವರ್ಗಗಳನ್ನು ಏಕಕಾಲದಲ್ಲಿ ನಿರ್ಮೂಲನೆಗೊಳಿಸುವಂತಹ ಕ್ರಾಂತಿಕಾರಿ ಧೋರಣೆಯನ್ನು ನಾವು ರೂಪಿಸಿಕೊಳ್ಳಬೇಕಾಗಿದೆ. ಆ ರೀತಿಯ ಹೋರಾಟವು ಜಾತಿಯಿಂದ, ವರ್ಗದಿಂದ ತುಳಿತಕ್ಕೆ ಒಳಗಾದ ದಲಿತರಿಂದ ಮಾತ್ರ ಸಾಧ್ಯ. ಬಂಡಾಯ ಚಳುವಳಿ ಕ್ರಾಂತಿಕಾರಿಯಾಗಿ, ಯಶಸ್ವಿಯಾಗಬೇಕಾದರೆ ದಲಿತರು ಅದರ ಮುಂಚೂಣಿಯಲ್ಲಿರಬೇಕಾಗಿದೆ. ಅವರೊಂದಿಗೆ ಹೆಗಲುಕೊಟ್ಟು ಎಲ್ಲಾ ಎಡಪಂಥೀಯರು, ಪ್ರಗತಿವಾದಿಗಳು ಕೆಲಸ ಮಾಡಬೇಕಾಗಿದೆ. ಆಗ ಇಂಥ ಕ್ರಿಯಾಶೀಲ ಚಳುವಳಿಯ ಅಂಗವಾಗಿ ಹುಟ್ಟುವ ಸಾಹಿತ್ಯ ತನ್ನ ಪೂರ್ಣ ಸ್ವರೂಪದಲ್ಲಿ ಬಂಡಾಯವಾಗಿ ಉಳಿಯಬಲ್ಲದು’ ಎಂಬ ವಿಚಾರಗಳನ್ನು ಮಂಡಿಸಿದ್ದರು.

ಮುಂದೆ ಕರ್ನಾಟಕದಾದ್ಯಂತ ನಡೆದ್ದ ಬಂಡಾಯದ ಜಿಲ್ಲಾ ಸಮ್ಮೇಳನಗಳಲ್ಲಿ ನಾನು ಮಂಗಳೂರು, ಶಿವಮೊಗ್ಗ, ದಾವಣಗೆರೆ ಸಮ್ಮೇಳನಗಳಲ್ಲಿ ಭಾಗಿಯಾಗಿದ್ದೆ. ದಲಿತ ಚಳುವಳಿಯನ್ನು ಮುನ್ನಡೆಸುತ್ತಿದ್ದ ಕೃಷ್ಣಪ್ಪ, ಸಮಕಾಲೀನ ಸಾಹಿತ್ಯ ಚಳುವಳಿಯೊಂದನ್ನು ಬರಮಾಡಿಕೊಂಡದ್ದು, ಯಜಮಾನ ಸಂಸ್ಕೃತಿ ವಿರುದ್ಧ ಹೋರಾಟಕ್ಕೆ ಸಜ್ಜುಗೊಳಿಸಿದ್ದು, ಅವರ ದಾರ್ಶನಿಕತೆ ಮತ್ತು ಕನ್ನಡ ಸಾಹಿತ್ಯವನ್ನು ಮಾನವೀಯಗೊಳಿಸುವ ಬದ್ಧತೆಯನ್ನು ಪ್ರಮುಖವಾಗಿ ಗಮನಿಸಬಹುದು.

*********

ಶಿವಮೊಗ್ಗ ಜಿಲ್ಲೆಯ ಯುವ ಸಾಹಿತಿಗಳ ಕಥಾ ಸಂಕಲನ ‘ಆಗಮನ’ವನ್ನು ಸಂಪಾದಿಸಿದ ಹೆಚ್. ಹಾಲಪ್ಪನವರು ಮೂಲತಃ ಹೊನ್ನಾಳಿ ತಾಲ್ಲೂಕಿನವರು. ಕೃಷಿಯೊಂದಿಗೆ ಬದುಕು ಕಟ್ಟಿಕೊಂಡವರು. ಹೀಗಿದ್ದೂ ಸಾಹಿತ್ಯ, ಪತ್ರಿಕೆ, ಜನರ ಹಕ್ಕು – ಹೋರಾಟದ ವಿಷಯಗಳನ್ನು ತಲೆಗೆ ಹಚ್ಚಿಕೊಂಡವರು. ಅವರು, ಮೇಲೆ ಹೇಳಿದ ಕಥಾಸಂಕಲನದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಕೃಷ್ಣಪ್ಪ ಮತ್ತು ನನ್ನೊಡನೆ ಅನೇಕ ಬಾರಿ ಚರ್ಚೆ ಸಂವಾದದಲ್ಲಿ ತೊಡಗಿದ್ದರು ಮತ್ತು ಆ ಮೂಲಕ ಸಂಪರ್ಕ ಆತ್ಮೀಯವೂ ಜವಾಬ್ದಾರಿಯುತವೂ ಆಯಿತು. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಆಂದೋಲನದ ಸ್ವರೂಪಗಳನ್ನು ತಿಳಿದುಕೊಂಡು ಹೆಚ್. ಹಾಲಪ್ಪನವರು ಹೊನ್ನಾಳಿಯಲ್ಲಿ ಅದರ ಶಾಖೆಯನ್ನು ತೆರೆದರು ಮತ್ತು ಜನರೊಂದಿಗೆ ಬೆರೆತು, ಜಾಗೃತಿ ಮೂಡಿಸಲಾರಂಭಿಸಿದರು. ಅದೇ ಸಂದರ್ಭದಲ್ಲಿ ಕೃಷ್ಣಪ್ಪನವರಿಗೆ ಒಂದು ಪತ್ರ ಬರೆದು, ‘ಹೊನ್ನಾಳಿ ತಾಲ್ಲೂಕು ಕೃಷಿ ಕಾರ್ಮಿಕರ ಮತ್ತು ರಸ್ತೆ ಕಾರ್ಮಿಕರ ಸಂಘ’ವನ್ನು ಸಂಘಟಿಸುವುದಾಗಿಯೂ, ಅದು ದಸಂಸದ ಅಡಿಯಲ್ಲಿ ಕಾರ್ಯ ನಿರ್ವಹಿಸುವುದಾಗಿಯೂ ತಿಳಿಸಿ, ೯ ಜನರ ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯನ್ನು ಕಳುಹಿಸಿದ್ದರು. ಅದರಂತೆ ಸಂಘಟನೆಯನ್ನು ಆರಂಭಿಸಿ, ಕೃಷಿ ಕಾರ್ಮಿಕರ, ರಸ್ತೆ–ಕಾಲುವೆ ಇತರೆ ಕೆಲಸಗಳ ಕೂಲಿಯಾಳುಗಳ, ಕೂಲಿ ಹೆಚ್ಚಳಕ್ಕೆ, ಪಿಂಚಣಿ ಸೌಲಭ್ಯ, ಕೂಲಿಯವರ ಮಕ್ಕಳ ಶಿಕ್ಷಣ, ವಿಮೆ ಸೌಲಭ್ಯ ಇತ್ಯಾದಿ ಬೇಡಿಕೆಯೊಂದಿಗೆ ಹೋರಾಟಗಳನ್ನು ನಡೆಸಿದರು. ಹಾಗೆಯೇ ಹೊನ್ನಾಳಿ ತಾಲ್ಲೂಕಿನ ಕ್ಯಾಸಿನಕೆರೆ, ತ್ಯಾಗದಕಟ್ಟೆ, ಬೇಲಾಪುರ, ಜನ್ನೇನಹಳ್ಳಿ, ಹೊಸಳ್ಳಿ, ಬಾಗೇವಾಡಿ, ಭೈರ್‍ನಹಳ್ಳಿ ಗ್ರಾಮಗಳಲ್ಲಿ ಭೂಹೀನ ಬಡರೈತರ ಭೂಮಿ ಹೋರಾಟ ಕಟ್ಟಿ – ಸರದಿ ಉಪವಾಸ ಸತ್ಯಾಗ್ರಹವನ್ನು ದಸಂಸ ವತಿಯಿಂದ ಆಯೋಜಿಸಿದ್ದರು.

ಇದರೊಂದಿಗೆ ಸಾಹಿತ್ಯದ ತುಡಿತ ಅವರನ್ನು ಕಾಡುತ್ತಿದ್ದುದರಿಂದ ಅವರು ಹೊನ್ನಾಳಿಯ ಕ್ಯಾಸಿನಕರೆ ಗ್ರಾಮದಲ್ಲಿ ‘ಸಂಪರ್ಕ’ ಎಂಬ ಕಾರ್ಯಕ್ರಮನ್ನು ಆಯೋಜಿಸಿದ್ದರು. ಪ್ರಶಾಂತಿ ಪ್ರಕಾಶನದ ವತಿಯಿಂದ, ಎಸ್. ಶಿವಾನಂದರವರೊಡಗೂಡಿ ಆಯೋಜಿಸಿದ್ದ ಈ ಕಾರ್ಯಕ್ರಮದ ಮುಖ್ಯ ಉದ್ದೇಶ – ನಮ್ಮ ಸಾಹಿತ್ಯ, ಸಾಹಿತಿಗಳು, ಸಾಹಿತ್ಯ ಸಮ್ಮೇಳನಗಳು, ದಿನನಿತ್ಯ ಕೂಲಿ ಮಾಡಿಯೇ ನಿತ್ಯದ ಗಂಜಿ ಕುದಿಸುವ ಜನರಿಗೆ, ರೈತರಿಗೆ ತಲುಪಿವೆಯೇ? ಸಾಹಿತ್ಯ–ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಅವರ ಒಲವು–ನಿಲುವುಗಳೇನು? ಸಾಹಿತ್ಯ ಜನರಿಂದ ಜನರಿಗಾಗಿ ಇದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವುದಾಗಿತ್ತು. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ, ವಿ.ಎನ್. ಲಕ್ಷ್ಮಿನಾರಾಯಣ್, ಗುರುರಾಜ ಬೀಡೀಕರ್,

ನಿಸಾರ್ ಅಹ್ಮದ್ ಹಾಗೂ ಗ್ರಾಮಪಂಚಾಯ್ತಿಗಳ ಅಧ್ಯಕ್ಷರು, ಟಿಡಿಬಿ ಮೆಂಬರ್‌ಗಳು ಮಾತನಾಡಿದರು ಮತ್ತು ಚರ್ಚೆಯಲ್ಲಿ, ಇಂದಿರಾ ಕೃಷ್ಣಪ್ಪ, ಬಿ. ರಾಜಣ್ಣ, ಪೂರ್ಣಿಮಾ, ನಾಗೇಂದ್ರರಾವ್ ಹಾಗೂ ಗ್ರಾಮಸ್ಥರು ಭಾಗವಹಿಸಿದರು. ಗ್ರಾಮಸ್ಥರು, ರೈತರು, ದುಡಿಯುವ ಮಹಿಳೆಯರೊಂದಿಗಿನ ಈ ಸಂವಾದದಲ್ಲಿ, ನಮ್ಮ ಸಾಹಿತ್ಯ ಅವರಿಗೆ ಸಾಸಿವೆ ಕಾಳಷ್ಟೂ ತಲುಪಿಲ್ಲದೆ ಇರುವುದು, ನಿತ್ಯದ ದುಡಿಮೆಯೇ ಜೀವನ್ಮರಣದ ಪ್ರಶ್ನೆಯಾಗಿರುವುದೂ, ನಿರಕ್ಷರತೆ – ಬಡತನವೇ ಹಾಸು ಹೊದ್ದುಕೊಂಡು ತನುವ ಸಂತೈಸಿಕೊಳ್ಳಲಾಗದಷ್ಟೂ ಅಲ್ಪವಿರಾಮ ಇಲ್ಲದಿರುವಾಗ, ಸಾಹಿತ್ಯ–ಸಂಗೀತ ಅವರ ಹಟ್ಟಿಯಾಚೆ, ಹಳ್ಳಿಯಾಚೆಯೇ ಎಂಬ ನಿಷ್ಠುರ ಸತ್ಯದ ಅನುಭವವಾಯಿತು. ನಂತರದ ದಿನಗಳಲ್ಲಿ ಹಾಲಪ್ಪನವರು 'ಬಹುಮತ' ಸಂಘಟನೆಯಲ್ಲಿ ತೊಡಗಿಕೊಂಡು, "ಬಹುಮತ" ಪತ್ರಿಕೆಯನ್ನು ಕೆಲ ಕಾಲ ಹೊರತಂದು ಹಿಂದುಳಿದ ವರ್ಗದ ಜಾಗೃತಿ ಹಾಗೂ ಸಂಘಟನೆಗೆ ಶ್ರಮಿಸಿದರು.



ಬಿ. ಕೃಷ್ಣಪ್ಪ–ಎಸ್.ಎಲ್. ಭೈರಪ್ಪ

ಶಿವಮೊಗ್ಗ ಜಿಲ್ಲೆ, ಕರ್ನಾಟಕದ ಸಾಮಾಜಿಕ, ರಾಜಕೀಯ ಪರಿವರ್ತನೆಯ ಕ್ರಾಂತಿಭೂಮಿ. ಸಮಾಜವಾದಿ ಹೋರಾಟ, ದಲಿತ ಚಳುವಳಿ ಶಿವಮೊಗ್ಗ ಜಿಲ್ಲೆಯಲ್ಲಿಯೇ ಹುಟ್ಟಿತು. ರೈತರ ಭೂ ಹಿಡುವಳಿ–ಭೂ ಸುಧಾರಣಾ ಕಾಯ್ದೆ ಸಾಲದ ಶೂಲ, ಜಪ್ತಿ, ಬೆಳೆಹಾನಿ, ಬೆಂಬಲ ಬೆಲೆ, ದಲ್ಲಾಳಿಗಳಿಂದ ಶೋಷಣೆ ಇತ್ಯಾದಿ ಸಮಸ್ಯೆಗಳ ನಿವಾರಣೆಗಾಗಿ, ೧೯೮೦ನೇ ಅಕ್ಟೋಬರ್ ಎರಡನೇ ತಾರೀಖಿನಂದು, ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ. ಸುಂದರೇಶ್, ಕಡಿದಾಳ ಶಾಮಣ್ಣನವರ ನೇತೃತ್ವದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಕೃಷಿ ಮಂತ್ರಿ ಹೆಚ್.ಎಸ್. ರುದ್ರಪ್ಪನವರ ನಾಯಕತ್ವದಲ್ಲಿ 'ಕರ್ನಾಟಕ ರಾಜ್ಯ ರೈತ ಸಂಘ' ಪ್ರಾರಂಭವಾಯಿತು. ದಲಿತ ಸಂಘಟನೆಯ ಚಳುವಳಿಗಳು ಪ್ರಾರಂಭದಲ್ಲಿ ಭೂಮಾಲೀಕತ್ವ, ಕೃಷಿ ಕಾರ್ಮಿಕರು, ಜೀತ ಇತ್ಯಾದಿ ಸಮಸ್ಯೆಗಳ ಹಿನ್ನೆಲೆಯಲ್ಲಿ ಸಂಘಟಿತವಾಗುತ್ತಿದ್ದವು. ಅವು ನೇರವಾಗಿ ರೈತ ಸಂಘದ ಸದಸ್ಯರಾದ ಭೂ ಒಡೆಯ–ಲಿಂಗಾಯಿತರು, ಗೌಡರು, ಶ್ರೀಮಂತ ರೈತರ ವಿರುದ್ಧವೇ ಆಗಿರುತ್ತಿದ್ದವು. ರೈತ ಸಂಘದ ಬಲದಿಂದ ಈ ಶ್ರೀಮಂತ ರೈತರು, ಬಗರ್‌ಹುಕುಂ ಸಾಗುವಳಿದಾರರು, ದಲಿತರು, ಕೃಷಿಕಾರ್ಮಿಕರನ್ನು ಭೂಮಿಯಿಂದ ಹೊರದಬ್ಬುವುದು, ಹಲ್ಲೆ, ದೌರ್ಜನ್ಯ, ಕೊಲೆ, ಬಹಿಷ್ಕಾರ, ದಲಿತ ಮಹಿಳೆಯರ ಮೇಲೆ ಹಿಂಸೆಗಳಿಗೆ ತೊಡಗಿದ್ದನ್ನು ವಿರೋಧಿಸಲು, ದಲಿತರು ಮತ್ತು ಹಿಂದುಳಿದವರು ದಲಿತ ಸಂಘಟನೆಯಡಿಯಲ್ಲಿ ಹೋರಾಟಕ್ಕೆ ಸಜ್ಜುಗೊಂಡಿದ್ದನ್ನು ಕಾಣಬಹುದು. ಆ ದಿನಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ದಸಂಸದ ತಾಲ್ಲೂಕು ಸಂಚಾಲಕರುಗಳಾಗಿ ಶಿವಾನಂದ ಕುಗ್ವೆ, ಹೆಚ್. ನಾಗರಾಜ್, ಲಕ್ಷ್ಮಣ್, ಪರಮೇಶ್ವರಪ್ಪ, ಜಿ. ಚಂದ್ರಪ್ಪ, ಆರ್. ನಾಗಪ್ಪ, ಶೇಖರ್ ನಾಯ್ಕ, ಗಂಗಾಧರ್‌ರವರುಗಳು ಮತ್ತು ಎಂ.ಎಲ್. ನಾಗಭೂಷಣ ನಂತರ ಹೆಚ್. ರಾಜಪ್ಪನವರು ಜಿಲ್ಲಾ ಸಂಚಾಲಕರುಗಳಾಗಿ ಪ್ರಾಮಾಣಿಕವಾಗಿ ಬದ್ಧತೆಯಿಂದ ಚಳುವಳಿಗಳನ್ನು ಕಟ್ಟುತ್ತಾ ಕೃಷ್ಣಪ್ಪನವರ ಹೆಗಲ ನೊಗದ ಭಾರವನ್ನು ಹಂಚಿಕೊಂಡಿದ್ದರು. ಗುಂಗುರು ಕೂದಲು, ಸಣ್ಣಕಣ್ಣುಗಳು, ಸಪೂರ ದೇಹದ ಹೆಚ್ಚೇನೂ ಎತ್ತರವಿಲ್ಲದ ಬ್ರಾಹ್ಮಣರ ಹುಡುಗ ಎಂ.ಎಲ್. ನಾಗಭೂಷಣ ಬಗಲಚೀಲ ಏರಿಸಿಕೊಂಡು ಬಂದು ಕೃಷ್ಣಪ್ಪನವರೆದುರು ಬಂದು ನಿಂತನೆಂದರೆ ದಲಿತರ ಹಲವು ಸಮಸ್ಯೆಗಳನ್ನು ಹೊತ್ತು ತಂದಿದ್ದಾನೆಂತಲೇ ಅರ್ಥ. ಶಿವಮೊಗ್ಗ ಜಿಲ್ಲೆಯ ಪ್ರಮುಖ ಹೋರಾಟಗಳನ್ನು ಗಮನಿಸಬಹುದಾದರೆ

* ಶಿವಮೊಗ್ಗ ತಾಲ್ಲೂಕು ಮಂಡ್ರಳ್ಳಿ (ರಟ್ಟೆಹಳ್ಳಿ) ದಲಿತರಿಗೆ, ರೈತ ಸಂಘಕ್ಕೆ ಸೇರಿದ ಶ್ರೀಮಂತ ಸಾದು ಲಿಂಗಾಯಿತರಿಂದಾದ ದೌರ್ಜನ್ಯ, ಹಲ್ಲೆ, ಬೆಂಕಿ ಹಚ್ಚುವಿಕೆ ಮತ್ತು ಬಹಿಷ್ಕಾರದ ವಿರುದ್ಧ ಹೋರಾಟ.

* ಶಿವಮೊಗ್ಗ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಚೆರಡೋಣಿಯ ಶ್ರೀಮಂತ ಲಿಂಗಾಯಿತ ಸಮುದಾಯದ ರೈತ ಪರಮೇಶ್ವರಪ್ಪನು ದಲಿತರ ಮೇಲೆ ನಡೆಸಿದ ಹಲ್ಲೆ, ದೂರು, ಬಹಿಷ್ಕಾರದ ವಿರುದ್ಧ ಹೋರಾಟ.

* ಚನ್ನಗಿರಿ ತಾಲ್ಲೂಕು, ಪಾಂಡೋಮಟ್ಟಿ ಶ್ರೀಮಂತ ಲಿಂಗಾಯಿತರಿಂದ, ಬಡ ದಲಿತರ ಗುಡಿಸಲುಗಳ ಮೇಲೆ ದಾಳಿ–ಸರ್ವನಾಶ, ಹೆಣ್ಮಕ್ಕಳ ಮಾನಹರಣ, ಚಿತ್ರಹಿಂಸೆಯೊಂದಿಗೆ, ಪೋಲೀಸರ ಭ್ರಷ್ಟಾಚಾರ, ರಾಜಕಾರಿಣಿಗಳೊಂದಿಗೆ ಷಾಮೀಲಾಗಿರುವುದರ ವಿರುದ್ಧ ಚಳುವಳಿ.


* ಭದ್ರಾವತಿ ತಾಲ್ಲೂಕಿನ ಆನವೇರಿ ಗ್ರಾಮದ ದಲಿತ ದುರ್ಗಪ್ಪನ ಮನೆ ಧ್ವಂಸ, ಸಾಮಾಜಿಕ ಬಹಿಷ್ಕಾರ ಮತ್ತು ಮಾವಿನಕೆರೆ ಗ್ರಾಮದ ಭೂಮಾಲೀಕರಿಂದ ದಲಿತ ಲಕ್ಕಪ್ಪನ ಜಮೀನು ಒತ್ತುವರಿ–ದೌರ್ಜನ್ಯ ವಿರುದ್ಧ ಹೋರಾಟ.

* ಸಾಗರ ತಾಲ್ಲೂಕು ಗ್ರಾಮೋದ್ಯೋಗ ಕಾರ್ಮಿಕರ ಮೇಲೆ ಮಾಲೀಕರ ದೌರ್ಜನ್ಯ. ಸತ್ಯಾಗ್ರಹಿಗಳ ಮೇಲೆ ಪೋಲೀಸ್ ದಬ್ಬಾಳಿಕೆ ವಿರುದ್ಧ ಹೋರಾಟ.

ಮೇಲ್ಕಂಡ ಎಲ್ಲಾ ಹೋರಾಟಗಳಲ್ಲಿ, ದಲಿತ ಸಂಘಟನೆಯು, ಆಳುವ ಸರ್ಕಾರವನ್ನು, ಮಂತ್ರಿ ಶಾಸಕರನ್ನು ಪ್ರಶ್ನಿಸುವ, ಅವರ ಸಾಮಾಜಿಕ ಬದ್ಧತೆಯನ್ನು ಆಗ್ರಹಿಸುವ ಎದೆಗಾರಿಕೆ ತೋರಿದ್ದು, ಅಂದಿನ ರಾಜಕೀಯ ನಾಯಕರ ಕರ್ತವ್ಯ ಪ್ರಜ್ಞೆಯನ್ನು, ಆರಿಸಿಬಂದ ಕ್ಷೇತ್ರದ ಅಭಿವೃದ್ಧಿಯ ಉತ್ತರದಾಯಿತ್ವವನ್ನು ಜಾಗೃತಗೊಳಿಸಿತ್ತು ಎಂದೇ ಹೇಳಬಹುದು. ಹಾಗೆ ಪ್ರಶ್ನಿಸಿದ ಒಂದೆರಡು ಉದಾಹರಣೆಗಳನ್ನು ಹೇಳುವುದಾದರೆ, ಆಗಿನ 'ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸದಸ್ಯರಾದ ಟಿ.ವಿ. ಚಂದ್ರಶೇಖರಪ್ಪ ಕ್ಷೇತ್ರದ ಕಡೆ ತಿರುಗಿ ನೋಡಿರಲಿಲ್ಲ', 'ಲೋಹಿಯಾವಾದಿ, ಕ್ರಾಂತಿಕಾರಿ ಎಂದು ಪಟ್ಟಣಗಳಲ್ಲಿ ಭಾಷಣ ಬಿಗಿಯುವ ಶಾಸಕ ಜೆ.ಹೆಚ್. ಪಟೇಲರು ಶ್ರೀಮಂತ ಲಿಂಗಾಯಿತರ ಪರವಾಗಿ ಯಾವತ್ತು ಕೆಲಸ ಮಾಡುತ್ತ ಬಂದಿದ್ದಾರೆ. ಜನ ಸತ್ತರೆ, ಬದುಕಿದರೆ ಎಂದು ವಿಚಾರಿಸಲಿಲ್ಲ', ' ಎಂಬ ಟೀಕೆ–ಸವಾಲುಗಳು ಕರಪತ್ರ, ಬ್ಯಾನರ್, ಪೋಸ್ಟರ್‌ಗಳಲ್ಲಿ ಪ್ರಚಾರಗೊಳ್ಳುತ್ತಿದ್ದಂತೆ, ಆಳುವ ನಾಯಕರನ್ನು ಪ್ರಶ್ನಿಸುವ ದಿಟ್ಟತನ ತೋರಿದ ದಸಂಸವನ್ನು ತಳಸಮುದಾಯದವರು ನಂಬತೊಡಗಿದರು. ಇದರೊಂದಿಗೆ ದಲಿತ ಸಂಘಟನೆಯೊಳಗಡೆ, ಸಂಘಟನಾತ್ಮಕವಾಗಿ, ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ ಹಾಗೂ ದಲಿತ ನೌಕರರ ಒಕ್ಕೂಟಗಳನ್ನು ಪ್ರಾರಂಭಿಸಿ, ದಲಿತ ಸಮುದಾಯದ ಸಮಸ್ಯೆಗಳನ್ನು ವಿವಿಧ ವಿಭಾಗಗಳಲ್ಲಿ ಸಮಗ್ರವಾಗಿ ಪರಿಶೀಲಿಸುವ ಜವಾಬ್ದಾರಿ ಹೊತ್ತದ್ದು ಕೃಷ್ಣಪ್ಪನವರ ಸಂಘಟನಾ ಶಕ್ತಿಗೆ ದ್ಯೋತಕವಾಗಿದೆ.

ಇವುಗಳ ನಡುವೆ ಭದ್ರಾವತಿಯ ಕೃಷ್ಣನ ಕೊಲೆ ಪ್ರಸಂಗದಲ್ಲಿ ಆಗಿನ ಜನತಾಪಕ್ಷದ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಸಿ.ಎಂ. ಇಬ್ರಾಹಿಂ ಮತ್ತು ಆತನ ಸಹೋದರರ ಗೂಂಡಾಗಿರಿ ಮತ್ತು ಪಾತ್ರ ಮತ್ತು ಇದನ್ನು ಕೋಮುವಾದೀಕರಣ ಮಾಡಲು ಹೊರಟ ಹಿಂದೂ ಜಾಗರಣಾ ಸಮಿತಿಯನ್ನು ಖಂಡಿಸುತ್ತಾ ಇಬ್ರಾಹಿಂ ರಾಜೀನಾಮೆಗೆ ದಸಂಸ ಒತ್ತಾಯಿಸಿತ್ತು. ಕರ್ನಾಟಕದಲ್ಲಿ ಆ ಸಂದರ್ಭದಲ್ಲಿ ಹಿಂದೂ–ಮುಸ್ಲಿಂ ಗಲಭೆಗಳು ತೀವ್ರಗೊಂಡಿದ್ದು, 'ಇಬ್ರಾಹಿಂ ಸಹೋದರರ ತನಿಖೆ ನಿಷ್ಪಕ್ಷಪಾತವಾಗಿ ಮತ್ತು ಪ್ರಭಾವ ಮುಕ್ತವಾಗಲು, ಭದ್ರಾವತಿಯ ನಾಗರೀಕರ ಜೀವನ ಶಾಂತಿ ಮತ್ತು ಭದ್ರತೆಗಾಗಿ ಇಂಥ ದುಷ್ಟಶಕ್ತಿಗಳ ದಮನ ಅತ್ಯಗತ್ಯವಾಗಿದೆ' ಎಂದು ಕರಪತ್ರ ಹೊರಡಿಸಿ, ಸಾರ್ವಜನಿಕ ನೆಮ್ಮದಿ – ಭದ್ರತೆಗಾಗಿ ದಸಂಸ ಧ್ವನಿ ಎತ್ತಿತ್ತು. ಭದ್ರಾವತಿಯ ಜನರನ್ನು ತಲ್ಲಣಗೊಳಿಸಿದ ಆ ದಿನಗಳಲ್ಲಿ ವಿಚಾರಣೆಗಾಗಿ ತಹಸೀಲ್ದಾರರ ಎದುರಿಗೆ ಇಬ್ರಾಹಿಂರ ತಾಯಿ, ಸಹೋದರರು ಹಾಜರಾಗುವಂದು ಕಚೇರಿಯ ಮುಂದೆ ಜನಜಾತ್ರೆಯೇ ನೆರದಿರುತ್ತಿತ್ತು. ಅದೇ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಾನು ಇಂತಹ ಪ್ರಕರಣಗಳ ವಿಚಾರಣೆ ನಡೆಸುವ ಶಾಖೆಯನ್ನೇ ಹೊಂದಿದ್ದರಿಂದ, ಈ ಪ್ರಕರಣಗಳ ಒಳ–ಹೊರನೋಟಗಳು ನನ್ನಲ್ಲಿ ಅನೇಕ ಪ್ರಶ್ನೆಗಳನ್ನು ಮತ್ತು ಕಾನೂನುಗಳ ಮಿತಿಯ ಅರಿವನ್ನು ಮೂಡಿಸುತ್ತಿತ್ತು. ನಾನು ಇವುಗಳನ್ನು ಸಾಂದರ್ಭಿಕವಾಗಿ ಕೃಷ್ಣಪ್ಪನವರ ಮುಂದಿಡುತ್ತಿದ್ದೆ.

**(ಮುಂದುವರೆಯುವುದು)**




*ಬಿ.ಕೃಷ್ಣಪ್ಪ ಅವರ ಪತ್ನಿ ಶ್ರೀಮತಿ ಇಂದಿರಾ ಬಿ. ಕೃಷ್ಣಪ್ಪ, ಕಂದಾಯ ಇಲಾಖೆಯಲ್ಲಿ ಅಧಿಕಾರಿಯಾಗಿ ಈಗ ನಿವೃತ್ತಿಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದು, ಪ್ರೊ. ಬಿ.ಕೃಷ್ಣಪ್ಪ ಟ್ರಸ್ಟ್‌ನಡಿ ಹಲವು ವಿಧಾಯಕ ಕಾರ್ಯಕ್ರಮಗಳ ಮೂಲಕ ಕೃಷ್ಣಪ್ಪ ಅವರ ಹೋರಾಟದ ಪರಂಪರೆಯನ್ನು ಮುಂದುವರೆಸಿದ್ದಾರೆ*

ನೆನಪಿನ ಬುತ್ತಿ

# ಜೆಪಿಯವರೊಂದಿಗೆ ನನ್ನ ಐದು ವರ್ಷಗಳು

–ಸುರೇಂದ್ರ ಕೌಲಗಿ



ಜಯಪ್ರಕಾಶ ನಾರಾಯಣರವರೊಂದಿಗಿನ ನನ್ನ ಅನುಭವಗಳ ಬಗ್ಗೆ ಲೇಖನ ಬರೆದು ಕಳುಹಿಸಿ ಎಂದು ನಾಗಭೂಷಣರವರು ವಿನಂತಿಸಿಕೊಂಡಾಗ ನನ್ನ ನೆನಪು ೧೯೫೪ನೆಯ ಇಸವಿಗೆ ಜಿಗಿಯಿತು. ಹಾಗೆ ಜಿಗಿದು ಮುಂಬಯಿಯ ಮಲಬಾರ್ ಹಿಲ್‌ನಲ್ಲಿ ಇದ್ದ ಡಾ. ದಿನ್‌ಷಾ ಕೆ. ಮೆಹೆತಾರವರ ನೇಚರ್ ಕ್ಯೂರ್ ಕ್ಲಿನಿಕ್‌ನಲ್ಲಿ ನಿಂತಿತು. ೨೦ ವರ್ಷದ ಯುವಕ, ಯಾವುದೇ ಪ್ರಕಾರದ ಸಾರ್ವಜನಿಕ ಜೀವನದ ಪರಿಚಯವಿಲ್ಲದ ಯುವಕ, ತನಗಿಂತಲೂ ೩೨ವರ್ಷ ದೊಡ್ಡವರಾದ, ವಿಫುಲ ಲೋಕಾನುಭವ ಮತ್ತು ರಾಜಕಾರಣದ ಅನುಭವ ಇದ್ದ ಓರ್ವ ವ್ಯಕ್ತಿಯ ಎದುರಿಗೆ ಮುಖಾಮುಖಿಯಾಗಿ ನಿಂತಿದ್ದು ಈಗಲೂ ನೆನಪಲ್ಲಿ ಹಸಿರಾಗಿದೆ. ಈ ಮುಖಾಮುಖಿಗೆ ಸಾಕ್ಷಿಯಾಗಿದ್ದವರು ಡಾ. ದಿನ್‌ಷಾ ಕೆ. ಮೆಹೆತಾ. ಅಂದಿನಿಂದ ಹಿರಿಯ ಸಮಾಜವಾದಿ ನಾಯಕ ಜಯಪ್ರಕಾಶ್ ನಾರಾಯಣ್‌ರವರೊಂದಿಗಿನ ನನ್ನ ಐದು ವರ್ಷಗಳ ಮಹತ್ವದ ದಿನಚರಿ ಪ್ರಾರಂಭವಾಯಿತು. ಅದು ೧೯೫೯ರವರೆಗೆ ಅಖಂಡವಾಗಿ ನಡೆಯಿತು. ಈ ಲೇಖನದಲ್ಲಿ ಆ ಐದು ವರ್ಷಗಳ ಅನುಭವದಲ್ಲಿಯ ಕೆಲವನ್ನು ಮಾತ್ರ ಹೇಳಲು ಸಾಧ್ಯವಾಗಿದೆ.


ನಾನು ಅದೇ ತಾನೆ ಕೇವಲ ಎಸ್.ಎಸ್.ಎಲ್.ಸಿ ಪರೀಕ್ಷೆ ಪಾಸಾಗಿ ಇಂಗ್ಲೀಷ್ ಟೈಪಿಂಗ್ ಕಲಿತಂಥ ಯುವಕನಾಗಿದ್ದೆನಷ್ಟೇ. ಸಾಮ್ಯವಾದ, ಸಮಾಜವಾದ, ಬಂಡವಾಳವಾದ ಇತ್ಯಾದಿ ವಿಚಾರಗಳನ್ನು ಕೇಳಿದ್ದೆನೆ ಹೊರತು ಅವುಗಳನ್ನು ಆಳವಾಗಿ ಅಧ್ಯಯನ ಮಾಡಿರಲಿಲ್ಲ. ದೇಶದ ಸ್ವಾತಂತ್ರ್ಯದ ಚಳುವಳಿಯ ಶಾಖ ತಗಲಿತ್ತೆ ವಿನಃ ಆಂದೋಲನದಲ್ಲಿ ಸ್ವತಃ ಭಾಗವಹಿಸಿದ ಅನುಭವ ಇರಲಿಲ್ಲ. ಇದಕ್ಕೆ ತದ್ವಿರುದ್ಧವಾದ ಜೀವನ ಜೆ.ಪಿಯವರದಾಗಿತ್ತು. ಅಮೇರಿಕಾದಲ್ಲಿ ಏಳು ವರ್ಷಗಳ ಕಾಲ ವ್ಯಾಸಂಗ ಮಾಡಿದ್ದರು. ಸಾಮ್ಯವಾದ ಮತ್ತು ಸಮಾಜವಾದದ ಆಳವಾದ ಅಧ್ಯಯನ ಮಾಡಿದ್ದರು. ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಹಿರಿಯ ರಾಷ್ಟ್ರನಾಯಕರಲ್ಲಿ ಒಬ್ಬರಾಗಿದ್ದರು. ಗಾಂಧೀಜಿಯವರ ಸಹವಾಸದ ಲಾಭ ಪಡೆದಿದ್ದರು. ಕಾರ್ಮಿಕರ ಸಂಘಟನೆಗಳ ಮುಖಂಡರಾಗಿ ದೇಶದ ಕಾರ್ಮಿಕ ಜಗತ್ತಿನ ಕಣ್ಮಣಿಯಾಗಿದ್ದರು. ಇಂಥ ಮೇರು ಸದೃಶವಾದ ವ್ಯಕ್ತಿತ್ವವುಳ್ಳ ಜಯಪ್ರಕಾಶ್ ನಾರಾಯಣರೊಂದಿಗೆ ಇದ್ದು ಕೆಲಸ ಮಾಡುವಾಗ ಸಹಜವಾಗಿಯೇ ನನ್ನ ಸೇವೆ ವ್ಯವಹಾರಿಕವಾಗಿತ್ತೇ ಹೊರತು ವೈಚಾರಿಕವಾಗಿರಲು ಸಾಧ್ಯವಿರಲಿಲ್ಲ.

ನಾನು ಜೆ.ಪಿಯವರನ್ನು ಸೇರಿಕೊಂಡದ್ದರ ಹಿನ್ನೆಲೆ ಹೀಗಿದೆ. ಗಾಂಧೀಜಿಯವರಿಗೆ ಸ್ಟೆನೋ ಆಗಿ ಕೆಲಸ ಮಾಡುತ್ತಿದ್ದ ಕೇರಳದ ಪರಶುರಾಮ್, ಗಾಂಧೀಜಿಯವರ ಹತ್ಯೆಯ ನಂತರ ಓರ್ವ ಸಮಾಜವಾದಿಯಾಗಿ ಜಯಪ್ರಕಾಶ್ ನಾರಾಯಣರೊಂದಿಗೆ ಕೆಲಸಮಾಡಲು ಪ್ರಾರಂಭಿಸಿದರು. ಕೇರಳದಲ್ಲಿದ್ದ ಅವರ ತಾಯಿಗೆ ಆರೋಗ್ಯ ಸರಿ ಇಲ್ಲದೇ ಇದ್ದುದರಿಂದ ಅವರು ಅನಿವಾರ್ಯವಾಗಿ ಜೆ.ಪಿಯವರ ಸೇವೆಯಿಂದ ಬಿಡುಗಡೆ ಹೊಂದಿ ತಾಯಿಯವರ ಶುಶ್ರೂಷೆಗಾಗಿ ತಮ್ಮ ಊರಿಗೆ ಹೋಗಬೇಕಾಯಿತು. ಆಗ ಜೆ.ಪಿಯವರಿಗೆ ತಮ್ಮ ಕಾಗದ ಪತ್ರಗಳನ್ನು ನಿರ್ವಹಿಸುವ, ಪತ್ರ ವ್ಯವಹಾರಕ್ಕೆ ಸಹಾಯ ಮಾಡುವ ಮತ್ತು ಇತರೆ ಕೆಲಸಗಳಲ್ಲಿ ನೆರವಾಗಬಲ್ಲಂತಹ ಒಬ್ಬ ಯುವಕನ ಅಗತ್ಯವುಂಟಾಗಿತ್ತು. ಆ ಸಮಯದಲ್ಲಿ ನಾನು 'ನೇಚರ್ ಕ್ಯೂರ್ ಕ್ಲಿನಿಕ್'ನಲ್ಲಿ ಟೈಪಿಸ್ಟ್ ಆಗಿ ಕೆಲಸಮಾಡುತ್ತಿದ್ದೆ. ಕ್ಲಿನಿಕ್‌ಗೆ ಬರುತ್ತಿದ್ದ 'ಹರಿಜನ' ವಾರಪತ್ರಿಕೆಯಲ್ಲಿ ವಿನೋಬಾರ ಭೂದಾನ ಆಂದೋಲನದ ವಿಷಯ ಓದಿ, ಜೆ.ಪಿಯವರ ಜೀವನದಾನದ ವಿಷಯ ತಿಳಿದು ನಾನೂ ಕೂಡ ಭೂದಾನ ಆಂದೋಲನ ಸೇರಲು ಬಯಸಿದ್ದೆ. ಈ ವಿಷಯವನ್ನು ಡಾ. ದಿನ್‌ಷಾ ಕೆ. ಮೆಹೆತಾರ ಮುಂದೆ ಪ್ರಸ್ತಾಪಿಸಿದೆ.

ದಿನ್‌ಷಾ ಮೆಹೆತಾ ಗಾಂಧೀಜಿಯವರ ಓರ್ವ ಅನುಯಾಯಿಯಾಗಿದ್ದರು. ಗಾಂಧೀಜಿಯವರು ಉಪವಾಸ ಮಾಡಿದಾಗಲೆಲ್ಲ ಡಾ. ಮೆಹೆತಾ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಈಗಾಗಲೇ ಅವರ ಕ್ಲಿನಿಕ್‌ನಲ್ಲಿ ಅನೇಕ ರಾಷ್ಟ್ರೀಯ ಮುಖಂಡರು ಚಿಕಿತ್ಸೆ ಪಡೆದುಕೊಂಡು ಹೋಗಿದ್ದರು. ಈಗ ಜೆ.ಪಿಯವರೂ ಸಹ ತಮ್ಮ ಬಹು ಚಟುವಟಿಕೆಯ ರಾಜಕಾರಣದಿಂದ ಮುಕ್ತರಾಗಿ ಸರ್ವೋದಯ ಆಂದೋಲನಕ್ಕೆ ಬಂದು ವಿಶ್ರಾಂತಿಗಾಗಿ ಡಾ. ಮೆಹೆತಾರ ನೇಚರ್ ಕ್ಯೂರ್ ಕ್ಲಿನಿಕ್‌ನಲ್ಲಿ ತಂಗಿದ್ದರು. ಮೆಹೆತಾರವರು ನನ್ನ ಬಗ್ಗೆ ಸದಭಿಪ್ರಾಯವಿರಿಸಿಕೊಂಡಿದ್ದರು. ಆದ್ದರಿಂದ ನನ್ನ ವಿನಂತಿಯನ್ನು ಜೆ.ಪಿಯವರ ಮುಂದೆ ಪ್ರಸ್ತಾಪಿಸಿದಾಗ ಜೆ.ಪಿ. ಒಪ್ಪಿ ನಾನು ಅವರನ್ನು ಸೇರಿಕೊಂಡೆ.

ಜೆ.ಪಿ ನನಗೆ ಸಮ್ಮತಿ ಕೊಟ್ಟ ಆ ಘಳಿಗೆಯನ್ನು ಮರೆಯಲಾರೆ. ಆಗಲೇ ನಾನು ಅವರನ್ನು ಮೊದಲ ಬಾರಿಗೆ ನೋಡಿದ್ದು. ಎತ್ತರದ ನಿಲುವಿನ ಸ್ಫುರದ್ರೂಪಿ ವ್ಯಕ್ತಿತ್ವ. ಆ ವ್ಯಕ್ತಿತ್ವವನ್ನು ಇನ್ನೂ ಹೆಚ್ಚು ಅರಳಿಸಲೆಂದೋ ಎಂಬಂತೆ ಶುಭ್ರವಾದ ಖಾದಿ ಕಚ್ಚೆಪಂಚೆ ಮತ್ತು ಜುಬ್ಬ ಧರಿಸಿದ್ದರು. ಹಸನ್ಮುಖಿಯಾಗಿದ್ದರು. ಬಹಳ ವಿಶ್ವಾಸದಿಂದ ನನ್ನ ಪೂರ್ವಾಪರಗಳನ್ನು ಕೇಳಿದರು. ಅವರು ಮಾತಾಡಿದ್ದು ಎಷ್ಟು ಸಹಜವೂ, ಸ್ನೇಹ ಪೂರ್ಣವೂ ಆಗಿತ್ತೆಂದರೆ, ನಮ್ಮಿರ್ವರ ಮಧ್ಯೆ ಇದ್ದ ವ್ಯಕ್ತಿತ್ವದ ದೊಡ್ಡ ಅಂತರ ಮಾಯವಾಗಿತ್ತು. ಎಷ್ಟೋ ದಿನಗಳಿಂದ ಬಲ್ಲ ವ್ಯಕ್ತಿಯಂತೆ ನನಗವರನಿಸಿದರು. ಆ ವರ್ಷ ಜೆ.ಪಿಯವರ ಜೀವನ ಹೊಸ ತಿರುವು ಪಡೆದ ವರ್ಷವಾಗಿತ್ತು. ಅವರ ೨೦ವರ್ಷಗಳ ಸಮಾಜವಾದಿ ಜೀವನದ ಹೋರಾಟ ಸರ್ವೋದಯ ಸಮಾಜ ರಚನೆಯ ಆಂದೋಲನಕ್ಕೆ ಜೀವನದಾನದಲ್ಲಿ ಪರ್ಯವಸಾನಗೊಂಡಿತ್ತು. ಅವರ ಬದುಕಿನ ಇಂತಹ ಮಹತ್ವದ ಘಟ್ಟದಲ್ಲಿ ನಾನು ಅವರ ಆಪ್ತ ಸಹಾಯಕನಾಗಿದ್ದು ನನ್ನ ಪಾಲಿನ ಮಹಾದೃಷ್ಟವೇ ಸರಿ.

ಜೆ.ಪಿಯವರೊಂದಿಗೆ ಸೇರಿದ ಮೇಲೆ ಅವರ ಕಾರ್ಯಕ್ರಮಗಳ ಸ್ವರೂಪ ತಿಳಿಯಲು ನನಗೆ ಬಹಳಷ್ಟು ಸಮಯ ಬೇಕಾಯಿತು. ಬಿಹಾರದ ಸೋಕೋದೇವ್ರ ಎಂಬಲ್ಲಿ ಇದ್ದ ಅವರ ಆಶ್ರಮಕ್ಕೆ ಹೋದಾದ ಮೇಲೆ ಅಲ್ಲಿದ್ದ ಅನೇಕ ಸಮಾಜವಾದಿ, ಸರ್ವೋದಯ ಕಾರ್ಯಕರ್ತರ ಮೂಲಕ ಜೆ.ಪಿಯವರ ಸಾಧನೆ, ಹೋರಾಟ ಮತ್ತು ಕಾರ್ಯ ಚಟುವಟಿಕೆಗಳ ಬಗ್ಗೆ ಕ್ರಮೇಣ ಗೊತ್ತಾಯಿತು. ಕೆಲವಾರು ದಿನ ಜೆ.ಪಿಯವರೊಂದಿಗೆ ಆಶ್ರಮದಲ್ಲಿ ಇರುವುದು, ಇನ್ನೂ ಕೆಲವಾರು ದಿನ ವಿವಿಧ ಕಾರ್ಯಕ್ರಮಗಳಿಗಾಗಿ ದೇಶದ ಪ್ರಮುಖ ನಗರಗಳಿಗೆ ಪ್ರವಾಸ ಹೋಗುವುದು ಮುಂತಾದವು ನಡೆಯುತ್ತಿದ್ದವು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಮುಂಬಯಿಯಿಂದ ಕಲ್ಕತ್ತಾದವರೆಗೆ ದೇಶದ ಉದ್ದಗಲಕ್ಕೂ ಜೆಪಿಯವರ ಕಾರ್ಯಕ್ರಮಗಳು ಇರುತ್ತಿದ್ದವು. ಮಧ್ಯೆ ಮಧ್ಯೆ ವಿನೋಬಾರ ಪಾದಯಾತ್ರೆಯಲ್ಲಿಯೂ, ಅಖಿಲ ಭಾರತ ಸರ್ವೋದಯ ಸಮ್ಮೇಳನಗಳಲ್ಲಿಯೂ ಭಾಗವಹಿಸುತ್ತಿದ್ದರು. ಸಮ್ಮೇಳನಗಳಲ್ಲಿ ಜೆ.ಪಿ ಭಾಗವಹಿಸುತ್ತಾರೆಂಬ ಕಾರಣಕ್ಕಾಗಿಯೇ ಸಮ್ಮೇಳನಗಳಲ್ಲಿ ಪ್ರತಿನಿಧಿಗಳ ಸಂಖ್ಯೆ ಅಪಾರವಾಗಿರುತ್ತಿತ್ತು. ಸರ್ವೋದಯ ಸಮ್ಮೇಳನಗಳಲ್ಲದೇ ಸರ್ವ ಸೇವಾ ಸಂಘದ ಕಾರ್ಯಕಾರಿ ಸಮಿತಿಯ ಸಭೆ ನಡೆದ ಊರುಗಳಿಗೆ ಹೋಗಬೇಕಾಗುತ್ತಿತ್ತು. ಇದಲ್ಲದೇ ಜೆ.ಪಿಯವರು 'ಇಂಡಿಯನ್ ಕಮಿಟಿ ಫಾರ್ ಕಲ್ಚರಲ್ ಫ್ರೀಡಮ್' ಎಂಬ ಸಂಸ್ಥೆಯ ಜೊತೆಗೆ ಸಂಪರ್ಕವಿರಿಸಿಕೊಂಡಿದ್ದರಿಂದ ಆ ಸಂಸ್ಥೆ ದೇಶದ ಬೇರೆ ಬೇರೆ ಭಾಗಗಳಲ್ಲಿ



ಜೆ.ಪಿ.–ಲೋಹಿಯಾ–ಪ್ರಭಾವತಿ

ಏರ್ಪಡಿಸುತ್ತಿದ್ದ ಸೆಮಿನಾರ್‌ಗಳಿಗೆ ಹೋಗಬೇಕಾಗುತ್ತಿತ್ತು.

ನಾನು ಜೆ.ಪಿಯವರ ಬಳಿ ಇದ್ದಾಗಲೇ ಎರಡು ಮಹತ್ವಪೂರ್ಣ ಘಟನೆಗಳು ನಡೆದವು. ಅವುಗಳಲ್ಲಿ ಒಂದು ಟಿಬೆಟನ್ನು ಚೀನಾ ಆಕ್ರಮಿಸಿಕೊಂಡದ್ದು. ಆಗ ದಲೈಲಾಮ ಭಾರತಕ್ಕೆ ಓಡಿ ಬಂದು ಹಿಮಾಲಯದ ಧರ್ಮಶಾಲಾದಲ್ಲಿ ಆಶ್ರಯ ಪಡೆದದ್ದು ಮುಖ್ಯ. ಆಗ ಜೆ.ಪಿಯವರು ಒಂದು ಕಿರು ಪುಸ್ತಕವನ್ನು ಬರೆದರು. ಆ ಪುಸ್ತಕದ ಹೆಸರು 'ಟ್ರ್ಯಾಜಿಡಿ ಆಫ್ ಟಿಬೆಟ್'. ಈ ಪುಸ್ತಕದ ಬಹು ಭಾಗವನ್ನು ಬರೆದುಕೊಳ್ಳುವ ಮತ್ತು ಟೈಪ್ ಮಾಡುವ ಅವಕಾಶ ನನಗೆ ಸಿಕ್ಕಿತ್ತು. ದೇಶದ ವಿವಿಧ ಭಾಗಗಳಲ್ಲಿ ಮುಖ್ಯವಾಗಿ ದಿಲ್ಲಿ, ಮುಂಬೈ, ಕಲ್ಕತ್ತಾ, ಮದ್ರಾಸ್(ಈಗಿನ ಚೆನ್ನೈ) ಮತ್ತು ಬೆಂಗಳೂರು ನಗರಗಳಲ್ಲಿ ಚೀನಾದ ಟಿಬೆಟ್ ಆಕ್ರಮಣ ವಿರುದ್ಧ ಸಭೆಗಳು ಏರ್ಪಟ್ಟವು. ಅಲ್ಲೆಲ್ಲ ಜೆ.ಪಿಯವರನ್ನು ಬರಮಾಡಿಕೊಳ್ಳಲಾಗಿತ್ತು. ಜೆ.ಪಿ.ಯವರ ಪುಸ್ತಕವೂ ತ್ವರಿತವಾಗಿ ಮಾರಾಟವಾಗುತ್ತಿತ್ತು. ಮುಂದೆ ಅವರು ದಲೈಲಾಮಾರವರನ್ನು ನೋಡಲು ಧರ್ಮಶಾಲಾಗೆ ಹೋದರು. ಆಗ ದಲೈಲಾಮಾಗೆ ಸುಮಾರು ೨೦ವರ್ಷ ವಯಸ್ಸು. ಜೆ.ಪಿ ಮತ್ತು ದಲೈಲಾಮಾ ಬಹಳ ಹೊತ್ತಿನವರೆಗೆ ಮಾತುಕತೆ ನಡೆಸಿದರು. ಆ ಇಬ್ಬರು ಐತಿಹಾಸಿಕ ವ್ಯಕ್ತಿಗಳು ಭೇಟಿಯಾದದ್ದು, ಪರಸ್ಪರ ಆಲಂಗಿಸಿ ಸ್ವಾಗತಿಸಿದ್ದು ಮತ್ತು ಎದುರು ಬದುರು ಕುಳಿತು ಮಾತನಾಡಿದ್ದನ್ನು ನೋಡಿದ್ದು ಕೂಡ ಒಂದು ಸ್ಮರಣೀಯ ಘಟನೆಯಾಗಿ ಮನದಲ್ಲಿ ನಿಂತಿದೆ.

ಎರಡನೆಯ ಮುಖ್ಯ ಘಟನೆಯೆಂದರೆ ಸಿ. ರಾಜಗೋಪಾಲಾಚಾರಿಯವರು ಸ್ವತಂತ್ರ ಪಕ್ಷವನ್ನು ಕಟ್ಟುವ ಮೊದಲು ಜೆ.ಪಿಯವರೊಂದಿಗೆ ಪರಾಮರ್ಶೆ ಮಾಡುವುದಕ್ಕಾಗಿ ಅವರನ್ನು ಮದ್ರಾಸಿಗೆ ಬರಮಾಡಿಕೊಂಡದ್ದು. ರಾಜಾಜಿಯವರಿದ್ದ ಮನೆಯಲ್ಲಿ ಜೆ.ಪಿ ಮತ್ತು ರಾಜಾಜಿಯವರು ಸ್ವತಂತ್ರ ಪಕ್ಷದ ರಚನೆಯ ಬಗ್ಗೆ ಮಾತನಾಡಿದರು. ಈ ಕಾರಣದಿಂದಾಗಿ ನನಗೆ ರಾಜಾಜಿಯವರನ್ನು ಅವರ ಮನೆಯಲ್ಲಿಯೇ ಜೆ.ಪಿಯವರೊಂದಿಗೆ ನೋಡುವ ಅವಕಾಶ ದೊರೆಯಿತು.


ಇನ್ನೊಂದು ಮುಖ್ಯ ಘಟನೆ ನನ್ನ ಜ್ಞಾಪಕಕ್ಕೆ ಬರುವುದು ಡಾ. ರಾಮ ಮನೋಹರ ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣರ ಮಾತುಕತೆ. ಈ ಮತುಕತೆ ನಡೆದದ್ದು ಹೈದ್ರಾಬಾದಿನ ಹತ್ತಿರ ಇರುವ ಒಂದು ಪ್ರಶಾಂತ ನಿಸರ್ಗಧಾಮದಲ್ಲಿ. ಪ್ರಖರ ಸಮಾಜವಾದಿ ಚಿಂತಕರಾಗಿದ್ದ ಜೆ.ಪಿ ಸರ್ವೋದಯ ಆಂದೋಲನಕ್ಕೆ ಬಂದದ್ದು ಮತ್ತು ಅದಕ್ಕಾಗಿ ಜೀವನದಾನ ಮಾಡಿದ್ದು ಜೆ.ಪಿಯವರಷ್ಟೇ ತೀವ್ರ ಸಮಾಜವಾದಿಯಾಗಿದ್ದ ಡಾ. ಲೋಹಿಯಾರವರಿಗೆ ಒಪ್ಪಿಗೆಯಾಗಿರಲಿಲ್ಲ. ಸಕ್ರಿಯ ರಾಜಕಾರಣದಲ್ಲಿದ್ದೇ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಬೇಕೆಂಬುದು ಡಾ. ಲೋಹಿಯಾರ ನಿಲುವಾಗಿತ್ತು. ಜೆ.ಪಿಯವರನ್ನು ಪುನಃ ಸಮಾಜವಾದಿ ರಾಜಕಾರಣಕ್ಕೆ ತರಬೇಕೆಂಬುದು ಲೋಹಿಯಾರ ಅಂತರಂಗದ ಆಸೆಯಾಗಿತ್ತು. ಅದಕ್ಕಾಗಿ ಸಮಾಜವಾದಿ ಸ್ನೇಹಿತರು ಲೋಹಿಯಾ ಮತ್ತು ಜೆ.ಪಿಯವರ ಮಾತುಕತೆಯನ್ನು ಏರ್ಪಡಿಸಿದ್ದರು. ಸುಮಾರು ಮೂರು ದಿನಗಳ ಕಾಲ ನಡೆದ ಈ ಮಾತುಕತೆ ಸಫಲವಾಗದೇ ಹೋಯಿತು. ಮುಂದಿನದೆಲ್ಲವೂ ಇತಿಹಾಸ. ಈ ಐತಿಹಾಸಿಕ ಘಟನೆಯನ್ನು ನೋಡಿದ, ಕೇಳಿದ ಮತ್ತು ಲೋಹಿಯಾರವರನ್ನು ನಿಕಟವಾಗಿ ಕಂಡು ಮಾತನಾಡಿದ ಅವಕಾಶವಿದಾಗಿತ್ತು. ಈ ಘಟನೆ ನನ್ನ ಮನಸ್ಸಿನಲ್ಲಿ ಅವಿಸ್ಮರಣೀಯವಾಗಿ ಉಳಿದಿದೆ.

ಜಯಪ್ರಕಾಶರೊಂದಿಗೆ ನಾನಿದ್ದ ಐದು ವರ್ಷಗಳ ಅವಧಿಯಲ್ಲಿ ಅವರು ತಮ್ಮ ಸುತ್ತಮುತ್ತಲಿದ್ದ ಯಾರ ಮೇಲಾದರೂ ಕೋಪಿಸಿಕೊಂಡದ್ದನ್ನು ಕಾಣಲಿಲ್ಲ. ಯಾವಾಗಲೂ ಹಸನ್ಮುಖದಿಂದಲೇ ಮಾತನಾಡುತ್ತಿದ್ದರು. ಎದುರಿಗಿರುವ ಮನುಷ್ಯ ಒಬ್ಬ ಹಳ್ಳಿಯವನೇ ಆಗಿದ್ದಿರಬಹುದು, ಸಾಮಾನ್ಯ ಕಾರ್ಯಕರ್ತನೇ ಆಗಿದ್ದಿರಬಹುದು, ಎಲ್ಲರೊಂದಿಗೆ ಸ್ನೇಹಪೂರ್ಣವಾಗಿ ಮಾತನಾಡುತ್ತಿದ್ದರು. ಪರರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವ ಗುಣ ಅವರದ್ದಾಗಿತ್ತು. ಹಾಗಿದ್ದುದರಿಂದಲೇ ಹಿಂದಿ ಭಾಷೆಯನ್ನು ಸ್ವಲ್ಪವೂ ಅರಿಯದಿದ್ದ ನಾನು ಹಿಂದಿ ಕಲಿತು ಅವರ ಕೆಲಸವನ್ನು ಮಾಡುವಷ್ಟರ ಮಟ್ಟಿಗೆ ಸಮರ್ಥನಾಗುವಂತಾಯಿತು. ಹಿಂದಿ ಶೀಘ್ರಲಿಪಿ ಕಲಿಯಲು ನನ್ನನ್ನು ಆರು ತಿಂಗಳ ಮಟ್ಟಿಗೆ ಕಾಶಿಗೂ ಕಳುಹಿಸಿದರು.

ದೇಶದ ನಾನಾಕಡೆ ಹತ್ತಾರು ಕಾರ್ಯಕ್ರಮಗಳನ್ನು ಮುಗಿಸಿ ಪಾಟ್ನಾಗೆ ಹಿಂದಿರುಗಿದಾಗ ಮತ್ತು ಜೆಪಿ ಪಾಟ್ನಾದಲ್ಲಿ ಇದ್ದಾಗಲೆಲ್ಲ ಮಹಿಳಾ ಚರಕಾ ಸಮಿತಿಯ ಕಟ್ಟಡದಲ್ಲೇ ವಾಸ್ತವ್ಯ ಮಾಡುತ್ತಿದ್ದರು. ಮಹಿಳಾ ಚರಕಾ ಸಮಿತಿಯನ್ನು ಅವರ ಪತ್ನಿ ಪ್ರಭಾವತಿ ಸ್ಥಾಪಿಸಿದ್ದರು. ಬಹಳ ದಿನಗಳ ನಂತರ ಅಲ್ಲಿಗೆ ಹೋದ ಕೂಡಲೇ ಅಲ್ಲಿಯ ಎಲ್ಲ ಜನರ ಆರೋಗ್ಯವನ್ನು ತಪ್ಪದೇ ವಿಚಾರಿಸುತ್ತಿದ್ದರು. ಸೋಕೋದೇವರ ಸರ್ವೋದಯ ಆಶ್ರಮಕ್ಕೆ ಹೋದಾಗಲೂ ಸಹ ಅವರು ತಪ್ಪದೇ ಆಶ್ರಮ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದರು. ಆಶ್ರಮ ವಾಸಿಗಳೆಲ್ಲ ವರ್ತುಲಾಕಾರದಲ್ಲಿ ಮೌನವಾಗಿ ಕುಳಿತಿರುತ್ತಿದ್ದರು. ಮುಸ್ಸಂಜೆ ಮುಗಿದು ಕತ್ತಲಾಗುವ ಸಮಯ ಆಗುತ್ತಿದ್ದುದರಿಂದ ವರ್ತುಲದ ಮಧ್ಯೆ ಒಂದು ಲಾಟೀನನ್ನು ಇಡಲಾಗಿರುತ್ತಿತ್ತು. ಪ್ರಾರ್ಥನೆ ನಂತರ ಜೆಪಿ ದೇಶದಲ್ಲಿಯ ಅಂದಿನ ಪ್ರಚಲಿತ ಸಮಸ್ಯೆಗಳ ಬಗ್ಗೆ ಹೇಳುತ್ತಿದ್ದರು ಮತ್ತು ಅವುಗಳ ಬಗೆಗಿನ ತಮ್ಮ ನಿಲುವನ್ನು ತಿಳಿಸುತ್ತಿದ್ದರು. ನಂತರ ಆಶ್ರಮವಾಸಿಗಳಿಂದ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದರು. ಪ್ರಾರ್ಥನೆ ಮುಗಿದಾದ ನಂತರ ಆಶ್ರಮವಾಸಿಗಳೆಲ್ಲರೂ ಹೊಸ ಚೈತನ್ಯದೊಂದಿಗೆ ತಮ್ಮ ತಮ್ಮ ನಿವಾಸಗಳತ್ತ ಹೆಜ್ಜೆ ಹಾಕುತ್ತಿದ್ದರು.

ಆಶ್ರಮದಲ್ಲಿ ಇದ್ದಾಗ ಜೆಪಿ ಬೆಳಿಗ್ಗೆ ಬೇಗ ಎದ್ದು ಆಶ್ರಮದ ಇಡೀ ಪರಿಸರದಲ್ಲಿ ಓಡಾಡಿಕೊಂಡು ಬರುತ್ತಿದ್ದರು. ವ್ಯವಸಾಯ ಮತ್ತು ತೋಟಗಾರಿಕೆ ವಿಷಯದಲ್ಲಿ ವಿಶೇಷ ಆಸಕ್ತಿ ತೋರಿಸುತ್ತಿದ್ದರು ಮತ್ತು ಸಲಹೆ ಕೊಡುತ್ತಿದ್ದರು. ಊಟದ ಸಮಯದಲ್ಲಿ ಆಶ್ರಮವಾಸಿಗಳ ಸಾಲಿನಲ್ಲಿಯೇ ಕುಳಿತು ಊಟ ಮಾಡುತ್ತಿದ್ದರು. ಜೆಪಿಯವರಿಗೆ ಡಯಾಬಿಟಿಸ್ ಇದ್ದುದರಿಂದ ಪ್ರಭಾವತಿ ಅವರಿಗೆ ತಕ್ಕುದಾದ ಅಡಿಗೆಮಾಡಿ ಬಡಿಸುತ್ತಿದ್ದರು. ಅವರ ಪಕ್ಕದಲ್ಲಿ ಕುಳಿತಿರುತ್ತಿದ್ದ ನನಗೂ ಆ ಊಟದ ಸವಿ ದೊರೆಯುತ್ತಿತ್ತು. ಆಶ್ರಮದಲ್ಲಿ ಉಳಿದುಕೊಳ್ಳಲು ಜೆಪಿಯವರಿಗಾಗಿ ಒಂದು ಪ್ರತ್ಯೇಕ ಮಣ್ಣಿನ ಮನೆಯನ್ನು ಕಟ್ಟಲಾಗಿತ್ತು. ಆ ಮನೆಯ ಅಂಗಳವನ್ನು ಗುಡಿಸುವ ಕೆಲಸವನ್ನು ನಾನು ಮಾಡುತ್ತಿದ್ದಾಗ ಜಯಪ್ರಕಾಶರು ಬಂದು ಯಾವ ರೀತಿ ಮರಳಿನಿಂದ ಕೂಡಿದ ನೆಲವನ್ನು ಗುಡಿಸಬೇಕೆಂಬುದನ್ನು ತೋರಿಸಿದರು. ಅದನ್ನು ತಾವು ಜೈಲಿನಲ್ಲಿದ್ದಾಗ ಮಾಡುತ್ತಿದ್ದುದನ್ನು ಹೇಳುತ್ತಿದ್ದರು.


ನನ್ನ ಮದುವೆಗೆ ಬರಲಾಗದಿರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತಾ ನನಗೆ ಶುಭ ಹಾರೈಸುವ ಪತ್ರ ಬರೆಯುವುದನ್ನು ಅವರು ಮರೆಯಲಿಲ್ಲ. ಐದು ವರ್ಷಗಳ ಅವಧಿಯಲ್ಲಿ ಜಯಪ್ರಕಾಶ್ ನಾರಾಯಣರು ನನಗೆ ಹಿರಿಯಣ್ಣನಾಗಿ ಮತ್ತು ಮಾರ್ಗದರ್ಶಕರಾಗಿ ಹಾಗೂ ಸೌಮ್ಯ ವ್ಯಕ್ತಿಯಾಗಿ ಕೈಹಿಡಿದು ನಡೆಸಿದರು. ಜೆ.ಪಿಯವರೊಂದಿಗೆ ಐದು ವರ್ಷಗಳ ಕಾಲ ಇದ್ದದ್ದು ನನಗೆ ಐದು ದಿನಗಳಿಗೆ ಸಮವಾಗಿತ್ತೆಂದೇ ಹೇಳಬೇಕು. ಜೆ.ಪಿಯವರೊಂದಿಗೆ ಸಂಪರ್ಕ ಬರದೇ ಹೋಗಿದ್ದರೆ ಸರ್ವೋದಯ ವಿಚಾರದ ನೆಲೆ ಸಿಗದೇ ಹೋಗಿದ್ದರೆ ನನ್ನ ಜೀವನವೆಲ್ಲಾ ಬರಡಾಗುತ್ತಿತ್ತು. ಜನ್ಮ ಪಡೆದು ನಂತರ ಮರಣ ಹೊಂದಿದ ಸ್ಥಿತಿಗೆ ಮಾತ್ರ ಸೀಮಿತವಾಗಿದ್ದಂತಹ ಬದುಕಾಗಿರುತ್ತಿತ್ತು. ಜೆಪಿಯವರು ಮೇಲುಕೋಟೆಯಲ್ಲಿಯ ನನ್ನ ಮನೆಗೂ ಬಂದದ್ದು, ಮೇಲುಕೋಟೆಯಲ್ಲಿ ಸಾರ್ವಜನಿಕ ಸಭೆ ನಡೆಸಿದ್ದು, ಜೆ.ಪಿಯವರೊಂದಿಗಿನ ನನ್ನ ಸಂಬಂಧದ ಚಿನ್ನದ ಮೆರುಗಿನ ಸಂಗತಿಯಾಗಿದೆ.



**(ಲೇಖಕ ಸುರೇಂದ್ರ ಕೌಲಗಿಯವರು ಸದ್ಯಕ್ಕೆ ಮೇಲುಕೋಟೆಯಲ್ಲಿ 'ಜನಪದ ಟ್ರಸ್ಟ್' ಅಡಿಯಲ್ಲಿ 'ಜನಪದ ವಿಚಾರ'ವೆಂಬ ಮಾಸಿಕದ ಸಂಪಾದನೆಯೊಂದಿಗೆ ಹಲವು ಗಾಂಧೀವಾದಿ ಕಾರ್ಯ–ಚಟುವಟಿಕೆಗಳನ್ನು ನಡೆಸುತ್ತಿರುವ ಹಿರಿಯ ಸರ್ವೋದಯ ಮುಖಂಡರು)**

# ಡಾ॥ ರಾಮಮನೋಹರ ಲೋಹಿಯಾ : ಭಾರತೀಯ ರಾಜಕಾರಣದ ಉಜ್ವಲ ತಾರೆ

ಮೂಲ: ಡಾ. ಮಸ್ತ್‌ರಾಂ ಕಪೂರ್
ಕನ್ನಡಕ್ಕೆ: ಎಂ ರಾಜು



**ಸ್ವಾತಂತ್ರ್ಯ ಹೋರಾಟಗಾರ, ಗಾಂಧೀಜಿಯ ವಿಶಿಷ್ಟ ಶಿಷ್ಯ, ಸಮಾಜವಾದಿ ಚಿಂತಕ, ಉಜ್ವಲ ಬುದ್ಧಿಜೀವಿ, ರಾಜಕೀಯ ಮುತ್ಸದ್ದಿ ಮತ್ತು ದೀನದಲಿತರ ಪ್ರೀತಿಯ ನಾಯಕ– ಹೀಗೆ ತಮ್ಮ ಬಹುಮುಖ ವ್ಯಕ್ತಿತ್ವದ ಮೂಲಕ ಭಾರತದ ಸಾರ್ವಜನಿಕ ಜೀವನದ ಮೇಲೆ ಗಾಢ ಪ್ರಭಾವವನ್ನು ಬೀರಿ, ಈಗಲೂ ತಮ್ಮ ವ್ಯಕ್ತಿತ್ವದ ಪ್ರಸ್ತುತತೆಯನ್ನು ಉಳಿಸಿಕೊಂಡಿರುವ ರಾಮಮನೋಹರ ಲೋಹಿಯಾರ ನೆನಪನ್ನು ಹಲವು ಸ್ವಾರಸ್ಯಕರ ಮತ್ತು ಅರ್ಥಪೂರ್ಣ ಕತೆ–ಉಪಕತೆ ಹಾಗೂ ದೃಷ್ಟಾಂತಗಳ ಮೂಲಕ ಇಲ್ಲಿ ದಾಖಲಿಸಿದ್ದಾರೆ, ಅವರ ಕಟ್ಟಾ ಅಭಿಮಾನಿಗಳಲ್ಲೊಬ್ಬರಾಗಿದ್ದ ಡಾ. ಮಸ್ತ್‌ರಾಂ ಕಪೂರ್.**

**ಸಮಾಜವಾದಿ ಪಕ್ಷ ಮತ್ತು ಆಂದೋಲನದೊಂದಿಗೆ ದೀರ್ಘ ಸಂಪರ್ಕದಲ್ಲಿದ್ದ ಮಸ್ತ್‌ರಾಂ ಕಪೂರ್ ಹಿಂದಿ ಲೇಖಕ ಹಾಗೂ ಪ್ರಾಧ್ಯಾಪಕರಾಗಿದ್ದವರು. ಹಲವು ಕಾದಂಬರಿಗಳು–ಕಥಾ ಸಂಕಲನಗಳ ಜೊತೆ ಸಾಮಾಜಿಕ–ರಾಜಕೀಯ ಮಹತ್ವವುಳ್ಳ ನೂರಾರು ಲೇಖನಗಳನ್ನೂ, ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಇತ್ತೀಚೆಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿರುವ ಲೋಹಿಯಾರ ಸಮಗ್ರ ಸಾಹಿತ್ಯವನ್ನು ಒಂಬತ್ತು ಸಂಪುಟಗಳಲ್ಲಿ ಸಂಪಾದಿಸಿ ನೀಡಿದ್ದಾರೆ.–ಸಂಪಾದಕ**



**ಡಾ॥** ಲೋಹಿಯಾ ಭಾರತದ ರಾಜಕಾರಣದ ದಿಗಂತದಲ್ಲಿ ಪ್ರಜ್ವಲಿಸಿ ಮರೆಯಾದ ಅನನ್ಯ ತಾರೆ. ಕೆಲವರ ದೃಷ್ಟಿಯಲ್ಲಿ ಅದು ಭಾರೀ ಅನಾಹುತದ ಮುನ್ಸೂಚನೆಯಾದ ಆಕಾಶ ಕಾಯ. ಆದರೆ ಮತ್ತೆ ಹಲವರಿಗೆ ಅದು ನಂಬಿಕೆಯ ಹೊಸ ರಾಜಕಾರಣದ ಆಶಾಕಿರಣ. ಸ್ಥಾಪಿತ ಹಿತಾಸಕ್ತಿಯ ಅಳುವ ವರ್ಗದ ನಿಂದನೆ ಮತ್ತು ತಿರಸ್ಕಾರದ ಶಿಲುಬೆಯನ್ನು ಹೆಗಲ ಮೇಲೆ ಹೊತ್ತ ಈ ಸಂತ ಅವಿರತವಾಗಿ ಕಲ್ಲುಗೋಡೆಗಳನ್ನು ಒಡೆದು ಸೃಜನಶೀಲ ಹಠದೊಂದಿಗೆ ಹೊಸದನ್ನು ನಿರ್ಮಿಸುತ್ತಾ ನಡೆದರು. ನಿಸ್ತೇಜಗೊಂಡಿದ್ದ ರಾಜಕೀಯ ಸಾಂಸ್ಕೃತಿಕ ಪರಿಸರದಲ್ಲಿ ನವಚೇತನವನ್ನು ಮೂಡಿಸಲು ಶ್ರಮಿಸಿದರು.

ಗಾಂಧೀಜಿಯವರಂತೆ ಲೋಹಿಯಾ ಕೂಡ ತಮ್ಮ ಆತ್ಮಚರಿತ್ರೆ ಬರೆದಿದ್ದರೆ ಅವರ ವ್ಯಕ್ತಿತ್ವವನ್ನು ರೂಪಿಸಿದ ಹಿನ್ನಲೆಯನ್ನು ಪ್ರಭಾವಗಳನ್ನು ನಾವು ತಿಳಿಯಬಹುದಾಗಿತ್ತು. ಆದರೆ ಆತ್ಮ ಚರಿತ್ರೆ ಬರೆಯುವ ಆಲೋಚನೆ ಲೋಹಿಯಾರಲ್ಲಿ ಸುಳಿಯಲೇ ಇಲ್ಲ. ಇತರರು ತಮ್ಮ ಬಗ್ಗೆ ಬರೆಯುವುದನ್ನೂ ಅವರು ಪ್ರೋತ್ಸಾಹಿಸಲಿಲ್ಲ. ಅವರ ಭಾಷಣಗಳಲ್ಲಿ ಬರಹಗಳಲ್ಲಿ ಅಲ್ಲಲ್ಲಿ ಸುಳಿದುಹೋದ ಆತ್ಮವೃತ್ತಾಂತಾತ್ಮಕ ಸುಳಿವುಗಳ ಆಧಾರದಿಂದ ನಾವು ಲೋಹಿಯಾ ಅವರ ವೈಯಕ್ತಿಕ ಬದುಕಿನ ಚಿತ್ರಣವನ್ನು ಕಟ್ಟಿಕೊಳ್ಳಬೇಕು. ತಮ್ಮ ವೈಯಕ್ತಿಕ ಬದುಕು ಮತ್ತು ಅನುಭವಗಳನ್ನು ಯಾರೊಂದಿಗೂ ಹಂಚಿಕೊಳ್ಳದೆ ಮನದ ಹಗೇವಿನಲ್ಲಿ ಅವನ್ನೆಲ್ಲಾ ಸಂಗ್ರಹಿಸಿಟ್ಟು ಲೋಹಿಯಾ ಹೊರಟು ಹೋದರು. ಹುಟ್ಟು ಎಂಬುದು ಆಕಸ್ಮಿಕ, ಅದರೊಂದಿಗೆ ತಳುಕು ಹಾಕಿಕೊಂಡಿರುವ ಪೂರ್ವಾಗ್ರಹಗಳ ನೆಲೆಯಿಂದ ಒಬ್ಬ ಮನುಷ್ಯನನ್ನು ಅರ್ಥೈಸಲು ಪ್ರಯತ್ನಿಸುವುದು ಜಾತಿ, ವರ್ಗ, ಲಿಂಗಾಧಾರಿತ ತಾರತಮ್ಯಗಳನ್ನು ಸಮರ್ಥಿಸಿದಂತೆಯೇ ಎಂಬುದು ಲೋಹಿಯಾ ಅವರ ನಂಬಿಕೆಯಾಗಿತ್ತು. ವ್ಯಕ್ತಿಯೊಬ್ಬನ ವರ್ತಮಾನದ ವ್ಯಕ್ತಿತ್ವ ಏನಿದೆಯೋ ಅದರ ಆಧಾರದಲ್ಲಷ್ಟೇ ಅವನನ್ನು ಅರ್ಥೈಸಬೇಕೆಂಬುದು ಲೋಹಿಯಾರ ವಿಚಾರವಾಗಿತ್ತು. ಈ ವಿಚಾರದಲ್ಲಿ ಅವರು ಸಾರ್ತ್ರೆಯಂತಹ ಅಸ್ತಿತ್ವವಾದಿಗಳಿಗೆ ಹತ್ತಿರದವರು ಎಂದು ಹೇಳಬಹುದು.

ಲೋಹಿಯಾ ಅವರ ವ್ಯಕ್ತಿತ್ವವನ್ನು ಸಹ ನಾವು ಅವರ ಚಟುವಟಿಕೆ, ಬದ್ಧತೆ ಮತ್ತು ಇಚ್ಛಾಶಕ್ತಿಗಳ ಮುಖಾಂತರವೇ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಲೋಹಿಯಾ ಹೇಳುತ್ತಿದ್ದರು, ಪ್ರಸಿದ್ಧ ವ್ಯಕ್ತಿಯೊಬ್ಬರ ಪ್ರತಿಮೆಯನ್ನೋ ಅಥವಾ ಸ್ಮಾರಕವನ್ನೋ ಸ್ಥಾಪಿಸಬೇಕಾದ ಸಂದರ್ಭದಲ್ಲಿ ಆ ವ್ಯಕ್ತಿ ಮರೆಯಾದ ಕನಿಷ್ಠ ೩೦೦ ವರ್ಷಗಳ ನಂತರವಷ್ಟೇ ಅದನ್ನು ಮಾಡಬೇಕು; ಹಾಗಾದಾಗ ಮಾತ್ರ ಆ ವ್ಯಕ್ತಿಯ ತತ್ಕಾಲೀನ ಜನಪ್ರಿಯತೆ ಮಸುಕಾಗಿ ಆತನ ನಿಜವಾದ ಕೊಡುಗೆಯ ಆಧಾರದ ಮೇಲೆ ಆತನನ್ನು ಅಳೆಯುವುದು ಸಾಧ್ಯ ಎಂದು. "ನನ್ನ ಮರಣಾನಂತರವಷ್ಟೇ ಜನ ನನ್ನನ್ನು ಅರ್ಥಮಾಡಿಕೊಳ್ಳುವುದು" ಎಂಬುದಾಗಿ ಅವರೇ ಹೇಳುತ್ತಿದ್ದರು. 'ರಾಮ, ಕೃಷ್ಣ ಮತ್ತು ಶಿವ' ಎಂಬ ತಮ್ಮ ಪುಸ್ತಕದಲ್ಲಿ ಅವರು ಭಾರತದ ಮೂವರು ಪುರಾಣ ಪುರುಷರಾದ ರಾಮ, ಕೃಷ್ಣ ಮತ್ತು ಶಿವನ ಜೊತೆ ಮೂರು ತತ್ವಗಳಾದ ಮಿತ, ಅಮಿತ ಮತ್ತು ಆಯಾಮಾತೀತತೆಯನ್ನು ಸಮೀಕರಿಸಿ ಸಾಕ್ಷಾತ್ಕರಿಸಿಕೊಂಡಿದ್ದರು. ಅವರ ಪ್ರಕಾರ ರಾಮ ಶಿಸ್ತಿಗೆ ಒಳಪಟ್ಟವನು, ನಿಯಮಗಳಿಂದ ಮಿತಿಗೊಳಿಸಲ್ಪಟ್ಟವನು. ಆದರೆ ಕೃಷ್ಣ ಎಲ್ಲಾ ಮಿತಿಗಳನ್ನು ದಾಟಿ ತನ್ನ ಅಮಿತ ಪ್ರೀತಿಯ ಮೂಲಕ ಇಡೀ ಮನುಷ್ಯ ಕುಲವನ್ನೇ ಆವರಿಸಿದನು, ಶಿವನಾದರೋ ಕಾಲ ದೇಶಗಳ ಆಯಾಮಗಳನ್ನು ಮೀರಿ ಭೂತ ಅಥವಾ ವರ್ತಮಾನದಲ್ಲಿ ಸಮರ್ಥನೆ ಹುಡುಕದೆ ಕಾಲಪ್ರವಾಹದ ಒಂದು ಕ್ಷಣವನ್ನು ಅನಂತತೆಯನ್ನಾಗಿ ಪರಿವರ್ತಿಸುತ್ತಾನೆ. ಈ ತ್ರಿಮೂರ್ತಿಗಳಲ್ಲಿ ಶಿವನ ಶೈಲಿಯೇ ಲೋಹಿಯಾರನ್ನು ಪ್ರಭಾವಿಸಿದ್ದು.

ಅವರು ಪ್ರಜಾಸೋಷಲಿಸ್ಟ್ ಪಕ್ಷದಿಂದ ಹೊರಬಂದು ಪ್ರತ್ಯೇಕ ಸಮಾಜವಾದಿ ಪಕ್ಷವನ್ನು ಸ್ಥಾಪಿಸಬಯಸಿದ ಸಂದರ್ಭದಲ್ಲಿ ಮಿತಿಗಳುಳ್ಳ ಶಿಸ್ತಿನ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದರು. ಪಕ್ಷಕ್ಕೆ ಕಟ್ಟುನಿಟ್ಟಿನ ನೀತಿ ನಿಯಮಗಳನ್ನು ಅಳವಡಿಸಲು ಪ್ರಯತ್ನಿಸಿದರು. ಇದರಿಂದ ಬೇಸರಗೊಂಡ ಲೋಹಿಯಾ ಅವರ ಕೆಲವು ಆಪ್ತರು ಪಕ್ಷವನ್ನೇ ತ್ಯಜಿಸುವ ನಿರ್ಧಾರ ಕೈಗೊಂಡಾಗ ಅನಿವಾರ್ಯವಾಗಿ ಅವರು ಬಿಗಿಯನ್ನು ಸಡಿಲಿಸಬೇಕಾಯಿತು. ಇದರ ಪರಿಣಾಮವಾಗಿ ಪರಿಸ್ಥಿತಿ ಮತ್ತೊಂದು ಅತಿಯನ್ನು ತಲುಪಿ ಅವರು ಕಾಂಗ್ರೆಸ್ ವಿರೋಧಿ ಗುಂಪಿನ ಜೊತೆ ಸಾರಾಸಗಟು ಹೊಂದಾಣಿಕೆಗೆ ಸಿಲುಕಬೇಕಾಯಿತು. ಮೂಲಭೂತವಾಗಿ ಸಮಾಜವಾದಿ ಸಿದ್ಧಾಂತಕ್ಕೆ ವಿರೋಧವಾಗಿರುವವರನ್ನೂ ಅವರು ಒಪ್ಪಿಕೊಳ್ಳಬೇಕಾಯಿತು. ವೈಯಕ್ತಿಕ ಬದುಕಿನಲ್ಲಿಯೂ ಸಹ ಅವರು ತಮ್ಮನ್ನು ನಿಯಮಗಳಿಗೆ, ಸಮಯಪಾಲನೆಗೆ ಒಳಪಡಿಸುವಂತಹ ಕರ್ತವ್ಯಗಳನ್ನು ಜವಾಬ್ದಾರಿಗಳನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕಾಯಿತು. ರಾಮನಿಗಿಂತ ಕೃಷ್ಣನ ಶೈಲಿ ಲೋಹಿಯಾ ಅವರನ್ನು ಹೆಚ್ಚು ಆಕರ್ಷಿಸಿತು. ಏಕೆಂದರೆ ಕೃಷ್ಣ ಎಲ್ಲ ಬಂಧನಗಳಿಂದ ಬಿಡಿಸಿಕೊಂಡು ಪ್ರೀತಿಯನ್ನು ಸರ್ವರಿಗೂ ಮುಕ್ತವಾಗಿ ಹಂಚಿದವನು. ಕೃಷ್ಣನ ಎರಡು ಅಥವಾ ಹೆಚ್ಚು ಸಂಬಂಧಗಳು, ಇಬ್ಬರು ಅಪ್ಪಂದಿರು, ಇಬ್ಬರು ಅಮ್ಮಂದಿರು, ಎರಡು ಹೆಸರುಗಳು, ಎರಡು ನಗರಗಳು, ಅಸಂಖ್ಯಾತ ಪ್ರೇಮಿಗಳು ಲೋಹಿಯಾರಿಗೆ ಇಷ್ಟವಾದಂಥವು. ಲೋಹಿಯಾ ಸಹ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ಹಲವು ತಾಯಂದಿರ ಪ್ರೀತಿಯನ್ನು ಗಳಿಸಿದವರು. ಅವರಿಗೆ ಒಂದೇ–ತಮ್ಮದೇ–ಊರೆಂಬುದು ಇರಲಿಲ್ಲ. ಅವರ ದೇಶಪ್ರೇಮ ಸಹ ಭೌಗೋಳಿಕ ಗಡಿರೇಖೆಗಳಿಂದ ನಿರ್ಬಂಧಿಸಲ್ಪಟ್ಟದ್ದಲ್ಲ. ಮನುಷ್ಯನಿಗೆ ಯಾವುದೇ ಗಡಿಯ ನಿರ್ಬಂಧವಿಲ್ಲದೆ ತನ್ನ ಆಯ್ಕೆಯ ದೇಶದಲ್ಲಿ ವಾಸಿಸುವ, ಸತ್ತಾಗ ಸಮಾಧಿಯಾಗುವ ಹಕ್ಕು ಇರಬೇಕೆಂದು ಪ್ರತಿಪಾದಿಸಿದವರು ಲೋಹಿಯಾ. ಭಾರತಮಾತೆಯ ಬಗೆಗೆ ಅವರ ಪ್ರೀತಿ ಎಂಬುದು ಇಡೀ ಭೂಮಿಯ ಮೇಲಿನ ಪ್ರೀತಿ ಇಡೀ ಮನುಕುಲದ ಮೇಲಿನ ಪ್ರೀತಿಯೂ ಆಗಿತ್ತು.

ಆದರೆ ಅವರ ವ್ಯಕ್ತಿತ್ವ ಎರಕಗೊಂಡದ್ದು ಇಡೀ ಮನುಕುಲದ ರಕ್ಷಣೆಗಾಗಿ ವಿಷವನ್ನುಂಡ ಶಿವನ ಮಾದರಿಯಲ್ಲಿ. ಪರಿಣಾಮದ ಬಗ್ಗೆ ಚಿಂತಿಸದೆ ಭಸ್ಮಾಸುರನನ್ನು ಸೃಷ್ಟಿಸಿದ, ಹೆಂಡತಿಯ ಹೆಣವನ್ನು ಹೆಗಲಲ್ಲಿ ಹೊತ್ತು ಅಲೆದ, ಮೂರನೆಯ ಕಣ್ಣಿಂದ ಕೇಡುಕನ್ನು ಸುಟ್ಟ, ತಾಂಡವ ನೃತ್ಯದಿಂದ ಭೂಮಿಯನ್ನೇ ನಡುಗಿಸಿದ, ಶೋಷಿತರ, ನಿರ್ಲಕ್ಷಿತರ ಜೊತೆ ತನ್ನನ್ನು ಸಮೀಕರಿಸಿಕೊಂಡ ಶಿವನ ಪರಿ ಲೋಹಿಯಾರಿಗೆ ಆಪ್ತವಾದುದಾಗಿತ್ತು. ಶಿವನಂತೆ ಲೋಹಿಯಾರ ಬದುಕು ಕೂಡ ಒಡೆಯುವ ಮತ್ತು ಕಟ್ಟುವ, ಪ್ರೀತಿ ಮತ್ತು ಸಿಟ್ಟಿನ, ಭೌತವಾದ ಮತ್ತು ಆಧ್ಯಾತ್ಮವಾದ, ಮೂರ್ತತೆ ಮತ್ತು ಅಮೂರ್ತತೆಯ ತತ್ಕಾಲೀನತೆ ಮತ್ತು ಅನಂತತೆಯಂತಹ ವಿಚಿತ್ರ ವೈರುಧ್ಯಗಳ ಸಂಗಮವಾಗಿತ್ತು.

ಪರಸ್ಪರ ವಿರುದ್ಧವಾದ ಎರಡು ಪ್ರಧಾನ ಧಾರೆಗಳ ನಡುವಿನ ಸಂಘರ್ಷವೇ ಭಾರತೀಯ ಜೀವನದ ಪ್ರಧಾನ ಲಕ್ಷಣ. ಇವನ್ನು ಶಿವ ಮತ್ತು ವಿಷ್ಣು ಸಂಸ್ಕೃತಿಗಳೆಂದು ಕರೆಯಬಹುದು. ವಿಷ್ಣು ಸಂಸ್ಕೃತಿಗೆ ಸೇರಿದವರು ಋಷಿ ಮತ್ತು ಹೆಚ್ಚುತ್ತಿರುವ ಸಂಪತ್ತಿನ ಆಳುವ ವರ್ಗದ ಶ್ರೀಮಂತರು. ಲಕ್ಷ್ಮಿಯ ಆರಾಧನೆ, ಧನದಾಹ, ಕ್ಷೀರಸಾಗರ ಅಥವಾ ವೈಕುಂಠದಂತಹ ವಿಶೇಷ ವ್ಯವಸ್ಥೆಗಳಿಂದ ಸುಖಪಡುವುದು ಇವರ ಪ್ರಧಾನ ಲಕ್ಷಣ. ತಾನು ಹುಟ್ಟಿದ ಕೆಸರಿನಿಂದ ದೂರಿವಿದ್ದು, ತುಸುವೂ ಕೆಸರನ್ನು ಮುಟ್ಟದಿರುವ ಕಮಲ ಈ ಸಂಸ್ಕೃತಿಯ ಚಿಹ್ನೆ. ಒಂದು ಕೈಯಲ್ಲಿ ತಮ್ಮ ಪ್ರಚಾರ ಸಾಧನವಾದ ಶಂಖವನ್ನು ಮತ್ತೊಂದು ಕೈಯಲ್ಲಿ ಕೊಲ್ಲುವ ಅಸ್ತ್ರವಾದ ಗಧೆಯನ್ನು ಇವರು ಧರಿಸಿರುತ್ತಾರೆ. ಇದಕ್ಕೆ ವಿರುದ್ಧವಾದದ್ದು ಶಿವನ ಮಾದರಿ ಸುಖ ಸಂಪತ್ತಿನಿಂದ ದೂರವಾದ ಬದುಕು. ಮೇಲ್ವರ್ಗದವರಿಗೆ ನಿಷಿದ್ಧವಾದ ಸ್ಮಶಾನ ಶಿವನ ವಾಸಸ್ಥಾನ. ಶಿವಸಂಸ್ಕೃತಿಯೇ ಲೋಹಿಯಾರಿಗೆ ಪ್ರಿಯವಾದದ್ದು. ಅವರ ಬದುಕೂ ಶಿವನ ಶೈಲಿಗೆ ಹತ್ತಿರವಾದದ್ದು.

ಎರಡು ವಿಭಿನ್ನ, ವಿರುದ್ಧ, ನೆಲೆಗಳ ಜೊತೆ ನಿರಾಯಾಸವಾಗಿ ಅನುಸಂಧಾನ ನಡೆಸಬಲ್ಲ ಲೋಹಿಯಾ ಒಬ್ಬ ಅನುಪಮ ಇತಿಹಾಸ ನಿರ್ಮಾತೃ. ಬಡವ– ಶ್ರೀಮಂತ, ಮುಂದಾಳು– ಕಾರ್ಯಕರ್ತ, ಬ್ರಾಹ್ಮಣ– ಶೂದ್ರ, ಸ್ತ್ರೀ–ಪುರುಷ, ಕರಿಯ–ಬಿಳಿಯ ಹೀಗೆ ಎರಡು ವಿಭಿನ್ನ ಸ್ತರ, ನೆಲೆ, ಸೆಳೆತಗಳ ನಡುವೆ ಅವರು ನಿರಾಯಾಸವಾಗಿ ವ್ಯವಹರಿಸಬಲ್ಲವರಾಗಿದ್ದರು. ದೀನ–ದಲಿತ ದುರ್ಬಲರ ಬಗೆಗೆ ಅವರ ಪ್ರೀತಿ ಅಪಾರವಾದದ್ದು. ಕೆಳಗಿನವರನ್ನು ಅವರು ಎಂದೂ ಅಗೌರವದಿಂದ ಕಂಡವರಲ್ಲ. ಆದರೆ ಮೇಲ್ವರ್ಗದವರಿಗೆ, ಅಧಿಕಾರಸ್ಥರಿಗೆ ಚುರುಕು ಮುಟ್ಟಿಸುವಲ್ಲಿ ಅವರು ಹಿಂಜರಿದವರಲ್ಲ.

ರಿಕ್ಷಾವಾಲಾಗಳು ಮಾವುತರು, ಟ್ಯಾಕ್ಸಿ ಡ್ರೈವರ್‌ಗಳಂತಹ ಕೆಳಸ್ತರದ ಶ್ರಮಿಕರ ಜೊತೆ ಸ್ನೇಹ ಬೆಳೆಸುವ ಅವಕಾಶವನ್ನು ಲೋಹಿಯಾ ಅವರು ಎಂದೂ ಕಳೆದುಕೊಳ್ಳುತ್ತಿರಲಿಲ್ಲ. ಮಹಿಳೆಯರ ಬಗ್ಗೆ ಲೋಹಿಯಾರಷ್ಟು ಅಪಾರವಾದ ಗೌರವ ಹೊಂದಿದ್ದ ಮತ್ತೊಬ್ಬ ರಾಜಕಾರಣಿಯನ್ನು ಭಾರತದಲ್ಲಿ ನಾವು ಕಾಣಲಾರೆವು. ಅವರ ದೃಷ್ಟಿಯಲ್ಲಿ ಎಲ್ಲ ಮಹಿಳೆಯರೂ ಸುಂದರಿಯರೇ! ಮನೆಯವರಿಗೆಲ್ಲ ಬಡಿಸಿ ಮಿಕ್ಕದ್ದನ್ನು ಮಹಿಳೆ ಉಣ್ಣಬೇಕೆಂಬ ಭಾರತದ ಸಂಪ್ರದಾಯವನ್ನು ಅವರು ದ್ವೇಷಿಸುತ್ತಿದ್ದರು. ತಾವು ಅತಿಥಿಯಾಗಿ ಉಳಿದ ಬಡವರ ಮನೆಯಲ್ಲಿ ಸ್ತ್ರೀಯರೂ ತಮ್ಮೊಂದಿಗೇ ಉಣ್ಣಲು ಕುಳಿತುಕೊಳ್ಳುಂತೆ ಮಾಡಿ, ಇನ್ನು ಎಷ್ಟು ಅಡುಗೆ ಮಿಕ್ಕಿದೆ, ಎಲ್ಲರಿಗೂ ಅದು ಸಾಲುತ್ತದೆಯೇ ಎಂಬುದನ್ನು ಪರೀಕ್ಷಿಸುತ್ತಿದ್ದರು.

ಮಹಿಳೆಯರನ್ನು ಬುರ್ಖಾದೊಂದಿಗೆ ಬಂಧಿಸುವುದನ್ನು ಲೋಹಿಯಾ ಇಷ್ಟಪಡುತ್ತಿರಲಿಲ್ಲ. ಮಹಿಳೆಯರು ಶಿಷ್ಟಾಚಾರದ ಹೆಸರಿನಲ್ಲಿ ಪುರುಷರಿಂದ ದೂರವೇ ಇರುವುದೂ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಮಕ್ಕಳೊಡನೆ ಆಡುವುದನ್ನು ಬಹಳವಾಗಿ ಇಷ್ಟಪಡುತ್ತಿದ್ದ ಲೋಹಿಯಾ, ಮಕ್ಕಳಿಂದಲೂ ಕಲಿಯುವುದು ಇರುತ್ತದೆ ಎಂದು ನಂಬುತ್ತಿದ್ದರು. ಒಮ್ಮೆ ಚಂಪಾ ಲಿಮಯೆ ಅವರ ಮಗ ಅನಿರುದ್ಧನ ಜೊತೆ ಸೇರಿ ಅವರು ಗಾಳಿಪಟ ಹಾರಿಸುತ್ತಿದ್ದಾಗ ಅವನು ಹೇಳಿದನಂತೆ, ಮಂತ್ರಿಗಳ ಹಾಗೆ ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳ ಸ್ಪೀಕರ್‌ಗಳೂ ಸಹ ರಾಗ–ದ್ವೇಷಗಳಿಲ್ಲದೆ ನಿಷ್ಪಕ್ಷಪಾತಿಯಾಗಿ ವರ್ತಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಬೇಕಲ್ಲವೇ? ಎಂದು. ಈ ಬಾಲಕನಿಂದ ಪ್ರೇರಣೆ ಪಡೆದು ಲೋಹಿಯಾ ಅವರು ಈ ವಿಚಾರವನ್ನು ಪಾರ್ಲಿಮೆಂಟ್‌ನಲ್ಲಿ ಪ್ರಸ್ತಾಪಿಸಿದ್ದರು.




ರಾಜಕೀಯ ಭಿನ್ನಾಭಿಪ್ರಾಯವನ್ನು ಲೋಹಿಯಾ ಅವರು ವೈಯಕ್ತಿಕ ಸ್ನೇಹದೊಂದಿಗೆ ಬೆರೆಸುತ್ತಿರಲಿಲ್ಲ. ಒಮ್ಮೆ ಅವರ ಕಮ್ಯೂನಿಸ್ಟ್ ಗೆಳೆಯ ಎ.ಕೆ. ಗೋಪಾಲನ್ ಜೈಲಿನಲ್ಲಿದ್ದಾಗ ಅವರನ್ನು ಭೇಟಿಯಾಗಲು ಹೋದ ಲೋಹಿಯಾರನ್ನು ಪಿ.ಎನ್. ಲೇಖಿ ಮತ್ತು ರೋಮಾ ಮಿತ್ರಾ ಅವರುಗಳು ಕೇಳಿದರಂತೆ, 'ನೀವು ಎಂದಾದರೂ ಜೈಲಿನಲ್ಲಿರುವಂತಾಗಿ, ಆ ಸಂದರ್ಭದಲ್ಲಿ ಕಮ್ಯೂನಿಸ್ಟರು ಅಧಿಕಾರದಲ್ಲಿದ್ದರೆ ಇದೇ ಗೋಪಾಲನ್ ನಿಮ್ಮನ್ನು ಭೇಟಿಯಾಗಲು ಅವರ ಪಕ್ಷದವರು ಅನುಮತಿಸಲಾರರಲ್ಲವೇ?' ಎಂದು. ಅದಕ್ಕೆ, 'ನಾನಿಂದು ಹೋಗುತ್ತಿರುವುದು ನನ್ನ ಮಿತ್ರ ಗೋಪಾಲರನ್ನು ಭೇಟಿಯಾಗಲು. ನೀವು ಹೇಳಿದಂತಹ ಸಂದರ್ಭದಲ್ಲಿ ಅವರು ಬರದಿದ್ದರೆ ನನಗೆ ಬೇಸರವಿಲ್ಲ.' ಎಂಬುದು ಲೋಹಿಯಾ ನೀಡಿದ ಉತ್ತರವಾಗಿತ್ತು.

ಬಡವರು ಅನ್ಯಾಯಕ್ಕೆ ಒಳಗಾದಾಗ ಲೋಹಿಯಾ ಅವರಿಗೆ ಅಪಾರವಾದ ಸಿಟ್ಟು ಬರುತ್ತಿತ್ತು. ಅನ್ಯಾಯವನ್ನು ಸರಿಪಡಿಸಲು ಅವರು ಹೋರಾಡುತ್ತಿದ್ದರು. ಒಮ್ಮೆ ನೆಹರೂ ಅವರು ನಾಗಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬಾಬುರಾವ್ ಕೋಚತಿ ಎಂಬ ಬಡವನೊಬ್ಬ ನೆಹರೂ ಅವರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದನೆಂಬ ಆರೋಪ ಹೊರಿಸಿ ಅವನನ್ನು ಮೂರು ವರ್ಷ ಜೈಲು ಶಿಕ್ಷೆಗೆ ಒಳಪಡಿಸಲಾಗುತ್ತದೆ. ವೈ.ಬಿ.ಚೌಹಾಣ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಕಾಲವದು. ಲೋಹಿಯಾ ಕೋಚತಿಯನ್ನು ಜೈಲಿನಲ್ಲಿ ಭೇಟಿಯಾಗುತ್ತಾರೆ. ಅವನು ಅಪರಾಧಿಯಲ್ಲ ಎಂಬುದನ್ನು ಮನಗಂಡು ನೆಹರೂ, ವಿನೋಬಾರಂಥ ನಾಯಕರಿಗೆ ಪತ್ರ ಬರೆದು, ಪ್ರಕರಣವನ್ನು ಎಡೆಬಿಡದೆ ಗಮನಿಸುತ್ತಾ ಒಂದು ವರ್ಷದಲ್ಲೇ ಕೋಚತಿಯ ಬಿಡುಗಡೆ ಆಗುವಂತೆ ನೋಡಿಕೊಳ್ಳುತ್ತಾರೆ. ಬಡವರ ಬಗ್ಗೆ ಈ ಮಟ್ಟದ ಕಾಳಜಿಯಿದ್ದ ಮತ್ತೊಬ್ಬ ಭಾರತೀಯ ರಾಜಕಾರಣಿ ಇಲ್ಲವೇನೋ.

ಲೋಹಿಯಾ ಬಡವರ ಪರವಾಗಿ ನಿಂತು, ಸರ್ಕಾರವನ್ನು ಅಧಿಕಾರಿಗಳನ್ನು, ಸಮಾಜದ ಪ್ರತಿಷ್ಠಿತರನ್ನು, ಶ್ರೀಮಂತರನ್ನು ಎದುರಿಸಿದ ಹಲವಾರು ಪ್ರಸಂಗಗಳನ್ನು ಉದಾಹರಿಸಬಹುದು. ತಾರಕೇಶ್ವರಿಯರು ಲೊಹಿಯಾ ಅವರ ಬಗೆಗಿನ ನೆನಪುಗಳನ್ನು ದಾಖಲಿಸುತ್ತ ಒಂದು ಪ್ರಸಂಗವನ್ನು ಪ್ರಸ್ತಾಪಿಸುತ್ತಾರೆ. 'ನಾವೊಮ್ಮೆ ಕಾಫಿಹೌಸಿಗೆ ಹೋಗಿದ್ದೆವು. ಕಾಫಿಯ ಜೊತೆ ತಿನ್ನುವುದಕ್ಕೆ ಏನಾದರೂ ತರುವಂತೆ ಲೋಹಿಯಾ ಹೇಳಿದರು. ಲೋಹಿಯಾ ಅವರ ಟೇಬಲ್ ಸುತ್ತ ನೆರೆದವರನ್ನು ಕಂಡು ಯಾರೋ 'ಲೋಹಿಯಾ ಅವರು ಇಲ್ಲದಿದ್ದಾಗ ಕಾಫಿಹೌಸಿಗೆ ಕಳೆಯೇ ಇರುವುದಿಲ್ಲ ಎನ್ನುತ್ತಿದ್ದರು'. ವೈಟರ್ ೪೩ ರೂಪಾಯಿ ಬಿಲ್ ತಂದಿಟ್ಟಾಗ ಲೋಹಿಯಾ ತಮ್ಮ ಜೇಬಿನಲ್ಲಿ ಇದ್ದದ್ದನ್ನೆಲ್ಲ ಟೇಬಲ್ ಮೇಲೆ ಸುರಿದರು. ಅಲ್ಲಿದ್ದದ್ದು ಬರಿ ೭ ರೂಪಾಯಿ ಮಾತ್ರ. ಟೇಬಲ್ ಸುತ್ತ ನೆರೆದಿದ್ದವರಿಂದ ಮಿಕ್ಕ ಹಣವನ್ನು ಸಂಗ್ರಹಿಸಿದಾಗ ವೈಟರ್ ಸಹ ತನ್ನ ಪಾಲಿನ ವಂತಿಗೆ ಕೊಡಲು ಮುಂದಾದ. ಲೋಹಿಯಾ ಅವರು 'ಬೇಡಪ್ಪ, ನೀನು ಕೊಡಬಾರದು' ಎಂದು ಅವನನ್ನು ತಡೆದರು'. ಹೋಟೆಲ್‌ನ ಸರ್ವರ್ ಕೂಡ ಲೋಹಿಯಾ ಅವರ ಪಾಲಿನ ಮಿತ್ರನೇ ಆಗಿರುತ್ತಿದ್ದ.

ಇಂಥದೇ ಮತ್ತೊಂದು ಸಂದರ್ಭ, ಲೋಹಿಯಾ ಅವರು ತಮ್ಮ ಅನುಯಾಯಿಗಳೊಂದಿಗೆ ರಸ್ತೆ ಬದಿಯ ಹೋಟೆಲೊಂದಕ್ಕೆ ಊಟಕ್ಕಾಗಿ ಹೋಗುತ್ತಾರೆ. ಅದುವರೆಗೂ ತಮ್ಮ ಜೊತೆಯಿದ್ದ ಮಾವುತನೊಬ್ಬ ಊಟದ ಸಮಯದಲ್ಲಿ ಅಲ್ಲಿ ಇರದಿದ್ದನ್ನು ಗಮನಿಸಿ ಆ ಮಾವುತನನ್ನು ಕರೆತಂದು ತಮ್ಮ ಜೊತೆ ಕೂರಿಸುವವರೆಗೆ ತಾವು ಊಟ ಮಾಡುವುದಿಲ್ಲವೆಂದು ಪ್ರತಿಭಟಿಸಿ



**ಜೆ.ಎಚ್. ಪಟೇಲ್, ರಬಿ ರಾಯ್ ಕಿಷನ್ ಪಟ್ನಾಯಕ್ ಮತ್ತು ರಾಜ್‌ನಾರಯಣ್‌ರೊಂದಿಗೆ**

ಆತನನ್ನು ತಮ್ಮೊಡನೆ ಕೂರಿಸಿಕೊಳ್ಳುತ್ತಾರೆ.

ಟ್ಯಾಕ್ಸಿ ಡ್ರೈವರನೊಬ್ಬನ ಪರವಾಗಿ ಪಾರ್ಲಿಮೆಂಟಿನಲ್ಲಿ ಲೋಹಿಯಾ ಅವರು ದನಿಯೆತ್ತಿದ ಮತ್ತೊಂದು ಸಂದರ್ಭ ಹೀಗಿದೆ. ಸಿಖ್ ಡ್ರೈವರನೊಬ್ಬ ನಡೆಸುತ್ತಿದ್ದ ಟ್ಯಾಕ್ಸಿಯೊಂದರಲ್ಲಿ ಲೋಹಿಯಾ ಅವರು ಒಮ್ಮೆ ಪ್ರಯಾಣಿಸುತಿದ್ದರು. ಪ್ರಾಸಂಗಿಕವಾಗಿ ಇಂದಿರಾ ಗಾಂಧಿಯವರು ಅದೇ ರಸ್ತೆಯಲ್ಲಿ ಹಾದುಹೋಗುವವರಿದ್ದು, ಲೋಹಿಯಾ ಅವರ ಟ್ಯಾಕ್ಸಿ ತಡೆದು, ಇಂದಿರಾ ಅವರ ಕ್ಯಾರವಾನ್ ಚಲಿಸಲು ಅನುವು ಮಾಡಿಕೊಡುವಂತೆ ಭದ್ರತಾ ಸಿಬ್ಬಂದಿ ಒತ್ತಾಯಿಸಿದಾಗ ಸಿಟ್ಟಿಗೆದ್ದ ಲೋಹಿಯಾ ಅವರು ಟ್ಯಾಕ್ಸಿಯನ್ನು ನಿಲ್ಲಿಸಬಾರದೆಂದು ಡ್ರೈವರ್‌ನಿಗೆ ಹೇಳಿ ಧೈರ್ಯ ತುಂಬುತ್ತಾರೆ. ಅವರ ಮಾತಿನಂತೆ ತ್ಯಾಕ್ಸಿಯನ್ನು ನಿಲ್ಲಿಸದೆ ಮುಂದೆ ಹೋದ ಡ್ರೈವರ್‌ನನ್ನು ಬಂಧಿಸಿ ಸೆರೆಮನೆಗೆ ಕಳಿಸಿದಾಗ ಲೋಹಿಯಾ ಪಾರ್ಲಿಮೆಂಟಿನಲ್ಲಿ ಇದನ್ನು ಪ್ರಸ್ತಾಪಿಸಿ, ಅತಿಮುಖ್ಯ ವ್ಯಕ್ತಿಗಳ ಈ ಸಂಚಾರ ನೀತಿ ಸಂಹಿತೆಯನ್ನು ಖಂಡಿಸುತ್ತಾ ಆತನ ಬಿಡುಗಡೆ ಮಾಡಿಸುತ್ತಾರೆ. ಆಗ ತಮಗೆ ಧನ್ಯವಾದಗಳನ್ನು ಹೇಳಲು ಬಂದ ಟ್ಯಾಕ್ಸಿಯವನಿಗೆ, 'ಅಸಂಬದ್ಧವಾಗಿ ಮಾತನಾಡಬೇಡ, ನಾನು ನನ್ನ ಕರ್ತವ್ಯವನ್ನಷ್ಟೇ ನಿರ್ವಹಿಸಿದ್ದೇನೆ' ಎಂದು ಹೇಳಿ ಕಳುಹಿಸುತ್ತಾರೆ.

ಯಾರಿಗೂ ನೋವುಂಟುಮಾಡದ ಲೋಹಿಯಾ ಅವರ ಪ್ರಾಂಜಲ ಮನಸ್ಸಿನ ಹಲವಾರು ಹಾಸ್ಯ ಪ್ರಸಂಗಗಳನ್ನು ಉದಾಹರಿಸಬಹುದು. ವಿಜಯಲಕ್ಷ್ಮಿ ಪಂಡಿತ್‌ರ ಬಗೆಗಿನ ಅಂಥದೊಂದು ಪ್ರಸಂಗ ಹೀಗಿದೆ. ಒಮ್ಮೆ ವಿಜಯಲಕ್ಷ್ಮಿ ಪಂಡಿತ್‌ರವರು ಕಾಂಗ್ರೆಸ್ ಸರ್ಕಾರವನ್ನು ಟೀಕಿಸಿ ಪಾರ್ಲಿಮೆಂಟಿನಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ. ಭಾಷಣವನ್ನು ಮೆಚ್ಚಿ ಲೋಹಿಯಾ ಅವರು ವಿಜಯಲಕ್ಷ್ಮಿಯವರನ್ನು ಕುರಿತು, 'ನೀವು ಟ್ರೆಷರಿ ಬೆಂಚಿನಲ್ಲೇಕೆ ಕೂರುತ್ತೀರಿ, ಇಲ್ಲಿ ವಿರೋಧ ಪಕ್ಷದವರ ಜೊತೆ ಕೂರುವುದೇ ಉತ್ತಮ' ಎನ್ನುತ್ತಾರೆ. ಆಗ ವಿಜಯಲಕ್ಷ್ಮಿ ಅವರು 'ಬೇಡಪ್ಪ, ಅಲ್ಲಿ ಜಂಗ್ಲಿಗಳ ಜೊತೆ ಕೂರುತ್ತಾರೆ' ಎಂದು ತಮಾಷೆಯಾಗಿ ಕಟಕಿಯಾಡುತ್ತಾರೆ. ಆಗ ಲೋಹಿಯಾ ಅವರು ನೀಡುವ ಉತ್ತರವು ಸ್ವಾರಸ್ಯಕರ. 'ಮೇಡಮ್, ಜಂಗ್ಲಿಗಳ ಬಗ್ಗೆ ಹೆದರಿಕೆ ಬೇಡ. ಸೀತಾದೇವಿ ಸಹ ಜಂಗ್ಲಿಗಳ ಜೊತೆ ವನವಾಸದಲ್ಲಿ ಕಾಲ ಕಳೆದಿದ್ದರು' ಎಂದು ಉತ್ತರಿಸುತ್ತಾರೆ.

ಲೋಹಿಯಾರ ಗೆಳೆಯನಾಗಿದ್ದ ಓರ್ವ ಪೈಲ್ವಾನ್ ಅವರಿಗೊಮ್ಮೆ ಹೀಗೆ ಹೇಳಿದ: 'ಡಾಕ್ಟರ್ ಸಾಬ್, ಒಂದು ವಿಷಯದ ಹೊರತಾಗಿ ನಿಮ್ಮ ಎಲ್ಲ ಗುಣಗಳನ್ನೂ ನಾನು ಮೆಚ್ಚುತ್ತೇನೆ. ನಿಮಗೆ ದೇವರಲ್ಲಿ ನಂಬಿಕೆಯಿಲ್ಲವೇಕೆ? ಈಗ ಪರವಾ ಇಲ್ಲ. ವಯಸ್ಸಾದಾಗ ನಂಬಿಕೆ ಬರುತ್ತದೆ ಬಿಡಿ.' ಅದಕ್ಕೆ ಲೋಹಿಯಾ 'ಮುದಿತನದಲ್ಲಷ್ಟೇ ಕಾಡುವ ನಿನ್ನ ದೇವರು ನನಗೆ ಬೇಡ ಬಿಡು.' ಎಂದು ಉತ್ತರಿಸಿದರು!

ನ್ಯಾಯಾಲಯದಲ್ಲಿ ಒಂದು ಮೊಕದ್ದಮೆಯ ಸ್ವಾರಸ್ಯಕರ ಪ್ರಸಂಗ ಹೀಗಿದೆ. ಲಾರ್ಡ್ ಕರ್ಜನ್‌ನ ಪ್ರತಿಮೆಯನ್ನು ಬೀಳಿಸಿದ್ದಕ್ಕಾಗಿ ಸ್ನಾಹ್ ಗೋರಖ್‌ಪುರಿಯವರನ್ನು ಜೈಲಿನಲ್ಲಿರಿಸಲಾಗುತ್ತದೆ. ನ್ಯಾಯಾಲಯದಲ್ಲಿ ಯಾವ ಕಾರಣಕ್ಕೂ ಸುಳ್ಳು ಹೇಳಿಕೆ ನೀಡಬಾರದೆಂಬ ಲೋಹಿಯಾ ಅವರ ಸೂಚನೆಯ ಮೇರೆಗೆ ಲೇಖಿಯವರು ಪ್ರತಿಮೆಯನ್ನು ಮುರಿದದ್ದು ನಿಜ ಎಂಬ ಹೇಳಿಕೆಯನ್ನೇ ನ್ಯಾಯಾಲಯಕ್ಕೆ ಸಲ್ಲಿಸುತ್ತಾರೆ. ಆದರೆ ಪ್ರತಿಮೆಯು ಯಾರಿಗೂ ಸೇರಿದ್ದಲ್ಲ ಎಂದು ವಾದಿಸುತ್ತಾರೆ. ಪ್ರತಿಮೆಯ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ಗೆಜೆಟಿಯರ್‌ನಲ್ಲಾಗಲೀ ಅಥವಾ ನಗರ ಪಾಲಿಕೆಯ ಕಡತಗಳಲ್ಲಾಗಲೀ ಯಾವುದೇ ಉಲ್ಲೇಖವಿಲ್ಲದ್ದರಿಂದ ಅದು ಯಾರಿಗೂ ಸೇರಿದ್ದಲ್ಲ. ರಸ್ತೆ ಪಕ್ಕದಲ್ಲಿ ಬಿದ್ದಿರುವ ಒಂದು ಕಲ್ಲಿಗೆ ಸಮಾನವಾದ ಅದನ್ನು ಒದ್ದರೆ ಅಥವಾ ಅದನ್ನು ಮುರಿದರೆ ಅಪರಾಧವಾಗುವುದಿಲ್ಲ ಎಂದು ವಾದಿಸುತ್ತಾರೆ. ಈ ಸಂದರ್ಭದಲ್ಲಿ ಸರ್ಕಾರ ಒಂದು ಪ್ರಕಟಣೆ ಹೊರಡಿಸುತ್ತದೆ. ಆದರೆ ನ್ಯಾಯಾಲಯ ಇದನ್ನು ಒಪ್ಪುವುದಿಲ್ಲ. ಸ್ನಾಹ್ ಗೋರಖ್‌ಪುರಿಯವರನ್ನು ಬಿಡುಗಡೆಗೊಳಿಸಲಾಗುತ್ತದೆ.


ಲೋಹಿಯಾರ ಬದುಕಿನ ಈ ಬಗೆಯ ಎಷ್ಟೋ ಪ್ರಸಂಗಗಳನ್ನು ನಾವು ಪ್ರಸ್ತಾಪಿಸಬಹುದು. ಬಡವರ ಜೊತೆ ಅವರಿಗೆ ನೇರವಾದ ಸಂಪರ್ಕವಿರುತ್ತಿತ್ತು. ಅವರು ಗುಡಿಸಲುಗಳಿಗೆ ಭೇಟಿ ನೀಡುತ್ತಿದ್ದರು. ಮುರುಕು ಮಂಚದ ಮೇಲೆ ಕೂರುತ್ತಿದ್ದರು, ಬಡವರ ಕಷ್ಟಗಳನ್ನು ಕೇಳುತ್ತಿದ್ದರು, ಅವರ ಹರಕು ಬಟ್ಟೆ ಮುರುಕು ವಸ್ತುಗಳನ್ನು ನೇರವಾಗಿ ನೋಡಿ ತಿಳಿದದ್ದರಿಂದ ಪಾರ್ಲಿಮೆಂಟಿನಲ್ಲಿ ಅವರು ಬಡವರ ಪರವಾಗಿ ಯುದ್ಧಸಾರಲು ಸಾಧ್ಯವಾಗುತ್ತಿತ್ತು.

ಲೋಹಿಯಾರ ಅಯಸ್ಕಾಂತೀಯ ವ್ಯಕ್ತಿತ್ವದಿಂದ ಆಕರ್ಷಿತರಾಗಿ ಅವರ ಸಂಪರ್ಕಕ್ಕೆ ಬಂದವರಲ್ಲಿ ಪಂಡಿತರು, ಲೇಖಕರು, ಕಲಾವಿದರು, ರಾಜಕಾರಣಿಗಳು, ನ್ಯಾಯವಾದಿಗಳು, ನ್ಯಾಯಾಧೀಶರು ಹೀಗೆ ಎಷ್ಟೋ ಮಂದಿ ವಿವಿಧ ಹಿನ್ನಲೆಯಿಂದ ಬಂದವರಿದ್ದರು. ಇವರೆಲ್ಲರೂ ಲೋಹಿಯಾರ ವ್ಯಕ್ತಿತ್ವವನ್ನು ಬೇರೆ–ಬೇರೆ ದೃಷ್ಟಿಯಿಂದ ನೋಡಿ ಅರ್ಥೈಸುತ್ತಿದ್ದರು. ಕೆಲವರ ದೃಷ್ಟಿಯಲ್ಲಿ ಅವರೊಬ್ಬ ಮಹಾನ್ ಚಿಂತಕರಾಗಿದ್ದರೆ, ಮತ್ತೆ ಕೆಲವರಿಗೆ ಅವರು ಅನುಕಂಪದ ಮೂರ್ತಿಯಾಗಿ ಕಾಣುತ್ತಿದ್ದರು. ಮಹಾನ್ ಕಲಾವಿದ ಎಂ.ಎಫ್. ಹುಸೇನ್ ತಾವು ಲೋಹಿಯಾ ಅವರ ಭಾಷೆಯನ್ನು ಕಂಡು ಮೂಕವಿಸ್ಮಿತನಾದೆ ಎಂದಿದ್ದಾರೆ. ಶಿವಪ್ರಸಾದ್ ಚಾಂದ್‌ಪೂರಿಯಾ ಅವರ ದೃಷ್ಟಿಯಲ್ಲಿ ಒಂದು ವಿಚಾರವನ್ನು ಲೋಹಿಯಾ ಅವರಷ್ಟು ಕಲಾತ್ಮಕವಾಗಿ ಪ್ರಸ್ತುತಪಡಿಸುವ ರಾಜಕಾರಣಿ ಮತ್ತೊಬ್ಬರಿಲ್ಲ. ರಾಜಕಾರಣವೆಂಬುದು ನಿತ್ಯ ಕಸ ಗುಡಿಸುವ ಕೆಲಸ. ಅಲ್ಲಿ ಸತ್ಯಾಗ್ರಹ ಎಂಬುದು ಇಲ್ಲದೇ ಹೋದರೆ ನೆಲದ ಮೇಲೆ ಕಸ ರಾಶಿಯಾಗಿ ಬಿಡುತ್ತದೆ ಎಂಬುದಾಗಿ ಲೋಹಿಯಾ ಹೇಳುತ್ತಿದ್ದದನ್ನು ಅವರು ಸ್ಮರಿಸುತ್ತಾರೆ.

ಯುವ ಜನಾಂಗದಲ್ಲಿ ಲೋಹಿಯಾ ಅವರಿಗೆ ಅಪಾರವಾದ ವಿಶ್ವಾಸವಿತ್ತು. ಪಿ.ಎಸ್.ಪಿಯನ್ನು ತೊರೆದು ಅವರು ಸೋಷಲಿಸ್ಟ್ ಪಕ್ಷವನ್ನು ಕಟ್ಟಿದಾಗ ಅವರೊಂದಿಗೆ ಯಾವ ಹಿರಿಯ ನಾಯಕರೂ ಇರಲಿಲ್ಲ. ಹೊಸ ಸೋಷಲಿಸ್ಟ್ ಪಾರ್ಟಿಯ ಬಹಳಷ್ಟು ನಾಯಕರು ಯುವಜನ ಸಭಾದ ಕಾರ್ಯಕ್ರಮಗಳಲ್ಲಿ ಲೋಹಿಯಾ ಹಾಜರಿದ್ದು ಯುವಕರ ಚಟುವಟಿಕೆಯನ್ನು ಗಮನಿಸಿ ಅವರನ್ನು ವಿಮರ್ಶಿಸಿ, ಪ್ರೋತ್ಸಾಹಿಸಿ, ನಾಯಕತ್ವದ ಗುಣಗಳನ್ನು ಬೆಳೆಸುತ್ತಿದ್ದರು.

ದೊಡ್ಡ ಪಕ್ಷವೊಂದನ್ನು ಸಂಘಟಿಸಿ ನಡೆಸುವಷ್ಟು ಭಾರೀ ಹಣ ಲೋಹಿಯಾ ಅವರ ಬಳಿ ಎಂದೂ ಇರಲಿಲ್ಲ. ಅವರ ವೈಯಕ್ತಿಕ ಅಗತ್ಯಗಳು ತೀರಾ ಕಡಿಮೆ. ರೈಲಿನ ಯಾವ ವರ್ಗದಲ್ಲಾದರೂ ಅವರು ಪ್ರಯಾಣಿಸಬಲ್ಲವರಾಗಿದ್ದರು. ಕಾರ್ಯಕರ್ತರ ಸೈಕಲ್‌ನ ಹಿಂದಿನ ಕ್ಯಾರಿಯರ್‌ನಲ್ಲಿ ಕುಳಿತು ಪ್ರಯಾಣಿಸಿದ್ದು ಉಂಟು. ೧೯೬೩ರಲ್ಲಿ ಪ್ರಥಮ ಬಾರಿಗೆ ಲೋಕಸಭೆಗೆ ಆಯ್ಕೆಯಾದಾಗ ಲೋಹಿಯಾ ಅವರ ಬಳಿಯಿದ್ದದ್ದು ಬರೀ ಎರಡು ಜೊತೆ ಬಟ್ಟೆ ಮಾತ್ರ. ತಮ್ಮ ಜೀವಮಾನದಲ್ಲಿ ಎಂದೂ ಅವರು ಸೈಕಲ್ ರಿಕ್ಷಾ ಹತ್ತಲಿಲ್ಲ. ಅವರ ದೃಷ್ಟಿಯಲ್ಲಿ ರಿಕ್ಷಾ ಎಳೆಯುವವನದ್ದು ಪ್ರಾಣಿಯ ಸ್ಥಿತಿ. ಅದು ಭಾರತದ ಗುಲಾಮಗಿರಿಯ ರೂಪಕವಿದ್ದಂತೆ. ಹಾಗಾಗಿ ಎಂದೂ ತಾವು ಸೈಕಲ್ ರಿಕ್ಷಾದಲ್ಲಿ ಪ್ರಯಾಣಿಸುವುದಿಲ್ಲ ಎಂದು ಅವರು ಚಿಕ್ಕ ವಯಸ್ಸಿನಲ್ಲಿಯೇ ಪ್ರತಿಜ್ಞೆ ಮಾಡಿದ್ದರಂತೆ.

ಲೋಹಿಯಾರಂಥ ಜನಪರ ನಾಯಕರೊಬ್ಬರಿಗೆ ಕನಿಷ್ಠ ಅಗತ್ಯಗಳನ್ನೂ ಪೂರೈಸಲಾಗದಂತಹ ಹೀನಸ್ಥಿತಿ ನಮ್ಮ ದೇಶದ ಸಾರ್ವಜನಿಕ ಜೀವನದ ದುರಂತಮಯ ಪ್ರತಿಬಿಂಬ. ಕೊನೆಯವರೆಗೂ ಲೋಹಿಯಾ ಅವರ ಸಹಾಯಕ್ಕೆ ಒಬ್ಬ ಸುಶಿಕ್ಷಿತ ಕಾರ್ಯದರ್ಶಿ ಇರಲಿಲ್ಲ ಎಂದು ಡಾ॥ ಕೆ.ಎಸ್. ಕಾರಂತರು ಬರೆಯುತ್ತಾರೆ. ಬಡತನದ ವೈಭವೀಕರಣವನ್ನು ಸಹ ಲೋಹಿಯಾ ಸಹಿಸುತ್ತಿರಲಿಲ್ಲ. ಹಿತಮಿತವಾದ ಸಭ್ಯ ಜೀವನಶೈಲಿಯನ್ನು



ಪ್ರತಿಪಾದಿಸುತ್ತಿದ್ದ ಅವರು ವೈಭವದ ಜೀವನ ಶೈಲಿಯನ್ನು ಖಂಡಿಸುತ್ತಿದ್ದರು. ಭಾರತದಂತಹ ಬಡದೇಶದಲ್ಲಿ ಶ್ರೀಮಂತಿಕೆಯ ಪ್ರದರ್ಶನ ಅಮಾನವೀಯ ಎಂಬುದು ಅವರ ನಂಬಿಕೆಯಾಗಿತ್ತು.

ಚುನಾವಣೆಯಲ್ಲಿ ಸ್ಪರ್ಧಿಸುವುದು, ಇತರರು ಸ್ಪರ್ಧಿಸುವಂತೆ ಪ್ರೇರೇಪಿಸುವುದು ಒಂದು ಪವಿತ್ರ ಕೆಲಸವೆಂದು ಲೋಹಿಯಾ ಭಾವಿಸಿದ್ದರು. ಗೆಲುವು ಸೋಲು ಮುಖ್ಯವಲ್ಲ ಅದು ನಿಮ್ಮನ್ನು ಗಟ್ಟಿಗೊಳಿಸುತ್ತದೆ. ಆತ್ಮ ವಿಶ್ವಾಸ ಹೆಚ್ಚಿಸುತ್ತದೆ. ಜನರೊಡನೆ ಸಂಪರ್ಕ ಕಲ್ಪಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ ಎನ್ನುತ್ತಿದ್ದರು. ಸ್ವತಃ ಲೋಹಿಯಾ ನೆಹರೂ ವಿರುದ್ಧ ಫೂಲ್‌ಪುರ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಪತ್ರಿಕೆಗಳ ಅಪಹಾಸ್ಯಕ್ಕೆ ಅವರು ಸೊಪ್ಪು ಹಾಕಲಿಲ್ಲ. ಗ್ವಾಲಿಯರ್ ರಾಣಿಯ ವಿರುದ್ಧ ಸುಖೋರಾಣಿ ಎಂಬ ಕಸಗುಡಿಸುವ ಮಹಿಳೆಯನ್ನು ಚುನಾವಣೆಗೆ ನಿಲ್ಲಿಸಿದ್ದರು. ಸುಖೋರಾಣಿ ಸೋತಾಗ ನೀವು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಪಕ್ಷದ ಕಾರ್ಯಕರ್ತರನ್ನು ವಿಶೇಷವಾಗಿ ಮಧ್ಯಪ್ರದೇಶದ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷ ಪ್ರಸಾದ್ ಮಿಲಿಂದ್‌ರನ್ನು ತರಾಟೆಗೆ ತೆಗೆದುಕೊಂಡರು. ಕನ್ಹಯ್ಯಲಾಲ್ ದೂಂಗರ್‌ವಾಲ್ ಎಂಬ ೨೫ ವರ್ಷದ ಯುವಕನನ್ನು ಗೃಹಮಂತ್ರಿ ಕೈಲಾಸನಾಥ ಕಟ್ಟು ವಿರುದ್ಧ ಚುನಾವಣೆಗೆ ನಿಲ್ಲಿಸಿದರು. ನಂತರದಲ್ಲಿ ದೂಂಗರ್‌ವಾಲ್ ಮಧ್ಯಪ್ರದೇಶದ ಒಬ್ಬ ಸಮರ್ಥ ಸೋಷಲಿಸ್ಟ್ ನಾಯಕರಾದರು.

ಲೋಹಿಯಾ ರಾಜಕೀಯ ನಿಷ್ಕ್ರಿಯತೆ, ಅಪ್ರಾಮಾಣಿಕತೆ ಮತ್ತು ತತ್ವದ್ರೋಹಗಳನ್ನು ಎಂದೂ ಸಹಿಸುತ್ತಿರಲಿಲ್ಲ. ಅದು ತಮ್ಮ ಆಪ್ತರಿಂದಲೇ ನಡೆದಾಗಲೂ. ಕರ್ಪೂರಿ ಠಾಕೂರ್ ಬಿಹಾರದ ಮುಖ್ಯಮಂತ್ರಿಯಾಗಿ ಸಮಾಜವಾದಿ ಕೆಲಸಗಳನ್ನು ಮಾಡದೆ ಕಾಲ ಕಳೆಯುತ್ತಿದ್ದಾಗ ಅವರು ತಮ್ಮನ್ನು ಭೇಟಿ ಮಾಡಲು ಬಂದಾಗಲೂ ಅವರನ್ನು ಒಳಗೆ ಬರಲು ಹೇಳುತ್ತಿರಲಿಲ್ಲ. 'ಅವರು ತಮ್ಮ ಕೆಲಸ ತಾವು ಮಾಡಿಕೊಂಡಿರಲಿ ಬಿಡಿ' ಎನ್ನುತ್ತಾ ಹೊರಗೇ ಚಹಾ ಕೊಡಿಸಿ ಕಳಿಸುತ್ತಿದ್ದರು. ಠಾಕೂರ್ ಕಂದಾಯ ರದ್ದತಿಯಂತಹ ಕೆಲಸ ಶುರುಮಾಡಿ ಬಂದಾಗ, 'ಬನ್ನಿ ನೇತಾಜಿ, ಕುಳಿತುಕೊಳ್ಳಿ' ಎಂದು ಸ್ವಾಗತಿಸಿ ಆರು ತಿಂಗಳ ಬಹಿಷ್ಕಾರವನ್ನು ಕೊನೆಗಾಣಿಸಿದರು. ರಾಜ್‌ನಾರಾಯಣ್ ಲೋಕಸಭಾ ಚುನಾವಣೆಯಲ್ಲಿ ಸೋತು ಹೇಗೋ ಯಾರೊಂದಿಗೋ ಹೊಂದಾಣಿಕೆ ಮಾಡಿಕೊಂಡು ಹಿಂಬಾಗಿಲಿನಿಂದ ರಾಜ್ಯಸಭೆಯನ್ನು ಪ್ರವೇಶಿಸಿ ಲೋಹಿಯಾರನ್ನು ಕಾಣಲು ಬಂದಾಗ ಅವರು ಕ್ರುದ್ಧರಾಗಿದ್ದರು. ಆತ ಒಳಗೆ ಬರಲು ಯತ್ನಿಸಿದಾಗ, 'ಸುಮ್ಮನೆ ಹಿಂತಿರುಗಿ. ಇಲ್ಲವಾದರೆ ಕತ್ತು ಹಿಡಿದು ನೂಕಿಸುವೆ' ಎಂದರು. ಹಾಗೇ ರಾಜಕೀಯ ಲಾಭ–ನಷ್ಟಗಳ ಲೆಕ್ಕಾಚಾರದ ಆಧಾರದ ಮೇಲೆ ಲೋಕಸಭಾ ಸದಸ್ಯರಾಗಿ ಗೆದ್ದವರನ್ನು ರಾಜ್ಯದ ಮಂತ್ರಿಗಳನ್ನಾಗಿ ಮಾಡಿದಾಗ ಈ ಸಂಬಂಧ ತಮ್ಮ ಅನುಮತಿ ಮತ್ತು ಆಶೀರ್ವಾದ ಪಡೆಯಲು ಬಂದ ಅನುಯಾಯಿಗಳನ್ನೂ ಲೋಹಿಯಾ ಕಟುವಾಗಿ ಬೈದು ಹಿಂದಕ್ಕೆ ಕಳಿಸುತ್ತಿದ್ದರು.

ಸತ್ಯಾಗ್ರಹವೆಂದರೇನು? ಅಸಹಕಾರ ಚಳುವಳಿ ಎಂದರೇನು? ಜೈಲಿನಲ್ಲಿ ಹೇಗೆ ನಡೆದುಕೊಳ್ಳಬೇಕು? ಅಧಿಕಾರಶಾಹಿಯು ಹದ್ದು ಮೀರಿದರೆ ಹೇಗೆ ಅದನ್ನು ಎದುರಿಸಬೇಕು? ಎಂಬುದನ್ನೆಲ್ಲ ಲೋಹಿಯಾ ತಮ್ಮ ನಡವಳಿಕೆಯಿಂದ ತೋರಿಸಿಕೊಡುತ್ತಿದ್ದರು. ಅವರು ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಕೆಲಸ ಮಾಡುವ ರಾಜಕಾರಣಿಯಲ್ಲ. ಅವರು ಸ್ವತಃ ಚಳುವಳಿಗೆ ಧುಮುಕುತ್ತಿದ್ದರು. ೧೯೫೮ರ ನಾಗರೀಕ ಅಸಹಕಾರದ ಸಂಬಂಧ ಪಕ್ಷದ ಸಹಸ್ರಾರು ಕಾರ್ಯಕರ್ತರು ಬಂಧನಕ್ಕೊಳಗಾಗಿ ಜೈಲು ಸೇರಿದರು. ಚಳುವಳಿಯನ್ನು ನಿಲ್ಲಿಸಿದ ನಂತರವೂ ಸರ್ಕಾರ ಬಂಧಿತರನ್ನು ಬಿಡುಗಡೆ ಮಾಡದಿದ್ದಾಗ ಲೋಹಿಯಾ ಏಕಾಂಗಿಯಾಗಿ ಸತ್ಯಾಗ್ರಹ ಮಾಡಿ ಜೈಲಿನಲ್ಲಿದ್ದ



**ಲೋಹಿಯಾರ ಪಾರ್ಥಿವ ಶರೀರದ ಅಂತಿಮ ಯಾತ್ರೆ**

ಕಾರ್ಯಕರ್ತರ ಜೊತೆಗೂಡಿದರು. ಒಂದು ತಿಂಗಳು ಜೈಲಿನಲ್ಲಿದ್ದರು. ಜೈಲಿನಲ್ಲಿ ಹಿರಿಯ ಕಾರ್ಯಕರ್ತರಾದ ರಾಮ್‌ಸಾಗರ್ ಮಿಶ್ರ, ಅಶ್ವಿನಿಕುಮಾರ್, ಕೃಷ್ಣನಾಥಶರ್ಮ, ಕರುಣಾಶಂಕರ ದೀಕ್ಷಿತ್‌ರವರಂತಹವರ ಜೊತೆ ೧೧ನೆಯ ತರಗತಿಯ ವಿದ್ಯಾರ್ಥಿ ರಾಮ್‌ಕಿಶೋರ್ ಶಾಸ್ತ್ರೀ ತರಹದವರೂ ಇದ್ದರು. ಜೈಲಿನಲ್ಲಿ ಲೋಹಿಯಾ ಜೊತೆಯಿದ್ದಾಗ ತಮಗಾದ ಅನುಭವವನ್ನು ರಾಮಕಿಶೋರ್ ಶಾಸ್ತ್ರೀ ಈ ರೀತಿ ವಿವರಿಸುತ್ತಾರೆ: "ಲೋಹಿಯಾ ಅವರ ಜೊತೆ ನಾವು ಸುಮಾರು ೧೫ ಜನರಿದ್ದೆವು. ಜೈಲರ್ ನಮಗೆ ನಮ್ಮ ವಿರುದ್ಧದ ಮೊಕದ್ದಮೆಯ ವಿವರ ನೀಡಿದರು. ತುಸು ಹೊತ್ತಲ್ಲೇ ಸುಮಾರು ೩೦೦ ಜನ ಪೋಲೀಸರು ನಮ್ಮ ಮೇಲೆ ದಾಳಿ ನಡೆಸಿದರು. ನಮ್ಮನ್ನು ಹೊಡೆದು ಬ್ಯಾರಕ್‌ಗೆ ತಳ್ಳಿದರು. ಲೋಹಿಯಾರನ್ನು ಒಂದು ಕುರ್ಚಿಯ ಮೇಲೆ ಕೂರಿಸಿ ಹೊತ್ತು ತಂದು ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸಿದರು. ಲೋಹಿಯಾ ಒಂದು ಮಾತು ಆಡಲಿಲ್ಲ. ಒತ್ತಾಯದಿಂದ ಅವರ ಹೆಬ್ಬೆಟ್ಟು ಗುರುತು ಪಡೆದರು. ಲೋಹಿಯಾ ಅವರನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಯಿತು. ಸ್ವಾತಂತ್ರ್ಯ ಹೋರಾಟದ ಒಬ್ಬ ಮಹಾನ್ ನಾಯಕನನ್ನು ಸ್ವತಂತ್ರ ಭಾರತ ನಡೆಸಿಕೊಂಡ ರೀತಿ ಇದು!

ಲೋಹಿಯಾ ಅವರ ಮರಣಾನಂತರ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಲೋಹಿಯಾ ಅವರ ಅಂತ್ಯದವರೆಗೆ ಅವರನ್ನು ದ್ವೇಷಿಸುತ್ತಿದ್ದವರೂ ಸಹ ಅವರಿಗೆ ಗೌರವ ಸಮರ್ಪಿಸಿದರು. ತಮ್ಮ ಪಾಪಗಳನ್ನು ತೊಳೆದುಕೊಳ್ಳಲು ಅವರು ನಡೆಸಿದ ಪ್ರಯತ್ನ ಇದಾಗಿತ್ತು. ಲೋಹಿಯಾರ ಜೀವಿತ ಕಾಲದಲ್ಲಿ ಅವರನ್ನು ಲೇವಡಿ ಮಾಡಿದ ಪತ್ರಿಕೆಗಳೂ, ಮೆಚ್ಚದ ಮೊರಾರ್ಜಿಯವರೂ ಸಹ. ಗಾಂಧಿಯ ನಂತರ ಅತಿ ಹೆಚ್ಚು ನಿಷ್ಠಾವಂತ ಹಿಂಬಾಲಕರನ್ನೂ ಸಂಗಾತಿಗಳನ್ನೂ ಹೊಂದಿದ ನಾಯಕನೆಂದರೆ ಲೋಹಿಯಾ' ಎಂಬುದಾಗಿ ಹೇಳಿದರು.

ಲೋಹಿಯಾರ ಸಂಪರ್ಕಕ್ಕೆ ಬಂದವರು ಅವರ ಅನುಯಾಯಿಗಳಾಗಿ ಬಿಡುತ್ತಾರೆ ಎಂಬುದಾಗಿ ಮೊರಾರ್ಜಿಯವರು ಹೇಳಿದ್ದು ಸರಿ. ಲೋಹಿಯಾ ಧಾರ್ಮಿಕ ನಾಯಕರಾಗಿರಲಿಲ್ಲ. ಹಿಂಬಾಲಕರಿಗೆ ಲಾಭ ಮಾಡಿಕೊಡಬಲ್ಲ ಅಧಿಕಾರ ಲೋಹಿಯಾರ ಬಳಿ ಇರಲಿಲ್ಲ. ಅವರು ಕೊಡಬಹುದಾದದ್ದು ಹೊಸ ಆಲೋಚನೆ, ಮಿದುಳನ್ನು ಮಿಸುಕುವಂತೆ ಮಾಡುತ್ತಿದ್ದ ಸ್ಫೂರ್ತಿ. ಪರಿಣಾಮ, ಮನುಷ್ಯರ ಮನಸ್ಸಿನ ಮುಚ್ಚಿದ ಬಾಗಿಲುಗಳನ್ನು ಒಡೆದು ತೆರೆಯುವಂತಿರುತ್ತಿತ್ತು. ಅವರಲ್ಲಿ ಹೊಸದೊಂದು ಚಿಂತನೆ ಹೊಸ ದೃಷ್ಟಿಕೋನ ಎಂದೂ ಇರುತ್ತಿತ್ತು. ಇದು ಚಿಂತಕರನ್ನು, ಕಲಾವಿದರನ್ನು ಲೇಖಕ ಬುದ್ಧಿಜೀವಿಗಳನ್ನು ಅವರ ಕಡೆ ಸೆಳೆಯುತ್ತಿತ್ತು. ಹಳೆಯ ಚಿಂತನೆಗಳನ್ನು ಒಡೆದು ಅದರ ಎಡೆಯಲ್ಲಿ ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಮುಂತಾದ ಮೌಲ್ಯಗಳನ್ನು ಪ್ರತಿಫಲಿಸುವ ಸಾಂಸ್ಕೃತಿಕ ಸಾಹಿತ್ಯಿಕ ಚಳುವಳಿಗೆ ಚಾಲನೆ ನೀಡುತ್ತಿತ್ತು.

ಲೋಹಿಯಾರನ್ನು ಅನುಸರಿಸಿ ಅವರಿಂದ ಪ್ರಭಾವಿಸಲ್ಪಟ್ಟು ರಾಜಕಾರಣವನ್ನು ಪ್ರವೇಶಿಸಿದವರು ಬಡವರ ಬಗ್ಗೆ ಕರುಣೆ ಅನುಕಂಪ ಹೊಂದಿರುತ್ತಿದ್ದರು. ಲೋಹಿಯಾ ಅವರ ಸರಳ ಪ್ರಾಮಾಣಿಕ ಬದುಕಿನ ರೀತಿಯಿಂದ ಸಾಮಾನ್ಯ ಜನ ಪ್ರಭಾವಿತರಾಗುತ್ತಿದ್ದರು. ಡಾ॥ ಹರಿದೇವ

ಶರ್ಮ, ಅಂಬಿಕಾ ಪ್ರಸಾದ್ ಸಿಂಗ್, ಲಾಡ್ಲಿ ಮೋಹ ನಿಗಮ್ ಮುಂತಾದ ಹಲವು ಗಣ್ಯರು ಲೋಹಿಯಾರಿಂದ ಯಾವ ಪ್ರಮಾಣದಲ್ಲಿ ಪ್ರಭಾವಿತರಾಗಿದ್ದರೆಂದರೆ ಲೋಹಿಯಾರನ್ನು ಜ್ಞಾಪಿಸಿಕೊಂಡಾಗ ಅವರ ಕಣ್ಣುಗಳು ನೀರಾಡುವುದನ್ನು ಅವರಿಂದ ತಡೆಯಲಾಗುತ್ತಿರಲಿಲ್ಲ. ಹ್ಯಾರಿಸ್ ವೊಫರ್ಡ್ ಲೋಹಿಯಾ ಅವರ ಅಮೆರಿಕನ್ ಅಭಿಮಾನಿ. ೧೯೫೮ರಲ್ಲಿ ಲೋಹಿಯಾರ ಅಮೆರಿಕದ ಪ್ರವಾಸದುದ್ದಕ್ಕೂ ಅವರೊಡನಿದ್ದು "Lohia and America meet' ಎಂಬ ಪುಸ್ತಕ ಬರೆದವರು. ಈ ಕೃತಿಯ ಎರಡನೆಯ ಆವೃತ್ತಿಗೆ ಮುನ್ನುಡಿ ಬರೆಯುತ್ತಾ ಲೋಹಿಯಾ ಹೇಳುತ್ತಾರೆ, ಹ್ಯಾರಿಸ್ ವೊಫರ್ಡ್ ತಮ್ಮ ಭಾರತೀಯ ಅಭಿಮಾನಿಗಳ ತದ್ರೂಪಿಯಲ್ಲ. ಆದರೆ ಸಾಮ್ಯವೂ ಇಲ್ಲವೆ ಇಲ್ಲವೆಂದಲ್ಲ. ಒಮ್ಮೆ ಲೋಹಿಯಾ ಹ್ಯಾರಿಸ್‌ಗೆ ಕಾಫಿ ಬೇಕೆಂದು ಹೇಳಿದಾಗ, ಆ ಜಾಗದಿಂದ ಬಹುದೂರದಲ್ಲಿ ಮಾತ್ರ ಲಭ್ಯವಿದ್ದ ಕಾಫಿ ತರಲು ಹೊರಟ ಅವರು ಲೋಹಿಯಾರನ್ನು ಪ್ರೀತಿಯಿಂದ ಶಪಿಸಿದ್ದು ಹೀಗಂತೆ: ನಿನ್ನಂತ ಸೂಳೆಮಗ(son of a bitch)ನಿಗೆ ನಾನು ಅಮೆರಿಕಾದ ಅಧ್ಯಕ್ಷರು ಹೇಳಿದರೂ ಮಾಡಲು ನಿರಾಕರಿಸುವ ಈ ಕೆಲಸವನ್ನು ಮಾಡುತ್ತಿರುವೆ!



***('ಹೊಸ ಮನುಷ್ಯ' ಪತ್ರಿಕೆಗೆ ಈವರೆಗೆ ಹಲವು ಇಂಗ್ಲಿಷ್ ಲೇಖನಗಳನ್ನು ಸೊಗಸಾಗಿ ಅನುವಾದಿಸಿಕೊಟ್ಟಿರುವ ಎಂ. ರಾಜು ಅವರು ಇತ್ತೀಚಿನವರೆಗೆ ಭದ್ರಾವತಿಯ ವಿಶ್ವೇಶರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು ಈಗ ನಿವೃತ್ತರಾಗಿ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ)***

# ನಾನು "ಸೋಷಲಿಸ್ಟ್" ಆದೆ!

–ಕೋಣಂದೂರು ಲಿಂಗಪ್ಪ

ಸ್ವತಂತ್ರ ಭಾರತದ ಮೊಟ್ಟ ಮೊದಲ ಮಹಾ ಚುನಾವಣೆ ೧೯೫೨ರಲ್ಲಿ ನಡೆಯಿತು. ಆಗ ನಾನು ತೀರ್ಥಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಯಾಗಿದ್ದೆ. ಚುನಾವಣೆ ಪ್ರಚಾರ ಪ್ರಾರಂಭವಾಗಿತ್ತು.

ಒಂದು ದಿನ ಸಂಜೆ ತರಗತಿ ಮುಗಿಸಿಕೊಂಡು ಮನೆಗೆ ಹಿಂದಿರುಗುವಾಗ, ತೀರ್ಥಹಳ್ಳಿಯ ಮಧ್ಯದಲ್ಲಿರುವ, ಇಂದಿನ ಸ್ವಾತಂತ್ರ್ಯ ಜ್ಯೋತಿ ಚೌಕದಲ್ಲಿ, ಒಂದು ಅಂಗಡಿಯ ಮಹಡಿಯ ಮೇಲಿಂದ ಪ್ರಚಾರ ಭಾಷಣ ಆಗುತ್ತಿತ್ತು. ಅದು ಸೋಷಲಿಸ್ಟ್ ಪಕ್ಷದ ಪ್ರಚಾರ ಸಭೆಯಾಗಿತ್ತು. ಜನರು ಅಲ್ಲಿ ಭಾಷಣ ಕೇಳುತ್ತಾ ನಿಂತಿದ್ದರು. ನಾನು ನಿಂತೆ. ತುಂಬಾ ಚೆನ್ನಾಗಿ ಕನ್ನಡದಲ್ಲಿ ಮಾಡುತ್ತಿದ್ದ ಭಾಷಣ ತುಂಬಾ ಪ್ರಭಾವ ಶಾಲಿಯಾದ ಟೀಕೆಗಳು ಇಲ್ಲದ ವಿಚಾರ ಪೂರ್ಣ ಭಾಷಣವಾಗಿತ್ತು. ಪೂರ್ತಿ ಭಾಷಣ ಕೇಳಿದ ನಾನು ಆ ಕ್ಷಣದಲ್ಲೇ ಸೋಷಲಿಸ್ಟ್ ಪಕ್ಷಕ್ಕೆ ಬೆಂಬಲ ಕೊಡಬೇಕೆಂದು ನಿರ್ಧಾರಕ್ಕೆ ಬಂದೆ. ನಂತರ ತಿಳಿಯಿತು. ಅಂದು ಭಾಷಣ ಮಾಡಿದವರು, ಆಗ ಕಾಲೇಜು ವಿದ್ಯಾರ್ಥಿಯಾಗಿದ್ದ ಶ್ರೀ. ಯು.ಆರ್. ಅನಂತಮೂರ್ತಿಯವರೆಂದು.

ಅದಾದ ಕೆಲವು ದಿನಗಳ ಬಳಿಕ ರಜಕ್ಕೆ ನಾನು ಊರಿಗೆ ಅಂದರೆ ಕೋಣಂದೂರಿಗೆ ಬಂದೆ. ಅಲ್ಲೂ ಚುನಾವಣೆಯ ಪ್ರಚಾರ ನಡೆಯುತ್ತಿತ್ತು. ಆಗ ನಮ್ಮ ತೀರ್ಥಹಳ್ಳಿ ತಾಲ್ಲೂಕು ಸಾಗರ ಮತ್ತು ಶೃಂಗೇರಿಯ ಎರಡು ಚುನಾವಣಾ ಕ್ಷೇತ್ರಕ್ಕೆ ಹಂಚಿಕೆಯಾಗಿತ್ತು. ಅಗ್ರಹಾರ, ಕಸಬಾ ಮತ್ತು ಆಗುಂಬೆ ಹೋಬಳಿಗಳು ಸಾಗರ ವಿಧಾನಸಭಾ ಕ್ಷೇತ್ರಕ್ಕೂ, ಮತ್ತೂರು ಮತ್ತು ಮಂಡಗದ್ದೆ ಹೋಬಳಿಗಳು ಶೃಂಗೇರಿ ಕ್ಷೇತ್ರಕ್ಕೂ ಸೇರಿದ್ದವು. ನಮ್ಮ ಕೋಣಂದೂರು ಅಗ್ರಹಾರ ಹೋಬಳಿಗೆ ಸೇರಿತ್ತು. ಇಲ್ಲಿಗೆ ಆಗ ಅಂದರೆ ಸಾಗರ ಕ್ಷೇತ್ರಕ್ಕೆ ಶ್ರೀ ಗೋಪಾಲಗೌಡ ಶಾಂತವೇರಿಯವರು ಸೋಷಲಿಸ್ಟ್ ಪಕ್ಷದಿಂದಲೂ, ಕಾಂಗ್ರೆಸ್‌ನಿಂದ ಶಿವಮೊಗ್ಗ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಶ್ರೀ ಬದ್ರಿನಾರಾಯಣ ಅಯ್ಯಂಗಾರ್‌ರವರು ಸ್ಪರ್ಧಿಸಿದ್ದರು. ಆಗ ನಮ್ಮ ಊರಿಗೆ ಊರೇ ಕಾಂಗ್ರೆಸ್ ಪರವಾಗಿತ್ತು. ನಾನೊಬ್ಬನೇ ಊರಲ್ಲಿ ಕೆಂಪು ಟೋಪಿ ಹಾಕಿಕೊಂಡು ಸೋಷಲಿಸ್ಟ್ ಪಾರ್ಟಿಯ ಪರವಾಗಿ ಪ್ರಚಾರ ಮಾಡುತ್ತಿದ್ದೆ. ಆಗ ನಾನು ಪಟ್ಟ ಅನುಭವ ಎಂದೂ ಮರೆಯಲಾರೆ, ಅಷ್ಟು ಹಿಯಾಳಿಕೆಗೆ ಗುರಿಯಾಗಿದ್ದೆ.

ಆದರೂ ನಾನು ತೀರ್ಥಹಳ್ಳಿಯಲ್ಲಿ ಅಂದು ಕೇಳಿದ್ದ ಭಾಷಣದಲ್ಲಿ, ಬಡವರೆಲ್ಲಾ ಸೋಷಲಿಸ್ಟರು– ಶ್ರೀಮಂತರೆಲ್ಲಾ ಕಾಂಗ್ರೆಸ್ಸಿನವರು ಎಂಬ ಮಾತು ನನ್ನ ಮನಸ್ಸಿನಲ್ಲಿ ಆಳವಾಗಿ ಬೇರೂರಿತ್ತು. ನಾನು ಒಬ್ಬ ಬಡವ, ಅದರಲ್ಲೂ ಬಸ್ಸ್ಟ್ಯಾಂಡ್ ಹಮಾಲಿಯ ಮಗ ನಾನಾಗಿದ್ದರಿಂದ ಸೋಷಲಿಸ್ಟ್ ಅಲ್ಲದೇ ಬೇರಾಗಲು ಸಾಧ್ಯವಿರಲಿಲ್ಲ, ಹಾಗೆಯೇ ಆದೆ.

ಆ ಸಮಯದಲ್ಲಿ ಪ್ರಚಾರಕ್ಕೆಂದು ಉಮೇದುವಾರರಾದ ಶ್ರೀ ಗೋಪಾಲಗೌಡರು ಸಾಗರದಿಂದ, ಬಸ್ಸಿನಲ್ಲಿ ನಮ್ಮೂರಿಗೆ ಬಂದು ಇಳಿದರು.ನಮ್ಮ ಮನೆ ಹತ್ತಿರವೇ ಬಸ್ಸು ನಿಲ್ಲುವ ಚೌಕ. ಇವರು ಬಂದಿಳಿದೊಡನೆ ಇವರನ್ನು ಕರೆದುಕೊಂಡು ಹೋಗಲು ಕಾಯುತ್ತಿದ್ದ ಹೊರಬೈಲು–ಮಂಗಳ ಹಳ್ಳಿಗಳ ಮುಖಂಡರು ಆ ಕಡೆ ಕರೆದುಕೊಂಡು ಹೊರಟರು.




**ರಾಮಮನೋಹರ ಲೋಹಿಯಾ ೧೯೬೭ರಲ್ಲಿ ಕೊನರಯ ಬಾರಿಗೆ ಬೆಂಗಳೂರಿಗೆ ಭೇಟಿ ನೀಡಿದಾಗ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ ಗೋಪಾಲಗೌಡ, ಎಸ್. ವೆಂಕಟರಾಂ, ಕೆ,ಜಿ. ಮಹೇಶ್ವರಪ್ಪ, ಜೆ.ಎಚ್. ಪಟೇಲ್, ಕ್ರಷ್ಣಗೋಪಾಲ್ ಮುಂತಾದ ಕರ್ನಾಟಕದ ಸಮಾಜವಾದಿಗಳು. ಚಿತ್ರದ ಬಲ ತುದಿಯಲ್ಲಿರುವವರು ಕೋಣಂದೂರು ಲಿಂಗಪ್ಪ**

ಶ್ರೀ ಗೋಪಾಲಗೌಡರನ್ನು ಅಂದೇ ನಾನು ಮೊಟ್ಟ ಮೊದಲು ನೋಡಿದ್ದು. ಬಿಳಿ ಖಾದಿ ಜುಬ್ಬ, ಖಾದಿ ಕಚ್ಚೆ ಪಂಚೆ ಉಟ್ಟು, ಬೂಟುಗಳನ್ನು ಹಾಕಿದ್ದ ಹೆಜ್ಜೆಗಳನ್ನು ಶಿಸ್ತಿನಿಂದ ಹೆಜ್ಜೆಗಳನ್ನು ಹಾಕುತ್ತಾ ಅವರೊಂದಿಗೆ ಹೊರಬೈಲು ಕಡೆ ನಡೆದೆನು. ನಾನು ಅವರ ನಡಿಗೆ ನೋಟಗಳಿಗೆ ಆಕರ್ಷಿತನಾಗಿ, ಅವರ ಹಿಂದೆಯೇ ಸ್ವಲ್ಪ ದೂರ ಹೋದೆ. ಅದೇಕೋ ಗೋಪಾಲಗೌಡರು ಹಿಂದಿರುಗಿ ನೋಡಿದರು. ನನ್ನನ್ನು ಕಂಡು ಮುಗುಳ್ನಗುತ್ತಾ ಬನ್ನಿ ಎಂದು ಕರೆದರು. ನಾನು ಅವರ ಹತ್ತಿರ ಹೋದೆ. ನಾನು ಯಾರೆಂದು, ಹೆಸರೇನು ಎಂದು ಮುಂತಾಗಿ ಕೇಳಿದರು ನಾನು ಉತ್ತರಿಸಿದೆ. ಆಗ್ಗೆ ಅವರೊಂದಿಗಿದ್ದ ಮಂಗಳದ ಶ್ರೀ ಬೆನವಯ್ಯಗೌಡರನ್ನ, ಹೊರಬೈಲು ಶ್ರೀ ಲೋಕಯ್ಯನವರನ್ನ, ಕಟ್ಟೆಕೊಪ್ಪದ ಶ್ರೀ ಹಿರಿಯಣ್ಣ ನಾಯಕರು, ಶ್ರೀ ಶೇಷನಾಯ್ಕರನ್ನು ಕೇಳಿದರು. ಅವರೆಲ್ಲರೂ ನನ್ನ ಬಗ್ಗೆ ಹೇಳಿದರು. ಶ್ರೀ ಗೋಪಾಲಗೌಡರಿಗೆ ಸಂತೋಷವಾಗಿ ಆಗಲೇ "ಲಿಂಗಪ್ಪ, ನೀವು ನಮ್ಮ ಪಕ್ಷದ ಪರವಾಗಿ ಕೆಲಸ ಮಾಡಿ. ನಿಮ್ಮ ಜೊತೆ ಇನ್ಯಾರು ಇಲ್ಲವೇ?" ಎಂದು ಕೇಳಿದರು. ಆಗ ನಾನು "ಇದ್ದಾರೆ. ಆದರೆ ನನ್ನ ಹಾಗೆ ಕೆಂಪು ಟೋಪಿ ಹಾಕಿಕೊಂಡು ಬಹಿರಂಗವಾಗಿ ಬರುವುದಿಲ್ಲ" ಎಂದೆ. ಅದಕ್ಕೆ ಅವರು "ಆಗಲಿ ಅವರೆಲ್ಲಾ ಕಾಂಗ್ರೆಸ್ ಅಬ್ಬರಕ್ಕೆ ಹೆದರಿರಬಹುದು ಪರವಾಗಿಲ್ಲ, ನೀವು ಮುಂದೆ ನಿಂತು ಕೆಲಸ ಮಾಡಿ ಎಂದರು. ನಾನು ಆಗಲಿ ಎಂದೆ"

ನಾನು ಅಲ್ಲೇ ಹಾಗೇ ನಿಂತೆ. ಅವರೆಲ್ಲರೂ ಮುಂದೆ ಹೋದರು.

ಹೀಗೆ ನಾನು ತೀರ್ಥಹಳ್ಳಿಯಲ್ಲಿ ಶ್ರೀ ಅನಂತಮೂರ್ತಿಯವರ ಭಾಷಣ ಕೇಳಿ, ಕೋಣಂದೂರಿನಲ್ಲಿ ಶಾಂತವೇರಿ ಗೋಪಾಲಗೌಡರನ್ನು ನೋಡಿ, ಸೋಷಲಿಸ್ಟ್ ಆದೆ.

## ಮೂರು ಸಮಾಜವಾದಿ ದಾಖಲೆಗಳ




ಮಾನವ

ಕನ್ನಡ ಮಾಸಪತ್ರಿಕೆ

4. 9. 1970

MANAVA MONTHLY IN KANNADA




ಕನ್ನಡ ಸಮಾಜವಾದಿ ಯುವಜನ ಸಭಾ

(ಕರ್ನಾಟಕ ರಾಜ್ಯ)

305, ಸುಬೇದಾರ್ ಛತ್ರಂ ರಸ್ತೆ, ಬೆಂಗಳೂರು-9

ಇತಿ ತಮ್ಮವ



ಸಂಯುಕ್ತ ಸೋಷಲಿಸ್ಟ್ ಪಾರ್ಟಿ (ಕರ್ನಾಟಕ)

ಸದಸ್ಯತ್ವ ಅರ್ಜಿ

ಇಸವಿ 1967 ಅ. ಸಂಖ್ಯೆ 431

ಸದಸ್ಯನ ಹೆಸರು

ವಯಸ್ಸು 26

ವಿಳಾಸ

ಕ್ಷೇತ್ರ ಜಿಲ್ಲೆ


ಶುಲ್ಕ 0.50 ಪೈಸೆ ಸಂದಿದೆ. ತಾರೀಖು

ನೊಂದಾಯಿಸುವವರ ಸಹಿ ಪ್ರಧಾನ ಕಾರ್ಯದರ್ಶಿ.

ಪ್ರಧಾನ ಲೇಖನ

# ಆಧುನಿಕ ನಾಗರೀಕತೆಯೂ, ಈ ಭೂಮಿಯೂ...

ಮೂಲ :ರಸಲ್ ಮೀನ್ಸ್
ಕನ್ನಡಕ್ಕೆ: ಟಿ.ಎಲ್ ರೇಖಾಂಬ



**ಯೂ**ರೋಪಿನಲ್ಲಿ ೧೮ರಿಂದ ೧೭ನೇ ಶತಮಾನದವರೆಗಿನ ಕಾಲಾವಧಿಯಲ್ಲಿ ತೆರೆದುಕೊಂಡಿತೆಂದು ಹೇಳಲಾದ 'ಜ್ಞಾನಯುಗ' (ಪುನರುಜ್ಜೀವನ ಯುಗ–) ಧರ್ಮ, ವಿಜ್ಞಾನ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ಮಾನವನ ಬದುಕಿನ ಗುಣಮಟ್ಟವನ್ನು ಬದಲಾಯಿಸಿತೆಂದು ನಾವು ನಂಬಿದ್ದೇವೆ ಅಥವಾ ನಮ್ಮನ್ನು ನಂಬಿಸಲಾಗಿದೆ. ಈ ಬದಲಾವಣೆಗಳೇ ಆಧುನಿಕ ಎಂದು ಹೇಳಲಾಗುತ್ತಿರುವ ನಾಗರೀಕತೆಯ ಆಧಾರ ಸ್ತಂಭಗಳೆಂದೂ ಹೇಳಲಾಗುತ್ತಿದೆ. ಆದರೆ ಯೂರೋಪ್(ಅರ್ಥಾತ್ ಪಶ್ಚಿಮ ಜಗತ್ತು) ಈ ನಾಗರಿಕ ಜಗತ್ತಿನ ಇತರ ದೇಶಗಳನ್ನು, ಅಲ್ಲಿನ ಜನಸಮುದಾಯಗಳನ್ನು ಏನು ಮಾಡಿವೆ? ಅವನ್ನು ಹಿಂದುಳಿದ ದೇಶಗಳೆಂದೂ, ಮೂಢ ಜನಸಮುದಾಯಗಳೆಂದೂ ಕರೆದು ಮತ್ತು ಸ್ವತಃ ಅವೂ ಹಾಗೆಂದು ಭಾವಿಸುವಂತೆ ಮಾಡಿ ಅವುಗಳ ಮೇಲೆ ಸವಾರಿ ಮಾಡಲು ದಾರಿ ಮಾಡಿಕೊಂಡಿತಷ್ಟೆ. ಇಂದು ವೈವಿಧ್ಯಮಯ ಅಧ್ಯಯನಗಳಿಗೆ ವಸ್ತುವಾಗಿರುವ ವಸಾಹತುಶಾಹಿಯ ಬೇರುಗಳು ಆರಂಭವಾಗುವುದು ಇಲ್ಲಿಯೇ. ಹಾಗಾಗಿಯೇ ಗಾಂಧಿ ಒಂದು ಶತಮಾನದ ಹಿಂದೆಯೇ ಆಧುನಿಕ ನಾಗರೀಕತೆ ಎಂದರೆ ಮತ್ತೇನಲ್ಲ, ಅದೊಂದು ವಸಾಹತುಶಾಹಿಯ ಉಪಕರಣ ಎಂದಿದ್ದರು.


ಈ ಉಪಕರಣ ಪರೋಕ್ಷವಾಗಿ ಕೆಲಸ ಮಾಡಿದ ಉತ್ತರ ಅಮೇರಿಕಾ 'ಜ್ಞಾನಯುಗ'ದ ವಿಚಾರ ಮತ್ತು ಸಾಧನ–ಸಲಕರಣೆಗಳೊಂದಿಗೆ ಅಲ್ಲಿಗೆ ಹೋದ ಯೂರೋಪಿಯನ್ನರು ಅಲ್ಲಿನ ಮೂಲನಿವಾಸಿಗಳಾದ ರೆಡ್ ಇಂಡಿಯನ್‌ರನ್ನು(ಅವರು ತಮ್ಮನ್ನು ಅಮೇರಿಕನ್ ಇಂಡಿಯನ್‌ರೆಂದು ಕರೆದುಕೊಳ್ಳುವರು) ಬೇಟೆಯಾಡಿ, ಅಲ್ಲಿನ ನಿಸರ್ಗ ಸಂಪತ್ತನ್ನು ತಮ್ಮ ಸುಖ ಜೀವನ ಕಟ್ಟಿಕೊಳ್ಳುವ ಸಲುವಾಗಿ ಸೂರೆ ಮಾಡಿ 'ಆಧುನಿಕ ಅಮೇರಿಕಾ' ಎಂಬ ಮಾಯಾಜಿಂಕೆಯನ್ನು ಸೃಷ್ಟಿಸಿ ಜಗತ್ತಿನ ಮುಂದೆ ಆಡಬಿಟ್ಟಿದ್ದಾರೆ.

ಇದರ ವಿರುದ್ಧ ನಿಧಾನವಾಗಿ ಎಚ್ಚೆತ್ತುಕೊಂಡಿರುವ ರೆಡ್ ಇಂಡಿಯನ್ ಜನಸಮುದಾಯ ಇತ್ತೀಚಿನ ವರ್ಷಗಳಲ್ಲಿ ಸಂಘಟಿತರಾಗಿ ತನ್ನ ಜೀವನ ದೃಷ್ಟಿ, ಜೀವನ ವಿಧಾನ, ಜೀವನ ಮೌಲ್ಯಗಳು ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಪುನರನ್ವೇಷಿಸಿಕೊಂಡು ಕಾಪಾಡಿಕೊಳ್ಳಲು ಒಂದು ದೊಡ್ಡ ಆಂದೋಲನವನ್ನೇ ನಡೆಸಿದ್ದಾರೆ. ಅದರ ಒಬ್ಬ ಮುಂಚೂಣಿ ನಾಯಕನಾಗಿದ್ದವನೇ ರಸಲ್ ಮೀನ್ಸ್. ಈತ ಇಲ್ಲಿ ರೆಡ್ ಇಂಡಿಯನ್ನರ ಪರವಾಗಿ ಮಾತನಾಡುತ್ತಾ, ಹೇಗೆ ವೈಜ್ಞಾನಿಕತೆ ಎಂಬ ಐರೋಪ್ಯ ಲೋಕದೃಷ್ಟಿಯು ಆಧುನಿಕತೆಯ ಹೆಸರಿನಲ್ಲಿ ತಾನು ರೂಪಿಸಿಕೊಂಡ ಸಿದ್ಧಾಂತಗಳ ಮೂಲಕ ಇಡೀ ಜೀವ ಜಗತ್ತಿಗೆ ತಾಯಿ ಸಮಾನವಾಗಿರುವ ನಮ್ಮ ಭೂಮಿಯನ್ನು ನಾಶ ಮಾಡಿ ಮಾನವ ಜನಾಂಗವನ್ನು ಅಸಹಾಯಕತೆ ಮತ್ತು ಅತಂತ್ರಗಳೆಡೆಗೆ ದೂಡುತ್ತಿದೆ ಎಂಬುದನ್ನು ಸವಿವರವಾಗಿ ಹೇಳಿದ್ದಾನೆ. ಆದರೆ ಇದು ರೆಡ್ ಇಂಡಿಯನ್ನರ ಪರವಾಗಿ ಮಾತ್ರ ಆಡಿದ ಮಾತುಗಳಲ್ಲ. ಈ ಭೂಮಿ ತಾಯಿಯ, ಅದರ ಮೇಲಿನ ಜೀವಜಗತ್ತಿನ ನಾಶದ ಬಗ್ಗೆ ಆತಂಕಿತರಾಗಿರುವ ಎಲ್ಲರ ಪರವಾಗಿ ಆಡಲಾಗಿರುವ ಮಾತುಗಳಾಗಿವೆ.

ಇಲ್ಲಿನ ರಸಲ್‌ನ ಮಾತುಗಳು ಒಂದು ಅತಿಗೆ ಹೋಗಿ ಆಡಿರುವ ಮಾತುಗಳಂತೆ ಕೇಳಿಸಿದರೂ, ಈ ಭೂಮಿಯ ಮೇಲೆ ಈಗ ಆಧುನಿಕತೆಯ ಹುಚ್ಚಿನಲ್ಲಿ, ಅಭಿವೃದ್ಧಿಯ ಹೆಸರಿನಲ್ಲಿ ಪ್ರೋತ್ಸಾಹಿಸಲಾಗುತ್ತಿರುವ ಬದುಕಿನ ಶೈಲಿ ಮತ್ತು ಗತಿಗಳಲ್ಲಿ ಏನೋ ಒಂದು ಮೂಲಭೂತ ದೋಷವಿದೆ ಎಂಬುದು ನಮಗೆ ಮನಗಾಣಿಸಬಲ್ಲುದಾಗಿದೆ. ಈತನ ಮಾತುಗಳಲ್ಲಿ ನಮ್ಮ ಬುದ್ಧ–ಗಾಂಧಿ–ಲೋಹಿಯಾರ ವಿಚಾರಗಳು ಅಲ್ಲಲ್ಲಿ ಹಣಕಿರುವುದನ್ನು ನಾವು ಗಮನಿಸಬಹುದು.

೧೯೮೦ರ ಜುಲೈ ತಿಂಗಳ ಬೇಸಿಗೆಯಲ್ಲಿ ದಕ್ಷಿಣ ಡಕೋಟದಲ್ಲಿ ಜಗತ್ತಿನ ಎಲ್ಲ ಕಡೆಗಳಿಂದ ಬಂದು ಸೇರಿದ್ದ ಸಾವಿರಾರು ಜನರ 'ಬ್ಲ್ಯಾಕ್ ಹಿಲ್ಸ್ ಇಂಟರ್‌ನ್ಯಾಷನಲ್ ಸರ್ವೈವಲ್' ಕೂಟದಲ್ಲಿ ರಸಲ್ ಮಾಡಿದ ಭಾಷಣವಿದು. ಸಹಜವಾಗಿಯೇ ಇದು ಈಗ ಯೂರೋಪಿನ ಚಿಂತನಾ ಕ್ರಮದ ವಾರಸುದಾರನಾಗಿರುವ ಅಮೇರಿಕನ್ ಪ್ರಭುತ್ವವನ್ನು ಕೆರಳಿಸಿತ್ತು. ಹಲವು ವರ್ಷಗಳ ಕಾಲ ಅಮೇರಿಕನ್ ಇಂಡಿಯನ್ ಚಳುವಳಿಯ ಮುಂಚೂಣಿಯಲ್ಲಿದ್ದ ಈ ರಸೆಲ್ ಮೀನ್ಸ್ ಒಬ್ಬ *ಒಗ್ಲಾಲ ಲಕೋಟ* ಬುಡಕಟ್ಟಿನವ. ೧೯೩೯ರಲ್ಲಿ ಹುಟ್ಟಿದ ಈತ ಹೋರಾಗಾರನಷ್ಟೇ ಅಲ್ಲದೆ ನಟ, ಸಂಗೀತಗಾರ ಮತ್ತು ಬರಹಗಾರ ಕೂಡ ಆಗಿದ್ದ–ಸಂಪಾದಕ

## ನಾವು ಬದುಕಲು ಯೂರೋಪ್ ಸಾಯಬೇಕು!



ರೆಡ್ ಇಂಡಿಯನ್‌ರ ಮೂಲ ನೆಲೆಯಾದ ದ. ಡಕೋಟಾದ ಬ್ಲ್ಯಾಕ್ ಹಿಲ್ಸ್

**ವ**ಸ್ತುಸ್ಥಿತಿಯನ್ನು ವಿವರಿಸಲು ಈ ಮೇಲಿನ ಶೀರ್ಷಿಕೆಯ ರೀತಿಯ ಹೇಳಿಕೆ ನೀಡುವುದನ್ನು ಬಿಟ್ಟು ನನಗೆ ಬೇರೆ ದಾರಿಯಿರಲಿಲ್ಲ. ಏಕೆಂದರೆ ಬರೆಯುವುದನ್ನು ನಾನು ಸುತರಾಂ ಇಷ್ಟಪಡುವುದಿಲ್ಲ. ಈ 'ಬರವಣಿಗೆ'ಯೆಂಬ ಪ್ರಕ್ರಿಯೆಯೇ ಯೂರೋಪಿಯನ್ನರ 'ವೈಚಾರಿಕ ಚಿಂತನೆ' ಎಂಬ ಪರಿಕಲ್ಪನೆಯ ಕೂಸು. ಆಡುವ ಮಾತುಗಳಿಗೆ ಸಿಗದ ಮಹತ್ವ ಬರೆದದ್ದಕ್ಕೆ ಸಿಕ್ಕಿಬಿಡುತ್ತದೆ. ನನ್ನ ಸಂಸ್ಕೃತಿಯಾದ *ಲಕೋಟ* ಸಂಸ್ಕೃತಿಗೆ ಒಂದು ಮೌಖಿಕ ಪರಂಪರೆ ಇದೆ. ಆದ್ದರಿಂದಲೇ ಸಾಮಾನ್ಯವಾಗಿ ನಾನು ಬರೆಯುವ ಯೋಚನೆಯನ್ನು ತಳ್ಳಿಹಾಕಿಬಿಡುತ್ತೇನೆ. 'ಬರವಣಿಗೆ' ಅನ್ನುವುದು, ಬಿಳಿಯರಿಗೆ, ಬಿಳಿಯೇತರ ಜನರ ಸಂಸ್ಕೃತಿಯನ್ನು ನಾಶಮಾಡುವ, ಮಾತಿನ ಮೂಲಕವೇ ಕಟ್ಟಿಕೊಂಡ ಸಂಬಂಧಗಳ ಮೇಲೆ ಅಮೂರ್ತ ವಿಚಾರಗಳನ್ನು ಹೇರುವ ಒಂದು ಉಪಾಯ. ಆದ್ದರಿಂದ ನೀವೀಗ ಏನನ್ನು ಓದುತ್ತಿದ್ದೀರೋ ಅದು ನಾನು ಬರೆದದ್ದಲ್ಲ. ನಾನು ಹೇಳಿದ್ದನ್ನು ಬೇರೆಯವರು ಬರೆದುಕೊಂಡಿರುವುದು. ಬಿಳಿಯರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಿರುವ ಒಂದೇ ದಾರಿಯೆಂದರೆ ಈ ಜೀವವಿಲ್ಲದ ಒಣಗಿದ ಹಾಳೆಗಳ ಮೂಲಕ ಮಾತ್ರ. ಆದ್ದರಿಂದ ನನ್ನ ಮಾತುಗಳನ್ನು ದಾಖಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಈ ನನ್ನ ಮಾತುಗಳು ಅವರನ್ನು ತಲುಪುತ್ತದೆಯೋ ಇಲ್ಲವೋ ಎಂದು ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ, ಅವರು ಯಾವುದನ್ನೂ ಕೇಳಿಸಿಕೊಳ್ಳಲಾರರು, ನೋಡಲಾರರು ಮತ್ತು ಕೇವಲ ಓದಬಲ್ಲರು ಎಂಬುದು ನಮಗೆ ಇತಿಹಾಸದುದ್ದಕ್ಕೂ ಗೊತ್ತಾಗುತ್ತಾ ಬಂದಿದೆ. (ಕೆಲವು ಅಪವಾದಗಳೇನೋ ಇವೆ. ಆದರೆ ಆ ಅಪವಾದಗಳೂ ನನ್ನ ವಾದವನ್ನೇ ಹೆಚ್ಚು ಬಲಪಡಿಸುತ್ತವೆ.)

ನನಗೆ ಹೆಚ್ಚು ಕಾಳಜಿ ಇರುವುದು ಅಮೇರಿಕನ್ ಇಂಡಿಯನ್ನರ ಬಗ್ಗೆ. ಅದರಲ್ಲೂ ಬಿಳಿಯರ ಯೂನಿವರ್ಸಿಟಿಗಳಿಗೆ ಮತ್ತು ಸಂಸ್ಥೆಗಳಿಗೆ ಸೇರಿಕೊಳ್ಳಲಾರಂಭಿಸಿರುವ ಅಮೇರಿಕನ್ ಇಂಡಿಯನ್ ವಿದ್ಯಾರ್ಥಿಗಳು,

ಮತ್ತಿತರರ ಬಗ್ಗೆ. ಆದರೆ ಈ ನನ್ನ ಕಾಳಜಿಗೂ ಮಿತಿಗಳಿವೆ. ಕೆಲವರು ರೆಡ್ ಇಂಡಿಯನ್ನರಾಗಿದ್ದೂ ಕೂಡ ಬಿಳಿಯ ಮನಸ್ಸನ್ನು ಬೆಳೆಸಿಕೊಂಡಿರುವ ಸಾಧ್ಯತೆಗಳಿವೆ. ಅದು ಅವರ ವೈಯಕ್ತಿಕ ಆಯ್ಕೆಯಾಗಿದ್ದರೆ, ಇರಲಿ. ಅವರಿಗೆ ನನ್ನಿಂದೇನೂ ಉಪಯೋಗವಿಲ್ಲ. ಇವತ್ತು ಇದು ಅಮೆರಿಕನ್ ಇಂಡಿಯನ್ನರ ಸಾಂಸ್ಕೃತಿಕ ಸರ್ವನಾಶಕ್ಕಾಗಿ ಯೂರೋಪಿಯನ್ನರು ರೂಪಿಸಿರುವ ಹುನ್ನಾರದ ಒಂದು ಭಾಗವಷ್ಟೆ. ಆದ್ದರಿಂದ ನಾನು ಹೆಚ್ಚು ಚಿಂತಿಸುತ್ತಿರುವುದು, ಈ ಸರ್ವನಾಶವನ್ನು ಪ್ರತಿರೋಧಿಸುವ ಮತ್ತು ಈ ಸಂಬಂಧವಾಗಿ ಹೇಗೆ ಮುಂದುವರಿಯಬೇಕೆಂಬ ವಿಷಯದಲ್ಲಿ ಗೊಂದಲಕ್ಕೊಳಗಾಗಿರುವ ನನ್ನ ಜನರ ಬಗ್ಗೆ.

ಯೂರೋಪಿಯನ್ ಸಂಸ್ಕೃತಿಯ ಪ್ರಭಾವಕ್ಕೊಳಗಾಗದೇ ಇರಲು ಪ್ರತಿಯೊಬ್ಬ ಅಮೆರಿಕನ್ ಇಂಡಿಯನ್ನನೂ ಶಕ್ತಿ ಮೀರಿ ಪ್ರಯತ್ನಿಸಬೇಕಾಗುತ್ತದೆ. ಅದಕ್ಕೆ ಬೇಕಾಗಿರುವ ಶಕ್ತಿ, ನಮ್ಮ ಹಿರಿಯರು ಕಾಪಾಡಿಕೊಂಡು ಬಂದಿರುವ ಪರಂಪರಾಗತ ಮೌಲ್ಯಗಳಿಂದ ಬರಬೇಕು, ಭವಿಷ್ಯದ ಭರವಸೆಗಳಿಂದ ಬರಬೇಕು, ನಾಲ್ಕೂ ದಿಕ್ಕುಗಳಿಂದ ಮತ್ತು ಅವುಗಳೊಂದಿಗಿನ ನಮ್ಮ ಸಂಬಂಧಗಳಿಂದ ಬರಬೇಕೇ ಹೊರತು ಯಾವುದೋ ಒಂದು ಪುಸ್ತಕದ ಪುಟಗಳಿಂದಲ್ಲ ಅಥವಾ ನೂರಾರು ಪುಸ್ತಕಗಳನ್ನೋದುವುದರಿಂದಲೂ ಅಲ್ಲ. ಯಾವ ಯೂರೋಪಿಯನ್ನನೂ, ಒಬ್ಬ *ಲಕೋಟನಿಗೆ* *ಲಕೋಟನಾಗುವುದನ್ನು*, ಒಬ್ಬ *ಹೋಪಿಗೆ*(ಲಕೋಟ, ಹೋಪಿ–ಅಮೇರಿಕಾ ಮೂಲನಿವಾಸಿಗಳ ಬುಡಕಟ್ಟು ಪಂಗಡಗಳು) *ಹೋಪಿಯಾಗುವುದನ್ನು* ಕಲಿಸಲು ಸಾಧ್ಯವಿಲ್ಲ. ಬುಡಕಟ್ಟುಗಳ ವಿಷಯದಲ್ಲೋ ಅಥವಾ ಶಿಕ್ಷಣದ ವಿಷಯದಲ್ಲೋ ಅಥವಾ ಮತ್ತಾವುದೋ ವಿಷಯದಲ್ಲೋ ಪಡೆದ ಸ್ನಾತಕೋತ್ತರ ಪದವಿಯೂ ಕೂಡ ಒಬ್ಬ ವ್ಯಕ್ತಿಯನ್ನು ಮನುಷ್ಯನನ್ನಾಗಿ ಮಾಡಲು ಸಾಧ್ಯವಿಲ್ಲ ಅಥವಾ ಒಬ್ಬ ವ್ಯಕ್ತಿಗೆ ತನ್ನ ಪರಂಪರೆಯ ಅರಿವನ್ನು ಮೂಡಿಸಲು ಸಾಧ್ಯವಿಲ್ಲ. ಅದು ಅವನನ್ನು ಮಾನಸಿಕವಾಗಿ ಯೂರೋಪಿಯನ್‌ನನ್ನಾಗಿ, ತನ್ನ ಸಂಸ್ಕೃತಿಗೇ ಪರಕೀಯನನ್ನಾಗಿ ಮಾಡಬಹುದಷ್ಟೇ.

ಇಲ್ಲಿ ಸ್ವಲ್ಪ ಗೊಂದಲಗಳಿರುವಂತೆ ಕಾಣುತ್ತದೆ. ಆದ್ದರಿಂದ ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಬೇಕು. ಅದೇನೆಂದರೆ, ನಾನು ಯೂರೋಪಿಯನ್ ಅಥವಾ ಮಾನಸಿಕ ಯೂರೋಪಿಯನ್ ಎಂದು ಪ್ರಸ್ತಾಪಿಸುವಾಗ, ತಪ್ಪು ಕಲ್ಪನೆಗಳಿಗೆ ಅವಕಾಶವಾಗಬಾರದು. ಅಂದರೆ, ಒಂದು ಕಡೆ, ಸಾವಿರಾರು ವರ್ಷಗಳಿಂದ ನಡೆದ ನರಮೇಧದ(ಮೂಲನಿವಾಸಿ ರೆಡ್ ಇಂಡಿಯನ್ನರನ್ನು ಅಲ್ಲಿಗೆ ವಲಸೆ ಬಂದ ಬಿಳಿಯರು ನಾಗರೀಕತೆಯ ಹೆಸರಿನಲ್ಲಿ ನಡೆಸಿದ್ದು) ಪರಿಣಾಮಗಳು, ಅದತ ಭಾಗವಾಗಿ ಮೂಡಿದ ಪ್ರಗತಿ–ವಿರೋಧ ಮತ್ತು ಯೂರೋಪಿಯನ್ ವೈಚಾರಿಕತೆಯ ಬೆಳವಣಿಗೆಗಳು ಕೆಟ್ಟದ್ದೆಂದೂ, ಮತ್ತೊಂದು ಕಡೆ ಕೆಲವು ಹೊಸ ಕ್ರಾಂತಿಕಾರೀ ವಿಚಾರಗಳ ಬೆಳವಣಿಗೆಗಳು ಒಳ್ಳೆಯದೆಂದೂ ನಾನು ಹೇಳುತ್ತಿಲ್ಲ. ಇಲ್ಲಿ ಹೊಸ ಕ್ರಾಂತಿಕಾರೀ ವಿಚಾರಗಳೆಂದು ನಾನು ಸಾಮಾನ್ಯವಾಗಿ ಪ್ರಸ್ತಾಪಿಸುತ್ತಿರುವುದು ಮಾರ್ಕ್ಸ್‌ವಾದ, ಅರಾಜಕತಾವಾದ, ಎಡಪಂಥೀಯವಾದ ಇತ್ಯಾದಿಗಳನ್ನು. ಈ ಸಿದ್ಧಾಂತಗಳೆಲ್ಲ ಇತರ ಯೂರೋಪಿಯನ್ ಬೌದ್ಧಿಕ ಪರಂಪರೆಯಿಂದ ಪ್ರತ್ಯೇಕಿಸಿ ನೋಡಬಹುದು ಎಂದು ನಾನು ನಂಬುವುದಿಲ್ಲ. ಅದೇ ಹಾಡು, ಅದೇ ರಾಗ ಅಷ್ಟೇ.


ಈ 'ಕ್ರಾಂತಿಕಾರಿ ವಿಚಾರಧಾರೆ'ಯ ಪ್ರಕ್ರಿಯೆಯು ಬಹಳ ಹಿಂದೆಯೇ ಆರಂಭವಾಗಿದೆ. ಉದಾಹರಣೆಗೆ, ನ್ಯೂಟನ್ನನು ಇಡೀ ಬ್ರಹ್ಮಾಂಡವನ್ನೇ ಒಂದು ಸರಳ ಗಣಿತೀಯ ಸಮೀಕರಣಕ್ಕೆ ಇಳಿಸಿ ಭೌತಶಾಸ್ತ್ರ ಮತ್ತು ಇತರ ನೈಸರ್ಗಿಕ ವಿಜ್ಞಾನ ಶಾಸ್ತ್ರಗಳಲ್ಲಿ ಬಹುದೊಡ್ಡ ಕ್ರಾಂತಿಯನ್ನುಂಟು ಮಾಡಿದ. ಡಿಕಾರ್ಟನು ಸಂಸ್ಕೃತಿಯ ವಿಷಯದಲ್ಲಿ ಅಂಥದೇ ಕ್ರಾಂತಿಯನ್ನು ಮಾಡಿದ. ಜಾನ್ ಲಾಕ್ ರಾಜಕೀಯಶಾಸ್ತ್ರದಲ್ಲಿ, ಆಡಮ್ ಸ್ಮಿತ್ ಅರ್ಥಶಾಸ್ತ್ರದಲ್ಲಿ ಇದನ್ನೇ ಮಾಡಿದರು. ಈ ಪ್ರತಿಯೊಬ್ಬ ಚಿಂತಕನೂ ಮಾನವನ ಅಸ್ತಿತ್ವದ ಅಧ್ಯಾತ್ಮಿಕತೆಯ ಒಂದೊಂದು ಆಯಾಮವನ್ನು ತೆಗೆದುಕೊಂಡು ಅಮೂರ್ತ ಸಂಕೇತಗಳನ್ನಾಗಿ ಪರಿವರ್ತಿಸಿದರು. ಕ್ರಿಶ್ಚಿಯಾನಿಟಿ ಎಲ್ಲಿ ಕೊನೆಗೊಂಡಿತ್ತೋ ಅಲ್ಲಿಂದ ಇವರು ತಮ್ಮ 'ಕ್ರಾಂತಿಕಾರಿ ವಿಚಾರಧಾರೆ'ಯನ್ನು ಆರಂಭಿಸಿದರು–ಬುದ್ಧಿಜೀವಿಗಳ ಮಾತಿನಲ್ಲಿ ಹೇಳುವುದಾದರೆ ಕ್ರಿಶ್ಚಿಯನ್ ಮತವನ್ನು 'ಮತಾತೀತ'(ಜಛಿಣಟಚಿಡಿಜ)ಗೊಳಿಸಿದರು– ಮತ್ತು ಹಾಗೆ ಮಾಡುವುದರ ಮೂಲಕ ಯೂರೋಪ್ ಮತ್ತಷ್ಟು ಪ್ರಬಲವಾಗಲು ಮತ್ತು ವಿಸ್ತರಣವಾದೀ ಸಂಸ್ಕೃತಿಯಾಗಿ ಬೆಳೆಯಲು ಅನುಕೂಲ ಮಾಡಿಕೊಟ್ಟರು. ಈ ಎಲ್ಲ ವೈಚಾರಿಕ ಕ್ರಾಂತಿಗಳು ಯೂರೋಪಿಯನ್ ಮನಸ್ಸನ್ನು ಇನ್ನಷ್ಟು ಅಮೂರ್ತಗಳಿಸುವುದರ ಜೊತೆಗೆ ಬ್ರಹ್ಮಾಂಡದ ಅದ್ಭುತವಾದ ಸಂಕೀರ್ಣತೆ ಮತ್ತು ಆಧ್ಯಾತ್ಮಿಕತೆಯನ್ನು ಅಳಿಸಿ ಹಾಕಿ, ಅದರ ಬದಲಿಗೆ ಎಲ್ಲವನ್ನೂ ತಾರ್ಕಿಕವಾಗಿ ಅಂಕಿ–ಅಂಶಗಳ ಆಧಾರದ ಮೇಲೆ ವಿವರಿಸುವ ಯಾಂತ್ರಿಕ ಮಾದರಿಯನ್ನು ಬೆಳೆಸಿದವು. ಇದೇ ಮುಂದೆ ಯೂರೋಪಿಯನ್ ಮನಸ್ಸಿನಲ್ಲಿ 'ದಕ್ಷತೆ' ಎನಿಸಿಕೊಂಡಿತು. ಯಾಂತ್ರಿಕವಾದದ್ದೆಲ್ಲವೂ ಪರಿಪೂರ್ಣ– ಆ ಕ್ಷಣದಲ್ಲಿ ಯಾಂತ್ರಿಕತೆಗೆ ಪೂರಕವಾಗಿ ಯಾವೆಲ್ಲ ಮಾದರಿಗಳು ಕೆಲಸ ಮಾಡುತ್ತವೋ–ಅವು ಸರಿಯಲ್ಲ ಎಂದು ಕಾಣುತ್ತಿದ್ದರೂ ಕೂಡ–ಅವುಗಳೇ ಸರಿ ಎಂದು ಪರಿಗಣಿಸಲಾಗುತ್ತಿತ್ತು. ಇದೇ ತತ್ಕಾಲೀನತೆಯ ಕಾರಣಕ್ಕೆ ಯೂರೋಪಿಯನ್ ಮನಸ್ಸಿನಲ್ಲಿ 'ಸತ್ಯ'ವು ಬಹಳ ವೇಗವಾಗಿ ಬದಲಾಗುತ್ತಿರುತ್ತದೆ. ಇಂಥಾ ಪ್ರಕ್ರಿಯೆಯ ಫಲಗಳೂ ಕೂಡ ತತ್ಕಾಲಿಕ ಅಥವಾ ಅಲ್ಪಕಾಲಿಕವಾಗಿರುತ್ತದೆ. ಆದ್ದರಿಂದ ಇದು ನಿರಂತರವಾಗಿ ಹಳೆಯ ಮಾದರಿಗಳನ್ನು ಕೈಬಿಡುತ್ತಾ, ಯಾಂತ್ರಿಕತೆಗೆ ಪೂರಕವಾದ ಹೊಸ ಮಾದರಿಗಳನ್ನು ಕಂಡುಹಿಡಿಯುತ್ತಾ, ಚಲಾವಣೆಯಲ್ಲಿಡುತ್ತಾ ಸಾಗುತ್ತಿರುತ್ತದೆ.

ನ್ಯೂಟನ್, ಡಿಕಾರ್ಟ್, ಲಾಕ್ ಮತ್ತು ಸ್ಮಿತ್‌ರ ಚಿಂತನೆಗಳಿಗೆ ಹೆಗೆಲ್ ಮತ್ತು ಮಾರ್ಕ್ಸ್ ವಾರಸುದಾರರಾದರು. ಹೆಗೆಲ್ ಮೊದಲು ದೈವಶಾಸ್ತ್ರಗಳನ್ನು ಮತಾತೀತಗೊಳಿಸುವ ಕೆಲಸವನ್ನು ಮಾಡಿದ–ಅವನ ಮಾತಿನಲ್ಲೇ ಹೇಳುವುದಾದರೆ–ಅವನು, ಯೂರೋಪ್ ಯಾವ ಮತೀಯ ಚಿಂತನೆಗಳ ಮೂಲಕ ಈ ಜಗತ್ತನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿತ್ತೋ ಆ ಚಿಂತನೆಗಳನ್ನು ಮತಾತೀತಗೊಳಿಸಿದ. ನಂತರ ಮಾರ್ಕ್ಸ್, ಹೆಗೆಲ್‌ನ ದರ್ಶನಗಳನ್ನು ಭೌತವಾದದ ಪರಿಭಾಷೆಯಲ್ಲಿ ಪ್ರಸ್ತುತಪಡಿಸಿದ. ಅಂದರೆ, ಮಾರ್ಕ್ಸ್ ತನ್ನದೇ ಶೈಲಿಯಲ್ಲಿ ಇಡಿಯಾಗಿ ಹೆಗೆಲ್‌ನ ದರ್ಶನಗಳಲ್ಲಿದ್ದ ಆಧ್ಯಾತ್ಮಿಕತೆಯನ್ನೇ ಕಳಚಿ ಹಾಕಿದ**! ಈಗ ಇದನ್ನು** ಯೂರೋಪ್‌ನ ಭವಿಷ್ಯದ ಕ್ರಾಂತಿಕಾರೀ ಶಕ್ತಿಯಾಗಿ ಕಾಣಲಾಗುತ್ತಿದೆ. ಇದು ಯೂರೋಪಿಯನ್ನರಿಗೆ ಕ್ರಾಂತಿಕಾರಿಯಾಗಿ ಕಾಣಬಹುದು. ಆದರೆ ಅಮೆರಿಕನ್ ಇಂಡಿಯನ್ನರಿಗೆ, ಇದು ಯೂರೋಪಿಯನ್ನರ 'ಇರುವುದು ಮತ್ತು ಪಡೆಯುವುದು'– ಈ ಎರಡರ ನಡುವಿನ ಆ ಅದೇ ಹಳೆಯ ಸಂಘರ್ಷದ ಇನ್ನಷ್ಟು ಉತ್ಕಟ ರೂಪವಷ್ಟೆ. ಯೂರೋಪಿಯನ್ ಸಾಮ್ರಾಜ್ಯಶಾಹಿಯ ಹೊಸ ಮಾರ್ಕ್ಸ್‌ವಾದಿ ರೂಪದ ಬೇರುಗಳು, ನ್ಯೂಟನ್, ಹೆಗೆಲ್ ಇತ್ಯಾದಿ ಚಿಂತಕರ ಪರಂಪರೆಯೊಂದಿಗೆ ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದಿಗಳು ಹೊಂದಿರುವ ಸಂಬಂಧಗಳಲ್ಲಿ ಕಾಣಸಿಗುತ್ತವೆ.

'ಇರುವು' ಒಂದು ಆಧ್ಯಾತ್ಮಿಕ ಪ್ರಶ್ನೆಯಾದರೆ 'ಗಳಿಸುವುದು' ಒಂದು ಲೌಕಿಕ ಪ್ರಶ್ನೆ. ಪರಂಪರಾಗತವಾಗಿ ಅಮೆರಿಕನ್ ಇಂಡಿಯನ್ನರು ಅತ್ಯುತ್ತಮ ರೀತಿಯಲ್ಲಿ ಬದುಕಲು ಸತತವಾಗಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಸಂಪತ್ತನ್ನು ಕೊಟ್ಟುಬಿಡುವುದರ ಮೂಲಕ, ಬಿಟ್ಟುಬಿಡುವುದರ ಮೂಲಕ 'ಗಳಿಸದೇ ಇರುವುದು' ಈ ಆಧ್ಯಾತ್ಮಿಕ ಪಕ್ರಿಯೆಯ ಭಾಗವಾಗಿತ್ತು ಮತ್ತು ಆಗಿದೆ ಕೂಡ. ಲೌಕಿಕವಾಗಿ 'ಗಳಿಕೆ'ಯೆನ್ನುವುದು ಅಮೆರಿಕನ್ ಇಂಡಿಯನ್ ಸಾಂಪ್ರದಾಯಿಕರಿಗೆ ಬದುಕಿನ ಹುಸಿ ಸ್ಥಾನಮಾನದ ಸೂಚಕವಾಗಿದ್ದರೆ, ಯೂರೋಪಿಯನ್ನರಿಗೆ ಇದು 'ವ್ಯವಸ್ಥೆ ಸರಿಯಾಗಿ ಕೆಲಸ ಮಾಡುತ್ತಿರುವುದರ' ಸಂಕೇತ. ಸ್ಪಷ್ಟವಾಗಿಯೇ ಯೂರೋಪಿಯನ್ ಮತ್ತು ಅಮೆರಿಕನ್ ಇಂಡಿಯನ್ ಜೀವನ ದೃಷ್ಟಿಗಳು ಪರಸ್ಪರ ವಿರುದ್ಧವಾದವುಗಳು. ಮಾರ್ಕ್ಸಿಸಂ ಮತ್ತು ಅಮೆರಿಕನ್ ಇಂಡಿಯನ್ ದೃಷ್ಟಿಕೋನಗಳಂತೂ ಇನ್ನೂ ತದ್ವಿರುದ್ಧ. ಇದರ ಮುಖ್ಯ ಪರಿನಾಮಗಳತ್ತ ನೋಡಿದಾಗ, ಇದೆಲ್ಲ ಬರೀ ಬೌದ್ಧಿಕ ಚರ್ಚೆಗೆ ದಕ್ಕುವ ಸಂಗತಿಯಲ್ಲ ಎಂಬುದು ಗೊತ್ತಾಗುತ್ತದೆ.


ಜಗತ್ತನ್ನು ಅನಾಧ್ಯಾತ್ಮೀಕರಿಸುವ(ಜಢಿಡಿಣಣಚಿಟಖಜ) ಯೂರೋಪಿಯನ್ನರ ಭೌತವಾದಿ ಪರಂಪರೆಯು ಇನ್ನೊಬ್ಬ ಮನುಷ್ಯನನ್ನು ಅಮಾನವಗೊಳಿಸುವ(ಜಜ್ಞಣಟಚಿಟಖಜ) ಮಾನಸಿಕ ಪ್ರಕ್ರಿಯೆಗೆ ಸಮನಾದದ್ದು. ಇತರರನ್ನು ಅಮಾನವಗೊಳಿಸುವುದರಲ್ಲಿ ಯಾರು ನಿಷ್ಣಾತರು? ಯಾಕೆ? ಒಬ್ಬ ಸೈನಿಕ ಯುದ್ಧಕ್ಕೆ ಹೊರಡುವ ಮುನ್ನ ಅನೇಕ ಯುದ್ಧಗಳನ್ನು ನೋಡುವ ಮೂಲಕ ಇದನ್ನು ಕಲಿಯುತ್ತಾನೆ. ಕೊಲೆಗಡುಕನೊಬ್ಬ ಕೊಲೆ ಮಾಡುವುದಕ್ಕೆ ಮುಂಚೆ ಹಾಗೆ ತಯಾರಾಗುತ್ತಾನೆ. ನಾಝಿ ಪಡೆಗಳ ಖಖ ಗಾರ್ಡುಗಳು ಯಾತನಾಶಿಬಿರಗಳಲ್ಲಿನ ಸೆರೆಯಾಳುಗಳನ್ನು ಹಾಗೆ


ನ್ಯೂಟನ್


ಗೆಲಿಲಿಯೋ,


ಆಡಂ ಸ್ಮಿತ್


ಹೆಗಲ್,



ಮಾರ್ಕ್ಸ್

ಕಾಣುತ್ತಿದ್ದರು. ಪೋಲೀಸರೂ ಹಾಗೆ ಮಾಡುತ್ತಾರೆ. ಯುರೇನಿಯಂ ಗಣಿಗಳು ಮತ್ತು ಉಕ್ಕು ಕಾರ್ಖಾನೆಗಳಿಗೆ ಕೆಲಸಗಾರರನ್ನು ಕಳಿಸುವ ಮೊದಲು ಕಾರ್ಪೊರೇಷನ್ ಅಧಿಕಾರಿಗಳು ಇದನ್ನೇ ಮಾಡುತ್ತಾರೆ. ರಾಜಕಾರಣಿಗಳಂತೂ ಅವರ ಕಣ್ಣಿಗೆ ಬಿದ್ದವರೆಲ್ಲರಿಗೂ ಇದನ್ನೇ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಏನಾಗುತ್ತದೆಂದರೆ ಕೊಲ್ಲುವುದಾಗಲೀ, ಇತರರನ್ನು ನಾಶಮಾಡುವುದಾಗಲೀ ತಪ್ಪು ಎನಿಸುವುದಿಲ್ಲ. ಕ್ರಿಶ್ಚಿಯನ್ನರ ದೈವಾಜ್ಞೆಗಳಲ್ಲೊಂದು 'ನೀನು ಕೊಲ್ಲಕೂಡದು, ಕೊನೇ ಪಕ್ಷ ಮನುಷ್ಯರನ್ನು ಕೊಲ್ಲಕೂಡದು' ಎಂದು ಹೇಳುತ್ತದೆ. ಹಾಗಾಗಿ ಇವರ ಕುಟಿಲೋಪಾಯವೆಂದರೆ, ಇವರ ಉದ್ದೇಶ ಸಾಧನೆಗೆ ಸಿಕ್ಕ ಬಲಿಗಳನ್ನು ಮಾನಸಿಕವಾಗಿ ಅಮಾನವಗೊಳಿಸುವುದು. ಹೀಗಾಗಿ ದೈವಾಜ್ಞೆಗಳ ಉಲ್ಲಂಘನೆಯೇ ಒಂದು ಹಿರಿಮೆಯೇ ಆಗಿ ಪರಿವರ್ತಿತವಾಗಿಬಿಡುತ್ತದೆ!

ವಿಶ್ವದ ಅನಾಧ್ಯಾತ್ಮೀಕರಣದ ಹಿನ್ನೆಲೆಯಲ್ಲಿ ಮಾನಸಿಕವಾಗಿ ಪರಿವರ್ತಿಸುವ ಪ್ರಕ್ರಿಯೆಯು ಕೆಲಸಮಾಡುತ್ತಾ ಇಡೀ ಭೂಗ್ರಹವನ್ನೇ ನಾಶಪಡಿಸುವುದೂ ಕೂಡ ಒಳ್ಳೆಯದೇ ಆಗಿಬಿಡುತ್ತದೆ. ಅಮಾನವಗೊಳಿಸುವ ಪ್ರಕ್ರಿಯೆಯಲ್ಲಿನ ಕ್ರೌರ್ಯವನ್ನು ಹೇಗೆ 'ವಿಜಯ ಮತ್ತು ಸ್ವಾತಂತ್ರ್ಯ' ಎಂಬ ಪದಗಳಿಂದ ಸಮರ್ಥಿಸಿಕೊಳ್ಳುತ್ತಾರೋ ಹಾಗೇ 'ಪ್ರಗತಿ ಮತ್ತು ಅಭಿವೃದ್ಧಿ' ಎಂಬ ಮಂತ್ರಗಳಿಂದ ಸರ್ವನಾಶವನ್ನು ಸಮರ್ಥಿಸಿಕೊಳ್ಳುತ್ತಾರೆ. ಉದಾಹರಣೆಗೆ, ರಿಯಲ್ ಎಸ್ಟೇಟ್ ದಂಧೆಕೋರನೊಬ್ಬ ಒಂದಷ್ಟು ಭೂಮಿಯನ್ನು 'ಅಭಿವೃದ್ಧಿ' ಪಡಿಸುವ ನೆಪದಲ್ಲಿ ಕಲ್ಲಿನ ಗಣಿಯನ್ನು ಆರಂಭಿಸಬಹುದು; ಇಲ್ಲಿ 'ಅಭಿವೃದ್ಧಿ' ಎಂದರೆ ಸಂಪೂರ್ಣ ನಾಶ, ಶಾಶ್ವತ ನಾಶ, ಭೂಮಿಯನ್ನೇ ಬಲಿಕೊಡುವ ನಾಶ. ರಸ್ತೆಗಳ ನಿರ್ಮಾಣದ ಮೂಲಕ ಹೆಚ್ಚೆಚ್ಚು ಪ್ರದೇಶಗಳನ್ನು ಅಭಿವೃದ್ಧಿ ಸಾಧ್ಯ ಎಂಬ ಈ ಯೂರೋಪಿಯನ್ ತರ್ಕ ಹಲವು ಟನ್ನು ಜಲ್ಲಿಯ ಭಾರವನ್ನು ಹೊತ್ತಿದೆಯಷ್ಟೆ. ಅಂತಿಮವಾಗಿ, ಯೂರೋಪಿಯನ್ ದೃಷ್ಟಿಯಲ್ಲಿ, ಈ ತರಹದ ಹುಚ್ಚಾಟಗಳಿಗೆ ಇಡೀ ವಿಶ್ವವೇ ತೆರೆದ ಆಟದ ಮೈದಾನವಾಗಿದೆ. ಇಲ್ಲಿ ಗಮನಿಸಬೇಕಾದ ತುಂಬಾ ಮುಖ್ಯವಾದ ಸಂಗತಿಯೇನೆಂದರೆ, ಬಹುಶಃ ಯೂರೋಪಿಯನ್ನರಿಗೆ ತಾವು ಇದರಲ್ಲೇನೋ ಕಳೆದುಕೊಳ್ಳುತ್ತಿದ್ದೇವೆ ಅಂತ ಅನ್ನಿಸುವುದೇ ಇಲ್ಲ ಎಂಬುದು. ಹೇಗೂ ಅವರ ತತ್ವಜ್ಞಾನಿಗಳು ವಿಶ್ವವನ್ನು ಅನಾಧ್ಯಾತ್ಮೀಕರಿಸಿಬಿಟ್ಟಿದ್ದಾರಲ್ಲಾ! ಹಾಗಾಗಿ ಅಗಾಧವಾದ ಬೆಟ್ಟಗಳ, ವಿಶಾಲವಾದ ಕೆರೆಗಳ ಅಥವಾ ಸುತ್ತಲಿನ ಜನ ಬದುಕು ಮಾಡುವ ಅದ್ಭುತ ಲೋಕವನ್ನು ಬೆರಗಿನಿಂದ ಗಮನಿಸುವುದರಲ್ಲಿ ಅವರಿಗೆ ಯಾವ ಆನಂದವೂ ಇಲ್ಲ. ಬದಲಾಗಿ ಹೆಚ್ಚೆಚ್ಚು ವಸ್ತುಗಳನ್ನು ಸಂಪಾದಿಸಿಟ್ಟುಕೊಳ್ಳುವುದರಲ್ಲಿ ತಮ್ಮ ಆನಂದವನ್ನು ಅಳೆದುಕೊಳ್ಳುತ್ತಾರೆ. ಆದ್ದರಿಂದ ಅವರಿಗೆ ಒಂದು ಬೆಟ್ಟವು ಜಲ್ಲಿ ಕಣಜವಾಗಿ, ವಿಶಾಲ ಕೆರೆಯೊಂದು ಕಾರ್ಖಾನೆಯೊಂದರ ಶೀತವಾಹಕ(ಛಿಠಿಂಟಚಿಟಿಣ)ದಂತೆ ಕಾಣುತ್ತದೆ. ಹಾಗೇ ಸಾಮಾನ್ಯ ಜನರನ್ನೂ ಕೂಡ ಅವರ ಶಾಲೆಗಳೆಂದು ಕರೆಯಲಾಗುವ ಅವರ ಸಿದ್ಧಾಂತಗಳ 'ಪ್ರಚಾರ ಗಿರಣಿ'ಗಳಿಗೆ ತುಂಬುವ ಮೂಲಕ ಮಾನಸಿಕ ಪರಿವರ್ತನ ಪ್ರಕ್ರಿಯೆಗೆ ಒಳಪಡಿಸುತ್ತಾರೆ.

ಆದರೆ ವಾಸ್ತವವಾಗಿ ಪ್ರತಿಯೊಂದು 'ಪ್ರಗತಿ'ಯ ಹೆಜ್ಜೆಯೂ ಮತ್ತೊಂದು 'ಪ್ರಗತಿ'ಯ ಹೆಜ್ಜೆಗೆ ಪ್ರೇರೇಪಿಸುತ್ತದೆ. ಉದಾಹರಣೆಗೆ ಕೈಗಾರಿಕೆಗಳಿಗೆ ಬೇಕಾದ ಇಂಧನವನ್ನೇ ತೆಗೆದುಕೊಳ್ಳಿ. ಎರಡು ಶತಮಾನಗಳ ಹಿಂದೆ ಸಾಮಾನ್ಯವಾಗಿ ಎಲ್ಲರೂ ಕಟ್ಟಿಗೆಗಳನ್ನು ಉಪಯೋಗಿಸುತ್ತಿದ್ದರು. ಅದು ಪುನರ್ಭರ್ತಿಮಾಡಬಹುದಾದ ನೈಸರ್ಗಿಕ ಇಂಧನವಾಗಿ, ಅಡುಗೆ ಮುಂತಾದ ಅಗತ್ಯ ಕೆಲಸಗಳಿಗೆ ಒದಗುತ್ತಿತ್ತು. ಈ ಅಗತ್ಯ ಇಂಧನಕ್ಕಾಗಿ ಕಟ್ಟಿಗೆಯನ್ನು ಒಟ್ಟು ಮಾಡುತ್ತಿದ್ದರು ಅಥವಾ ಪರಿಸರಕ್ಕೆ ಹೆಚ್ಚಿನ ಹಾನಿಯಾಗದಂತೆ ಮರಮಟ್ಟುಗಳನ್ನು ಕಟಾವು ಮಾಡುತ್ತಿದ್ದರು. ಅದರ ನಂತರ ಆದ ಕೈಗಾರಿಕಾ ಕ್ರಾಂತಿಯಿಂದಾಗಿ, ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಬೇಕಾದ ಸಾಮಾಜಿಕ ತುರ್ತನ್ನು ಎದುರಿಸಿದ ಯೂರೋಪ್‌ನಲ್ಲಿ, ಕಲ್ಲಿದ್ದಲು ಪ್ರಮುಖವಾದ ಇಂಧನವಾಯಿತು. ಇದರಿಂದಾಗಿ ಪಟ್ಟಣಗಳಲ್ಲಿ ನಿಧಾನವಾಗಿ ಮಾಲಿನ್ಯದ ಸಮಸ್ಯೆ ತಲೆದೋರಿತು. ಕಲ್ಲಿದ್ದಲನ್ನು ಒದಗಿಸಲು ನೆಲವನ್ನು ಅಗೆದು ಅದನ್ನು ಹಾಗೇ ತೆರೆದಿಟ್ಟ ಕಾರಣ ಭೂಮಿ ಒಣಗಿಹೋಯಿತು. ಆನಂತರ, ಒಂದರ ಹಿಂದೊಂದರಂತೆ ಆದ ವೈಜ್ಞಾನಿಕ ಕ್ರಾಂತಿಗಳಿಂದಾಗಿ ಉತ್ಪಾದನಾ ತಂತ್ರಜ್ಞಾನವು ಸ್ವಯಂಪೂರ್ಣವಾದ ಮೇಲೆ ಕಚ್ಚಾ ತೈಲವು ಮುಖ್ಯವಾದ ಇಂಧನವಾಯಿತು. ಹಾಗೇ ಮಾಲಿನ್ಯವು ಗಮನಾರ್ಹವಾಗಿ ಹೆಚ್ಚಾಯಿತು. ಇಷ್ಟೆಲ್ಲಾ ಕಚ್ಚಾತೈಲವನ್ನು ಭೂಗರ್ಭದಿಂದ ತೆಗೆಯುತ್ತಲೇ ಇದ್ದರೆ ಮುಂದೆ ಪರಿಸರದ ಮೇಲೆ ಏನೆಲ್ಲಾ ಪರಿಣಾಮಗಳಾಗಬಹುದು, ಎಂಥಾ ನಷ್ಟವಾಗಬಹುದು, ಎಷ್ಟೆಲ್ಲಾ ಬೆಲೆ ತೆರಬೇಕಾಗಬಹುದು ಎಂಬುದು ಇನ್ನೂ ಯಾರಿಗೂ ಗೊತ್ತಿಲ್ಲ. ಈಗ ನೋಡಿದರೆ, 'ಇಂಧನ ಬಿಕ್ಕಟ್ಟು' ಎದುರಾಗಿದೆ ಮತ್ತು ಯುರೇನಿಯಂ ಪ್ರಬಲವಾದ ಇಂಧನವಾಗತೊಡಗಿದೆ.

ಇಷ್ಟೆಲ್ಲಾ ಆದ ಮೇಲೂ, ಯುರೇನಿಯಂನ್ನು ತಕ್ಕಮಟ್ಟಿಗಿನ ಲಾಭದ ಮೇಲೆ ಇಂಧನವಾಗಿ ಅಭಿವೃದ್ಧಿ ಪಡಿಸುವಲ್ಲಿ, ಒಂದು ಕಡೆ ಬಂಡವಾಳಶಾಹಿಗಳನ್ನು ಸಹಿಸಬಹುದು. ಅದು ಅವರ ನೀತಿ ಮತ್ತು ಇದಕ್ಕೆ ಅವರಿಗೆ ಸ್ವಲ್ಪ ಸಮಯ ಹಿಡಿಯಬಹುದು. ಮತ್ತೊಂದು ಕಡೆ, ಯುರೇನಿಯಂ, ಅತ್ಯಂತ ಪರಿಣಾಮಕಾರಿ ಉತ್ಪಾದನಾ ಇಂಧನ ಎನ್ನುವ ಕಾರಣಕ್ಕಾಗಿಯೇ ಆದಷ್ಟೂ ತ್ವರಿತವಾಗಿ ಅದನ್ನು ಅಭಿವೃದ್ಧಿ ಪಡಿಸುವ ಮಾರ್ಕ್ಸ್‌ವಾದಿಗಳ ನೀತಿಯನ್ನು ಸಹಿಸಬಹುದು. ಆದರೆ ಇದೆಲ್ಲದರ ಅಗತ್ಯ ಎಲ್ಲಿದೆ ಎಂಬುದೇ ನನಗೆ ಕಾಣುತ್ತಿಲ್ಲ. ಈ ಮೊದಲೇ ಹೇಳಿದಂತೆ ಮಾರ್ಕ್ಸ್‌ವಾದ ಯೂರೋಪಿಯನ್ ಸಂಸ್ಕೃತಿಯ ಹೇರಿಕೆ ಎಂಬ ಗಾಯದ ಮೇಲೆ ಸವರಿದ ಉಪ್ಪಾಗಿದೆ. ಅಂದರೆ, ಇದೂ ಆ ಹಳೆಯ ಹಾಡೇ. ಅನುಭವದ ಆಧಾರದ ಮೇಲೆ ಒಂದು ಮಾತನ್ನು ಇಲ್ಲಿ ಹೇಳಬಹುದು. ಅದೇನೆಂದರೆ, ಯೂರೋಪಿಯನ್ ಕ್ರಾಂತಿಕಾರೀ ತಾತ್ವಿಕತೆಯ ನಿಜವಾದ ಗುಣವನ್ನು, ಅದು ಅಧಿಕಾರ ಕೇಂದ್ರದ ಸಂರಚನೆಯೊಳಗೆ ಮತ್ತು ಸಮಾಜದೊಳಗೆ ಬದಲಾವಣೆಗಳನ್ನು ತರುತ್ತದೆ ಎನ್ನುವ ಭಾವನೆಯ ಆಧಾರದ ಮೇಲೆ ಅಳೆಯಲು ಸಾಧ್ಯವಿಲ್ಲ. ಆ ತಾತ್ವಿಕತೆ ಯೂರೋಪಿಯನ್ನೇತರ ಜನರ ಮೇಲೆ ಯಾವ ಪರಿಣಾಮಗಳನ್ನುಂಟುಮಾಡಿದೆ ಎನ್ನುವುದರ ಮೇಲೆ ಮಾತ್ರ ಅದನ್ನು ನಿಜವಾಗಿ ಅಳೆಯಲು ಸಾಧ್ಯ. ಏಕೆಂದರೆ ಯೂರೋಪಿಯನ್ನರ ಚರಿತ್ರೆಯಲ್ಲಿ, ಪ್ರತಿಯೊಂದು ಕ್ರಾಂತಿಯೂ, ಇತರರನ್ನು, ಇತರರ ಸಂಸ್ಕೃತಿಯನ್ನು ಮತ್ತು ಪರಿಸರವನ್ನು ನಾಶಮಾಡುವುದರಲ್ಲಿರುವ ಅವರ ಒಲವು ಮತ್ತು ಶಕ್ತಿಯನ್ನು ಬಲಪಡಿಸಿರುವುದನ್ನು ನಾವು ಗಮನಿಸಬಹುದು. ಇದು ನಿಜವಲ್ಲ ಎಂದು ಯಾರಾದರೂ ಯಾವುದಾದರೂ ಒಂದು ಉದಾಹರಣೆ ಕೊಟ್ಟುಬಿಡಲಿ, ಇದು ನನ್ನ ಸವಾಲು. ಈಗ ಮಾರ್ಕ್ಸ್‌ವಾದ ಮುಂತಾದ ಹೊಸ ಯೂರೋಪಿಯನ್ ಕ್ರಾಂತಿಕಾರೀ ಸಿದ್ಧಾಂತಗಳು, ಯೂರೋಪಿಯನ್ ಇತಿಹಾಸವು ಅಮೆರಿಕನ್ ಇಂಡಿಯನ್ನರ ಮೇಲುಂಟುಮಾಡಿರುವ ವಿನಾಶಕಾರಿ ಪರಿಣಾಮಗಳನ್ನು ಸರಿಪಡಿಸುತ್ತವೆ ಎಂದು ನಮ್ಮನ್ನು ನಂಬಿಸಲಾಗುತ್ತಿದೆ. ಹಾಗೂ ಯೂರೋಪಿಯನ್ ಪ್ರಭುತ್ವದೊಂದಿಗಿನ ನಮ್ಮ ಸಂಬಂಧಗಳನ್ನು ಮತ್ತೆ ಮಾರ್ಪಾಡು





ಮಾಡಿಕೊಳ್ಳಬೇಕಾಗುತ್ತದೆ ಮತ್ತು ಈ ಹೊಸ ಮಾರ್ಪಾಡುಗಳು ನಮ್ಮ ಪರಿಸ್ಥಿತಿಯನ್ನು ಉತ್ತಮ ಪಡಿಸುತ್ತವೆಂದು ಬಿಂಬಿಸಲಾಗುತ್ತಿದೆ. ಇದರ ನಿಜವಾದ ಅರ್ಥ ಏನು?

ಈಗ, ಇವತ್ತು, ನಾವು ಬದುಕುತ್ತಿರುವ ಈ ದೇವದಾರು ರಕ್ಷಿತಾರಣ್ಯವನ್ನು ಬಿಳಿಯ ಸಮಾಜ 'ರಾಷ್ಟ್ರೀಯ ತ್ಯಾಗ ಭೂಮಿ'(ಓಚಿಣuಡಿಚಿಟ ಖಚಿಛಿಡಿiಜಿiಛಿe ಂಡಿeಚಿ) ಎಂದು ಘೋಷಿಸಿದೆ. ಇದರ ಅರ್ಥವೇನೆಂದರೆ, ನಮ್ಮ ಈ ನೆಲದಲ್ಲಿ ಸಾಕಷ್ಟು ಯುರೇನಿಯಂ ನಿಕ್ಷೇಪವಿದೆ ಮತ್ತು ಈ ಯುರೇನಿಯಂ ಇಂಧನ ವಸ್ತುವಾಗಿ ಬಿಳಿಯ ಸಮಾಜಕ್ಕೆ (ನಮಗಲ್ಲ!) ಅಗತ್ಯವಿದೆ. ಭೂಮಿಯನ್ನು ಅಗೆದು, ಯುರೇನಿಯಂ ಅನ್ನು ತೆಗೆದು, ಸಂಸ್ಕರಿಸಿ ಅದರ ತ್ಯಾಜ್ಯವನ್ನು ಇದೇ ಗಣಿ ಗುಂಡಿಗಳಲ್ಲಿ, ನಾವು ಜೀವಿಸುತ್ತಿರುವ ಇದೇ ಜಾಗದಲ್ಲಿ ಸುರಿದುಬಿಡುವುದು ಉದ್ಯಮಗಳಿಗೆ ತುಂಬಾ ಸುಲಭ ಮತ್ತು ಲಾಭದಾಯಕ ಕೆಲಸವಾಗಿದೆ. ತ್ಯಾಜ್ಯವು ವಿಕಿರಣಶೀಲವಾಗಿರುವುದರಿಂದ ಇಡಿಯ ಈ ಭೂಭಾಗ ಇನ್ನೆಂದೆಂದಿಗೂ ವಾಸಯೋಗ್ಯವಾಗಿರುವುದಿಲ್ಲ. ಉದ್ದಿಮೆಗಳು ಮತ್ತು ಉದ್ದಿಮೆಗಳನ್ನು ಸೃಷ್ಟಿಸಿರುವ ಬಿಳಿಯ ಸಮಾಜ, ಶಕ್ತಿಮೂಲಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಇಂಥ 'ಒಪ್ಪಿಕೊಳ್ಳಬಹುದಾದ' ಬೆಲೆಯನ್ನು ತೆರಬಹುದು ಎಂದು ಭಾವಿಸುತ್ತಿದೆ. ಅಷ್ಟೇ ಅಲ್ಲದೇ, ಕೈಗಾರಿಕಾ ಪ್ರಕ್ರಿಯೆಗಳಿಗಾಗಿ ಈ ದಕ್ಷಿಣ ಡಕೋಟಾದ ನೆಲದಲ್ಲಿನ ಜಲಮೂಲಗಳಿಗೆ ಕನ್ನ ಹಾಕುವ ಯೋಜನೆಯನ್ನೂ ಹಾಕಿಕೊಂಡಿದೆ. ಇದರಿಂದಾಗಿ ಈ ಭೂಭಾಗವು ದುಪ್ಪಟ್ಟು ಬರಡಾಗುತ್ತದೆ. ಇತರ ಬುಡಕಟ್ಟುಗಳಾದ *'ನವಜೋ'* ಮತ್ತು *'ಹೋಪಿ'* ಕುಲದ ನೆಲೆಗಳು ಹಾಗೂ ಉತ್ತರ *ಚೆಯೆನ್* ಮತ್ತು *ಕ್ರೋವ್* ಮತ್ತಿತರ ಕಡೆಗಳಲ್ಲಿ ಇದೇ ಪರಿಸ್ಥಿತಿಯಿದೆ. ಪಶ್ಚಿಮ ಅಮೆರಿಕಾದ ಶೇಕಡಾ ೬೦ರಷ್ಟು ಕಲ್ಲಿದ್ದಲು ಮತ್ತು ಇಡೀ ಅಮೆರಿಕಾದ ಶೇಕಡಾ ೫೦ರಷ್ಟು ಯುರೇನಿಯಂ ನಿಕ್ಷೇಪಗಳು ಇವೇ ನಮ್ಮ ರಕ್ಷಿತಾರಣ್ಯಗಳಲ್ಲಿರುವುದರಿಂದ, ಈ ವಿಷಯವನ್ನು ಅಷ್ಟು ಮುಖ್ಯವಲ್ಲ ಎಂದು ಕಡೆಗಣಿಸುವಂತಿಲ್ಲ. ಅದ್ದರಿಂದ ನಮ್ಮ ಭೂಮಿಯನ್ನು 'ರಾಷ್ಟ್ರೀಯ ತ್ಯಾಗ ಭೂಮಿ'ಯನ್ನಾಗಿ ಪರಿವರ್ತಿಸುವುದನ್ನು ನಾವು ವಿರೋಧಿಸುತ್ತಿದ್ದೇವೆ. ನಮ್ಮನ್ನು 'ರಾಷ್ಟ್ರೀಯ ತ್ಯಾಗ ಜೀವಿ'(ಓಚಿಣuಡಿಚಿಟ ಖಚಿಛಿಡಿiಜಿiಛಿe ಕಜಿಠಿಟe)ಗಳನ್ನಾಗಿ ಪರಿವರ್ತಿಸುವುದನ್ನು ವಿರೋಧಿಸುತ್ತಿದ್ದೇವೆ. ಕೈಗಾರಿಕಾ ಪ್ರಕ್ರಿಯೆಗಳಿಗಾಗಿ ನಮ್ಮ ನೆಲೆಯನ್ನು ಬೆಲೆಯಾಗಿ ತೆರಲು ನಾವು ಒಪ್ಪುವುದಿಲ್ಲ. ಇಲ್ಲಿನ ಯುರೇನಿಯಂ ಮತ್ತು ಜಲನಿಕ್ಷೇಪಗಳನ್ನು ಸೂರೆಮಾಡುವುದು ಸರ್ವನಾಶವಲ್ಲದೇ ಮತ್ತೇನೂ ಅಲ್ಲ.

ಈಗ ನಮ್ಮ ಮೂಲೋತ್ಪಾಟನೆಯ ವಿರುದ್ಧದ ಹೋರಾಟಕ್ಕೆ ನಾವು ಸಮಾನ ಮನಸ್ಕರನ್ನು ಸೆಳೆಯಲು ಆರಂಭಿಸುತ್ತೇವೆ ಎಂದುಕೊಳ್ಳೋಣ(ಈಗಾಗಲೇ ಇಂತವರಿದ್ದಾರೆ) ಇನ್ನೂ ಮುಂದೆ ಹೋಗಿ, ಕ್ರಾಂತಿಕಾರೀ ಮಾರ್ಕ್ಸಿಸಂ ಅನ್ನು ಅಕ್ಷರಶಃ ಒಪ್ಪಿಕೊಳ್ಳುವೆವೆಂದು ಭಾವಿಸೋಣ. ಅಂದರೆ, ನಮ್ಮ ಅಸ್ತಿತ್ವಕ್ಕೇ ಬೆದರಿಕೆಯೊಡ್ಡಿರುವ ಯೂರೋಪಿಯನ್ ಬಂಡವಾಳಶಾಹೀ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕೆಡವಿಹಾಕುವುದು ಎಂದರ್ಥ. ಅಮೆರಿಕನ್ ಇಂಡಿಯನ್ನರಿಗೆ ಇದು ತುಂಬಾ ಸಹಜವಾದ ಮೈತ್ರಿಯಾಗಿ ಕಾಣಬಹುದು. ಹೇಗೂ 'ರಾಷ್ಟ್ರೀಯ ತ್ಯಾಗ'ಕ್ಕಾಗಿ ನಮ್ಮನ್ನು ಅಣಿಮಾಡುತ್ತಿರುವವರು ಬಂಡವಾಳಶಾಹಿಗಳೇ ಎಂದು ಮಾರ್ಕ್ಸಿಸ್ಟರು ಹೇಳುತ್ತಾರಲ್ಲ! ಎಲ್ಲಿಯವರೆಗೆ ಎಲ್ಲವೂ ಚೆನ್ನಾಗಿರುತ್ತದೋ ಅಲ್ಲಿಯವರೆಗೆ ಇದು ನಿಜ. ಆದರೆ, ನಾನೀಗಾಗಲೇ ಹೇಳಲು ಪ್ರಯತ್ನಿಸಿದಂತೆ, ಈ 'ನಿಜ'ವು ತುಂಬಾ ಮೋಸಗೊಳಿಸುವಂತಹದ್ದು. ಕ್ರಾಂತಿಕಾರೀ ಮಾರ್ಕ್ಸಿಸಂ, ನಮ್ಮನ್ನು ನಾಶಗೊಳಿಸುತ್ತಿರುವ ಕೈಗಾರಿಕೀಕರಣ ಪ್ರಕ್ರಿಯೆಯನ್ನು ಇನ್ನೂ ಹೆಚ್ಚು ಸ್ವಯಂಪೂರ್ಣವಾಗಿಸಲು ಮತ್ತು ಶಾಶ್ವತಗೊಳಿಸಲು ಬದ್ಧವಾಗಿದೆ. ಹೆಚ್ಚೆಂದರೆ ಇದು ಕೈಗಾರಿಕೀಕರಣದ ಫಲಗಳನ್ನು(ಅಂದರೆ ಹಣವನ್ನು) ಹೆಚ್ಚೆಚ್ಚು ಜನರಿಗೆ ಮರುಹಂಚಿಕೆ ಮಾಡುವ ಭರವಸೆ ಕೊಡುತ್ತದಷ್ಟೇ. ಹಾಗೇ, ಸಂಪತ್ತನ್ನು ಬಂಡವಾಳಶಾಹಿಗಳಿಂದ ಹಿರಿದುಕೊಂಡು ಕಾರ್ಮಿಕರಿಗೆ ಹಂಚುವುದಾಗಿ ಭರವಸೆ ಕೊಡುತ್ತದೆ.. ಹಾಗೆ ಮಾಡಲು ಮಾರ್ಕ್ಸ್‌ವಾದವು ಕೈಗಾರಿಕಾ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕು. ಈ ದೃಷ್ಟಿಯಿಂದ ಮತ್ತೆ ಯೂರೋಪಿಯನ್ ಸಮಾಜದೊಂದಿಗಿನ ಅಧಿಕಾರ ಸಂಬಂಧಗಳನ್ನು ಮಾರ್ಪಾಡು ಮಾಡಿಕೊಳ್ಳಬೇಕಾಗುತ್ತದೆ. ಆದರೂ ಇದರಿಂದ ಅಮೆರಿಕನ್ ಇಂಡಿಯನ್ನರು ಮತ್ತು ಇನ್ನಿತರ ಯೂರೋಪಿಯನ್ನೇತರ ಜನರ ಮೇಲಾಗುವ ಪರಿಣಾಮ ಮಾತ್ರ ಅದೇ– ಸಾಂಸ್ಕೃತಿಕ ನಾಶ. ತಥಾ ಕಥಿತ ಬೂರ್ಷ್ವಾ ಕ್ರಾಂತಿಯ ಸಮಯದಲ್ಲಿ ಅಧಿಕಾರವು ಚರ್ಚ್‌ನಿಂದ ಖಾಸಗಿ ಉದ್ಯಮಗಳಿಗೆ ಮರುಹಂಚಿಕೆಯಾದಂತೆಯೇ ಇದೂ ಕೂಡ. ಯೂರೋಪಿಯನ್ ಸಮಾಜವು ಮೇಲ್ನೋಟಕ್ಕೆ ಸ್ವಲ್ಪ ಬದಲಾದಂತೆ ಕಂಡರೂ ಯೂರೋಪಿಯನ್ನೇತರರ ಜೊತೆಗಿನ ಅದರ ನಡವಳಿಕೆಯು ಹಾಗೇ ಮುಂದುವರೆದಿದೆ. ೧೭೭೬ರ ಅಮೆರಿಕನ್ ಕ್ರಾಂತಿಯು ಅಮೆರಿಕನ್ ಇಂಡಿಯನ್ನರಿಗೆ ಏನು ಮಾಡಿತ್ತೆಂಬುದನ್ನು ನೀವು ನೆನಪಿಸಿಕೊಳ್ಳಬಹುದು. ಮತ್ತದೇ ಹಳೆಯ ಹಾಡು.

ಕೈಗಾರಿಕಾ ಸಮಾಜದ ಬೇರೆ ಬೇರೆ ರೂಪಗಳಂತೆಯೇ, ಕ್ರಾಂತಿಕಾರಿ ಮಾರ್ಕ್ಸ್‌ವಾದ ಕೂಡ ಉದ್ಯಮಗಳಿಗೆ ಸಂಬಂಧಿಸಿದಂತೆ ಜನರನ್ನು 'ತರ್ಕಬದ್ಧ'ರನ್ನಾಗಿ ಮಾಡಲು ಹವಣಿಸುತ್ತದೆ. ಅರ್ಥಾತ್ ಗರಿಷ್ಠ ಉದ್ಯಮ– ಗರಿಷ್ಠ ಉತ್ಪನ್ನ ಎಂಬ ತರ್ಕ! ಈ ಭೌತಿಕ ಸಿದ್ಧಾಂತವು ಅಮೆರಿಕನ್ ಇಂಡಿಯನ್ ಪರಂಪರೆಯನ್ನು, ಸಂಸ್ಕೃತಿಯನ್ನು, ಜೀವನ ವಿಧಾನವನ್ನು ನಿಕೃಷ್ಟವಾಗಿ ಕಾಣುತ್ತದೆ. ಸ್ವತಃ ಮಾರ್ಕ್ಸ್ ನಮ್ಮನ್ನು 'ಪೂರ್ವ ಬಂಡವಾಳಶಾಹಿ–ಆದಿಮಾನವ'ರೆಂದು ಕರೆದಿದ್ದ. ಪೂರ್ವ ಬಂಡವಾಳಶಾಹಿ ಎಂದರೆ–ಅವನ ದೃಷ್ಟಿಯಲ್ಲಿ–ಇನ್ನೇನು ಬಂಡವಾಳವಾದವನ್ನು ಒಪ್ಪಿಕೊಂಡು ಬಂಡವಾಳಶಾಹಿಗಳಾಗಲು ಕಾತುರರಾಗಿರುವವರು ಎಂದು. ಮಾರ್ಕ್ಸಿಸ್ಟರ ಪ್ರಕಾರ ನಾವು ಯಾವಾಗಲೂ ಆರ್ಥಿಕವಾಗಿ ಹಿಂದುಳಿದವರಾಗಿದ್ದೆವು. ಅಮೆರಿಕನ್ ಇಂಡಿಯನ್ನರಿಗೆ ಮಾರ್ಕ್ಸಿಸ್ಟ್ ಕ್ರಾಂತಿಯಲ್ಲಿ ಪಾಲ್ಗೊಳ್ಳಬಹುದಾದ ಏಕೈಕ ರೀತಿ ಎಂದರೆ, ಕೈಗಾರಿಕಾ ವ್ಯವಸ್ಥೆಯಲ್ಲಿ ಸೇರಿಕೊಳ್ಳುವುದು, ಕೈಗಾರಿಕೆಗಳಲ್ಲಿ ಕೆಲಸಮಾಡುವುದು, 'ಕಾರ್ಮಿಕ'ರೆಂದು ಕರೆಸಿಕೊಳ್ಳುವುದು. ಮಾರ್ಕ್ಸಿಸ್ಟ್ ಕ್ರಾಂತಿ ಸಫಲವಾಗುವುದು ಕಾರ್ಮಿಕ ಹೋರಾಟಗಳ ಮೂಲಕ ಮಾತ್ರ ಹಾಗೂ ಮಾರ್ಕ್ಸ್‌ವಾದಿ ಸಮಾಜಕ್ಕೆ ಬೃಹತ್ ಕೈಗಾರಿಕಾ ವ್ಯವಸ್ಥೆ ಒಂದು ಪೂರ್ವ ಷರತ್ತು ಎಂಬುದರ ಬಗ್ಗೆ ಮಾರ್ಕ್ಸ್ ಸ್ಪಷ್ಟವಾಗಿದ್ದ.

ಇಲ್ಲಿ ಭಾಷೆಯ ಗೊಂದಲವಿದೆ ಎನಿಸುತ್ತದೆ ಕ್ರಿಶ್ಚಿಯನ್ನರು, ಬಂಡವಾಳಶಾಹಿಗಳು, ಮಾರ್ಕ್ಸಿಸ್ಟರು... ಹೀಗೆ ಬೇರೆ ಬೇರೆ ಪದಗಳನ್ನು ಉಪಯೋಗಿಸುವುದರಿಂದ ಗೊಂದಲವಾಗುತ್ತದೆ ಎನಿಸುತ್ತದೆ. ಎಲ್ಲರೂ ಅವರವರ ದೃಷ್ಟಿಯಲ್ಲಿ ಕ್ರಾಂತಿಕಾರಿಗಳೇ. ಆದರೆ ಅವರ್‍ಯಾರ ಮನಸ್ಸಿನಲ್ಲಿರುವುದೂ ನಿಜವಾಗಿ ಕ್ರಾಂತಿಯಲ್ಲ. ಅವರಿಗೆ ಬೇಕಾಗಿರುವುದು, ಯೂರೋಪಿಯನ್ ಸಂಸ್ಕೃತಿಯ ಮುಂದುವರಿಕೆ ಮತ್ತು ಅದರ ಅವಶ್ಯಕತೆಗೆ ತಕ್ಕ ಅಭಿವೃದ್ಧಿ ಅಷ್ಟೇ. ಆದ್ದರಿಂದ ನಾವೇನಾದರೂ ನಿಜವಾಗಿ ಮಾರ್ಕ್ಸ್‌ವಾದೀ ಶಕ್ತಿಗಳ ಜೊತೆ ಕೈಜೋಡಿಸಬೇಕೆಂದರೆ, ನಮ್ಮ ತವರುನೆಲೆಯ 'ರಾಷ್ಟ್ರೀಯ ತ್ಯಾಗ'ವನ್ನು ಒಪ್ಪಿಕೊಳ್ಳಬೇಕಾಗುತ್ತದೆ; ನಮ್ಮ ಸಂಸ್ಕೃತಿಯನ್ನು ಬಲಿ ಕೊಡಬೇಕಾಗುತ್ತದೆ; ಕೈಗಾರಿಕೀಕರಣಕ್ಕೊಳಗಾಗಬೇಕಾಗುತ್ತದೆ; ಕೊನೆಗೆ ಯೂರೋಪಿಯನ್ನರಂತೆಯೇ ಆಗಬೇಕಾಗುತ್ತದೆ.

ಈ ಹಂತದಲ್ಲಿ ನಾನು ಸ್ವಲ್ಪ ನಿಂತು, ನಾನು ತುಂಬಾ ಕಟುವಾಗಿ






ಟೀಕಿಸುತ್ತಿದ್ದೇನೆಯೇ ಎಂದು ನನಗೆ ನಾನೇ ಕೇಳಿಕೊಳ್ಳಬೇಕಿದೆ.

ಮಾರ್ಕ್ಸಿಸಂಗೆ ಒಂದು ಇತಿಹಾಸವಿದೆ. ಆ ಇತಿಹಾಸದಲ್ಲಿ ನಾನು ಗಮನಿಸಿರುವ ಅಂಶಗಳಿಗೇನಾದರೂ ಆಧಾರವಿದೆಯೇ? ಈ ಪ್ರಶ್ನೆಯ ಹಿನ್ನೆಲೆಯಲ್ಲಿ, ಸೋವಿಯತ್ ಒಕ್ಕೂಟದಲ್ಲಿ ೧೯೨೦ರಿಂದೀಚೆಗೆ ನಡೆದ ಕೈಗಾರಿಕಾ ಕ್ರಾಂತಿಯನ್ನು ನೋಡಿದಾಗ, ಯಾವ ಕ್ರಾಂತಿಯನ್ನು ಮಾಡಲು ಇಂಗ್ಲೀಷರು ೩೦೦ ವರ್ಷಗಳಷ್ಟು ಸಮಯವನ್ನು ತೆಗೆದುಕೊಂಡರೋ ಅದನ್ನು ಮಾರ್ಕ್ಸಿಸ್ಟರು ಬರೀ ೬೦ ವರ್ಷಗಳಲ್ಲಿ ಮಾಡಿದರು ಎಂಬುದು ಕಾಣುತ್ತದೆ. ಸೋವಿಯತ್ ಒಕ್ಕೂಟಕ್ಕೆ ಒಳಪಟ್ಟ ಪ್ರದೇಶದಲ್ಲಿ ಬಹಳಷ್ಟು ಬುಡಕಟ್ಟು ಜನರು ಇದ್ದರು ಮತ್ತು ಕೈಗಾರಿಕೆಗಳಿಗೆ ದಾರಿಮಾಡಿಕೊಡುವುದಕ್ಕಾಗಿ ಅವರನ್ನು ತುಳಿದುಹಾಕಿದರು ಎಂಬುದು ಕಾಣುತ್ತದೆ. ಸೋವಿಯತ್ ಜನರು ಇದನ್ನು ರಾಷ್ಟ್ರೀಯ ಪ್ರಶ್ನೆಯಾಗಿ ಪ್ರಸ್ತಾಪ ಮಾಡುತ್ತಾರೆ. ಅಂದರೆ, ಬುಡಕಟ್ಟು ಜನರು ಎಲ್ಲ ಜೀವಿಗಳಂತೆ ಬದುಕಲು ಹಕ್ಕುಳ್ಳವರೋ ಅಲ್ಲವೋ ಎಂಬುದು ಅವರ ರಾಷ್ಟ್ರೀಯ ಪ್ರಶ್ನೆ! ಅದಕ್ಕುತ್ತರವಾಗಿ, ಅವರು ಔದ್ಯೋಗಿಕ ಅಗತ್ಯಗಳಿಗೆ ಬುಡಕಟ್ಟು ಜನರ ಬಲಿಕೊಡುವುದನ್ನು ಒಪ್ಪಬಹುದು ಎಂಬ ನಿರ್ಧಾರಕ್ಕೆ ಬರುತ್ತಾರೆ. ಹಾಗೇ ಚೀನಾದ ಕಡೆ ನೋಡಿದರೆ, ಅಲ್ಲೂ ಅದೇ ಕತೆ ಎಂದು ಗೊತ್ತಾಗುತ್ತದೆ. ಈ ಕಡೆ ವಿಯೆಟ್ನಾಂ ಅನ್ನು ನೋಡಿದರೆ ಅಲ್ಲೂ ಗುಡ್ಡಗಾಡು ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸುತ್ತಿರುವುದು ಮತ್ತು ಮಾರ್ಕ್ಸಿಸ್ಟರು ಕೈಗಾರಿಕಾ ವ್ಯವಸ್ಥೆಯನ್ನು ಅವರ ಮೇಲೆ ಹೇರುತ್ತಿರುವುದು ಕಣ್ಣಿಗೆ ಬೀಳುತ್ತದೆ.

ಸೊವಿಯತ್‌ನ ಹೆಸರಾಂತ ವಿಜ್ಞಾನಿಯೊಬ್ಬರು 'ಯುರೇನಿಯಂ ನಿಕ್ಷೇಪವು ಖಾಲಿಯಾದರೆ ಬದಲೀ ವಸ್ತುವನ್ನು ಹುಡುಕುತ್ತೇವೆ' ಎಂದು ಹೇಳಿದ್ದಾರೆಂದು ಕೇಳಿದ್ದೇನೆ. ಅಮೆರಿಕಾ ಸೇನಾಪಡೆಯವರು ಬಿಟ್ಟು ಹೋಗಿದ್ದ ಒಂದು ಅಣುಸ್ಥಾವರವನ್ನು ವಿಯಟ್ನಾಮಿನವರು ವಶ ಮಾಡಿಕೊಂಡದ್ದನ್ನು ನಾನು ಕಂಡಿದ್ದೇನೆ. ಅದನ್ನು ಅವರು ಕೆಡವಿ ನೆಲಸಮಗೊಳಿಸಿದ್ದಾರೆಯೇ? ಇಲ್ಲ, ಅದನ್ನವರು ಬಳಸುತ್ತಿದ್ದಾರೆ! ಚೀನಾ, ಅಣುಬಾಂಬುಗಳನ್ನು ಸ್ಫೋಟಿಸುತ್ತಿರುವುದೂ, ಯುರೇನಿಯಂ ರಿಯಾಕ್ಟರ್‌ಗಳನ್ನು ಅಭಿವೃದ್ಧಿ ಪಡಿಸುತ್ತಿರುವುದೂ, (ಯೂರೋಪಿನ ವಸಾಹತುಶಾಹಿಯು ಈ ಭೂಗೋಳಾರ್ಧವನ್ನು ಶೋಷಿಸಿದಂತೆಯೇ) ಅಂತರಿಕ್ಷದಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿ, ಗ್ರಹಗಳನ್ನೂ ಸೂರೆ ಮಾಡುವ ಅಂತರಿಕ್ಷ ಯೋಜನೆಗಳನ್ನು ತಯಾರಿಸುತ್ತಿರುವುದೂ ಕಂಡು ಬಂದಿದೆ. ಇದು ಈ ಸಾರಿ ಸ್ವಲ್ಪ ಹೆಚ್ಚು ಧೃತ ಗತಿಯಲ್ಲಿರುವ ಅದೇ ಹಳೆಯ ಹಾಡು ಅಷ್ಟೇ.

ಸೋವಿಯತ್ ವಿಜ್ಞಾನಿಯ ಹೇಳಿಕೆ ತುಂಬಾ ಕುತೂಹಲಕಾರಿಯಾಗಿದೆ. ಈ ಬದಲೀ ವಸ್ತು ಯಾವುದೆಂದು ಅವರಿಗೆ ಗೊತ್ತೇ? ಇಲ್ಲ, ಅದು ಬರೀ ನಂಬಿಕೆ. ವಿಜ್ಞಾನವು ದಾರಿಯನ್ನು ತೋರಿಸುತ್ತದೆಂಬ ನಂಬಿಕೆ. ಪರಿಸರ ನಾಶ, ಮಾಲಿನ್ಯ ಮತ್ತು ಅಣು ವಿಕಿರಣಗಳನ್ನು ನಿಯಂತ್ರಿಸುತ್ತೇವೆ ಎಂದು ಕ್ರಾಂತಿಕಾರಿ ಮಾರ್ಕ್ಸ್‌ವಾದಿಗಳು ಹೇಳುವುದನ್ನು ಕೇಳಿದ್ದೇನೆ. ಇದೆಲ್ಲ ಒಣಮಾತುಗಳು ಎಂದು ನನಗೆ ಕಾಣುತ್ತದೆ. ಅವುಗಳನ್ನು ಹೇಗೆ ನಿಯಂತ್ರಿಸುವುದೆಂದು ಇವರಿಗೆ ಗೊತ್ತೇ? ಇಲ್ಲ, ಅದು ಬರೀ ನಂಬಿಕೆ. ವಿಜ್ಞಾನವು ದಾರಿ ತೋರಿಸುವುದೆಂಬ ನಂಬಿಕೆ. ಕೈಗಾರಿಕೀಕರಣ ಒಳ್ಳೆಯದು ಮತ್ತು ಅವಶ್ಯಕವಾದದ್ದು ಎನ್ನುತ್ತಾರೆ. ಅದು ಹೇಗೆ ಗೊತ್ತು ಇವರಿಗೆ? ನಂಬಿಕೆ, ವಿಜ್ಞಾನವು ದಾರಿತೋರುವುದೆಂಬ ನಂಬಿಕೆ ಅಷ್ಟೇ. ವಿಜ್ಞಾನದ ಮೇಲಿನ ಈ ವಿಪರೀತ ನಂಬಿಕೆಯೇ ಯೂರೋಪಿಯನ್ನರ ನಿಜವಾದ ಧರ್ಮವಾಗಿದೆ. ಬಂಡವಾಳಶಾಹಿಗಳಿಗೂ ಮಾರ್ಕ್ಸಿಸ್ಟರಿಗೂ ವಿಜ್ಞಾನವೆಂಬುದು ಹೊಸ ಧರ್ಮವಾಗಿದೆ. ಇಬ್ಬರನ್ನೂ ಬೇರ್ಪಡಿಸಲಾಗದು; ಅವರು ಒಂದೇ ಸಂಸ್ಕೃತಿಯ ಎರಡು ಮುಖಗಳು. ಆದ್ದರಿಂದ ತತ್ವ ಮತ್ತು ಆಚರಣೆಗಳಲ್ಲಿ, ಮಾರ್ಕ್ಸಿಸಂ ಕೂಡ ಮೌಲ್ಯಗಳನ್ನು, ಪರಂಪರೆಯನ್ನು, ಒಟ್ಟಾರೆಯಾಗಿ ಸಾಂಸ್ಕೃತಿಕ ಅಸ್ತಿತ್ವವನ್ನೇ ತ್ಯಜಿಸಿಬಿಡುವಂತೆ ಯುರೋಪಿಯನ್ನೇತರರನ್ನು ಒತ್ತಾಯಿಸುತ್ತದೆ. ಹಾಗೆ ಒತ್ತಾಯಕ್ಕೆ ಮಣಿದಿದ್ದೇ ಆದರೆ ಕೈಗಾರಿಕೀಕರಣಗೊಂಡ ಮಾರ್ಕ್ಸಿಸ್ಟ್ ಸಮಾಜದಲ್ಲಿ ನಾವು ಕೂಡ ವಿಜ್ಞಾನದ ವ್ಯಸನಿಗಳಾಗಿಬಿಡುತ್ತೇವೆ.

'ರಾಷ್ಟ್ರೀಯ ತ್ಯಾಗ ಜೀವಿ'ಗಳೆಂದು ಕರೆಸಿಕೊಂಡಿರುವ ನಮ್ಮ ಈ ಪರಿಸ್ಥಿತಿಗೆ ಬರೀ ಬಂಡವಾಳಶಾಹಿಗಳಷ್ಟೇ ಕಾರಣರೆಂದು ನಾನು ನಂಬುವುದಿಲ್ಲ. ಯೂರೋಪಿಯನ್ ಪರಂಪರೆ; ಯೂರೋಪಿಯನ್ ಸಂಸ್ಕೃತಿಯೇ ಇದಕ್ಕೆ ಕಾರಣ. ಮಾರ್ಕ್ಸಿಸಂ ಎನ್ನುವುದು ಈ ಪರಂಪರೆಯ ಇತ್ತೀಚಿನ ಮುಂದುವರಿಕೆ ಅಷ್ಟೇ. ನಮ್ಮ ಈ ಪರಿಸ್ಥಿತಿಗೆ ಪರಿಹಾರ ಅಲ್ಲ. ಮಾರ್ಕ್ಸಿಸಂ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದೆಂದರೆ, ನಮ್ಮನ್ನು ಬಲಿ ಹಾಕುವ ಅವೇ ಶಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಂತೆ!

*ಲಕೋಟ*

ಪರಂಪರೆಯ ದಾರಿ ಮತ್ತು ಇತರ ಅಮೆರಿಕನ್ ಇಂಡಿಯನ್ ಜನರ ಬದುಕಿನ ದಾರಿಯೂ ಕೂಡ. ಈ ದಾರಿಯಲ್ಲಿ ಮನುಷ್ಯರಿಗೆ, ಭೂಮಿತಾಯಿಯನ್ನು ನಿಕೃಷ್ಟವಾಗಿ ಕಾಣುವ ಹಕ್ಕಿಲ್ಲ. ಎಲ್ಲವನ್ನೂ (ಯೂರೋಪಿಯನ್ ಕಲ್ಪನೆಗಳನ್ನೂ) ಮೀರಿದ ಶಕ್ತಿಗಳಿವೆ ಎಂಬುದು ಈ ದಾರಿಗೆ ಗೊತ್ತು. ಇಲ್ಲಿ ಎಲ್ಲ ಮನುಷ್ಯರೂ ಎಲ್ಲ ಸಂಬಂಧಗಳೊಂದಿಗೆ ಸಮರಸತೆಯನ್ನು ಸಾಧಿಸಬೇಕು. ಅಥವಾ ಇಂತಹ ಸಂಬಂಧಗಳೇ ಅ–ಸಾಮರಸ್ಯತೆಯನ್ನು ನಿವಾರಿಸುತ್ತದೆ ಎಂದು ಹೇಳಬಹುದು. ಯೂರೋಪಿಯನ್ನರು ತಾವು ಈ ಎಲ್ಲ ಸಂಬಂಧಗಳನ್ನೂ ಮೀರಿದವರು ಎಂಬ ಅಹಂಕಾರದಿಂದ ವರ್ತಿಸುವುದರಿಂದ, ಮನುಷ್ಯ ಮನುಷ್ಯರಲ್ಲೇ ಕೆಲವರಿಗೆ ಮಾತ್ರ ಹೆಚ್ಚು ಮಹತ್ವ ಸಿಕ್ಕಿದಂತಾಗಿ, ವ್ಯವಸ್ಥೆಯ ಸಮತೋಲನ ತಪ್ಪಿ ಎಲ್ಲವೂ ಏರುಪೇರಾಗುತ್ತದೆ. ಆಗ ನೈಸರ್ಗಿಕ ವ್ಯವಸ್ಥೆಯು ತನ್ನಿಂತಾನೇ ತನ್ನ ಸಮತೋಲನವನ್ನು ಕಂಡುಕೊಳ್ಳುತ್ತಾ ಮನುಷ್ಯನ ಅಹಂಕಾರವನ್ನು ಮಟ್ಟಹಾಕುತ್ತದೆ, ಅವನ ಗ್ರಹಿಕೆಯನ್ನು ಮೀರಿದ ವಾಸ್ತವದ ಕಟುರುಚಿಯನ್ನು ತೋರಿಸುತ್ತದೆ. ಹಾಗೇ ಸಾಮರಸ್ಯವನ್ನು ಪುನಸ್ಥಾಪಿಸುತ್ತದೆ. ಈ ಸಮತೋಲನ ಕ್ರಿಯೆಗೆ ಯಾವ ಕ್ರಾಂತಿಕಾರಿ ಸಿದ್ಧಾಂತವೂ ಬೇಕಿಲ್ಲ. ಅದು ಮನುಷ್ಯನ ನಿಯಂತ್ರಣವನ್ನು ಮೀರಿದ್ದು. ಪ್ರಕೃತಿಯೊಂದಿಗೆ ಸಹಜವಾಗಿ ಬದುಕುವವರಿಗೆಲ್ಲರಿಗೂ ಇದು ತಿಳಿದಿರುವುರಿಂದ ಅವರು ತತ್ವ ಸಿದ್ಧಾಂತಗಳನ್ನು ರೂಪಿಸುವುದಿಲ್ಲ. ಸಿದ್ಧಾಂತವು ಅಮೂರ್ತವಾದದ್ದು. ಅದರೆ ನಮ್ಮ ಜ್ಞಾನವು ಮೂರ್ತವಾದದ್ದು, ನಿಜವಾದದ್ದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯೂರೋಪಿಯನ್ ನಂಬಿಕೆಯು(ವಿಜ್ಞಾನದ ಮೇಲಿನ ಅದರ ಹೊಸ ನಂಬಿಕೆಯೂ ಸೇರಿ) ಮನುಷ್ಯನೇ ದೇವರು ಎಂಬ ನಂಬಿಕೆಗೆ ಸಮನಾದದ್ದು. ಅವರು ಯಾವಾಗಲೂ ಒಬ್ಬ ಉದ್ಧಾರಕನನ್ನು–ಜೀಸಸ್ ಕ್ರೈಸ್ಟ್‌ನನ್ನೋ, ಕಾರ್ಲ್‌ಮಾರ್ಕ್ಸ್‌ನನ್ನೋ ಅಥವಾ ಒಬ್ಬ ಐನ್‌ಸ್ಟೀನ್‌ನನ್ನೋ ಹುಡುಕುತ್ತಾರೆ. ಅಮೆರಿಕನ್ ಇಂಡಿಯನ್ನರಿಗೆ ಇದು ಅರ್ಥಹೀನ ಎಂಬುದು ತಿಳಿದಿದೆ. ಪ್ರಕೃತಿಯಲ್ಲಿ ಮನುಷ್ಯನೇ ಅತ್ಯಂತ ದುರ್ಬಲ ಪ್ರಾಣಿ. ಎಷ್ಟು ದುರ್ಬಲನೆಂದರೆ,

ಅವನು ಬದುಕಲೆಂದು ಇತರೆ ಜೀವಿಗಳು ತಮ್ಮ ಮಾಂಸವನ್ನೇ ಅವನಿಗೆ ಆಹಾರವಾಗಿ ಬಿಟ್ಟುಕೊಡಲು ತಯಾರಿವೆ. ತನ್ನ ತರ್ಕಜ್ಞಾನದಿಂದ ಮಾತ್ರ ಮನುಷ್ಯ ಬದುಕುಳಿಯಲು ಸಾಧ್ಯವಾಗಿದೆ. ಏಕೆಂದರೆ, ಬೇರೆಲ್ಲ ಜೀವಿಗಳಂತೆ ಮನುಷ್ಯನಿಗೆ ಕೋರೆ ಹಲ್ಲು ಮತ್ತು ಉಗುರುಗಳಿಂದ ಆಹಾರವನ್ನು ಪಡೆದುಕೊಳ್ಳುವ ಶಕ್ತಿ ಇಲ್ಲ. ಈ ತರ್ಕಜ್ಞಾನವು ಮಾನವನಿಗೆ ಒಂದು ಶಾಪ. ಏಕೆಂದರೆ, ಅದು ನೈಸರ್ಗಿಕ ಕ್ರಮವನ್ನು ಮರೆಯುವಂತೆ ಮಾಡುತ್ತದೆ. ಇತರ ಜೀವಿಗಳು ಹಾಗೆ ಮರೆಯುವುದಿಲ್ಲ. ಉದಾಹರಣೆಗೆ ಒಂದು ತೋಳ ಎಂದಿಗೂ ನೈಸರ್ಗಿಕ ಕ್ರಮದಲ್ಲಿನ ತನ್ನ ಸ್ಥಾನವನ್ನು ಮರೆಯುವುದಿಲ್ಲ. ಅಮೆರಿಕನ್ ಇಂಡಿಯನ್ನರೂ ಕೆಲವೊಮ್ಮೆ ಮರೆತು ಬಿಡಬಹುದು. ಆದರೆ ಈ ಯೂರೋಪಿಯನ್ನರು ಸಾಮಾನ್ಯವಾಗಿ ಯಾವಾಗಲೂ ಅದನ್ನು ಮರೆಯುತ್ತಾರೆ. ನಮ್ಮ ಪ್ರಾರ್ಥನೆಗಳಲ್ಲಿ ಜಿಂಕೆಗಳಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತೇವೆ–ನಮ್ಮ ಮತ್ತು ಅವುಗಳ ಸಂಬಂಧಗಳಿಗಾಗಿ, ಅವುಗಳ ಮಾಂಸವನ್ನು ತಿಂದು ಬದುಕಲು ನಮಗೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ. ಅದೇ ಯೂರೋಪಿಯನ್ನರು ಜಿಂಕೆಗಳನ್ನು ಕೇವಲವಾಗಿ ಕಾಣುವುದಲ್ಲದೇ ತಮ್ಮ ನಾಲಿಗೆಯ ಚಪಲಕ್ಕಾಗಿ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಕೊಂದು ತಿನ್ನುತ್ತಾರೆ. ಯೂರೋಪಿಯನ್ನರು ತಮ್ಮ ತಾರ್ಕಿಕತೆ ಮತ್ತು ವೈಜ್ಞಾನಿಕತೆಯ ಹಮ್ಮಿನಿಂದಾಗಿ ತಮ್ಮನ್ನು ತಾವು ದೇವರೆಂದು ಭಾವಿಸಿಕೊಳ್ಳುತ್ತಾರೆ! ಆದರೆ ದೇವರು ಸರ್ವೋಚ್ಚ. ಉಳಿದದ್ದೆಲ್ಲವೂ ನೀಚ.

ಮಾರ್ಕ್ಸ್‌ವಾದವನ್ನೊಳಗೊಂಡಂತೆ ಎಲ್ಲ ಯೂರೋಪಿಯನ್ ಪರಂಪರೆಗಳು ಈ ನೆಲದ ಮೇಲಿನ ಎಲ್ಲ ವಿಷಯಗಳ ನೈಸರ್ಗಿಕ ಕ್ರಮಗಳನ್ನು ಕೆಣಕಿವೆ. ತಾಯ್ನೆಲವನ್ನು, ಅದರ ಮೇಲಿನ ತಮ್ಮ ಹಕ್ಕನ್ನು ದುರುಪಯೋಗಪಡಿಸಿಕೊಂಡಿವೆ. ಇದು ಹೀಗೇ ನಿರಂತರವಾಗಿ ಮುಂದುವರೆಯುವುದು ಸಾಧ್ಯವಿಲ್ಲ. ಈ ಸರಳವಾದ ಸತ್ಯವನ್ನು ಯಾವ ಸಿದ್ಧಾಂತವೂ ಬದಲಿಸಲು ಸಾಧ್ಯವಿಲ್ಲ. ಭೂಮಿತಾಯಿಯೇ ಪ್ರತೀಕಾರ ತಗೆದುಕೊಳ್ಳುತ್ತಾಳೆ, ಇಡೀ ಪರಿಸರವೇ ಸೇಡು ತೀರಿಸಿಕೊಳ್ಳುತ್ತದೆ. ತನ್ನನ್ನು ದುರುಪಯೋಗಪಡಿಸಿಕೊಂಡವರನ್ನೆಲ್ಲ ನಿರ್ನಾಮ ಮಾಡುತ್ತದೆ. ಇತಿಹಾಸ ಒಂದು ಸುತ್ತು ಬಂದು ಮೊದಲಿದ್ದಲ್ಲಿಗೆ ಬಂದು ನಿಲ್ಲುತ್ತದೆ. ಇದು ಕ್ರಾಂತಿ. ಇದು ನಮ್ಮ ಜನರ ದಿವ್ಯಜ್ಞಾನ. ನಮ್ಮ ಹೋಪಿ ಕುಲದವರ ಮತ್ತು ಸರಿಯಾಗಿ ಬದುಕುವ ಇನ್ನಿತರರ ಸಹಜ ಅರಿವು.

ಶತಶತಮಾನಗಳಿಂದಲೂ ನಾವು ಯೂರೋಪಿಯನ್ನರಿಗೆ ಇದನ್ನು ವಿವರಿಸಲು ಪ್ರಯತ್ನಿಸುತ್ತಾ ಬಂದಿದ್ದೇವೆ. ಮೊದಲೇ ಹೇಳಿದಂತೆ ಯೂರೋಪಿಯನ್ನರಿಗೆ ಇದನ್ನೆಲ್ಲ ಕೇಳಿಸಿಕೊಳ್ಳುವ ಕಿವಿ ತಮಗಿಲ್ಲ ಎಂದು ತೋರಿಸಿದ್ದಾರೆ. ನೈಸರ್ಗಿಕ ಕ್ರಮವು ಗೆದ್ದೇ ಗೆಲ್ಲುತ್ತದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಜಿಂಕೆಗಳ ಸಂತಾನ ಹೆಚ್ಚಾಗಿ ಪ್ರಕೃತಿಯ ಸಾಮರಸ್ಯ ಕೆಣಕಲ್ಪಟ್ಟಾಗ ಅವು ಯಾವ ರೀತಿ ದೊಡ್ಡ ಪ್ರಮಾಣದಲ್ಲಿ ಸಾವನ್ನು ಕಾಣುತ್ತವೆಯೋ ಅದೇ ರೀತಿ ನೈಸರ್ಗಿಕ ಕ್ರಮವನ್ನು ಕೆಣಕಿದವರೂ ಸಾಯುತ್ತಾರೆ. ಯೂರೋಪಿಯನ್ನರು ಯಾವುದನ್ನು 'ಜಾಗತಿಕ್ದ ಪ್ರಮಾಣದ ಮಹಾ ದುರಂತ' ಕರೆಯುತ್ತಾರೋ ಅದು ಸಂಭವಿಸುವ ದಿನ ಬಹಳ ದೂರವಿಲ್ಲ. ಇದೆಲ್ಲದರ ನಡುವೆ ಅಮೆರಿಕನ್ ಇಂಡಿಯನ್ ಮತ್ತು ಇತರ ನೈಸರ್ಗಿಕ ಜೀವಿಗಳು ಬದುಕುಳಿಯುವುದೇ ದೊಡ್ಡ ಸವಾಲು. ಹಾಗೆ ಬದುಕುಳಿಯಲು ಮಾಡುತ್ತಿರುವ ಪ್ರಯತ್ನದ ಭಾಗವೇ ನಮ್ಮ ಈ ಪ್ರತಿರೋಧ, ಹೋರಾಟ. ನಾವು ಹೋರಾಡುತ್ತಿರುವುದು ಯಾವುದೋ ಸರ್ಕಾರವನ್ನು ಉರುಳಿಸುವುದಕ್ಕಾಗಲೀ ರಾಜಕೀಯ ಅಧಿಕಾರವನ್ನು ಪಡೆಯುವುದಕ್ಕಾಗಲೀ ಅಲ್ಲ. ಅಳಿಯುವುದನ್ನು ತಡೆಯುವುದಕ್ಕಾಗಿ ಮತ್ತು ಉಳಿಯುವುದಕ್ಕಾಗಿ ತೋರುವ ಸಹಜ ಪ್ರತಿರೋಧ. ನಮಗೆ ಬಿಳಿಯರ ಸಂಸ್ಥೆಗಳ ಅಧಿಕಾರ ಬೇಡ. ಬದಲಿಗೆ, ಬಿಳಿಯರ ಸಂಸ್ಥೆಗಳೇ ಇಲ್ಲವಾಗಿಬಿಡಬೇಕು. ಅದು ಕ್ರಾಂತಿ.

ವಾಸ್ತವದ ಅರಿವಿನ ಜೊತೆ ಜೊತೆಗೆ ನಮ್ಮ ಪೂರ್ವಿಕರ ಪರಂಪರೆ, ಕಾಲಜ್ಞಾನಗಳೊಂದಿಗೆ ನಮಗಿನ್ನೂ ಸಂಪರ್ಕವಿದೆ. ನಾವು ನಮ್ಮ ಹಿರಿಯರಿಂದ ಕಲಿಯುತ್ತೇವೆ, ಪ್ರಕೃತಿಯಿಂದ ಕಲಿಯುತ್ತೇವೆ, ಕಾಲಾತೀತ ಶಕ್ತಿಗಳಿಂದ ಕಲಿಯುತ್ತೇವೆ. ಮಹಾದುರಂತವು ಸಂಭವಿಸಿ ಎಲ್ಲ ಮುಗಿದ ಮೇಲೂ ನಾವು, ಅಮೆರಿಕನ್ ಇಂಡಿಯನ್ನರು, ಈ ನೆಲದ ಮೇಲೆ ವಾಸಿಸಲು ಬದುಕುಳಿದಿರುತ್ತೇವೆ. ಆಂಡಿಸ್ ಪರ್ವತಗಳ ಶಿಖರಗಳಲ್ಲಿ ಬೆರಳೆಣಿಕೆಯಷ್ಟು ಮಂದಿ ಬದುಕುಳಿದರೂ ಸಾಕು. ಇನ್ನುಳಿದದ್ದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಾವು ಬದುಕುಳಿದೇ ಉಳಿಯುತ್ತೇವೆ. ಪ್ರಕೃತಿಯೊಂದಿಗಿನ ಸಾಮರಸ್ಯ



ಮರುಸ್ಥಾಪಿಸಲ್ಪಡುತ್ತದೆ. ಅದುವೇ ನಿಜದ ಕ್ರಾಂತಿ.

ಈ ಹಂತದಲ್ಲಿ ಇನ್ನೊಂದು ವಿಷಯವನ್ನು ನಾನು ಸ್ಪಷ್ಟಪಡಿಸಬೇಕು. ಈಗಾಗಲೇ ನನ್ನ ಮಾತುಗಳನ್ನು ಕೇಳಿ ನಿಮಗೆ ಅರ್ಥವಾಗಿರಬೇಕು. ಇತ್ತೀಚಿನ ದಿನಗಳಲ್ಲಿ ಬಹಳಷ್ಟು ವಿಷಯಗಳಲ್ಲಿ ಗೊಂದಲಗಳುಂಟಾಗಿ ಬಹಳ ಬೇಗ ಮತ್ತಷ್ಟು ಗೊಂದಲಗಳನ್ನು ಹುಟ್ಟಿಸುತ್ತವೆ. ಆದ್ದರಿಂದ ಈ ವಿಷಯವನ್ನು ಒತ್ತಿ ಹೇಳುತ್ತಿದ್ದೇನೆ. ನಾನು 'ಯೂರೋಪಿಯನ್' ಎಂಬ ಪದ ಬಳಸುವಾಗ, ಚರ್ಮದ ಬಣ್ಣವನ್ನಾಗಲೀ ಅಥವಾ ಆನುವಂಶಿಕ–ದೈಹಿಕ ಚಹರೆಗಳನ್ನಾಗಲೀ ಮನಸ್ಸಿನಲ್ಲಿಟ್ಟುಕೊಂಡಿಲ್ಲ. ನಾನು ಪ್ರಸ್ತಾಪಿಸುತ್ತಿರುವುದು ಒಂದು ಮಾನಸಿಕ ಸ್ಥಿತಿಯನ್ನು, ಯೂರೋಪಿಯನ್ ಸಂಸ್ಕೃತಿಯ ಬೆಳವಣಿಗೆಯ ಫಲವಾದ ಒಂದು ಲೋಕದೃಷ್ಟಿಯನ್ನು. ಈ ಮನಃಸ್ಥಿತಿಯನ್ನು ಹೊಂದಿರುವವರು ಆನುವಂಶಿಕವಾಗಿ ಇಂಥದೇ ಬಾಹ್ಯರೂಪವನ್ನು ಹೊಂದಿರಬೇಕೆಂಬ ನಿಯಮವೇನೂ ಇಲ್ಲ. ಒಂದು ಸಾಂಸ್ಕೃತಿಕ ವಾತಾವರಣದಲ್ಲಿ ಬೆಳೆದಾಗ ಸಾಮಾನ್ಯವಾಗಿ ಒಂದು ರೀತಿಯ ಮನಃಸ್ಥಿತಿಯನ್ನು ಹೊಂದಿರುತ್ತಾರಷ್ಟೇ. ಇದು ಅಮೆರಿಕನ್ ಇಂಡಿಯನ್ನರಿಗೂ ಇತರರಿಗೂ ಅನ್ವಯಿಸುತ್ತದೆ.

ಅಮೆರಿಕನ್ ಇಂಡಿಯನ್ನನೊಬ್ಬ ಯೂರೋಪಿಯನ್ ಮೌಲ್ಯಗಳನ್ನು, ಯೂರೋಪಿಯನ್ ಲೋಕದೃಷ್ಟಿಯನ್ನು ಹೊಂದಿರುವ ಸಾಧ್ಯತೆ ಇದೆ. ನಾವು ಅಂತಹವರನ್ನು 'ಚಿರಿರಿಟಙ'– ಹೊರಗಡೆ ಕೆಂಪಗಿದ್ದು(ಆನುವಂಶಿಕತೆ) ಒಳಗಡೆ ಬೆಳ್ಳಗಿರುವುದು(ಮೌಲ್ಯಗಳು)–ಎಂದು ಕರೆಯುತ್ತೇವೆ. ನಮ್ಮ ಬೇರೆ ಬೇರೆ ಪಂಗಡಗಳಲ್ಲಿ ಇದೇ ತರಹದ ಪದಗಳು ಚಾಲ್ತಿಯಲ್ಲಿವೆ. ಕಪ್ಪು ಜನರು ಇಂತಹವರನ್ನು 'ಠಿಡಿಜಥ' (ನಡುವೆ ಬಿಳಿ ಕೆನೆಯ ಪದರವಿರುವ ಕಪ್ಪು ಬಣ್ಣದ ಬಿಸ್ಕತ್ತು) ಎಂದೂ, ಖಿಠಿಚಿಟಿಥಿ (ಸ್ಪಾನಿಷ್ ಮೂಲನಿವಾಸಿಗಳು) ಜನರು 'ಭಿಂಭಿಂಟಿಣಾ' ಎಂದೂ ಕರೆಯುತ್ತಾರೆ. ಕೆಲವು ಅಪವಾದಗಳೆಂಬಂತೆ ಹೊರರೂಪದಲ್ಲಿ ಬಿಳಿಯರಾಗಿರುವ ಎಷ್ಟೋ ಬಿಳಿಯರು ಅಂತರಂಗದಲ್ಲಿ ಬಿಳಿಯರಲ್ಲ. ಅವರನ್ನು 'ಮನುಷ್ಯರು' ಎಂದು ಕರೆಯುವುದು ಬಿಟ್ಟು ನನಗೆ ಬೇರೇನೂ ಹೊಳೆಯುತ್ತಿಲ್ಲ. ನಾನು ನಿಮ್ಮ ಮುಂದಿಡುತ್ತಿರುವುದು ಜನಾಂಗೀಯ ಪ್ರತಿಪಾದನೆಯಲ್ಲ, ಸಾಂಸ್ಕೃತಿಕ ಪ್ರತಿಪಾದನೆ. ಅಂತಿಮವಾಗಿ ಯಾರು ಯೂರೋಪಿಯನ್ ಸಂಸ್ಕೃತಿ ಮತ್ತು ಕೈಗಾರಿಕೀಕರಣಗಳನ್ನು ರಕ್ಷಿಸಲು ಮುಂದಾಗುತ್ತಾರೋ ಅವರು ನನ್ನ ಶತ್ರುಗಳು. ಯಾರು ಅವುಗಳನ್ನು ವಿರೋಧಿಸುತ್ತಾರೋ ಅವರು ನನ್ನ ಮಿತ್ರರು. ಅಮೆರಿಕನ್ ಇಂಡಿಯನ್ನರ ಮಿತ್ರರು. ಅವರ ಚರ್ಮದ ಬಣ್ಣ ಯಾವುದಾರೂ ಸಹ.

ಬಿಳಿಯರಲ್ಲೇ ಅತಿಬಿಳಿಯರನ್ನು 'ಕಕೇಶಿಯನ್' (ಜಾರ್ಜಿಯಾದ ಕಾಕಾಸಸ್ ಪರ್ವತ ಪ್ರದೇಶದ ಜನರು) ಎಂದು ಯೂರೋಪಿಯನ್ನರು ಕರೆಯುತ್ತಾರೆ. ಯೂರೋಪಿಯನ್ ದೃಷ್ಟಿಕೋನವನ್ನು ಮಾತ್ರ ನಾನು ವಿರೋಧಿಸುತ್ತೇನೆಷ್ಟೇ. ವಿಯೆಟ್ನಾಮಿನ ಕಮ್ಯುನಿಷ್ಟರು ನಮಗೆ ಆನುವಂಶಿಕವಾಗಿ 'ಕಾಕೇಶಿಯನ್' ತರಹ ಕಂಡರೂ ಅವರು 'ಕಕೇಶಿಯನ್' ಅಲ್ಲ. ಆದರೂ ಈಗ ಅವರು ಬೌದ್ಧಿಕವಾಗಿ ಯೂರೋಪಿಯನ್ನರಂತೆಯೇ ವರ್ತಿಸುತ್ತಿದ್ದಾರೆ. ಚೀನಾದ ಕಮ್ಯುನಿಷ್ಟರಿಗೂ, ಜಪಾನಿನ ಬಂಡವಾಳಶಾಹಿಗಳಿಗೂ, ಬಂಟೂ ಕ್ಯಾಥೋಲಿಕ್‌ರಿಗೂ ಇದೇ ಮಾತು ಅನ್ವಯಿಸುತ್ತದೆ. ಮತ್ತೆ ಇದು ಜನಾಂಗೀಯ ವಾದವಲ್ಲ. ಯಾವ ಬುದ್ಧಿ ಭಾವಗಳಿಂದ ಸಂಸ್ಕೃತಿಯು ರೂಪುಗೊಂಡಿರುತ್ತದೋ ಅದನ್ನು ಗ್ರಹಿಸುವ–ಸ್ವೀಕರಿಸುವ ಬಗೆ ಅಷ್ಟೇ.

ಮಾರ್ಕ್ಸ್‌ವಾದದ ಪರಿಭಾಷೆಯಲ್ಲಿ ನಾನು ಒಬ್ಬ 'ಸಾಂಸ್ಕೃತಿಕ ರಾಷ್ಟ್ರೀಯವಾದಿ'. ನಾನು ಮೊದಲು ನನ್ನ ಜನರ ನಡುವೆ– ಸಾಂಪ್ರದಾಯಿಕ *ಲಕೋಟ* ಜನರ ನಡುವೆ–ಕೆಲಸ ಮಾಡುತ್ತೇನೆ. ನಮ್ಮ ನಡುವೆ ಸಮಾನ ಲೋಕದೃಷ್ಟಿ ಇರುವುದರಿಂದ ಮತ್ತು ಈ ಹೊತ್ತಿನ ತುರ್ತು ಹೋರಾಟ–ವಿಚಾರಗಳನ್ನು ಹಂಚಿಕೊಳ್ಳುವುದರಿಂದ *ಲಕೋಟ* ಜನರ ಜೊತೆಗೆ ಕೆಲಸ ಮಾಡುವುದು ನನ್ನ ಮೊದಲ ಆದ್ಯತೆ. ಇನ್ನೂ ಬೇರೆ ಬೇರೆ ಅಮೆರಿಕನ್ ಇಂಡಿಯನ್ ಕುಲಜನರ ಜೊತೆಗೂ ಕೆಲಸ ಮಾಡುತ್ತೇನೆ. ನಮ್ಮ ದೃಷ್ಟಿಕೋನದಲ್ಲಿನ ಸಾಮ್ಯತೆಯ ಕಾರಣವಾಗಿ ಮತ್ತು ಹೋರಾಟದ ರೂಪುರೇಷೆಗಳನ್ನು ಚರ್ಚಿಸುವ ಸಲುವಾಗಿ. ಇನ್ನೂ ಮುಂದೆ ಹೋಗಿ, ಯಾರು ಯೂರೋಪಿಯನ್ ವಸಾಹತುಶಾಹಿಯ ಒತ್ತಡಕ್ಕೊಳಗಾಗಿದ್ದಾರೋ, ಯಾರು ಯೂರೋಪಿಯನ್ ಸಂಸ್ಕೃತಿ ಮತ್ತು ಕೈಗಾರಿಕತೆಯ ಏಕಸ್ವಾಮ್ಯವನ್ನು ವಿರೋಧಿಸುತ್ತಾರೋ ಅವರ ಜೊತೆಗೂ ಕೆಲಸ ಮಾಡುತ್ತೇನೆ. ನಿಸ್ಸಂಶಯವಾಗಿ, ಪ್ರಬಲ ಯೂರೋಪಿಯನ್ ಸಂಸ್ಕೃತಿಯ ರೂಢಿಗತ ನಡವಳಿಕೆಯನ್ನು ಪ್ರತಿರೋಧಿಸುವ ಕಕೇಶಿಯನ್ ಜನರನ್ನೂ ಒಳಗೊಂಡು . . . . . . . . . . . . . Irish ಮತ್ತು basque ತಕ್ಷಣಕ್ಕೆ ನೆನಪಿಗೆ ಬರುತ್ತಿರುವ ಇತರ ಜೊತೆಗಾರರು. ಇನ್ನೂ ಬಹಳಷ್ಟು ಜೊತೆಗಾರರಿದ್ದಾರೆ.

ಪ್ರಾಥಮಿಕವಾಗಿ ನಾನು ನನ್ನ ಜನರೊಂದಿಗೆ, ನನ್ನ ಸಮುದಾಯದೊಂದಿಗೆ ಕೆಲಸ ಮಾಡುತ್ತೇನೆಂದು ಹೇಳಿದೆನಷ್ಟೇ. ಯೂರೋಪಿಯನ್ನೇತರ ದೃಷ್ಟಿಕೋನವನ್ನು ಹೊಂದಿರುವವರೆಲ್ಲರೂ ಇದನ್ನೇ ಮಾಡಬೇಕೆಂದು ಬಯಸುತ್ತೇನೆ. 'ನಿನ್ನ ಸೋದರನ ದೃಷ್ಟಿಯಲ್ಲಿ ವಿಶ್ವಾಸವಿಡು'(Trust your brother's vision) ಎಂಬದರಲ್ಲಿ ನನಗೆ ನಂಬಿಕೆ ಇದೆ. 'ಸೋದರಿ'ಯರನ್ನೂ ಸೇರಿಸಿಕೊಂಡೇ ಈ ಮಾತನ್ನು ಹೇಳುತ್ತಿದ್ದೇನೆ. ಸಹಜವಾಗಿ ಕೈಗಾರಿಕೀಕರಣವನ್ನು ಮತ್ತು ಮಾನವಕುಲದ ಅಳಿವನ್ನು ವಿರೋಧಿಸುವ, ಸಾಂಸ್ಕೃತಿಕ ದೃಷ್ಟಿಕೋನವುಳ್ಳ ಸಮುದಾಯಗಳಲ್ಲಿ ಮತ್ತು ಜನಾಂಗಗಳಲ್ಲಿ ನಾನು ವಿಶ್ವಾಸವಿಟ್ಟಿದ್ದೇನೆ. ಸ್ಪಷ್ಟವಾಗಿಯೇ, ಯೂರೋಪಿನ ಕೈಗಾರಿಕೆಗಳನ್ನು ಮುಂದುವರೆಸುವುದು ದೂರದೃಷ್ಟಿಯಲ್ಲ; ಬದಲಿಗೆ ಅದು ವಿಶಿಷ್ಟ ಜೀವಿ ಸಂಕುಲಗಳ ಹತ್ಯೆ ಎಂಬುದು ಯಾರ್‍ಯಾರಿಗೆ ಅರ್ಥವಾಗಿದೆಯೋ ಅಂಥ ಬಿಳಿಯರು ಕೂಡ ನನ್ನ ಹೋರಾಟದೊಂದಿಗೆ ಕೈಜೋಡಿಸಬಹುದು.

ಬಿಳಿಯ ಬಣ್ಣವು ಲಕೋಟ ಜನರಿಗೆ ಒಂದು ಪವಿತ್ರವಾದ ಬಣ್ಣ. ನಮ್ಮ ಪರಂಪರೆಯಲ್ಲಿ ನಾಲ್ಕು ಪವಿತ್ರ ಬಣ್ಣಗಳಾದ ಕೆಂಪು, ಹಳದಿ, ಬಿಳಿ ಮತ್ತು ಕಪ್ಪು ಬಣ್ಣಗಳು ನಾಲ್ಕು ದಿಕ್ಕುಗಳನ್ನೂ, ನಾಲ್ಕು ಋತುಮಾನಗಳನ್ನೂ, ಬದುಕಿನ ನಾಲ್ಕು ಹಂತಗಳನ್ನೂ, ಮಾನವಕುಲದ ನಾಲ್ಕು ಜನಾಂಗಗಳನ್ನೂ ಪ್ರತಿನಿಧಿಸುತ್ತವೆ. ಈ ನಾಲ್ಕು ಬಣ್ಣಗಳನ್ನು ಬೆರೆಸಿ ನಿಮಗೆ ಐದನೇ ಜನಾಂಗದ ಬಣ್ಣವಾದ ಕಂದು ಬಣ್ಣ ಸಿಗುತ್ತದೆ. ಇದು ಒಂದು ನೈಸರ್ಗಿಕ ಕ್ರಮ. ಆದ್ದರಿಂದ ನನಗೆ ಈ ಎಲ್ಲ ಜನಾಂಗಗಳ ನಡುವೆ ಕೆಲಸ ಮಾಡುವುದು ಅತ್ಯಂತ ಸಹಜವೇ ಆಗಿದೆ. ಪ್ರತಿಯೊಂದು ಜನಾಂಗವೂ ವಿಶಿಷ್ಟವಾದ ಸಂದೇಶ, ಅರ್ಥ ಮತ್ತು ಅಸ್ತಿತ್ವಗಳನ್ನು ಹೊಂದಿವೆ.

ಆದರೆ ಬಹಳಷ್ಟು ಕಕೇಶಿಯನ್ ಜನರಲ್ಲಿ ಒಂದು ವಿಲಕ್ಷಣ ವರ್ತನೆ ಕಾಣುತ್ತದೆ. ಯಾವಾಗ ನಾನು ಇತರ ಸಂಸ್ಕೃತಿಗಳ ಮೇಲೆ ಯೂರೋಪಿನ ಪ್ರಭಾವವಾಗುತ್ತಿರುವ ಬಗ್ಗೆ ಟೀಕೆ ಮಾಡುತ್ತೇನೋ ಆ ತಕ್ಷಣ ಅವರು ಯೂರೋಪ್ ಸಂಸ್ಕೃತಿಯ ಬಗೆಗೆ ರಕ್ಷಣಾತ್ಮಕ ನಿಲುವನ್ನು ತಾಳುತ್ತಾರೆ ಮತ್ತು ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಮುಂದಾಗುತ್ತಾರೆ. ಆದರೆ ನಾನು ಅವರನ್ನು ವೈಯಕ್ತಿಕವಾಗಿ ಟೀಕಿಸುತ್ತಿಲ್ಲ. ನಾನು ಕಟುವಾಗಿ ಟೀಕಿಸುತ್ತಿರುವುದು ಯೂರೋಪನ್ನು. ನಾನು ಇಡೀ ಯೂರೋಪನ್ನು ಗಮನದಲ್ಲಿಟ್ಟುಕೊಂಡು ಟೀಕಿಸುತ್ತಿರುವ ಅಂಶಗಳನ್ನು ವೈಯಕ್ತಿಕವಾಗಿ ಸ್ವೀಕರಿಸುವ ಮೂಲಕ ಅವರು ಯೂರೋಪಿಯನ್ ಸಂಸ್ಕೃತಿಯನ್ನು ವೈಯಕ್ತಿಕವಾಗಿ ಸ್ವೀಕರಿಸಿ ಅದರ ಜೊತೆಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ಅಂತಿಮವಾಗಿ ಅವರು ಒಂದು ಮಾರಕ ಸಂಸ್ಕೃತಿಯೊಂದಿಗೆ ಗುರುತಿಸಿಕೊಂಡಂತಾಗುತ್ತದೆ. ಈ ಗೊಂದಲದಿಂದ ಅವರು ಹೊರ ಬರಲೇಬೇಕು ಮತ್ತು ಆದಷ್ಟು ಬೇಗ ಬರಬೇಕು. ತಪ್ಪು ದಾರಿಗೆಳೆಯುವ ಇಂಥ ಹುಸಿ ಹೋರಾಟಗಳಲ್ಲಿ ವ್ಯರ್ಥಮಾಡುವಷ್ಟು ಸಮಯ ಮತ್ತು ಶಕ್ತಿ ನಮ್ಯಾರಿಗೂ ಇಲ್ಲ. ಮಾನವಕುಲಕ್ಕೆ ಬಿಳಿಯ ಸಂಸ್ಕೃತಿಗಿಂತ ಹೆಚ್ಚಿನ ಒಳ್ಳೆಯ ಕಾಣ್ಕೆಗಳನ್ನು ಕೊಡುವ ಶಕ್ತಿ ಕಕೇಶಿಯನ್ನರಿಗಿದೆ ಎಂಬುದು ನನ್ನ ನಂಬಿಕೆ. ಅವರು ಯೂರೋಪ್ ಸಂಸ್ಕೃತಿಯ ಪ್ರಭಾವ ವಲಯದಿಂದ ಹೊರಗೆ ಬಂದು ಇತರರೊಂದಿಗೆ ಹೆಜ್ಜೆ ಹಾಕಿದಾಗ ಮಾತ್ರ ಯೂರೋಪ್ ಎಂದರೆ ಏನು, ಅದೇನು ಮಾಡುತ್ತಿದೆ ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು. ಬಂಡವಾಳವಾದ, ಮಾರ್ಕ್ಸ್‌ವಾದ ಮತ್ತಿತರ 'ವಾದ'ಗಳಿಗೆ ಜೋತುಬೀಳುವುದರಿಂದ ಅವರು ಒಂದಲ್ಲ ಒಂದು ರೀತಿಯಲ್ಲಿ ಯೂರೋಪಿಯನ್ ಸಂಸ್ಕೃತಿಯೊಳಗೇ ಹೊರಳಾಡುತ್ತಿರುತ್ತಾರಷ್ಟೇ. ಇದನ್ನು ಅವರು ನಿರ್ಲಕ್ಷಿಸುವಂತಿಲ್ಲ. ವಾಸ್ತವವಾಗಿ ಈಗ ಅವರಿಗೆ ಒಂದು ಆಯ್ಕೆಯ ಅವಕಾಶವಿದೆ. ಸಂಸ್ಕೃತಿಯ ಆಧಾರದ ಮೇಲೆ ಈ ಆಯ್ಕೆಯನ್ನು ಮಾಡಿಕೊಳ್ಳತಕ್ಕದ್ದು, ಜನಾಂಗೀಯವಾಗಿ ಅಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯಗಳ, ನಗರಗಳ ಕೊಳೆಗೇರಿಗಳ ಮತ್ತು ಯೂರೋಪಿಯನ್ ಸಂಸ್ಥೆಗಳ ಸೆಳೆತಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗುತ್ತಿರುವ ಅಮೆರಿಕನ್ ಇಂಡಿಯನ್ನರನ್ನು ಕುರಿತು ಕೆಲವು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ. – 'ನಿಮ್ಮನ್ನು ಶೋಷಿಸುವವರನ್ನು ನಿಮ್ಮ ಪರಂಪರೆಗನುಗುಣವಾದ ರೀತಿಯಲ್ಲಿ ವಿರೋಧಿಸುವುದನ್ನು ಕಲಿಯುವಿರಾದರೆ ಸರಿ. ಹೇಗೆ ಅದನ್ನು ನಿಭಾಯಿಸುತ್ತೀರೋ ನನಗೆ ಗೊತ್ತಿಲ್ಲ. ಬಹುಶಃ ನೀವು ಅದರಲ್ಲಿ ಸಫಲರಾಗಬಹುದು. ಆದರೆ ನಿಮ್ಮಲ್ಲಿರು ವಾಸ್ತವ ಪ್ರಜ್ಞೆಯನ್ನು ಕಳೆದುಕೊಳ್ಳಬೇಡಿ. ನಮ್ಮ ಸಮಸ್ಯೆಗಳನ್ನು ಪರಿಹರಿಸುತ್ತೇವೆಂದು ನಂಬಿಸುವ ಬಿಳಿಯ ಜಗತ್ತಿನ ಬಗೆಗೆ ಎಚ್ಚರಿಕೆಯಿಂದಿರಿ. ನಮ್ಮ ಮಾತುಗಳನ್ನು ತಮಗೆ ಅನುಕೂಲವಾಗುವಂತೆ ತಿರುಚುವ ಕಲೆ ಯೂರೋಪಿಯನ್ನರಿಗೆ ಸಿದ್ಧಿಸಿದೆ. ಇದು ನಿಜವೆಂದು ತಿಳಿಯಬೇಕಾದರೆ ನೀವು ಅಮೆರಿಕನ್ ಇಂಡಿಯನ್ ಮತ್ತು ವಿವಿಧ ಯೂರೋಪ್ ಸರ್ಕಾರಗಳ ನಡುವೆ ನಡೆದ ಒಪ್ಪಂದದ ದಾಖಲೆಗಳನ್ನು ತೆಗೆದು ನೋಡಿ. ನೀವು ಯಾರೆಂಬುದರ ಅರಿವಿನಿಂದ ಶಕ್ತಿಯನ್ನು ಪಡೆದುಕೊಳ್ಳಿ. ಯಾವ ಸಂಸ್ಕೃತಿಯು ನಿಮ್ಮಲ್ಲಿ ಆಗಾಗ್ಗೆ ಕ್ರಾಂತಿ ಮತ್ತು ಸಾತತ್ಯದ ನಡುವೆ ಗೊಂದಲಗಳನ್ನು ಉಂಟುಮಾಡುತ್ತದೋ; ವಿಜ್ಞಾನ ಮತ್ತು ಧರ್ಮಗಳ ನಡುವೆ ಗೊಂದಲವನ್ನು ಸೃಷ್ಟಿಸುತ್ತದೋ; ಬಂಡಾಯ ಮತ್ತು ಪ್ರತಿರೋಧದ ನಡುವೆ ಗೊಂದಲವನ್ನು ಹುಟ್ಟುಹಾಕುತ್ತದೋ ಅಂಥಾ ಸಂಸ್ಕೃತಿಯು ನಿಮಗೇನನ್ನೂ ಕೊಡುವುದಿಲ್ಲ. ಅಂಥ ಸಂಸ್ಕೃತಿಯಿಂದ ನೀವೇನನ್ನೂ ಕಲಿಯಲು ಸಾಧ್ಯವಿಲ್ಲ. ಬದುಕನ್ನು ರೂಪಿಸಿಕೊಳ್ಳಬಹುದಾದ ಯಾವುದೂ ಅದರಲ್ಲಿಲ್ಲ. ವಾಸ್ತವದೊಂದಿಗೆ ಅವರು ಸಂಪರ್ಕವನ್ನು ಯಾವತ್ತೋ ಕಡಿದುಕೊಂಡಿದ್ದಾರೆ. ಹಿಂದೆ ಯಾವಾಗಲೋ ಅವರಲ್ಲಿ ಅದು ಇತ್ತೆಂಬುದೂ ಅನುಮಾನ. ಅಗತ್ಯ ಕಂಡರೆ ಅವರ ಬಗ್ಗೆ ವಿಷಾದ ವ್ಯಕ್ತಪಡಿಸಿ. ಆದರೆ ನೀವು ಯಾರು ಎಂಬ ಅರಿವಿನೊಂದಿಗೆ–ಅಮೆರಿಕನ್ ಇಂಡಿಯನ್ನರಾಗಿ–ನೆಮ್ಮದಿಯಿಂದಿರಿ'.

ಇಷ್ಟು ಹೇಳಿ ನನ್ನ ಸುದೀರ್ಘವಾದ ಭಾಷಣಕ್ಕೆ ಮುಕ್ತಾಯ ಹಾಡುತ್ತೇನೆ. ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ, ಯಾರನ್ನಾದರೂ ಮಾರ್ಕ್ಸ್‌ವಾದದ ಕಡೆಗೆ ಸೆಳೆಯುವ ಪ್ರಯತ್ನವನ್ನು ನಾನು ಮಾಡುತ್ತಿಲ್ಲ. ಬಂಡವಾಳವಾದ ಮತ್ತು ಕ್ರಿಶ್ಚಿಯನ್ ಮತವಾದಗಳು ನನ್ನ ಸಂಸ್ಕೃತಿಗೆ ಎಷ್ಟು ದೂರವೋ ಅಷ್ಟೇ ದೂರ ಈ ಮಾರ್ಕ್ಸ್‌ವಾದವೂ ಕೂಡ. ನಿಜವಾಗಿ ನೋಡಿದರೆ ನಾನು ಯಾರನ್ನೂ ಯಾವುದರ ಕಡೆಗೂ ಸೆಳೆಯುವ ಪ್ರಯತ್ನ ಮಾಡುತ್ತಿಲ್ಲ. ಸ್ವಲ್ಪಮಟ್ಟಿಗೆ–ಅಮೆರಿಕನ್ ಇಂಡಿಯನ್ ಆಂದೋಲನವು ಇನ್ನೂ ಅಂಬೆಗಾಲಿಡುತ್ತಿದ್ದಾಗ–ಬಿಳಿಯ ಮಾಧ್ಯಮಗಳು ಗುರುತಿಸಲು ಇಚ್ಛಿಸಿದಂತೆ–ನಾನು ನಾಯಕನಾಗಲು ಪ್ರಯತ್ನಿಸಿದ್ದೆ. ಅದು ಕೂಡ ಆಗ ನಾನು ಗೊಂದಲದಲ್ಲಿದ್ದದ್ದರ ಪರಿಣಾಮ ಮಾತ್ರ ಅಷ್ಟೇ. ಈಗ ಆ ಗೊಂದಲಗಳಿಲ್ಲ. ನಾನಾಗಲೀ ನೀವಾಗಲೀ ಎಲ್ಲರಿಗೆ ಎಲ್ಲವೂ ಆಗಿರಲು ಸಾಧ್ಯವಿಲ್ಲ. ನನ್ನ ಶತ್ರುಗಳು ನನ್ನನ್ನು ಆ ರೀತಿ ನೋಡುವುದನ್ನೂ ನಾನು ಇಷ್ಟಪಡುವುದಿಲ್ಲ. ನಾನೊಬ್ಬ *ಒಗ್ಲಾಲ ಲಕೋಟ* ದೇಶಾಭಿಮಾನಿ. ಅಷ್ಟೇ ನಾನು ಬಯಸುವುದು ಮತ್ತು ಅಗತ್ಯವಾಗಿ ಆಗಬೇಕಿರುವುದು. ನಾನು ಯಾರೋ ಅದೇ ಆಗಿರುವುದರಲ್ಲಿ ನನಗೆ ಸಂತೃಪ್ತಿಯಿದೆ.



**(ಈ ಲೇಖನದ ಅನುವಾದಕಿ ಟಿ.ಎಲ್.ರೇಖಾಂಬ, ಸಾಹಿತ್ಯ–ಸಂಗೀತಗಳಲ್ಲಿ ಆಸಕ್ತಿ ಹೊಂದಿದ್ದು, ಸದ್ಯಕ್ಕೆ ಭದ್ರಾವತಿಯ ಕಾಲೇಜೊಂದರಲ್ಲಿ ಗಣಿತಶಾಸ್ತ್ರವನ್ನು ಬೋಧಿಸುತ್ತಿದ್ದಾರೆ.)**




ವಿಶೇಷ ಸಂಚಿಕೆಗೆ ಹಾರ್ದಿಕ ಶುಭಾಷಯಗಳು

**ಭೂತಕಾಲದ ಸರಿಯಾದ ತಿಳುವಳಿಕೆ, ಭವಿಷತ್ತನ್ನು ರೂಪಿಸುವ ಸಾಹಸ ಮತ್ತು ಸ್ವಂತ ಸಂಸ್ಕೃತಿ ಮೇಲೆ ರಾಷ್ಟ್ರೀಯತೆಯನ್ನು ಕಟ್ಟಬೇಕಾಗಿದೆ. ನಾನಾ ಜಾತಿ ಕುಲಗಳಿಗಿಂತ ಮಾನವ ಧರ್ಮ ದೊಡ್ಡದು.**

**ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್**

ಸಂ. 25, 3ನೇ ತಿರುವು, 3ನೇ ವಾರ್ಡ್, ಸಂತೋಷ್ ನಗರ, 2ನೇ ಹಂತ, ಅಟ್ಟೂರು, ಯಲಹಂಕ, ಬೆಂಗಳೂರು - 560064

ದೂರವಾಣಿ : 9739032600, 9845501477, 9845027463, 9972191055

ಸಮಾಜವಾದದ ಆದರ್ಶಗಳಿಗಾಗಿ ಉರಿದು ಹೋದವರು ನೀಡಿದ ಬೆಳಕು ಪ್ರಜ್ವಲಿಸಲಿ ಮತ್ತು ಹೊಸ ಮನುಷ್ಯನ ಹಳೆ ಕನಸುಗಳೆಲ್ಲ ನನಸಾಗಲೀ ಎಂದು ಹಾರೈಸುತ್ತಾ-

**ಪತ್ರಿಕೆಯ ೮ನೇ ವರ್ಷದ ವಿಶೇಷ ಸಂಚಿಕೆಗೆ ಹಾರ್ದಿಕ ಶುಭಾಶಯಗಳು**

**–ಬಿ.ಎಸ್. ದಿವಾಕರ್, ಎನ್.ಸಿ. ರೇಣುಕಾ ಪ್ರಸಾದ್, ಕೆ.ಆರ್. ಚಂದ್ರಶೇಖರ್, ಸಿ.ಎಸ್. ಶಶಿಧರ್ ಆಚಾರ್, ಮತ್ತು ಕೆ.ಎಸ್. ರಾಜು, ಬೆಂಗಳೂರು**

ತಂತ್ರಜ್ಞಾನ ಎಂಬ ಮಾಯಾಮೃ

# ಮುಕ್ಕಿದಷ್ಟೂ ದಾಹ ಕೆರಳಿಸುವ ಉಪ್ಪು!

–ಎಸ್. ಮಂಜುನಾಥ್

ನಾವು ಚಿಕ್ಕವರಿರುತ್ತ ನಮ್ಮಲ್ಲಿ ಅದೃಷ್ಟವಂತರಾದವರ ಬಳಿ ಒಂದು ಆಟದ ವಸ್ತುವಿರುತ್ತಿತ್ತು. ಅದೊಂದು ರೀತಿಯ ಚಕ್ರ. ದರ್ಜಿಗಳ ದಾರದ ಉಂಡೆ ಅದು, ಮರದ್ದು. ಅದರ ಮಧ್ಯದ ಕಿಂಡಿಯೊಳಕ್ಕೆ ಸೈಕಲ್ ಟ್ಯೂಬಿನಿನಿಂದ ಕತ್ತರಿಸಿಕೊಂಡ ಒಂದು ರಬ್ಬರ್ ಬ್ಯಾಂಡ್‌ನ್ನು ತೂರಿಸಿ, ಅದಕ್ಕೆ ಚಕ್ರದ ಎರಡು ಬದಿಗೂ ಕಡ್ಡಿ ಹಾಕಿ ತಿರುಪಿ ನೆಲದ ಮೇಲೆ ಬಿಟ್ಟರೆ ಅದು ಅಷ್ಟು ದೂರ ಓಡುತ್ತಿತ್ತು. ನಮ್ಮ ಪಾಲಿಗೆ ಆ ಚಮತ್ಕಾರ ಆಶ್ಚರ್ಯ–ಸಂತೋಷ ಕೊಡುತ್ತಿತ್ತು!

ಆನಂತರ ಸಂತೆಯಲ್ಲಿ ಜಾತ್ರೆಯಲ್ಲಿ ಸ್ಪ್ರಿಂಗ್‌ನಿಂದ ನಡೆಯುವ ಆಟದ ಸಾಮಾನುಗಳು ಸಿಗುತ್ತಿದ್ದವು. ಒಂದು ಕೊಂತ ಒತ್ತಿದರೆ ಎರಡು ಬಾತುಕೋಳಿಗಳು ಸರದಿಯ ಮೇಲೆ ನಡುವಿನ ಮೀನು ಕುಕ್ಕುವ, ಮುದುಡಿದ ಕಮಲ ಬಿರಿದು ನಡುವೆ ಒಂದು ಹುಡುಗಿ ಸುತ್ತುವ, ಯೋಧನೊಬ್ಬನ ಟ್ಯಾಂಕರ್ ಚಲಿಸುವ–ಈ ಬಗೆಯ ಖುಷಿಕೊಡುವ ವಸ್ತುಗಳು. ಅವು ಯಾವುವೂ ನಮ್ಮ ಬುದ್ಧಿಮತ್ತೆಯನ್ನು ಬಹಳ ಮೀರಿದ್ದಾಗಿರಲಿಲ್ಲ. ಸ್ವಲ್ಪ ಮನಸ್ಸು ಮಾಡಿದರೆ ನಾವೂ ಅವುಗಳ ತಂತ್ರವನ್ನು ತಿಳಿಯಬಹುದಿತ್ತು. ನಮ್ಮ ಬಾಲ್ಯದಲ್ಲಿ ಅದಕ್ಕೆ ಮೀರಿದ ಬ್ಯಾಟರಿ ಸೆಲ್‌ನ, ಅಥವಾ ರಿಮೋಟ್ ಕಾರಿನಂಥ ಸರ್ಕ್ಯೂಟ್‌ನ ಆಟದ ವಸ್ತುಗಳಿರುತ್ತಿರಲಿಲ್ಲ. ಇನ್ನು ಈಗ ಮಕ್ಕಳು (ದೊಡ್ಡವರೂ) ಮೊಬೈಲು ಕಂಪ್ಯೂಟರುಗಳಲ್ಲಿ ಆಡುವ 'ಗೇಮ್'ಗಳ ಊಹೆಯೂ ಇರಲಿಲ್ಲ.

ನನ್ನ ಗೆಳೆಯರೊಬ್ಬರ ಮನೆಯಲ್ಲಿ ಸಣ್ಣ ಪ್ರಾಯದ ಅವರ ಮಗ ಕಂಪ್ಯೂಟರ್‌ನಲ್ಲಿ ಕ್ರಿಕೆಟ್ ಆಡುತ್ತಿದ್ದ. ನೀವೂ ಆಡಿ ಎಂದು ನನಗಂದ. ನಾನು 'ಬೇಡ, ನೀನು ಅಲ್ಲಿ ಕ್ರಿಕೆಟ್ ಆಡುತ್ತಿದೀನಿ ಅಂದುಕೊಂಡಿದೀಯ, ನೀನು ಆಡುತ್ತಿರೋದನ್ನೇ ನಾನು ಆಡುತ್ತಿದೀನಿ ಎಂದು ನಾನಂದುಕೊಂಡುಬಿಡುತ್ತೀನಿ' ಎಂದೆ.

ಊಟವಾದ ಮೇಲೆ ಒಬ್ಬ ತಾವೋ ಸಂತನಿಗೆ ತನ್ನ ನಿದ್ದೆ ತಾನೇ ಮಾಡಬೇಕಲ್ಲಾ ಎಂದು ಅಚ್ಚರಿಯಾಗಿದ್ದು ನೆನಪಿಗೆ ಬರುತ್ತಿದೆ. ಅಂದರೆ ನಮ್ಮ ಬದುಕಿಗೆ ಬದಲೀ ವ್ಯವಸ್ಥೆಯಿಲ್ಲ, ಅದನ್ನು ನಾವೇ ನೇರವಾಗಿ ಬದುಕಬೇಕು ಎಂಬುದೂ. ಆದರೆ ಆಧುನಿಕ ತಂತ್ರಜ್ಞಾನ ಮನುಷ್ಯನಿಗೆ ಆ ತಾಪತ್ರಯ ತಪ್ಪಿಸುವಂತೆ ಕಾಣುತ್ತಿದೆ, ನಮ್ಮ ಬದುಕನ್ನು ಅದು ನಮಗಾಗಿ ತಾನೇ ಬದುಕಿ. ಅತ್ಯಾಧುನಿಕ ಮನುಷ್ಯನಿಗೂ ಈಗ ನಿಜವಾದ ನಿಜಕ್ಕಿಂತ ಭ್ರಮಾತ್ಮಕ ನಿಜವೇ ಹೆಚ್ಚೆನಿಸಿರುವಂತಿದೆ.

ಮತ್ತು ಮೊದಲು ಹೇಳಿದಂತೆ ನಮ್ಮ ಬುದ್ಧಿಮತ್ತೆಯನ್ನೇ ಮೀರಿದ ತಂತ್ರಜ್ಞಾನ ಸಹಜವಾಗಿ ಕೆಲವೇ ಜನರ ಸ್ವತ್ತಾಗಿ ನಮ್ಮನ್ನು ಬರೀ ಅದರ ಗ್ರಾಹಕರನ್ನಾಗಿ ಉಳಿಸುತ್ತದೆ, ಬಳಸುತ್ತದೆ.


ಮಕ್ಕಳ ಆಟದ ಚಕ್ರದ ಬಗ್ಗೆ ಹೇಳಿದೆ. ಅಲ್ಲಿಂದ ಎತ್ತಿನ ಗಾಡಿ ಸಹಜವಾದ ಹಂತವೇ. ಎತ್ತಿನ ಗಾಡಿಯ ಅಂದ, ಅದರ ಸವಾರಿಯ ಸುಖವನ್ನು ನಾವಂತೂ ಬಲ್ಲೆವು. ನಮ್ಮ ನಂತರದವರಿಗೆ ಅದು ಗೊತ್ತಿದೆಯೋ ಇಲ್ಲವೋ. ನಗರ ಪ್ರದೇಶದವರಿಗಂತೂ ಸುತರಾಂ ಗೊತ್ತಿರದು. ಎತ್ತು–ಗಾಡಿ ಹೊಡೆಯುವ ಮನುಷ್ಯ–ಚಕ್ರ–ಕೂತವರು ಎಲ್ಲಾ ಒಂದೇ ಜೀವವೆಂಬಂತೆ ಇಡೀ ಚಿತ್ರಕ್ಕೇ ಒಂದು ಇಡಿತನವಿರುತ್ತಿತ್ತು. ಅದು ಅದರ ಸೌಂದರ್ಯ. ಮತ್ತು ಎತ್ತಿನ ಗಾಡಿಯ ಸವಾರಿಯ ಕಷ್ಟಮಿಶ್ರಿತ ಸುಖ! ಅದರ ವೇಗ–ಮನುಷ್ಯ ಓಡಬಹುದಾದ ವೇಗಕ್ಕಿಂತ ಹೆಚ್ಚಿಗಿರದೆ, ಜೀವನದ ಸಹಜಗತಿಯನ್ನು ಉದ್ವಸ್ತಗೊಳಿಸದಂತಿರುತ್ತಿತ್ತು. ಬದುಕಿನ ಸೌಂದರ್ಯ ಮತ್ತು ಸಮಾಧಾನವನ್ನು ಹೆಚ್ಚಿಸುವಂತೆಯೇ ಇರುತ್ತಿತ್ತು–ಆ ಸರಳ ವಾಹನ. ಮನುಷ್ಯನ ಬಗ್ಗೆ ಪ್ರೀತಿಯುಳ್ಳ ಆದರೆ ಅವನ ಅರಿಷಡ್ವರ್ಗಗಳನ್ನು ಕೆರಳಿಸದ ಸೈಕಲ್, ಹೊಲಿಗೆ ಯಂತ್ರ, ಹಿಟ್ಟಿನ ಗಿರಣಿ–ಇಂಥ ಯಂತ್ರಗಳಲ್ಲಿ ಅದೇ ಸೌಂದರ್ಯ ಕಾಣುತ್ತದೆ.

ಆದರೆ ಈಗಲೋ ವೇಗವೆಂಬುದು ವೇಗವನ್ನೇ ಮೀರಿ ಹೋಗಿದೆ. ಆವೇಗವಾಗಿದೆ. ಆ ವೇಗ ಕೊಂಚ ಕಮ್ಮಿಯಾದರೂ ಅನೇಕರಿಗೆ ಹುಚ್ಚೇ ಹಿಡಿಯಬಹುದಾದಂತಿದೆ. ಅತೀ ವೇಗವಾಗಿ ಹೋಗಿ ನಾವು ತಲುಪಬೇಕೆಂದಿರುವುದಾದರೂ ಎಲ್ಲಿಗೆ? ಮನುಷ್ಯನ ಅಂತಿಮ ಗಮ್ಯ ಎಲ್ಲರಿಗೂ ಗೊತ್ತೇ ಇದೆ. ಕಾಲ್ನಡಿಗೆಯ ನಿಧಾನಕ್ಕೆ ಬದುಕು ಎಷ್ಟೊಂದು ತೆರೆದು ತೋರುತ್ತದೆ! ತಂತ್ರಜ್ಞಾನದ ಪ್ರಗತಿಯ ಹೆಸರಲ್ಲಿ ಏನನ್ನೂ ಗಮನಿಸಲಾಗದೆ ಗಿರ್ರ್ ಎಂದು ತಲೆಸುತ್ತಿದಂತೆ ನಾವು ಕ್ಷಣಿಕವಾದ ಬದುಕನ್ನು ಅರೆಕ್ಷಣ ಮಾಡಿಕೊಂಡುಬಿಡುತ್ತೇವೆ.

ತಾವೋನಲ್ಲಿ ಒಂದು ಅರ್ಥಪೂರ್ಣವಾದ ಕಥೆಯಿದೆ. ಒಬ್ಬ ಕೊಡದಿಂದ ನೀರನ್ನು ಬಾವಿಯಿಂದ ತಂದು ತಂದು ಗಿಡಗಳಿಗೆ ಹಾಕುತ್ತಿದ್ದ. ಆಗ ಆ ಕಡೆ ಬಂದಂಥ ಅನೇಕ ಊರು ಸುತ್ತಿದವ ಹೇಳುತ್ತಾನೆ–'ಅಯ್ಯೋ ಇಷ್ಟೇಕೆ ಕಷ್ಟ ಪಡುತ್ತೀ, ನಾನು ಅಲ್ಲೊಂದು ಊರಿನಲ್ಲಿ ನೋಡಿದೆ, ದೊಡ್ಡದೊಂದು ಗಳುವನ್ನು ಮರದ ತುಂಡಿನ ಮೇಲೇರಿಸಿ ಅದರ ತುದಿಗೆ ಕೊಡ ಕಟ್ಟಿ, ಇವನು ಕಾಲಿಂದ ಒತ್ತಿ ನೀರು ಮೊಗೆದು ಸುಲಭವಾಗಿ ಗಿಡಕ್ಕೆ ಸುರಿಯುವುದನ್ನು. ನೀನ್ಯಾಕೆ ಹಾಗೆ ಮಾಡಬಾರದು?'

ಮೊದಲಿನವ ಹೇಳುತ್ತಾನೆ–'ಗೊತ್ತು ನನಗದು. ಅದಕ್ಕೆ ಯಾತ ಎನ್ನುತ್ತಾರೆ. ಗೊತ್ತಿದ್ದೂ ನನಗದು ಬೇಡ ಎಂದು ಬಿಟ್ಟಿದ್ದೇನೆ. ನಮ್ಮ ಕೆಲಸಕಾರ್ಯಗಳಲ್ಲಿ ನಾವು ತಂತ್ರ ಬಳಸಿದರೆ ನಮ್ಮ ಹೃದಯ ತಂತ್ರಿಯಾಗುತ್ತದೆ. ಅದರಿಂದ ಸ್ವಭಾವ ನಾಶವಾಗುತ್ತದೆ. ಕೊನೆಗೆ ಅದು ದುರಂತಕ್ಕೇ ಕಾರಣವಾಗುತ್ತದೆ. ಹಾಗಾಗಿ ನಿನ್ನ ಪಾಡಿಗೆ ನೀನು ಹೋಗು'

ಶ್ರಮ ನರಕ, ಸೌಲಭ್ಯ ಸ್ವರ್ಗ ಎಂಬ ಮಿಥ್ಯೆ ನಮ್ಮನ್ನು ಅಮರಿಕೊಂಡಿದೆ. ಒಂದು ಮಿತಿಯೊಳಗೆ ಅದು ಸರಿ ಕೂಡ. ಆದರೆ



**ಹಳ್ಳಿಸ್ವರ್ಗ**

ಮರ್ತ್ಯದ ಹಳ್ಳಿ
ಅಲ್ಲಿ ಜನರು
ಎಲ್ಲರಿಗೆಲ್ಲರೂ
ಬಂಧುಗಳೆನಿಸುವರು
ಕತ್ತಿ ಗುರಾಣಿಗಳಿದ್ದರೂ
ಎತ್ತಲೆಳಸರು
ಗಾಡಿ ದೋಣಿಗಳಿದ್ದರೂ
ಹತ್ತಲೆಳಸರು
ಸಾವು ಲಘುಸಂಗತಿಯೇನು
ಎಂದು ಕೇಳುವರು
ಕಾಲ ನಡಿಗೆಯ ಗತಿಗೆ
ಒಲಿಯುವರು
ಉಣಿಸಲ್ಲಿ ರುಚಿ
ಉಡುಪಲ್ಲಿ ಚೆಲುವು
ಕಾಣುವರು
ಮನೆಯ ತುಂಬುವರು ನಗುವಲ್ಲಿ
ಅರಳುವುದು ಬಾಳ ರೀತಿ ಅಲ್ಲಿ

ಅ ರಾಜ್ಯವೆಂಬುದು
ಈ ರಾಜ್ಯದ ಕಣ್ಣಳತೆಯಲ್ಲಿ
ಆ ರಾಜ್ಯದ ಕೋಳಿಕೂಗು
ಕೇಳುವುದು ಇಲ್ಲಿ
ಈ ರಾಜ್ಯದ ನಾಯಿ ಬೊಗಳು
ಕೇಳುವುದು ಅಲ್ಲಿ
ಆದರೂ ಒಂದು ರಾಜ್ಯದ ಜನರು
ಮತ್ತೊಂದು ರಾಜ್ಯವನೆಂದೂ ನೋಡದೆ
ಬಾಳಿ ಮುಪ್ಪಾಗಿ ಅಳಿಯುವರು

(ತಾವೋ ಪದ್ಯ)

ಶೂನ್ಯಶ್ರಮಕ್ಕಿಂತಲೂ ಇನ್ನೂ ಇನ್ನೂ ಸೌಲಭ್ಯ ಜಾಸ್ತಿಯಾಗುತ್ತ ಮನುಷ್ಯನ ಮನುಷ್ಯತ್ವ ಮತ್ತು ಅವನ ಪ್ರಾಣಿತ್ವಕ್ಕೂ ಸಂಚಕಾರ ತರುವಂತಿದೆ. ಹಸಿವಿಗೊಂದು ಮಾತ್ರೆ, ಜೀರ್ಣಕ್ಕೊಂದು, ನಿದ್ರೆಗೊಂದು, ಪ್ರೇಮಕ್ಕಿನ್ನೊಂದು, ಎಲ್ಲಾ ಭಾವನೆಗಳಿಗೂ ಒಂದೊಂದು....

ನಿಸರ್ಗದಲ್ಲಿರುವ ಒಂದು ಮಹಾನ್ ಶಾಸನವನ್ನು ನಾವು ಮರೆತಿದ್ದೇವೆ. ಅದೆಂದರೆ ಸುಖ ಸೌಲಭ್ಯ ಜಾಸ್ತಿಯಾದಷ್ಟೂ ನಮ್ಮ ಅನುಭವಿಸುವ ಸಾಮರ್ಥ್ಯ ಕುಗ್ಗುತ್ತದೆಂಬುದು.

ಈಗಾಗಲೇ ನಾವು ಎಷ್ಟೊಂದು ಯಂತ್ರಗಳಿಂದ ಆವೃತರಾಗಿದ್ದೇವೆ, ಆಕ್ರಮಿತರಾಗಿದ್ದೇವೆ! ನಾವು ಅವುಗಳ ಧಣಿಗಳು ಎಂದು ತಿಳಿಯುತ್ತಲೇ ಅವುಗಳ ಗುಲಾಮರಾಗಿದ್ದೇವೆ. ನಮಗಾಗಿ ಅವು ಅಲ್ಲ, ನಿಜಕ್ಕೂ ಅವುಗಳಿಗಾಗಿ ನಾವು! ಫೌಸ್ಟ್ ಮೆಫಿಸ್ಟೋಫಿಲಿಸ್‌ಗೆ ರಕ್ತದ ಬಾಂಡ್‌ನಲ್ಲಿ ತಾತ್ಕಾಲಿಕವಾದ ಭೋಗ ಮತ್ತು ಶಕ್ತಿಗಾಗಿ ತನ್ನ ಆತ್ಮವನ್ನು ಒತ್ತೆಯಿಟ್ಟಂತೆ ಆಗಿದೆ. ಮತ್ತು ಮೆಫಿಸ್ಟೋಫಿಲಿಸ್ ತನಗೆ ಸಂದಾಯವಾಗಬೇಕಾದ ನಮ್ಮ ಆತ್ಮದ ವಸೂಲಿಗೆ ಬಂದೇ ಬರುತ್ತಾನೆ.

ನಾವು ಯಾವುದರೊಂದಿಗಿದ್ದೇವೋ ನಿಧಾನವಾಗಿ ಅದರಂತಾಗುವುದನ್ನು ತಪ್ಪಿಸಿಕೊಳ್ಳಲಾರೆವು. ಅಂದರೆ ಈಗ ನಾವೂ ಬಹುಪಾಲು ಯಂತ್ರವೇ ಆಗಿದ್ದೇವೆ. ಸೃಜನಶೀಲತೆಯಲ್ಲಿ ಅರಳಬೇಕಾದ ನಮ್ಮ ಬದುಕು ಒಂದೇ ವಿನ್ಯಾಸದ ನಾಗರೀಕ 'ಕೆರಿಯರ್' ಆಗಿಬಿಟ್ಟಿದೆ. ಬದುಕಿನ ಮಾಂತ್ರಿಕತೆಗೆ ಬದಲಾಗಿ ತಂತ್ರಜ್ಞಾನದ ಅಗ್ಗದ ದೊಂಬರಾಟಕ್ಕೆ ನಾವು ಒಲಿದಿದ್ದೇವೆ. ಯಂತ್ರದ ದಕ್ಷತೆ, ಯಂತ್ರದ ಶಿಸ್ತು, ಅದರ ನಿರ್ಭಾವ, ವಸ್ತುನಿಷ್ಟತೆ– ನಮ್ಮ ಆದರ್ಶವೂ ಆಗಿ ನಾವೂ ಅವುಗಳೊಂದಿಗೆ ಒಂದಾಗಲು ಸ್ಪರ್ಧೆಗಿಳಿದಿದ್ದೇವೆ! ಮನುಷ್ಯ ಚೇತನಕ್ಕಿಂತ ಮಿಗಿಲಾದ್ದು ಯಾವುದೂ ಇಲ್ಲ ಎಂಬ ನಂಬಿಕೆ ಹೋಗಿ, ಸರಳನಾದ ಬಡವನಾದ ಒಬ್ಬ ಮನುಷ್ಯ ಒಂದು ಜುಜುಬಿ ಯಂತ್ರಕ್ಕಿಂತ ನಮ್ಮ ಕಣ್ಣಲ್ಲಿ ಕಡಿಮೆಯಾಗಿದ್ದಾನೆ! ಇದನ್ನು ಯಾವ ದೇವರೂ ಕ್ಷಮಿಸಲಾರ. ಮತ್ತು ಇದು ನಮ್ಮ ಜೀವನದ ಗುಣಾತ್ಮಕತೆ ಎಂದೂ ನಂಬಿದ್ದೇವೆ!

ಯಂತ್ರಗಳು ನಮ್ಮ ಜೀವಕಾಮವನ್ನು ತಗ್ಗಿಸಿ ಆತ್ಮಕಾಮವನ್ನು ತೆಳು ಮಾಡುತ್ತವೆ ಎನ್ನುತ್ತಾರೆ ಕವಿ ಪುತಿನ. ಒಂದು ಮಾವಿನ ಹಣ್ಣಿಗಾಗಿ ಈಗ ಕಾಯಬೇಕಿಲ್ಲ, ಅದು ಯಾವಾಗ ಬೇಕಾದರೂ ಬಿಡುವಂತೆ ಮಾಡಬಲ್ಲದು ತಂತ್ರಜ್ಞಾನ. ಅದಕ್ಕಾಗಿ ಕಾಯುವಿಕೆ, ಆ ಹಂಬಲ, ಸಿಕ್ಕಾಗಿನ ತೃಪ್ತಿ ಎಲ್ಲಾ ಹೋಯಿತು. ನಮ್ಮ ಪ್ರವೃತ್ತಿಗಳನ್ನೂ ದುರ್ಬಲಗೊಳಿಸಿ, ಭಾವಮಯಕೋಶವನ್ನು ಕುಗ್ಗಿಸಿ ನಮ್ಮ ಮನಸ್ಸನ್ನು ಒಣಗಿಸುತ್ತದೆ ತಂತ್ರಜ್ಞಾನ. ಆಗ ಉಳಿಯುವ ನಮ್ಮ 'ಪ್ರಖರ' ವಾದ ಬುದ್ಧಿಗೆ ಲೋಕದ 'ಸತ್ಯ' ಗೊತ್ತಾಗುತ್ತದೆ. 'ಆ ಸತ್ಯ' ವೆಂಬ ಪದಾರ್ಥವನ್ನು ಬೇಕಾದರೆ ನಾವು ಜತನವಾಗಿ ಕಾಪಿಟ್ಟುಕೊಳ್ಳಬಹುದು–ಮರಣಾನಂತರದ ಉಪಯೋಗಕ್ಕಾಗಿ ಮಮ್ಮಿಗೆಂದು ಇರಿಸುತ್ತಿದ್ದ ಕೆಲ ವಸ್ತುಗಳಂತೆ.


ಯಂತ್ರಗಳು ನಮ್ಮ ಆತ್ಮಸಾಕ್ಷಿಯನ್ನೂ ಮೊಂಡಾಗಿಸುತ್ತವೆ. ಕಣ್ಣೆದುರೇ ಇರುವ ಅನೇಕ ಘೋರ ಸಂಗತಿಗಳ ಬಗ್ಗೆ ನಮಗೆ ಏನೂ ಅನ್ನಿಸುವುದಿಲ್ಲ. ನ್ಯಾಯ, ಸಮತೆಗಳ ಬಗ್ಗೆ ತುಡಿತ ತಗ್ಗುತ್ತದೆ. ಅದದೇ ಸರಕುಗಳನ್ನು ಬಳಸುತ್ತ ಇಡೀ ಜಗತ್ತೇ ಒಂದು ಕುಟುಂಬ ಎಂಬಂತೆ ಹೊರಗೆ ಕಂಡರೂ, ನಾನು ಸಮಷ್ಟಿಯ ಒಂದಂಶ ಎಂದು ಭಾವಿಸುವ ಒಳಚೈತನ್ಯವೇ ಉಡುಗಿರುತ್ತದೆ.....

***

ನೈಲ್ ಕಟರ್, ಸ್ಟ್ಯಾಪ್ಲರ್, ಪಂಚಿಂಗ್ ಮೆಶಿನ್.... ಈ ಮಾಟಾದ ಪುಟ್ಟ ಯಂತ್ರಗಳೆಂದರೆ ನನಗಿಷ್ಟ; ಅವುಗಳಿಗೊಂದು ಚಂದವಿದೆ. ತಾವೋ ಗುರು ಚ್ವಾಂಗ್‌ತ್ಸು ಹೇಳುತ್ತಾನೆ: 'ಜೀವನದ ಸಣ್ಣ ಸಂಗತಿಗಳಲ್ಲಿ ಆಶ್ರಯ ಪಡಿ. ಅವುಗಳಲ್ಲಿ ಹೆಚ್ಚಿನ ಸಮಗ್ರತೆಯಿದೆ'. ನಮ್ಮ ಮನಸ್ಸು ಈ ಪುಟ್ಟ ಯಂತ್ರಗಳನ್ನು ತನ್ನ ಶಾಂತಿಗೆ, ಸ್ವರೂಪಕ್ಕೆ ಧಕ್ಕೆ ಬರದಂತೆ ಸಮಗ್ರವಾಗಿ ಗ್ರಹಿಸಬಲ್ಲದು.

ಅದೇ ಈಗ ಡೈನಾಸಾರ್‌ಗಳಂತೆ ಭೂಮಿ ಮೇಲೆ ಹರಿದಾಡುತ್ತಿರುವ ಜೇಸೀಬಿ ಎಂಬ ಯಂತ್ರಗಳೋ ಮಹಾಬಲಶಾಲಿ ಅಸುರನಂತಿವೆ. ಅಂಥವು ರಾತ್ರೋರಾತ್ರಿ ಅಗಾಧ ಭೂಮಿಯನ್ನು ಬಗೆಯಬಲ್ಲವು, ಗುಡ್ಡಗಳನ್ನು ನೆಲಸಮ ಮಾಡಬಲ್ಲವು, ಕಾಡಿಗೆ ಕಾಡನ್ನೇ ಸವರಬಲ್ಲವು.

ನಾನು ಊಹಿಸಿ ಬೆಚ್ಚುವ ದುಃಸ್ವಪ್ನವೆಂದರೆ ಈ ರಾಕ್ಷಸಯಂತ್ರಗಳು ಒಮ್ಮೆ ಜೀವತಳೆದು, ಯಾರ ಮಾತೂ ಕೇಳದೆ, ಎದುರು ಬಂದದ್ದನ್ನೆಲ್ಲ ನಾಶಮಾಡುತ್ತ ತಾರಾಡುತ್ತಿರುವುದು. ಅಥವಾ ಈಗಿರುವುದೂ ಹಾಗೇ,




ಮನುಷ್ಯನ ನಿಯಂತ್ರಣ ನಮ್ಮ ಭ್ರಮೆಯಷ್ಟೇ ಇರಬಹುದು.

'ಇದೆಲ್ಲಾ ಸೈತಾನನ ಸೃಷ್ಟಿ'–ಅಂದ ಒಬ್ಬ ಧರ್ಮಿಷ್ಟ. ಆದರೆ ಸೈತಾನ ದೇವರ ರೂಪದಲ್ಲಿ ಬಂದಿರುವ ಕಾಲ ಇದು. ಅವನ ಶಕ್ತಿ ಸಾಮರ್ಥ್ಯಗಳನ್ನು ನೋಡಿ ಅವನೇ ದೇವರು ಎಂದು ನಾವು ತಿಳಿದಿದ್ದೇವೆ. ಈಗ ದೇವರನ್ನು ನಂಬದೆ ಇರುವುದು ಸುಲಭ; ಯಂತ್ರಗಳನ್ನು ನಂಬದಿರುವವನು ನಾಸ್ತಿಕ, ಮತ್ತು ವಿಕ್ಷಿಪ್ತ.


***

ಒಬ್ಬ ವ್ಯಕ್ತಿಗೆ ಅಥವಾ ಒಂದು ದೇಶಕ್ಕೆ ಮುಂದುವರೆಯುವುದು ಎಂದರೆ ಇನ್ನೇನೂ ಇಲ್ಲ, ಶ್ರೀಮಂತವಾಗುವುದು ಎಂದರ್ಥ. ವಿನಾಶಕಾರಿಕಾರಿಯಾದ ಈ ಉನ್ಮಾದ ಮನುಷ್ಯನ ತಲೆಯನ್ನು ಹೇಗೆ ಹೊಕ್ಕಿತೋ!

ಇಡೀ ಜಗತ್ತು ಅಥವಾ ಎಲ್ಲ ವ್ಯಕ್ತಿಗಳೂ ಶ್ರೀಮಂತವಾಗುವುದು ಸಾಧ್ಯವೂ ಇಲ್ಲ, ಅದನ್ನು ಯಾರಾದರೂ ಇಷ್ಟಪಡುವುದೂ ಅನುಮಾನ. ಹಾಗೆ ಅಸಾಧ್ಯವಾದ್ದರಿಂದ ಭೂಗೋಳದ ಜನಸಂಖ್ಯೆಯ ಒಂದು ಸ್ತರ ಮಾತ್ರ ಶ್ರೀಮಂತವಾಗಿ, ಜಗತ್ತು ಇಷ್ಟಗಲ ಮಾತ್ರ ರಂಗಾಗಿ ಹೊಳೆಯುತ್ತ ಉಳಿದ ಬಹುಪಾಲು ಕೊಳೆತ ಸೇಬಿನಂತೆ ಇರುತ್ತದೆ.

ಜಗತ್ತಿನ ಬಡತನ ನೀಗಲು ತಂತ್ರಜ್ಞಾನ ಒದಗಿಸುವ ಸಮೃದ್ಧಿಯ ಅಗತ್ಯವಿದೆ ಎಂಬುದು ಒಂದು ಮಿಥ್ಯೆ. ತಂತ್ರಜ್ಞಾನವನ್ನು ತಮ್ಮ ಹಿಡಿತದೊಳಗಿಟ್ಟುಕೊಳ್ಳುವ ಆರ್ಥಿಕ ಶಕ್ತಿಗಳು–ಈಗಿನ ಒಂಟಿಅ ಗಳು ತಾವು ಮಿತಿಮೀರಿ ಶ್ರೀಮಂತರಾಗುತ್ತವೆ ಅಷ್ಟೇ. ನಾವು ಕಾಣುತ್ತಿರುವಂತೆ ಬಡತನ ಹೆಚ್ಚುತ್ತಲೇ ಇದೆ. ಮತ್ತು ಬಡತನ ಮೂಲತಃ ಸಾಪೇಕ್ಷವಾದುದು. ಮನುಷ್ಯನ ಅಹಂಕಾರ, ಅಭದ್ರತೆ, ಲೋಭಗಳು ಹೆಚ್ಚುವುದರಿಂದ ಸಂಗ್ರಹಬುದ್ಧಿ ಹೆಚ್ಚುತ್ತದೋ ಹೊರತು ಕಡಿಮೆಯಾಗದು. ಈ ಗುಣಗಳನ್ನು ಮಿತಿಮೀರಿ ಬೆಳೆಸುವ ತಂತ್ರಶಾಹಿ ಬಡತನ, ಹಿಂಸೆಗಳನ್ನು ಹೇಗಾದರೂ ಕಡಿಮೆಯಾಗಿಸೀತು?

ವ್ಯಕ್ತಿಗಾಗಲೀ ದೇಶಗಳಿಗಾಗಲೀ ಆದರ್ಶ ಜೀವನವೆಂದರೆ ಯಾವುದು? ಸರಳತೆ, ಭೂಮಿಯನ್ನು ಬಹುವಾಗಿ ಶೋಷಿಸದ ಪರಿಮಿತಿ, ಅನ್ನವನ್ನು ವಿಷಮಾಡದ ನಿಯತ್ತು, ಶ್ರಮದ ಬಗ್ಗೆ ಪ್ರೀತಿ, ಈ ಎಲ್ಲವುಗಳಿಂದಾಗಿ 'ಬದುಕು ಸಾವಿನ ನೆರಳು' ಎಂಬಂಥ ಭಯ ಕರಗಿ ಅಂತಃಕರಣ ಅರಳಿ ಇದು 'ಜೀವ ಜನುಮದ ಜಾತ್ರೆ' ಎಂದೂ ಒಂದು ಹಬ್ಬವೆಂದೂ ಅನಿಸುವುದು. ಇದೇ ಜೀವನದ ಬೆರಗು ಸಂತೋಷಗಳನ್ನು ವೃದ್ಧಿಸುವ ಒಂದು ಗಾಢವಾದ ಧಾರ್ಮಿಕ ಭಾವನೆ. ಕೊನೆಯಿರದ ಅಭಿವೃದ್ಧಿಯ ನಮ್ಮ ತಂತ್ರಜ್ಞಾನ ಪ್ರಣೀತ ನಾಗರೀಕ ಜೀವನ ಅಂಥ ಜೀವನ ಕ್ರಮವನ್ನು ಮಿಡೀವಲ್ ಎಂದು ಹಂಗಿಸುವ ಸ್ಥಿತಿಯೊಳಗೆ ಇಂದು ನಾವಿದ್ದೇವೆ.



**(ಕನ್ನಡದ ಮುಖ್ಯ ಕವಿಗಳಲ್ಲೊಬ್ಬರಾದ ಎಸ್. ಮಂಜುನಾಥ್ ನಮ್ಮ ಮುಖ್ಯ ಚಿಂತಕರಲ್ಲೂ ಒಬ್ಬರು. ಅವರು ಕೆ.ಆರ್. ನಗರದ ದೂರವಾಣಿ ವಿನಿಮಯ ಕೇಂದ್ರದಲ್ಲಿ ತಂತ್ರಜ್ಞರಾಗಿ ಕೆಲಸ ಮಾಡುತ್ತಿದ್ದಾರೆ.)**

(

# ಕೆ.ಎಂ. ಶಂಕರಪ್ಪ: ಸ್ಮರಣೆಯೊಂದೇ ಸಾಲದು

–ಸವಿತಾ ನಾಗಭೂಷಣ




**ಕೆ**.ಎಂ. ಶಂಕರಪ್ಪ ಅವರನ್ನು ನಾನು ಮೊಟ್ಟಮೊದಲಿಗೆ ಎದುರುಗೊಂಡಿದ್ದು ೧೯೮೪ರಲ್ಲಿ, ಕೆಮ್ಮಣ್ಣುಗುಂಡಿಯಲ್ಲಿ. ಅಲ್ಲಿ ದಲಿತ ಸಂಘರ್ಷ ಸಮಿತಿಯ ವತಿಯಿಂದ ಶಿಬಿರ'ವೊಂದು' ಆಯೋಜಿತಗೊಂಡಿತ್ತು. ನನಗೆ ಆಗ ತಾನೇ ಮದುವೆಯಾಗಿದ್ದು ನಾಗಭೂಷಣ ತಮ್ಮ ಲೋಕಕ್ಕೆ ನನ್ನನ್ನು ಪರಿಚಯಿಸಲು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು.ಬುದ್ಧ, ಗಾಂಧಿ, ಮಾರ್ಕ್ಸ್, ಲೋಹಿಯಾ ಅಂಬೇಡ್ಕರ್ ಇವರನ್ನು ಎಳೆಯ ಹೋರಾಟಗಾರರಿಗೆ ಪರಿಚಯಿಸುವ ಶಿಬಿರವದು.

**ಕೊಲೆ ಸುಲಿಗೆ ನಾಡಲಿ ಕುಡಗೋಲು ಅತ್ಯಾಚಾರ**
**ನಾಡಲ್ಲವೋ ಇದು ವಿಷದ ಸಮುದ್ರ..**

. ಎಂಬ ಹಾಡು ಅಲ್ಲಿ ಅನುರಣಿಸುತ್ತಿತ್ತು. ದೇವನೂರ ಮಹಾದೇವ ಶಂಕರ ಲಾಳಾಪುರ, ಬಿ. ಕೃಷ್ಣಪ್ಪ,, ಎಸ್. ಚಂದ್ರಶೇಖರ್, ಗೋವಿಂದಯ್ಯ, ಡಿ.ಎಸ್.ಎನ್, ರಾಮದಾಸ್ ಇನ್ನೂ ಹತ್ತು ಹಲವು ಚಿಂತಕರು ಆ ಶಿಬಿರದಲ್ಲಿ ಭಾಗವಹಿಸಿದ್ದರು. ಮುವ್ವತ್ತು ಜನ ಹುಡುಗರಿದ್ದ ಆ ಶಿಬಿರದಲ್ಲಿ ನಾನೊಬ್ಬಳೇ ಹೆಣ್ಣುಮಗಳು. ಮಾತಿಗೆ ಜತೆ ಯಾರಿಲ್ಲದೆ ಪರದಾಡುತ್ತಿದ್ದ ಸಮಯದಲ್ಲಿ ಆ ಕೆಮ್ಮಣ್ಣುಗುಂಡಿಯನ್ನು ಮುಸುಕಿದ್ದ ಮಂಜಿನ ಮಧ್ಯದಿಂದ ಮುನಿವರ್ಯರೊಬ್ಬರು ಮೂಡಿಬಂದಂತೆ ಈ ಶಂಕರಪ್ಪನವರ ಆಗಮನವಾಯಿತು. ಅದು ಟೀ ಸಮಯ. ಶುಭ್ರವಾದ ಬಿಳಿ ಪಂಚೆ, ಜುಬ್ಬ, ಬಿಳಿ ಗಡ್ಡ ಬಾಯಲ್ಲೊಂದು ಪೈಪ್. ಕನ್ನಡಕವನ್ನು ಮೂಗಿನ ಮೇಲೆ ಕೆಳಗೆ ಏರಿಸುತ್ತಾ ಇಳಿಸುತ್ತಾ 'ಏನ್ಲಾ... ಹೆಂಗಿದಿರೋ... ಬಡೆತ್ತವು...' ಎಂದು ಶಂಕರಪ್ಪನವರು ಆಗಮಿಸಲು, ಅವರ ಅನಿರೀಕ್ಷಿತ ಆಗಮನದಿಂದ ಪುಳಕಿತರಾದ ನಾಗಭೂಷಣ ಬಲು ಸಲಿಗೆಯಿಂದ "ಮಾಡಿ ಮಡಿದವರು ಇವರೇ!' ಎಂದು (ಶಂಕರಪ್ಪ 'ಮಾಡಿಮಡಿದವರು ಎಂಬ ಸಿನಿಮಾ ನಂತರ ಮತ್ತಾವ ಸಿನಿಮಾವನ್ನೂ ಮಾಡಲಿಲ್ಲ ಎಂಬರ್ಥದಲ್ಲಿ ಕಿಚಾಯಿಸುತ್ತಾ) ಪರಿಚಯಿಸಿದರು. ಎಲ್ಲರೂ ಗೊಳ್ಳೆಂದು ನಗಬೇಕೇ? 'ನಗಿ ನಗಿ. ಬಡೆತ್ತವಾ...' ಎಂದು ಶಂಕರಪ್ಪನವರು ನಾಗಭೂಷಣ ಪರಿಚಯಿಸಿದ ನನ್ನನ್ನು ಪ್ರೀತಿಯಿಂದ ನೋಡುತ್ತಾ ಊರು ಮನೆ ವಿಚಾರಿಸಿಕೊಳ್ಳುತ್ತಲೇ ಆಪ್ತರಾದರು. 'ಸಿನಿಮಾ'ದವರು–ಅದೂ ಪುಣೆ ಫಿಲ್ಮ್ ಇನಸ್ಟಿಟ್ಯೂಟ್ನಲ್ಲಿ ಕಲಿತು ಬಂದವರೆಂದು ಎಂದು ವಿಶೇಷ ಗೌರವ ಕೂಡ ನನ್ನಲ್ಲಿ ಉಂಟಾಯಿತು.

ಇಡೀ ದಿನ ಚರ್ಚೆ ನಡೆದ ಮೇಲೂ ಸಂಜೆ ಸಮಾಜವಾದಿಗಳ 'ಸಂಜೆ ಕಾರ್ಯಕ್ರಮ'ದಲ್ಲಿ ರಭಸದ ಚರ್ಚೆ ಮುಂದುವರೆದಿತ್ತು. ಈ ನಡುವೆ 'ಪಾನೀಯ' ಖಾಲಿಯಾಗಿ ಮತ್ತೆ ಅದನ್ನು ತರುವ ವ್ಯವಸ್ಥೆಯಾಗಬೇಕಿತ್ತು! ಕತ್ತಲೆ, ಕಾಡು. ಯಾರು ಹೋಗುವುದು? ಎಂದು ಚರ್ಚೆಯಾಗಿ ಶಂಕರಪ್ಪನವರೇ ಸೂಕ್ತ ಎಂದು ನಿರ್ಧರಿಸಲಾಯಿತು. ಆ ಗುಂಪಿನಲ್ಲಿದ್ದ ಹಿರಿಯರೆಂದರೆ ಶಂಕರಪ್ಪನವರೇ. ಆದರೆ ಅವರು ಏನೂ ಮುಜುಗರ ಇಲ್ಲದೆ 'ಬಡೆತ್ತವು ಹುಡುಗ್ರು ಮಾತಾಡಿಕೊಳ್ಳಲಿ. ನಾನೇ ತತ್ತೀನಿ' ಎಂದು ಸಹಾಯಕರೊಬ್ಬರ ಜತೆ ವಾಹನದಲ್ಲಿ ಹೊರಟು ಬೇಗನೇ ಮರಳಿ ಬಂದು ಚರ್ಚೆ ಮುಂದುವರೆಯಲು ಅನುವು ಮಾಡಿಕೊಟ್ಟರು. ಅವರ ಆ ನಡೆ ನನ್ನಲ್ಲಿ ಸೋಜಿಗ ಉಂಟುಮಾಡಿತ್ತು. 'ಸಮಾನತೆ'ಯ ಪಾಠ ಅಲ್ಲಿಂದಲೇ ಶುರುವಾಗಿತ್ತು.

ಹೀಗೆ ಭೇಟಿಯಾದ ಶಂಕರಪ್ಪನವರು ನೆನಪು ಮಾಸುವ ಮುನ್ನವೇ ಮರು ವರುಷ ನಂಜನಗೂಡಿನ ಸರ್ಕಾರಿ ಅತಿಥಿ ಗೃಹದಲ್ಲಿ ಮತ್ತೆ ಅವರನ್ನು ಎದುರುಗೊಳ್ಳುವಂತಾಯಿತು. ನಮ್ಮಿಬ್ಬರನ್ನೂ ನೋಡುತ್ತಲೇ 'ನೀವಿಬ್ಬರೂ ನನ್ನ ಪೂರ್ವಜನ್ಮದ ಬಂಧುಗಳ್ರಯ್ಯಾ... you both touch my chord' ಎಂದು ಅರುಹಿ ನಮ್ಮನ್ನು ನಮಗೆ ಗೊತ್ತಾಗುವ ಮುನ್ನವೇ ತಮ್ಮವರನ್ನಾಗಿ ಮಾಡಿಕೊಂಡು ಬಿಟ್ಟಿದ್ದರು. ಆ ದಿನ ಕಪಿಲಾ ನದಿ ದಂಡೆಯ ಮೇಲೆ ಕೂತು ನಾವು ಏನೆಲ್ಲಾ ಮಾತನಾಡಿದೆವು! ಅವರು 'ಒಡಲಾಳ'ವನ್ನು ಸಿನಿಮಾ ಮಾಡಲು ಚಿತ್ರಕತೆ ಬರೆಯುವ ಕಾಯಕದಲ್ಲಿ ತೊಡಗಿದ್ದರು. ಅದರ ಜವಾಬ್ದಾರಿಯನ್ನು ರಶೀದ್ ಮತ್ತು ಕಿಕ್ಕೇರಿ ನಾರಾಯಣ ಅವರಿಗೆ ವಹಿಸಿ ತಾವು ನಿಶ್ಚಿಂತರಾಗಿದ್ದರು! ಅವರ ಈ ಸಿನಿಮಾ ಸಾಹಸದಲ್ಲಿ ನಮ್ಮೆಲ್ಲರಿಗೂ ಪಾತ್ರವಿತ್ತು! ನಾಗಭೂಷಣ ಅವರ ಸಹಾಯಕ ನಿರ್ದೇಶಕರಾದರೆ, ನನಗೆ ಸಿನಿಮಾದ 'continuity' ನೋಡಿಕೊಳ್ಳುವ ಜವಾಬ್ದಾರಿ ನೀಡುವುದಾಗಿ ಹೇಳಿದ್ದರು. ಸಿನಿಮಾ take off ಆಗಲೇ ಇಲ್ಲ! ಇದು ಶಂಕರಪ್ಪನವರ ವೈಖರಿ! ಆದರೇನಂತೆ ಅವರ ಬಗ್ಗೆ ಇದ್ದ ಗೌರವಕ್ಕೆ ಅದು ಚ್ಯುತಿಯನ್ನೇನನ್ನೂ ತರಲಿಲ್ಲ.



ಅಷ್ಟರಲ್ಲೇ ಮಂಗಳೂರಿನಿಂದ ಬೆಂಗಳೂರಿಗೆ ನಾಗಭೂಷಣ ಅವರಿಗೆ ವರ್ಗವಾಗಿ ನಾವು ಬೆಂಗಳೂರಿನ ಹೊರವಲಯದ ಬಡಾವಣೆಯೊಂದರಲ್ಲಿ ಮನೆ ಮಾಡಿದ್ದೆವು. ಶಂಕರಪ್ಪನವರು ಒಮ್ಮೆ ನಮ್ಮ ಮನೆ ಹುಡುಕಿಕೊಂಡು ಬಂದವರು, ಏಕೋ ಏನೋ ವಾರದಲ್ಲಿ ಕನಿಷ್ಠ ನಾಲ್ಕು ದಿನವಾದರೂ ಸಂಜೆ ಹೊತ್ತಿಗೆ ನಮ್ಮ ಮನೆಗೆ ಬರಲಾರಂಭಿಸಿದರು. ಅವರು ಬರದಿದ್ದ ದಿನ ನಮಗೆ ಬೇಸರ, ಚಡಪಡಿಕೆ. ಅದೇ ತಾನೆ ಕವನ ಬರೆಯಲು ಶುರುಮಾಡಿದ್ದ ನನಗೆ ಝೆನ್, ಚೈನೀಸ್ ಲಿಟರೇಚರ್, ರೂಮಿ ಕುರಿತು ಅನೇಕ ಪುಸ್ತಕಗಳನ್ನು ತಂದುಕೊಟ್ಟರು. ಬಾವಿಯ ಕಪ್ಪೆಯಂತಿದ್ದ ನನ್ನನ್ನು ಮೇಲೆತ್ತಿ ಭೂಮಿಯ ಹಸಿರು, ಆಕಾಶದ ನೀಲಿಯನ್ನು ಪರಿಚಯ ಮಾಡಿಕೊಟ್ಟವರೇ ಅವರು. ನಾನು ಅವರು ತಂದುಕೊಟ್ಟ ಪುಸ್ತಕಗಳನ್ನು ಜೋಪಾನ ಮಾಡಿಟ್ಟುಕೊಂಡರೆ 'attachment ಕೆಟ್ಟದ್ದು ಕಣಮ್ಮಾ. ತಿಳಿಯಬೇಕು, ತ್ಯಜಿಸಬೇಕು' ಎನ್ನುತ್ತಿದ್ದರು. ನನ್ನ ತಂದೆಯೂ ಒಬ್ಬ ಆಧ್ಯಾತ್ಮಿಕ ವ್ಯಕ್ತಿಯೇ. ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿಯ ವಿಚಾರಗಳ ಪರಿಚಯ ತಕ್ಕಮಟ್ಟಿಗೆ ನನಗಿತ್ತು. ಶಂಕರಪ್ಪನವರು ಬುದ್ಧನ ಹುಚ್ಚು ಎಷ್ಟು ಹತ್ತಿಸಿದರೆಂದರೆ.... ಬುದ್ಧನಿಗೆ ಸಂಬಂಧಿಸಿದ ಹತ್ತು ಹಲವು ಪುಸ್ತಕಗಳನ್ನು ವಿವಿಧ ಗ್ರಂಥಾಲಯಗಳಿಂದ ನಾನೇ ಅವರಿಗೆ ಒದಗಿಸುವಷ್ಟು... ಬೆಂಗಳೂರನಲ್ಲಿ ನಮ್ಮ ಮನೆಗೆ ಬಂದರೆ ಅವರು ಬೇಡುತ್ತಿದ್ದುದು ಒಂದು ಕಪ್ ಚಾ ಮತ್ತು ವಾಪಸ್ ಮನೆಗೆ ಹೋಗಲು ಬಸ್ ಟಿಕೆಟ್‌ಗಾಗಿ ಒಂದು ರೂಪಾಯಿ. ಎಂದೂ ಹೆಚ್ಚಿಗಿಲ್ಲ. ಆಗೀಗ ಅವರು ವಾರ್ತಾ ಇಲಾಖೆಗೆ ತಯಾರಿಸುತ್ತಿದ್ದ ಸಣ್ಣಪುಟ್ಟ ಸಾಕ್ಷ್ಯ ಚಿತ್ರಗಳ ಸಂಬಂಧವಾಗಿ ಅವರ ಜೇಬಿಗೆ ಹಣ ಬಂದ ದಿನ ಎಲ್ಲರಿಗೂ ಹಬ್ಬ, ಅದು ಮುಗಿಯುವವರೆಗೂ>

ಸಿನಿಮಾ, ಸಾಹಿತ್ಯ, ಸಂಗೀತ, ಕಲೆ, ಬುದ್ಧ–ಸಿದ್ಧ–ಧ್ಯಾನ ಎಲ್ಲವನ್ನೂ ನಾವು ತಕ್ಕಮಟ್ಟಿಗಾದರೂ ಅರಗಿಸಿಕೊಳ್ಳುವಷ್ಟು ಅವರು ತಮ್ಮ ತಿಳುವಳಿಕೆಯನ್ನು ನಮಗೆ ಧಾರೆ ಎರೆದರು. ಇಷ್ಟಾದರೂ ನಾನು ಅವರ ಬಗ್ಗೆ ಕೊಂಚ ಅನುಮಾನವನ್ನೇ ಇರಿಸಿಕೊಂಡಿದ್ದೆ! ಅವರು ದಾರಿ ತೋರಿದ್ದರೂ ಅವರನ್ನು ಗುರುವೆಂದು ಸ್ವೀಕರಿಸಲಾಗಿರಲಿಲ್ಲ. ನೀವು 'ಗುರುಸಮಾನರು ಅಷ್ಟೇ!' ನನ್ನ ನಿಜ ಗುರು ಬೇರೆಯೇ ಇದ್ದಾರೆ ಎನ್ನುತ್ತಿದ್ದೆ! ಅವರು ಕೊಂಚ ಹೆಚ್ಚೇ ಎನಿಸುವಷ್ಟು ಪಾನಪ್ರಿಯರಾಗಿದ್ದನ್ನು ನಾನು ಟೀಕೆ ಮಾಡಿದರೆ ಅವರು ತೇಜಸ್ವಿಯವರ 'ಮಸಾಲೆ ಕರಿಯಪ್ಪನಂತೆ, 'ನಾನು ವಜ್ರಯಾನದ ಬೌದ್ಧ ಸಾಧಕನಮ್ಮ. ನಮ್ಮಲ್ಲಿ ಅದಕ್ಕೆ ನಿಷೇಧ ಇಲ್ಲ ಕಣಮ್ಮ!' ಎಂದು ಶಂಕರಪ್ಪನವರು ನಮ್ಮನ್ನು ಅವರ ನೆಚ್ಚಿನ ಸಿದ್ಧರ ಬೆಟ್ಟಕ್ಕೂ ಒಮ್ಮೆ ಕರೆದುಕೊಂಡು ಹೋಗಿ, ತಮ್ಮ ತಾಯಿಯ ಅನಾರೋಗ್ಯವೇ ಕಾರಣವಾಗಿ ಅಲ್ಲಿನ ಮಲ್ಲಾಜಮ್ಮ ಎಂಬ ಯೋಗ ಸಾಧಕಿಯ ಮಡಿಲಲ್ಲಿ ತಾವು ಬೆಳೆದ ಕಥೆಯನ್ನು ಸವಿಸ್ತಾರವಾಗಿ ನಮಗೆ ಹೇಳಿದ್ದರು. ಬೆಟ್ಟದ ಮೇಲೆ ಅವರು ಬಾಲಕರಂತೇ ಆಡಿ ನಲಿದ್ದದನ್ನು ನೋಡಿ ನಾವು ಬೆಗಾದೆವು.

ನಾಗಭೂಷಣ ಮತ್ತು ಸಿದ್ದಯ್ಯನವರಿಗೂ ಉತ್ಸಾಹ ಮೇರೆ ಮೀರಿ ಹರಿದು ಅವರಿಬ್ಬರೂ ಅಲ್ಲಿನ ಆಳದ ಗುಹೆಗಳೊಳಕ್ಕೆ ನುಸಳಿದ್ದನ್ನು ಕಂಡು ಗಾಬರಿಯಾದ ಶಂಕರಪ್ಪನವರು 'ಏ ಅಲ್ಲಿ ಆದಿ ಯೋಗಿಗಳು ಯೋಗನಿದ್ರೆಯಲ್ಲಿರ್ತಾರೆ ಕಣ್ರೋ! ಶಾಪ ಬಿದ್ರೆ ಮುಗೀತು ನಿಮ್ಮ ಕಥೆ!' ಎಂದು ಕೂಗಿಕೊಂಡಾಗ ನನಗೆ ಇವರಾರಿಬಹುದೆಂಬ ಅಚ್ಚರಿ! ಅಪಾರ ವಿದ್ವತ್ತು, ಸಾಧನೆ ಎಲ್ಲವೂ ಇದ್ದರೂ ಅವರು ಸಾಮಾನ್ಯರಂತೆ ನಮ್ಮ ಜತೆಗೆ ಒಡನಾಡುತ್ತಿದ್ದರಿಂದ ಬಹುಶಃ ನಾವು ಅವರನ್ನು ಗೌರವಿಸಿದ್ದಕ್ಕಿಂತ ಕೀಟಲೆ ಮಾಡಿದ್ದೇ ಹೆಚ್ಚು ಎನ್ನಬಹುದು. ನಾಗಭೂಷಣ, ಅವರನ್ನು ಇತರರೊಂದಿಗೆ ಪ್ರಸ್ತಾಪಿಸುವಾಗ 'ನಮ್ಮ ಶಂಕರ್ ಗುರು' ಎನ್ನುತ್ತಿದ್ದರು. ಒಮ್ಮೊಮ್ಮೆ ಅವರನ್ನು 'ಕಳ್ಳ ಗುರು' ಎಂದು ಕೀಟಲೆ ಮಾಡುತ್ತಿದ್ದರು. ಆಗವರು 'ಚೋರ ಗುರುವಿಗೆ ಚಂಡಾಲ ಶಿಷ್ಯರು' ಎಂದು ಪ್ರತಿ ಹಾಸ್ಯ ಮಾಡುತ್ತಿದ್ದರು.

ತುಮಕೂರಿನಲ್ಲಿ ಶಂಕರಪ್ಪ ಅವರಿಗೆ ದೊಡ್ಡ ಶಿಷ್ಯ ವೃಂದವಿತ್ತು. ಅವರ ಆಗಿನ ನೆಚ್ಚಿನ ಶಿಷ್ಯ ಕೆ.ಬಿ. ಸಿದ್ಧಯ್ಯನವರು ಬಹುಕಾಲ ಅವರಿಗೆ 'ಆಶ್ರಯ' ನೀಡಿದ್ದರು. ಸಿದ್ಧಯ್ಯ ಮಹಾ ಕಳ್ಳ, ಅಂತಾರೆ ಅವನನ್ನೇಕೆ ಹಚ್ಚಿಕೊಂಡಿರುವಿರಿ ಎಂದು ಹೊಟ್ಟೆಕಿಚ್ಚಿನಿಂದ ನಾಗಭೂಷಣ ಕೆಣಕಿದರೆ, 'ಗುರು ಬೇಕಾಗಿರೋದೇ ಕಳ್ಳರಿಗೆ ಕಣಯ್ಯ!' ಎಂದು ತಿರುಗೇಟು ನೀಡುವರು! ಒಮ್ಮೆ ಹೀಗಾಯಿತು. ಅವರು ತುಮಕೂರಿನಲ್ಲಿ ಸಿದ್ಧಯ್ಯ ಅವರ ಮನೆಯಲ್ಲಿ ತಂಗಿದ್ದರು. ಸಿದ್ಧಯ್ಯ ಅವರ ಮನೆಯ ಮುಂದಿನ ಕಲ್ಲಿನ ಜಗುಲಿಯ ಮೇಲೆಯೇ ಅವರು ಅಲ್ಲಿ ಇದ್ದಷ್ಟು ದಿನ ಮಲಗುತ್ತಿದ್ದುದು. ನಾವೂ ಆಕಸ್ಮಿಕವಾಗಿ ಅಂದು ಅಲ್ಲಿಗೆ ಹೋದ್ದೆವು. ಅನಿರೀಕ್ಷಿತ ಭೇಟಿ ಇಬ್ಬರಿಗೂ ಸಂತಸ ತಂದಿತ್ತು. ಸಂಜೆ ಸಣ್ಣಗೆ ಮಳೆ ಹನಿಯುತ್ತಿತ್ತು. 'ಥಂಡಿಯಾಗುತ್ತದೆ ಒಳಗೆ ಹೋಗೋಣವೇ ಸಾರ್?' ಎಂದು ನಾನು ಕೇಳಿದೆ. 'ಇಲ್ಲಮ್ಮಾ ಇಲ್ಲೇ ಇರೋಣ' ಎಂದರು. ಬಹಳ ಲಹರಿಯಲ್ಲಿದ್ದಂತೆ ಇದ್ದ ಶಂಕರಪ್ಪನವರು ಸುತ್ತ ಮುತ್ತ ನಾಯಿ ಮೂಸಿದಂತೆ ಮೂಸಿ ನೋಡತೊಡಗಿ, 'ಗುರು ಬತ್ತಿದಾನೆ ಕಣೋ!' ಎಂದರು. ನಾವು ತಮಾಷೆ ಮಾಡುತ್ತಾ 'ಎಲ್ಲಿ ಎಲ್ಲಿ ಸಾರ್?' ಎಂದು ಗೇಟಿನತ್ತ ನೋಡಿದೆವು. ಅನತಿ ಕಾಲದಲ್ಲೇ ತಣ್ಣಗೆ ಗಾಳಿ ಬೀಸಿತು. ಆಗಸದಲ್ಲಿ ದೊಡ್ಡ ಕಾಮನಬಿಲ್ಲೊಂದು ಮೂಡಿ ಬಂತು. ನಾವು ಸಂತಸದಿಂದ ಅನೇಕ ನಿಮಿಷಗಳ ಕಾಲ ಆ ದೊಡ್ಡ ಕಾಮನಬಿಲ್ಲನ್ನು ನಿರುಕಿಸಿದೆವು. ಮತ್ತೇರಿದಂತಿದ್ದ ಅವರು 'ಗುರು ಯಾವತ್ತೂ elements ರೂಪದಲ್ಲೇ ಕಣ್ರೋ ದರುಶನ ಕೊಡೋದು. ನೀವು 'ದಾರಿ'ಯಲ್ಲಿದ್ದರೆ you will sense him and feel him!' ಎಂದರು. ರುಮು ರುಮು ಎಂದು ಜೋರಾಗಿ ಗಾಳಿ ಬೀಸಿದರೆ 'ಗುರು' ಬಂದಿದ್ದಾನೆ. ಇಲ್ಲೇ ಇದಾನೆ' ಎನ್ನುವರು. ಆಗಸದ ನಕ್ಷತ್ರವೊಂದನ್ನು ಗಂಟೆಗಟ್ಟಲೆ ಕಣ್ಣು ಕೀಲಿಸಿ ನೋಡುವರು. ಹಗಲು ರಾತ್ರಿಯೆನ್ನದೆ ವಿಪಶ್ಶನ ಧ್ಯಾನದಲ್ಲಿ ಅವರು ಮುಳುಗಿರುತ್ತಿದ್ದರು. ಕಣ್ಣಾರೆ ಕಂಡದ್ದರಿಂದ ನಿಜವೊ-ಸುಳ್ಳೊ ಎಂದು ತಿಳಿಯಲಾಗದೇ ನಾವು ತಳಮಳಿಸಿ 'ಯೋಗಿಯ ಆತ್ಮಕತೆ' ಓದಿದ್ದ ನಾವು ಒಮ್ಮೆ ಹಿಮಾಲಯ ಪ್ರವಾಸದಲ್ಲಿದ್ದಾಗ ಗಂಗೆಯ ತಡಿಯ ಜೋಷಿ ಮಠದ



ಕೆ.ಬಿ.ಸಿದ್ಧಯ್ಯನವರ ಮನೆಯಲ್ಲಿನ ಬುದ್ಧಜಯಂತಿ ಸಂದರ್ಭದಲ್ಲಿ ಡಿ.ಎಸ್.ನಾಗಭೂಷಣ ಮತ್ತು ಕೆ.ಬಿ.ಯವರೊಂದಿಗೆ





ಬಳಿ 'ಇಲ್ಲೇ ಲಾಹಿರಿ/ಬಾಬಾಜಿ ಅವರುಗಳು ಸುಳಿದಾಡುತ್ತಿರುತ್ತಾರೆ, ಇದೇ ಅವರ ಆವಾಸ ಸ್ಥಾನ. ಕರೆದರೆ ಬಾರದೆ ಇರುವರೆ? ಎಂದು ಗುರುವಿನ ಆಗಮನಕ್ಕಾಗಿ ಪ್ರಾರ್ಥಿಸಿದರೆ, ಅದೋ ಇದ್ದಕ್ಕಿದ್ದ ಹಾಗೆ ಕ್ಷಣಾರ್ಧದಲ್ಲಿ ಭರ್ರನೆ ಗಾಳಿ ಬೀಸಿಬಂದು ಜೋಡಿ ಕಾಮನಬಿಲ್ಲುಗಳು ದಿಗಂತದಾದ್ಯಂತ ಮೂಡುವುದೆ? ಇದರ ಸತ್ಯಾಸತ್ಯತೆ ಬಗ್ಗೆ ಶಂಕರಪ್ಪನವರ ಬಳಿ ಕೇಳಿದರೆ... 'ಅಯ್ಯೋ, ಕರೆದರೆ ಬತ್ತಾನೆ. ಆದರೆ 'ನಂಬರು ನೆಚ್ಚರು ಬರಿದೇ ಕರೆವರು' ಎಂದು ನಗುವರು!

ನಾವು ಹಾಸನ, ಮಡಿಕೇರಿ, ಚಿತ್ರದುರ್ಗದಲ್ಲಿದ್ದಾಗೆಲ್ಲ ನಮ್ಮಲ್ಲಿಗೆ ಅವರು ಬಂದು, ಉಳಿದು ನಮ್ಮ ವಿಚಾರಗಳನ್ನು ವಿಸ್ತರಿಸುತ್ತಿದ್ದರು. ಯಾವ ಔಪಚಾರಿಕ ಸಮಾರಂಭಗಳಿಗೂ ಸಾಮಾನ್ಯವಾಗಿ ಹೋಗದ, ವೇದಿಕೆ ಹತ್ತದ ಅವರು ನಮ್ಮ ಮೇಲಿನ ಪ್ರೀತಿಯಿಂದ ಚಿತ್ರದುರ್ಗದಲ್ಲಿ ನನ್ನ 'ಆಕಾಶಮಲ್ಲಿಗೆ' ಕಾವ್ಯ ಸಂಗ್ರಹ ಮತ್ತು ನಂತರ ಮೈಸೂರಿನಲ್ಲಿ ನಾಗಭೂಷಣರ 'ಜೆಪಿ: ಒಂದು ಅಪೂರ್ಣ ಕ್ರಾಂತಿಯ ಕಥೆ' ಪುಸ್ತಕದ ಬಿಡುಗಡೆಗೆ ಅತಿಥಿಯಾಗಿ ಬಂದು ಆಶೀರ್ವದಿಸಿದ್ದರು. ಬದುಕಿನ ಸೋಲುಗಳು ಅವರನ್ನು ಬೌದ್ಧ ಧರ್ಮದತ್ತ ನಡೆಯಿಸಿತೇ? ಎಂದು ನಮಗೆ ಅನುಮಾನವಾಗುತ್ತಿತ್ತು. 'ಇಡೀ ಜಗತ್ತೇ ಒಂದು ಹೆಣಿಗೆ. ಒಂದರ ಒಳಗೆ ಇನ್ನೊಂದು. ಸಿದ್ದ ಬುದ್ಧ, ಪರಮಹಂಸ, ರಮಣ ಎಲ್ಲಾ ಒಂದೇ' ಎನ್ನುವರು. 'Every thing comes from mind. £ÀzÀ every thing goes back to mind, what is there in samsara is also there in nirvana', 'ಏನನ್ನೂ ಆಶಿಸದವನ ಎಲ್ಲ ಆಸೆಗಳೂ ತೀರಿಸಲ್ಪಡುತ್ತವೆ'. ಇವು ಅವರು ಆಗಾಗ್ಗೆ ಉದ್ಧರಿಸುತ್ತಿದ್ದ ವಾಕ್ಯಗಳು.

ಅವರ ದೌರ್ಬಲ್ಯಗಳನ್ನು ಎತ್ತಿ ತೋರಿದರೆ... ಹೌದು. ಇವೆ. ಖಂಡಿತ ಇವೆ. ಅವು ತೀರಲೆಂದೇ ಈ ಜನುಮ, ದಾಟಲೆಂದೇ ಬಂದಿರುವೆ ಎನ್ನುವರು. ಮಾಸ್ತಿ ನಿಜವಾದ ಬುದ್ಧಿಸ್ಟ್ ಎನ್ನುತ್ತಿದ್ದ ಅವರು ಕುವೆಂಪು ಅವರ ಬಗ್ಗೆ ಸಾಕ್ಷ್ಯಚಿತ್ರ ಮಾಡಲು ಉತ್ಸುಕತೆಯಿಂದ ಚಿತ್ರಕತೆ ಸಿದ್ಧಪಡಿಸಿದ್ದರು. ನಾಗಭೂಷಣ ಅದರ ಸಿದ್ಧತೆಗಾಗಿ ಒಂದಿಷ್ಟು ಹಣವನ್ನೂ ಒದಗಿಸಿದ್ದರು. ಆದರೆ ಅವರ ಸ್ನೇಹಿತರೇ ಅದಕ್ಕೆ ಕಲ್ಲು ಹಾಕಿದರೆಂದು ತಿಳಿದು ಬಂದರೂ ವಿಚಲಿತರಾಗದೆ ಗುರುವಿನ ಇಚ್ಛೆ ಹಾಗಿದೆ ಎಂದು ನಂಬಿದ್ದರು.

'ಏನೆಲ್ಲ ಪ್ರತಿಭೆ ಇದ್ದರೂ ಯಾವುದೂ ಬೆಳಕಿಗೆ ಬರಲಿಲ್ಲವಲ್ಲ! ದೊಡ್ಡ talentವೊಂದು waste ಆಯಿತಲ್ಲ' ಎಂದು ನಾವು ಅವಲತ್ತುಗೊಂಡರೆ.... 'ಎಲ್ಲವೂ ಕೊನೆಗೆ ಅರ್ಥಹೀನ... ಯಾಕೆ ಒದ್ದಾಡ್ತೀರೋ' ಎನ್ನುವರು. ಆಗೆಲ್ಲ ನಾವು 'ಪಲಾಯನವಾದಿ' ಎಂದು ಅವರನ್ನು ಟೀಕಿಸುತ್ತಿದ್ದೆವು.. ಬದುಕಿನಲ್ಲಿ ಬಹುದೂರ ಬಂದಿರುವ ನಮಗೆ ಈಗ ಅಂದು ಅವರು ಹೇಳಿದ್ದು ತಿಳಿದಂತಾಗುತ್ತಿದೆ. ಅವರಲ್ಲಿದ ಈ ಕ್ಷಣದಲ್ಲಿ ನಮಗೆ ಕೊಟ್ಟು ಹೋಗಿರುವುದು ಎಷ್ಟು ದೊಡ್ಡದು ಎಂಬ ಚಿತ್ರ ನಿಧಾನವಾಗಿ ಮೂಡಹತ್ತಿದೆ... ಅವರು ಗುರುವಾಗಿ ನಮ್ಮನ್ನು ಮುನ್ನಡೆಸಿದ್ದರು... ನಾವು ಶ್ರದ್ಧಾಳು ಆಗದೆ ಅನುಮಾನಿಸಿ ಅವರ ನಿರೀಕ್ಷೆ ಹುಸಿ ಮಾಡಿದೆವು ಎಂಬ ನೋವು ಉಳಿದೇ ಉಳಿದಿದೆ..



**(ಕನ್ನಡದ ಮುಖ್ಯ ಕವಿಗಳಲ್ಲೊಬ್ಬರಾದ ಸವಿತಾ ನಾಗಭೂಷಣ ಕಾದಂಬರಿಕಾರ್ತಿ ಮತ್ತು ಅಂಕಣಕಾರ್ತಿಯೂ ಹೌದು. ಅವರೀಗ ಪತಿ ಡಿ.ಎಸ್ ನಾಗಭೂಷಣರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ)**



ಒಂದುವಿಶೇಷ ಸಂದರ್ಶನ

ಸಂದರ್ಶನ: **ಡಿ.ಎಸ್. ನಾಗಭೂಷಣ**

# ನಾವು ಕುವೆಂಪು ಅವರ ಮುಂದುವರಿಕೆ: ಯು.ಆರ್. ಅನಂತಮೂರ್ತಿ

**ಕನ್ನಡದ ಏಕೆ, ಭಾರತದ ಸಮಕಾಲೀನ ಲೇಖಕರ ಪೈಕಿ ಮಹತ್ವಪೂರ್ಣ ಲೇಖಕರಲ್ಲೊಬ್ಬರಾಗಿರುವ ಯು.ಆರ್. ಅನಂತಮೂರ್ತಿಯವರು ಲೇಖಕ ಮಾತ್ರವಲ್ಲ, ಸಾಂಸ್ಕೃತಿಕ ಮತ್ತು ರಾಜಕೀಯ ಚಿಂತಕ ಹಾಗೂ ವ್ಯಾಖ್ಯಾನಕಾರರಾಗಿಯೂ ಹೆಸರು ಮಾಡಿದವರು. ತಮ್ಮ ಹಲವು ವಿವಾದಾತ್ಮಕ ಹೇಳಿಕೆಗಳ ಮೂಲಕ ಈ ಮೂರೂ ಕ್ಷೇತ್ರಗಳಲ್ಲಿ ಬಿಸಿ ಬಿಸಿ ಹಾಗೂ ಅರ್ಥಪೂರ್ಣ ಚರ್ಚೆಗಳಿಗೆ ಕಾರಣರಾದವರು ಮತ್ತು ಟೀಕೆ-ನಿಂದನೆಗಳಿಗೂ ಸಿಕ್ಕಿ ಬಳಲಿದವರು.. ಎಂಬತ್ತನ್ನೂ ಮೀರಿದ ತಮ್ಮ ಈ ಇಳಿ ವಯಸ್ಸಿನಲ್ಲಿಯೂ ಬತ್ತದ ಜೀವನೋತ್ಸಾಹದೊಂದಿಗೆ ಸಾರ್ವಜನಿಕ ಜೀವನದ ಎಲ್ಲ ಚರ್ಚೆಗಳಲ್ಲೂ ಪಾಲ್ಗೊಳ್ಳುತ್ತಿರುವ ಅನಂತಮೂರ್ತಿಯವರನ್ನು, ಈ ಎಲ್ಲ ಹಿನ್ನೆಲೆಯೊಂದಿಗೆ 'ಹೊಸ ಮನುಷ್ಯ'ಕ್ಕಾಗಿ ಇಲ್ಲಿ ಒಂದು ಬಿಚ್ಚುಮನಸ್ಸಿನ ಮಾತುಕತೆಗೆ ಎಳೆಯುವ ಪ್ರಯತ್ನ ಮಾಡಿದೆ.ಇದರ ಫಲವೆಂಬಂತೆ ಅವರ ಬಾಯಿಂದ ಕೆಲ ಹೊಸ ಸತ್ಯಗಳು ಹೊಮ್ಮಿ, ಕಳೆದ ಐವತ್ತು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಪುನರ್ನಿರೂಪಣೆಯೂ ಸಾಧ್ಯವಾಗಿದೆ ಎನ್ನಿಸುತ್ತದೆ.**-ಸಂಪಾದಕ



**ನೀವು ಕನ್ನಡದ ತುಂಬ ಮಹತ್ವದ ಲೇಖಕರು. ಲೇಖಕರು ಅಂದ್ರೆ ಬರೀ ಸೃಜನಶೀಲ ಅಂತ ಸಾಮಾನ್ಯವಾಗಿ ಕರೆಯುವಂತಹ ಲೇಖಕರು ಮಾತ್ರ ಅಲ್ಲ. ಸಾಹಿತ್ಯ-ಸಂಸ್ಕೃತಿ-ರಾಜಕಾರಣಗಳನ್ನು ಕುರಿತು ಒಟ್ಟೊಟ್ಟಿಗೇ ಚಿಂತಿಸಿರೋ, ಜಿಜ್ಞಾಸೆ ಮಾಡಿರೋ ಲೇಖಕರು ಕೂಡ. ನೀವು ನವ್ಯ ಸಾಹಿತ್ಯ ಸಂಪ್ರದಾಯದ ಒಬ್ಬ ಹರಿಕಾರರು ಕೂಡ ಅಂತ ಹೇಳಬಹುದೇನೋ. ಆದ್ದರಿಂದ ನಮ್ಮ ಮಾತುಕತೆಯನ್ನು ಅಲ್ಲಿಂದ ಆರಂಭಿಸಬಹುದೂಂತ ಕಾಣುತ್ತದೆ. ಈ ನವ್ಯ ಪಂಥದ ಬಗ್ಗೆ ಒಂದು ಅಭಿಪ್ರಾಯ ಇದೆ ಸರ್. ಅದು ಕನ್ನಡ ಸಾಹಿತ್ಯ ಆವರೆಗೆ ಸತತವಾಗಿ ಕಾಪಾಡಿಕೊಂಡು ಬಂದಿದ್ದ ತನ್ನ ಪರಂಪರೆಯೊಂದಿಗಿನ ಸಾವಯವ ಸಂಬಂಧವನ್ನು ಕಡಿದುಕೊಂಡಿತು ಅಥವಾ ಕಡಿದು ಹಾಕಿತು ಅಂತ. ಇದರ ಬಗ್ಗೆ ನೀವೇನು ಹೇಳ್ತೀರಾ ಸರ್?**

ಕಡಿದು ಹೋಗಬಹುದಿತ್ತು, ಆದರೆ ಕಡಿದು ಹೋಗಲಿಲ್ಲ. ಅಸಂಗತವಾದದ ಹೆಸರಲ್ಲಿ ಕೆಲವು ಪ್ರಯೋಗಗಳು ನಡೆದವು. ನ.ರತ್ನ ಮಾಡಿದ್ದ, ಸದಾಶಿವ ಮಾಡಿದ್ದ, ನಾನೂ ಮಾಡಿದ್ದೆ. ಆದರೆ ಅಡಿಗರು ಮಾಡಿರಲಿಲ್ಲ. ಅವರ ಮಟ್ಟಿಗೆ ಅಡಿಗರು ಪರಂಪರೆಯಿಂದಲೇ ಬಂದವರು. ಅವರನ್ನು ನಾವು ದೃಢವಾಗಿ ಹಿಡಿದುಕೊಂಡಿದ್ದರಿಂದ ಕನ್ನಡವನ್ನ ಸರಿಯಾಗಿ ಬರೀಬೇಕು, ಚಂದಸ್ಸು ತಪ್ಪಬಾರದು, ಸಾಹಿತ್ಯದ ಮರ್ಯಾದೆಗಳನ್ನು ಮೀರಬಾರದು ಇದನ್ನು ಕಲಿತ್ವಿ ನಾವು. ಅಡಿಗರು ತಿದ್ದತಾ ಇದ್ದರು ನಮ್ಮನ್ನ. ಆದ್ರಿಂದ ನಾವು ಎತ್ಲೆತ್ಲೋ ಹೋಗ್ಲಿಲ್ಲ. ಮತ್ತು... ಈಗ ತೇಜಸ್ವಿ ತಗೊಳ್ಳಿ. ಅವನು ನಮ್ಮ ನವ್ಯರ ಜೊತೆಗೆ ಬರ್ದ್ದೇ ಇದ್ದಿದ್ರೆ, ಅವನು ಕುವೆಂಪು ಅವರ ಸುತ್ತ ಒಂದು ಗುಂಪಿತ್ತಲ್ಲ, ಅಲ್ಲೇ ಇದ್ದಿದ್ರೆ ಕ್ರಿಯೇಟೀವ್ ಆಗ್ತಿರಲಿಲ್ಲ. ಅದೇನೇ ನಾನು ಹೇಳೋದು... ಕೆದಕುವ, ಹುಡುಕುವ, ಪ್ರಶ್ನಿಸುವ ಅನುಮಾನಿಸುವ ಗುಣ ಇತ್ತು. ಅದು ಅತಿ ಆಗಿ ಇರ್ತಿತ್ತು ಕೆಲವು ಸಲ. ಯಾವಾಗಲೂ ನೀನು ಕಂಡ ಸತ್ಯವನ್ನು ಹೇಳಬೇಕು ಅಂತಿದ್ರೆ ಅತಿಗೆ ಹೋಗೋದಕ್ಕೆ ಹೆದರಬೇಡ ಅಂತ ಬ್ಲೇಕ್ ಹೇಳ್ತಾ ಇದ್ದ. Gateways of Heaven open to those who go to the extreme. ಆದರೆ ನಾವು ಆ ಅತಿಗೆ ಹೋಗಲಿಲ್ಲ ಕಮೂ ತರ. ಕಮೂ ಹೋಗಿದ್ದ. ಕಮೂ ಈಸ್ ಎ ಗ್ರೇಟ್ ರೈಟರ್ ಇವೊತ್ತೂ!

**ಆದರೆ ನವ್ಯ ಬಂದ ಮೇಲೆ ಕನ್ನಡದ ಓದುಗ ವರ್ಗದ ಸ್ವರೂಪವೇ ಬದಲಾಯಿತು ಮತ್ತು ಅದಕ್ಕಿಂತ ಹೆಚ್ಚಾಗಿ ಸಾಹಿತ್ಯ ಅನ್ನೋದು ಒಂದು ಪರಿಣಿತ ಅನ್ನಬಹುದಾದ ಸೀಮಿತ ವರ್ಗಕ್ಕೆ ಸಂಕುಚಿತಗೊಂಡ್ತು ಅನ್ನೋ ಮಾತು ಕೂಡ ಇದೆ.**

ಅದನ್ನು ಮೊಕಾಶಿನೂ ಹೇಳ್ತಾ ಇದ್ರು. ಅವರು ಹೇಳೋರು, ತರಾಸುಗೆ ಒಂದು ಓದುಗ ವರ್ಗ ಇತ್ತು. ನೀವೂ ಅಂತದನ್ನ ಕಳಕೊಂಡ್ರಿ ಅಂತ. ನಾವು ಕೆಲವು ಸಲ ಉದ್ದೇಶಪೂರ್ವಕವಾಗಿಯೇ ಕಳಕೊಂಡ್ವಿ. ನಂಗೆ ಬಹಳ ಜನ ಓದಬೇಕು ಅಂತಾನೇ ಇರಲಿಲ್ಲ. ಒಂದು ಎಂಟು ಹತ್ತು ಜನ ಒಬ್ರಿಗೊಬ್ಬರು ನಮ್ಮೊಳಗೇ ಓದಿಕೊಂಡ್ರೆ ಸಾಕು. ನನಗೆ ನಾನೇ ಹೇಳಿಕೊಂಡ್ರೆ ಸಾಕು. ಅಷ್ಟರಮಟ್ಟಿಗೆ ಹೋಗಿದ್ರಿಂದಲೋ ಏನೋ ಒಂದು ಹೊಸತನ್ನ ಹುಟ್ಟಿಸೋಕೆ ನಮ್ಮ ಮೂರೂ ಜನಕ್ಕೆ-ನಾನು, ಲಂಕೇಶ್, ತೇಜಸ್ವಿಗೆ- ಸಾಧ್ಯ ಆಯಿತು.

**ಆದರೆ ಸಾಹಿತ್ಯ ಕೆಲವರಿಗೆ ಮಾತ್ರ ಅಂತಾಗಿ ಅದು ಒಂದು ದೊಡ್ಡ ಓದುಗ ವರ್ಗವನ್ನು ಕಳಕೊಂಡಿದ್ದಂತೂ ನಿಜವಲ್ಲವಾ ಸರ್?**


ಈಗ ಪಡೆದಿದೆ. ಕ್ರಮೇಣ ಪಡೀತಾ ಇದೆ.

**ಹೀಗೆ ಕಳಕೊಂಡಿದ್ದರ ಹಿಂದೆ ನವೋದಯದ ಲೇಖಕರು ಪಶ್ಚಿಮದ ವಿಚಾರಗಳನ್ನ, ಪ್ರಭಾವಗಳನ್ನ ಅರಗಿಸಿಕೊಂಡು internalise ಮಾಡಿಕೊಂಡಂತೆ-ರಕ್ತಗತ ಮಾಡಿಕೊಂಡಂತೆ ನೀವು ನವ್ಯರು ಮಾಡಿಕೊಳ್ಳಕ್ಕಾಗದ ಕೊರತೆನೂ ಇದೆ ಅಂತ ಅನ್ನಿಸುತ್ತೆ.**

ಇಲ್ಲ. ಇಲ್ಲ ನಾವು ಸಿಕ್ಕಾಪಟ್ಟೆ ಮಾಡಿಕೊಂಡ್ವಿ. ನಾನು ಇಡೀ ಬ್ರಾಹ್ಮಣ ವರ್ಗವನ್ನ ಟೀಕಿಸಿದ ಕ್ರಮ ಇದೆಯಲ್ಲ ಅದರಲ್ಲಿ ಪಶ್ಚಿಮದ ಪ್ರಭಾವ ಒಂತರದಲ್ಲಿ ಇದೆ. ಹೇಗೆ ಕುವೆಂಪು ಆಗಿನ ಕಾಲದ ಸಾಹಿತ್ಯದ ಐರೋಪ್ಯೀಕರಣದ ಮುಖ್ಯ ಲೇಖಕರೋ He got more from Europe than any other writer. We are a continuation of Kuvempu and not Gokak. ಕುವೆಂಪೂನ ಪ್ರಶ್ನಿಸ್ತಾನೇ ನಾವು ಕುವೆಂಪೂನ continue ಮಾಡಿದಿವಿ.

**ಹಾಗಿದ್ದರೆ 'ಗತಿಸ್ಥಿತಿ' ಅಂತಹ ಕಾದಂಬರಿ ಬಂದಾಗ ಅದನ್ನ ಸಿಕ್ಕಾಪಟ್ಟೆ ಹೊಗಳಿ ಅಟ್ಟಕ್ಕೇರಿಸಿದ ನೀವು 'ಮಲೆಗಳಲ್ಲಿ ಮದುಮಗಳು'ನಂತಹ ಕಾದಂಬರಿ ಬಂದಾಗ ಅದೊಂದು ಮಹತ್ವದ ಕಾದಂಬರಿ ಅಂತ ಗುರುತಿಸೋದಕ್ಕೆ ಏಕೆ ಸಾಧ್ಯವಾಗಲಿಲ್ಲ ಸರ್?**

ಆಗ ನಾವು ತುಂಬ ತಪ್ಪು ಮಾಡಿದಿವಿ. ನಂಗೆ ಅದು ಗ್ರೇಟ್ ನಾವೆಲ್ ಅಂತ ಅನ್ನಿಸಿದ್ದು ಆಮೇಲೆ. ಆಗ ನಾನು ಏನಂದೆ, ಅದು ವಿವರಗಳಲ್ಲಿ ಸೊಕ್ಕಿದೆ, ಜಾಸ್ತಿ ಇದೇಂತ ಹೇಳಿದೆ. ಅದಕ್ಕೆ ಒಂದು ಕಾರಣ ಇತ್ತು. ನನಗೊಂದು ಸಿದ್ಧಾಂತ ಇತ್ತು. ಈಗ ನೋಡಿ, ಮೇಜನ್ನ ವರ್ಣಿಸುವಾಗ ಅದರಲ್ಲಿರುವ ಎಲ್ಲ ವಿವರಗಳನ್ನೂ ಹೇಳ್ತಾ ಹೋದ್ರೆ ಮೇಜೇ ಕಣ್ಮರೆಯಾಗುತ್ತೆ. ಮುಖ್ಯವಾದ ವಿವರಗಳನ್ನ ಒಟ್ಟಿಗೇ ಹೇಳಿದಾಗ ಮೇಜು ಕಾಣುತ್ತದೆ. ಅದನ್ನು ನಾವು significant details ಅಂತೀವಿ. ನಾನು ಏನು ತಿಳಕೊಂಡಿದ್ದೆ ಅಂದ್ರೆ 'ಮಲೆಗಳಲ್ಲಿ ಮದುಮಗಳು'ನಲ್ಲಿ ಅವರು significant details ಹುಡುಕ್ತಾ ಇಲ್ಲ, ಎಲ್ಲವನ್ನೂ ಒಟ್ಟಿಗೇ ಹೇಳ್ತಾರೆ. ಅದಕ್ಕೆ ತೇಜಸ್ವಿ ಹೇಳಿದ್ದ, ನೀನು ಒಂದು ಅಪಾರವಾದ ಬಯಲನ್ನು ಕಂಡ್ರೆ ಹೇಗೆ ಸುಖಿಸ್ತೀಯೋ ಹಾಗೆ ಅಂತಹ ಅಪಾರವಾದ ಬಯಲನ್ನು ಕುವೆಂಪು ತೆರೀತಾ ಇದಾರೇಂತ.



ಆದ್ರೆ ಅವನ ಜೊತೆಗೂ ನಾನು ಜಗಳ ಆಡ್ತಾ ಇದ್ದೆ.

**ಅಂದರೆ ಸಾಹಿತ್ಯ ಅಂದರೇನು ಅನ್ನುವ ನಿಮ್ಮ ಗ್ರಹಿಕೆಯ ದೋಷ ಇದು...**

ಇರಬಹುದೇನೋ. ಆದರೆ ನನಗೆ ಅಚ್ಚುಕಟ್ಟಾದ, ಬಿಗಿಯಾದ ಬಂಧದ ಪದ್ಯ ರೂಪದಲ್ಲಿ ಸಾಹಿತ್ಯ ಇರಬೇಕು ಅನ್ನುವ ನಂಬಿಕೆ ಇತ್ತು.

**ಸಾಹಿತ್ಯದ ಈ ಡೆಫಿನೆಷನ್ ಅಥವಾ ನಿಮ್ಮ ಈ ನಂಬಿಕೆ ಸರಿ ಅನಿಸುತ್ತಾ ಸರ್ ಈಗ?**

ಈಗ ಕೆಲವರಿಗೆ ಸರಿ ಅನ್ನಿಸದೇ ಇರಬಹುದು. ಆದರೆ ಆಗ ನಮಗೆ ಆ ರೀತಿಯ ಬರವಣಿಗೆ ಅಗತ್ಯ ಅನಿಸಿತ್ತು. I won't regret it. ಆಗ ನಾನು 'ಘಟಶ್ರಾದ್ಧ' ಬರೆದೆನಲ್ಲ... ಒಂದು ಮಗುವನ್ನು ಹಿಡಿದು ಆ ಮಗುವಿನ ಕಣ್ಣಿನ ಮೂಲಕವೇ ನೋಡ್ತಾ–ಅದರಲ್ಲಿ ಯಾವ ಬೇರೆ ವಿಷಯವನ್ನೂ ತರದೆ–ಒಂದು ಹೆಣ್ಣು ಮತ್ತು ಒಂದು ಮಗು ಒಬ್ಬರಿಗೊಬ್ಬರು ಹತ್ತಿರ ಆಗೋದು, ಅವಳ ಗರ್ಭದಲ್ಲಿ ಇರುವ ಮಗುವೇ ಇವನಾಗೋದು... ಇವನು ಗರ್ಭದಲ್ಲಿ ಇರೋ ಮಗುವಾಗೋದು ಬರೆದೆ. ನೋಡಿ ಎಷ್ಟು tight ಟೈಟ್ ಆದ construction. ಕನ್ನಡಕ್ಕೆ ಅದು ಬೇಕಿತ್ತು. (ಅಡಿಗರ) 'ಭೂತ'ದಂತಹ construction. ಬೇಕಿತ್ತು. ಇಡೀ ಕನ್ನಡದಲ್ಲಿ ಬೇಂದ್ರೆ ಅವರ ಕೆಲವು ಪದ್ಯಗಳಲ್ಲಿ ಆ ತರದ ರಚನೆ ಇದೆ. ಕುವೆಂಪು ಕಾದಂಬರಿಗಳಲ್ಲಿ ಆ ತರದ ರಚನೆಗೆ ವಿರೋಧವಾದ ಒಂದು ಬಾಹುಳ್ಯ ಇದೆ. ಆದರೆ ಈ ಬಿಗಿಯಾದ ರಚನೆಗೆ ಜಾಗ ಇದೆ. ಅದು ಏನಪ್ಪಾ ಅಂದ್ರೆ ಅದು ಮೂರ್ತ ರೂಪ ಪಡೆದು ಅತ್ತಿತ್ತ ಹರಿಯಲ್ಲ.

**ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾದಂತಹ ಒಂದು ಚಾರಿತ್ರಿಕ ಸಂಗತಿ ಅಂದರೆ, ಇಂತಹ ಸಾಹಿತ್ಯ ಮೀಮಾಂಸೆಯನ್ನು ನಮ್ಮ ಜಾತಿ ಪದ್ಧತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸ್ತಾ, ವಿರೋಧಿಸ್ತಾ ಅಖಿಲ ಕರ್ನಾಟಕ ಬರಹಗಾರರ ಒಕ್ಕೂಟ ಹುಟ್ಟಿಕೊಳ್ತು. ನಿಮ್ಮ 'ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಲೇಖಕ' ಅನ್ನೋ ನಿಮ್ಮ ಲೇಖನವನ್ನೇ ಪ್ರಧಾನವಾಗಿ ಇಟ್ಟುಕೊಂಡು ಅದನ್ನು ಕಟುವಾಗಿ ಟೀಕಿಸ್ತಾ ತೇಜಸ್ವಿ ಹೊಸ ಸಾಹಿತ್ಯ ಮೀಮಾಂಸೆಯನ್ನ ಮಂಡಿಸಿದರು. ಈ ಒಕ್ಕೂಟಕ್ಕೆ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವದ ಸ್ಥಾನ ಇದೇಂತ ಅನ್ನಿಸುತ್ತಾ ನಿಮಗೆ?**

ಖಂಡಿತ ಇದೆ. ಇನ್ನೊಂದು ಹೇಳ್ತೀನಿ. ಆ ಒಕ್ಕೂಟ ನನ್ನನ್ನ ಒಳಗೆ ಬಿಟ್ಕೊಳ್ಳಲಿಲ್ಲ. ಅದರಿಂದ ಆಲನಹಳ್ಳಿ ಕೃಷ್ಣ ಸಿಟ್ಟಿಗೆದ್ದ. ತೇಜಸ್ವಿ ಮಧ್ಯರಾತ್ರೀಲಿ ನನ್ನ ಮನೆಗೆ ಬಂದು ನನ್ನನ್ನ ಎಬ್ಬಿಸಿ, 'ನಿಮ್ಮನ್ನ ಬಹಳ ಕೆಟ್ಟದಾಗಿ ಬೈಯ್ತಾ ಇದ್ದೀವಿ... ಆದ್ರೆ ಇದರಿಂದ ನೀವು ಜಾತಿವಾದಿ ಆಗ್ಬಾರ್ದು ಅಂತ ಹೇಳ್ದ. It was a very affectionate Statement. ನಾವು ಹೀಗೇ ಹೇಳ್ತೀವೀಂತ ನೀವು ತಿರುಗೇಟು ನೀಡಬಾರ್ದು ಅಂತ.

**ಆಗ ಲಂಕೇಶ್ ಕೂಡ ಅಸಮಧಾನಗೊಂಡಿದ್ರೂಂತ ಕೇಳಿದ್ದೀನಿ.**

ಆಗ ನಾನು ಲಂಕೇಶನಿಗೆ ಹೇಳ್ದೆ. ನೀನು ಲಿಂಗಾಯತ, ನಿನಗೆ ಬ್ರಾಹ್ಮಣರನ್ನು ಬೈಯೋದಕ್ಕೆ, ಜಾತಿ ಮೇಲೆ ಒಗ್ಗಟ್ಟಾಗೋದಕ್ಕೆ ಹತ್ತು ಪರ್ಸೆಂಟ್ ಅಧಿಕಾರ ಇದೆ. ಹೊಲೇರವನಿಗೆ ಅಂಥ ನೂರು ಪರ್ಸೆಂಟ್ ಅಧಿಕಾರ ಇದೆ.. ಗೌಡ್ರಿಗೊಂದು ೫೦ ಪರ್ಸೆಂಟ್ ಅಧಿಕಾರ ಇದೆ ನನಗೆ ಯಾವ ಪರ್ಸೆಂಟೂ ಅಂಥ ಅಧಿಕಾರ ಇಲ್ಲಾಂತ ತಿಳಕೊಂಡೋನು ನಾನು. ಆಗ ಕೆಲವು ಬ್ರಾಹ್ಮಣ ಲೇಖಕರು ಬಂದು ನಾವೂ ಒಂದು ಒಕ್ಕೂಟ ಮಾಡ್ಕೊಂಡು ಒಗ್ಗಟ್ಟಾಗಬೇಕು ಅಂತ ಅಂದ್ರು. ನಾನು ಹೇಳ್ದೆ, ನಾವು ಆಗಬಾರ್ದು. ಯಾಕೆ ಆಗ್ಬಾರ್ದು ಅಂದ್ರೆ, ಶೂದ್ರರಲ್ಲಿ ಪಬ್ಲಿಷರ್ಸ್ ಇರಲಿಲ್ಲ, ಪತ್ರಿಕೆಗಳಲ್ಲಿ ಅವರು ಇರಲಿಲ್ಲ. ಎಲ್ಲ ಬ್ರಾಹ್ಮಣಮಯ ಆಗಿತ್ತು. ಆಗ ಇಂತಹ ಒಂದು ಚಳುವಳಿ ಬಂದ ನಂತರ ಹೊಸ ಪ್ರಕಾಶಕರು ಹುಟ್ಟಿಕೊಂಡ್ರು, ಹೊಸ ಲೇಖಕರು ಬಂದ್ರು. ಅದಕ್ಕೇ ನಾನು ಅದನ್ನು ವಿರೋಧ ಮಾಡ್ಲಿಲ್ಲ. ಆದರೆ ಅವರ ಪರವಾಗಿ ನಿಂತು ಸಿಕ್ಕಾಪಟ್ಟೆ ಮಾತಾಡೋದು ಕೂಡ ಅವರನ್ನು ಓಲೈಸುವ ಗುಣ ಅಂತ ಕಾಣುವ ಸಾಧ್ಯತೆ ಇತ್ತು. ಚೆನ್ನಾಗಿದ್ರೆ ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಅನ್ನಿಸಿದ್ರೆ ಚೆನ್ನಾಗಿಲ್ಲ ಅಂತ ಹೇಳೋ ನಿಲುವಿಗೆ ಬಂದೆ ನಾನು.

**ಆ ಒಕ್ಕೂಟದ ಭಾಷಣದಲ್ಲಿ ತೇಜಸ್ವಿ ನವ್ಯ ಸಾಹಿತ್ಯ ಅನ್ನೋದು ವೈದಿಕ ರಾಜಕಾರಣದ ವಿಸ್ತರಣೆ ಅನ್ನೋ ರೀತಿ ವಿಶ್ಲೇಷಣೆ ಮಾಡ್ತಾರೆ. ಅದನ್ನು ನೀವು ಒಪ್ತೀರಾ ಸರ್?**

ಅದು ತಪ್ಪು ಅಂತ ಹೇಳ್ತೀನಿ. ವೈದಿಕ ಅನ್ನೋ ಶಬ್ದಾನ ಧಾರಾಳವಾಗಿ, ಬಹು ಸುಲಭವಾಗಿ ಬಳಸ್ತಾ ಇದೀವಿ. ಒಂದು ನೋಡ್ರಿ. Kuvempu attacked ವೈದಿಕ ಸಂಸ್ಕೃತಿ. ಅದ್ರಿಂದ ವೈದಿಕ ಸಂಸ್ಕೃತಿ ಬೆಳಗೋ ಹಂಗೆ ಮಾಡಿದ್ರು. ಉಪನಿಷತ್ತು ಬೆಳಗೋ ಹಂಗೆ ಮಾಡಿದ್ರು. ಪರಮಹಂಸರು ಬೆಳಗೋ ಹಂಗೆ ಮಾಡಿದ್ರು. ನಾರಾಯಣ ಗುರು attacked ವೈದಿಕ ಸಂಸ್ಕೃತಿ. But he saved ವೈದಿಕ ಸಂಸ್ಕೃತಿ. ಯಾಕೆ ವೈದಿಕ ಸಂಸ್ಕೃತಿಯನ್ನ attack ಮಾಡಿದವರೆಲ್ಲರೂ ವೈದಿಕ ಸಂಸ್ಕೃತಿಯನ್ನೇ ಉಳಿಸಿ ಬೆಳೆಸಿದರು? ಮತ್ತಷ್ಟು ತಿದ್ದಿ ಅದನ್ನು ಸರಿ ಮಾಡಿದ್ರು? ಅನ್ನೋದನ್ನ historical ಪ್ರಶ್ನೆಯಾಗಿ ನಾವು ತಗೊಳ್ಳಬೇಕು. ಅದನ್ನ ಟ್ಯಾಗೋರ್ ತಗೊಂಡಿದಾರೆ. ಬೌದ್ಧರು ಇಡೀ ಭಾರತದ ಇದನ್ನೇ change ಮಾಡೋಕೆ ಶುರು ಮಾಡಿದಾಗ ಒಂದು ರೀತಿಯ ಅರಾಜಕತೆ ಉಂಟಾಯಿತು. ಬ್ರಾಹ್ಮಣರು ಬಂದು ಅದನ್ನು save ಮಾಡಿದರು. ಎಲ್ಲೋ ಒಂದು ಕಡೆ ವೈದಿಕ ಸಂಸ್ಕೃತಿಯ ಅತಿಗೆ ಹೋಗದೇ ಇರುವ ಒಂದಿದೆ. ಅದು intensityಗೆ ಅವಕಾಶ ಮಾಡಿಕೊಡ್ತು. ಈ intensityಗೆ ಅವಕಾಶ ಮಾಡಿಕೊಡಬೇಕಾದ್ರೆ ನೀನು ಬಸವಣ್ಣನ ಹಾಗೆ ಆಗಬೇಕು. ಜನಿವಾರ ಕಿತ್ತು ಒಗೀಬೇಕು. Intensity ಇಲ್ದೆ ಎಲ್ಲರ ಜೊತೆ ಒಪ್ಪಂದ ಮಾಡಿಕೊಂಡ್ರೆ, ಸರಿ ಮಾಡಿಕೊಳ್ಳಬೇಕಾದ್ರೆ ಅದನ್ನ ಹಾಕ್ಕೋಬೇಕು. ಹಾಕ್ಕೋಬೇಕು ಅಂತ ಅಲ್ಲ. ನಾನು ತಾತ್ವಿಕವಾಗಿ ಹೇಳ್ತಾ ಇರೋದು. ಅರ್ಥ ಆಯ್ತಲ್ಲಾ? ಆವಾಗ ಏನಾಯ್ತು? ನಾರಾಯಣ ಗುರು ಮತ್ತೆ ಇದಕ್ಕೇ ಬಂದ್ರು. ಎಲ್ಲರೂ ವೈದಿಕ ಸಂಸ್ಕೃತಿಯನ್ನ attack ಮಾಡಿದವರು critical insiders. ಪುಟ್ಟಪ್ಪ was a critical insider of whole ವೈದಿಕ ಸಂಸ್ಕೃತಿ. ಅದರಲ್ಲಿ ತಗೋಬೇಕಾದ್ದೂ ಇದೆ, ಬಿಡಬೇಕಾದ್ದೂ ಇದೆ. ಅದರಲ್ಲಿ ಅತ್ಯಂತ ಹೀನವಾದದ್ದು ಏನೂಂದ್ರೆ ಅದು ಸೃಷ್ಟಿಸುವ ವರ್ಣ ವ್ಯವಸ್ಥೆ. ಮೇಲು–ಕೀಳು ಅನ್ನೋ ವ್ಯವಸ್ಥೆ. ಅದು ಎಷ್ಟು ಜಾಣ ವ್ಯವಸ್ಥೆ ಅಂದ್ರೆ ಇದರಲ್ಲಿ ಕೆಳಗಿನವರು ಮೇಲೆ ಬರೋದಕ್ಕೆ ಯಾವತ್ತೂ ಅವಕಾಶವನ್ನು ಅದು ಹೊರಗಿಟ್ಟಿತ್ತು. ನಮ್ಮ ರಾಜರೆಲ್ಲ ಶೂದ್ರರೇ. ಬ್ರಾಹ್ಮಣರೆಲ್ಲ ಹೊಗಳ್ತಾ ಇದ್ದದ್ದು ಇಂತಹ ರಾಜರನ್ನೇ. India went on being what it is. ಅದಕ್ಕೇನೇ ಅಡಿಗರ 'ಬತ್ತಲಾರದ ಗಂಗೆ' a great poem. ಈ ಗಂಗೆ ಬತ್ತೋಕ್ಕೆ ಸಾಧ್ಯವೇ ಇಲ್ಲ. ಇಲ್ದೇ ಹೋಗಿದ್ರೆ ಒಂದು ಹೊಸ ಸಂಸ್ಕೃತಿ ಹುಟ್ತಾ ಇತ್ತು.

**ಆದ್ರೆ ಅಡಿಗರು 'ಮತ್ತೆ ಮೊಳಗಲಿ ಪಾಂಚಜನ್ಯ' ಮತ್ತು 'ನಾನು ಹಿಂದೂ ನಾನು ಬ್ರಾಹ್ಮಣ' ಅನ್ನೋ ಪದ್ಯಗಳನ್ನೂ ಬರೆದಿದ್ದಾರೆ!**

ಕೆಟ್ಟ ಪದ್ಯಗಳು ಅವು.

**ಅವು ಬರೀ ಕೆಟ್ಟ ಪದ್ಯಗಳಲ್ಲ ಅಂತ ಅನ್ಕೊಂಡಿದ್ದೀನಿ...**


ಯಾಕೇಂದ್ರೆ ಬ್ರಾಹ್ಮಣರ ಮೇಲಿನ attack ಇದೆಯಲ್ಲ, ಅದ್ರಿಂದ ಬರೆದ ಪದ್ಯಗಳು. ಅದರಿಂದ ನೊಂದು ಬಿಟ್ಟಿದ್ರೆ ನಾನೂ ಆ ತರಹ ಬರೆದುಬಿಡ್ತಿದ್ದೇನೋ.

**ಎಷ್ಟು ಸುಲಭವಾಗಿ ಈ ಮಾತುಗಳನ್ನ ಹೇಳ್ತೀರಿ ಸರ್ ನೀವು! ಪ್ರಜ್ಞಾಸ್ತರದಲ್ಲಿ ಆ heightನಲ್ಲಿದ್ದ ಒಬ್ಬ ಕವಿ ಈ ಪಾತಾಳಕ್ಕೆ ಇಳಿಯೋದು ಅಂದ್ರೆ?**

Attack was strong and he was a Brahmin. ನಾನಲ್ಲ.

**In a sense, ಇದು ನೀವು ಹೇಳ್ತಿರೋ ಹೊಸ 'ಸತ್ಯ' ಸರ್! ಅದನ್ನೇ ತೇಜಸ್ವಿ ಆಗ ಹೇಳಿದ್ದು ಅಂತ ಕಾಣುತ್ತೆ!**

ಹೌದಯ್ಯ. He was a great poet and he could over come all these... ಹೆಂಗೆ ಲಂಕೇಶ್ ಅನೇಕ ಸಾರಿ ಮೀರುತ್ತಿದ್ದನೋ ಈ ಮೀರೋ ಗುಣಗಳು ಯಾರ್‍ಯಾರ ಹತ್ರ ಇತ್ತೋ ಆ ಮೀರುವಿಕೆಯ ಗುಣ ಅಡಿಗರಲ್ಲೂ ಇದೆ. ಕುವೆಂಪುನಲ್ಲಿ ಇದೆ. ಕುವೆಂಪು ಶೂದ್ರ ಸಮಾವೇಶಕ್ಕೆ ಹೋಗಿ– ನೀವೆಲ್ಲ ಅವರನ್ನ ಬೈತೀರಾ ಈಗ, ಆದರೆ





ನೀವೆಲ್ಲ ದಡ್ಡಬಡ್ಡರಾಗಿದ್ದಾಗ ನಿಮಗೊಂದು ಸಂಸ್ಕೃತಿ ಮಾಡಿಕೊಟ್ಟವರು ಅವರು ಅಂತ ಏನು ಹೇಳ್ತಾರೆ, ಅದನ್ನ ಶೂದ್ರ ಸಮ್ಮೇಳನದಲ್ಲಿ ಯಾರೂ ಹೇಳೋಕೆ ತಯಾರಿರಲಿಲ್ಲ. ಆದ್ರೆ ಕುವೆಂಪು ಹೇಳಿದ್ರು. ಯಾಕೇಂದ್ರೆ ಅವರಿಗೆ awareness ಇತ್ತು.

**ಇರಲಿ ಸರ್, ಈಗ ಒಕ್ಕೂಟದಲ್ಲಿ ತೇಜಸ್ವಿ ಏನು ಮಾತಾಡಿದ್ರು, ಅದನ್ನ, ಆ ವಾದದ ತರ್ಕವನ್ನು ನೀವು ಒಪ್ತೀರಾ?**

ನೋಡಿ, ಸಾಹಿತ್ಯದಲ್ಲಿ ಇದೆಲ್ಲ ಇರುತ್ತೆ. ಲಂಕೇಶ್ ತೇಜಸ್ವಿ ಮೇಲೆ ಬಿದ್ದ ಆಗ ಅವನು ಕೆ.ವಿ. ಸುಬ್ಬಣ್ಣನನ್ನೂ attack ಮಾಡಿದ. ನೀವು hypocritical ಆಗಿ ನಿಮ್ಮ ರಂಗಮಂದಿರಕ್ಕೆ ಕಾರಂತರ ಹೆಸರನ್ನ ಇಟ್ಟಿದೀರಾ ಅಂತ. ಇದೆಲ್ಲ ಯಾಕೆ ಹೇಳ್ತೀನಿ ಅಂದ್ರೆ ತೇಜಸ್ವಿ, ಲಂಕೇಶ್ ಇಬ್ರಿಗೂ ನನಗೆ ಇರೋ ಹಾಗೆ ಪುಟ್ಟಪ್ಪನವರ ಬಗ್ಗೆ ಅನುಮಾನಗಳಿದ್ದವು. ಯಾವುದು? ಅತಿ ವಿಸ್ತಾರದ ಬರವಣಿಗೆ ಬಗ್ಗೆ. ನಾವೆಲ್ಲ ಯೂರೋಪಿನ ನವ್ಯ ಸಾಹಿತ್ಯದ ಪ್ರೇರಣೆಗೆ ಒಳಪಟ್ಟವ್ರು. ಅದರಿಂದ ಕನ್ನಡಕ್ಕೆ ಒಂದು ಓಘ, ಹೊಳಪು ಬಂತು. ಆಗ ಮರಾಠಿಯಲ್ಲಿ ಹೀಗಾದವ್ರು ಮಹಾರಾಷ್ಟ್ರದ ಉಳಿದ ಸಾಹಿತ್ಯದ ಜೊತೆಗೆ ಮುಖಾಮುಖಿಯಾಗಲೇ ಇಲ್ಲ. ಕನ್ನಡದ ಮಟ್ಟಿಗೆ ನಾವೆಲ್ಲ ಕನ್ನಡದ ನವೋದಯದ ಜೊತೆ ಮುಖಾಮುಖಿ ಆದೆವು.

**ಒಂದು ಮಾತು. ನಾನು ಆಗ ಒಬ್ಬ ಕಿರಿಯ ಸಾಹಿತ್ಯದ ಅಭ್ಯಾಸಿಯಾಗಿ ಗಮನಿಸಿದ ಹಾಗೆ, ಒಕ್ಕೂಟದ ನಂತರ ಇಡೀ ಕನ್ನಡ ಸಾಹಿತ್ಯದಲ್ಲಿನ ಗಂಭೀರ ಬರವಣಿಗೆಗೇಂತ ನಾವು ಏನು ಕರೀಬಹುದು, ಅದು ಒಂದೆರಡು ವರ್ಷ ಸ್ತಬ್ಧವಾಗಿ ಹೋಯಿತು. ಆನಂತರ ಕನ್ನಡದಲ್ಲಿ ಹೊಸ ರೀತಿಯ ಬರವಣಿಗೇನೇ ಶುರುವಾಯ್ತು. ನೀವು 'ನವಿಲುಗಳು' ಬರೆದ್ರಿ, ಚಿತ್ತಾಲರು 'ಕತೆಯಾದಳು ಹುಡುಗಿ' ಬರೆದ್ರು, ಲಂಕೇಶ್ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ', 'ಮುಸ್ಸಂಜೆ ಕಥಾ ಪ್ರಸಂಗ' ಬರೆದ್ರು. ಎಲ್ಲ ಸಂಪೂರ್ಣ ಬೇರೆ ತರದ ಬರವಣಿಗೆ. ಅಂದ್ರೆ ಒಕ್ಕೂಟ ಕನ್ನಡ ಸಾಹಿತ್ಯದ ದಿಕ್ಕು ದೆಸೆಗಳ ಸ್ವರೂಪದ ಮೇಲೆ ಒಂದು ದೊಡ್ಡ ರೀತಿಯ ಪ್ರಭಾವ ಬೀರಿತು ಅಂತ ಅನ್ನಿಸೋಲ್ವ ಸರ್ ನಿಮಗೆ?**

ಬೀರಿದೆ. ಉದಾಹರಣೆಗೆ ಹೇಳ್ತೀನಿ. ಅದು ಎಲ್ಲೂ ಲಿಖಿತವಾಗಿಲ್ಲ. ಯಶವಂತ ತಬ್ಬಿಬ್ಬಾಗಿ ಬಿಟ್ಟಿದ್ದ. ಯಾಕೇಂದ್ರೆ ಒಂದು ಮುಗ್ಧ, ಬರೀ ಸಾಹಿತ್ಯ ಮುಖವಾಗಿ ಬರೆದದ್ದು, ನನ್ ಜಾತಿ ಏನು, ಅದು ಇದು ಎಲ್ಲ ಇದೆ, ಆದ್ರೆ ಇದೆಲ್ಲ ಮುಖ್ಯವಾದದ್ದಲ್ಲ ಅಂತ ತಿಳಿದವನು ಅವ್ನು. He was a great writer in his own way. We cannot deny it. ಅವ್ನು ಒಂದು ಕಥೆ ಬರ್ದ. ಅದು ಏನೂಂದ್ರೆ, ಮಹಾದೇವನಿಗೆ ಒಂದು ರೀತಿಯಲ್ಲಿ ಮುಖಾಮುಖಿಯಾಗಿ ಬರೆದದ್ದು. ಒಬ್ಬ ಬಡ ಬ್ರಾಹ್ಮಣ ಹುಡುಗ ಎಷ್ಟು ಪೇಚಿಗೆ ಸಿಕ್ತಾನೆ, ದುಃಖ ಪಡ್ತಾನೆ ಅಂತ. ಅದೆಲ್ಲ ಹೆಂಗೆ ಬರೆದಿದ್ದ ಅಂದ್ರೆ ಇವೊತ್ತು ಬರೀ ದಲಿತರಷ್ಟೇ ಅಲ್ಲ ದುಃಖದಲ್ಲಿರೋದು, ಬ್ರಾಹ್ಮಣರೂ ದುಃಖದಲ್ಲಿದಾರೇಂತ. ಅದು ನಿಜ ಕೂಡ. ಆದ್ರೆ ಅವನು ಬರೆಯೋ ಕ್ರಮದಲ್ಲಿ ಹೆಂಗೆ ಬರೆದ ಅಂದ್ರೆ ಅವರೂ ದುಃಖದಲ್ಲಿದಾರೆ ಇವ್ರೂ ದುಃಖದಲ್ಲಿದಾರೇಂತ ಅಲ್ಲ. ಅವರು ಮಾತ್ರ ದುಃಖದಲ್ಲಿರೋದಲ್ಲ, ನಮ್ಮ ಮಟ್ಟಿಗೆ ನಾವೂ ದುಃಖದಲ್ಲಿದ್ದೇವಂತ. ಇದೇ ವ್ಯತ್ಯಾಸ ಆಯ್ತು ನೋಡು. ಅದಕ್ಕೇ ಮಹಾದೇವ ಹೇಳ್ದ, ಅದ್ಯಾಕೆ ಹಂಗೆ ಹೇಳಬೇಕು ಸರ್? ನಮ್ಮಲ್ಲೂ ದುಃಖಿಗಳಿದಾರೆ ಅವರಲ್ಲೂ ದುಃಖಿಗಳಿದಾರೇಂತ ಯಾಕೆ ಹೇಳಬಾರ್ದೂಂತ. ಅಂದ್ರೆ ಆಗಿದ್ದು ಮುಖ್ಯವಾಗಿ ನೋಡೋ ಕ್ರಮದಲ್ಲಿ.

**ಒಕ್ಕೂಟ ಆದ ಮೇಲೆ ಅದರಿಂದ ಸಾವಯವವಾಗಿ ಪ್ರತ್ಯೇಕವಾದಂತೆ ಎರಡು ಮೂರು ವರ್ಷಗಳಲ್ಲೇ ಬಂಡಾಯ ಸಾಹಿತ್ಯಾಂತ ಬಂತು. ಸಮ್ಮೇಳನ ನಡೀತು. ಆದ್ರೆ ಇವೊತ್ತು ನಿಂತುಕೊಂಡು ನೋಡಿದ್ರೆ ಅದರ ಬಗ್ಗೆ ನಿರಾಶೆ ಆಗತ್ತೆ. ಇದನ್ನು ಹೇಳಿ ನಾನು ಬಹಳ ಜನ ಶತ್ರುಗಳನ್ನು ಕಟ್ಟಿಕೊಂಡಿದ್ದೀನಿ. ಪರವಾಗಿಲ್ಲ. ಆ ಸಾಹಿತ್ಯದಿಂದ ಸೃಜನಾತ್ಮಕವಾಗಿಯಾಗಲಿ ಸೃಜನೇತರವಾಗಿಯಾಗ್ಲಿ, ಅಂದರೆ ಸಾಹಿತ್ಯ ವಿಮರ್ಶೆ, ಚಿಂತನೆಯಲ್ಲಾಗ್ಲೀ ಗಮನಾರ್ಹವಾದದ್ದೂಂತ ಏನೂ ಬರಲೇ ಇಲ್ಲ. ಬದಲಿಗೆ ಸಾಹಿತ್ಯದ ಕಲ್ಪನೆಯನ್ನೇ ಅದು ಒಂದು ರೀತಿಯಲ್ಲಿ ರೂಕ್ಷ ಮಾಡಿಬಿಡ್ತು ಅನ್ನಿಸುತ್ತೆ. ನಿಮಗೇನನ್ನಿಸುತ್ತೆ ಸರ್? ಯಾಕೆ ಹೀಗಾಯ್ತು?**

ನಿಮ್ಮ ಅಭಿಪ್ರಾಯವೇ ನನ್ನದು. ಯಾಕೆ ಹೀಗಾಯ್ತು ಅಂದ್ರೆ, ಅವರು ಕೋಗಿಲೆ ಮತ್ತು ಸೋವಿಯತ್ ರಷ್ಯಾ ಪದ್ಯ ಓದಿರಲಿಲ್ಲ. ಓದಿದ್ದರೆ ಅವರು ಆಡುತ್ತಿದ್ದ ಬಂಡಾಯದ ಮಾತುಗಳನ್ನ ಆಡ್ತಿರಲಿಲ್ಲ. ಅವರು ವರ್ಗ ವಿಶ್ಲೇಷಣೆಯ ರೀತಿಯ ಸಮಾಜವಾದಿ ನುಡಿಗಟ್ಟನ್ನ ಹುಡುಕ್ತಾ ಹೋದ್ರು. ಇಂತಹ ನುಡಿಗಟ್ಟು ನಮ್ಮಲ್ಲಿ ನಡೆಯೋದಿಲ್ಲ. ನಡೆಯೋದಾಗಿದ್ದರೆ ಕಮೂನಂತಹ ಬರಹಗಾರರಾಗಬೇಕಿತ್ತು. ಆದ್ದರಿಂದ ಅವರೆಲ್ಲ ನಿಜವಾದ experienceನಿಂದ ವಂಚಿತರಾದ್ರು. ಜೊತೆಗೆ ಅವರು ಎಷ್ಟು ಬೇಗ ಸರ್ಕಾರದ ಹತ್ತಿರಕ್ಕೆ ಹೋದ್ರು ಅಂದ್ರೆ, ನೋಡಿ, ಈಗ ಹಿಂದೆ ಸರ್ಕಾರದ ನೀತಿಗಳೂ ಒಂಥರಾ ಸೋಷಲಿಸ್ಟ್ ಆಗಿದ್ದವು, ನಾವೂ ಸೋಷಲಿಸ್ಟ್ ಆಗಿದ್ದೆವು. ಆದ್ದರಿಂದ ಯಾವುದೇ ಅಪಾಯವಿಲ್ಲದೆ ಮಾತಾಡಬಹುದಿತ್ತು. ಈಗ ಏನಾಯ್ತು ಅಂದರೆ ಏಕಕಾಲಕ್ಕೆ ಸರ್ಕಾರಕ್ಕೂ ಬೇಕಾದವರೂ, ಬಂಡಾಯಗಾರರೂ ಆಗಬೇಕಾದದ್ದರಿಂದ corruptionಗೆ ಅವಕಾಶವಾಯ್ತು.

ಅವರಿಗೆ ಆಗಿದ್ದು ನಮಗೂ ಆಗಬಹುದಿತ್ತು, ಹೆಗ್ಡೆ ಕಾಲದಲ್ಲಿ, ಪಟೇಲನ ಕಾಲದಲ್ಲಿ. ಆದ್ರೆ ಹೆಚ್ಚೆಚ್ಚು ಆತ್ಮ ವಿಮರ್ಶೆ ಮಾಡಿಕೊಂಡು ಬರೆಯೋ ನನಗೆ ಹಾಗೆ ಆಗೋದು ಕಡಿಮೆ ಸಾಧ್ಯತೆ ಇತ್ತು. ಅದಲ್ಲದೆ, ನಿತ್ಯವೂ ಬರೀ ಬಹಿರಂಗದಲ್ಲೇ ಇರುವವನಿಗೆ, ಅಂತರಂಗದ ಸತ್ಯವಿಲ್ಲದೆ ಬಹಿರಂಗ ಸತ್ಯ ಹೇಳ ಹೊರಟವನಿಗೆ–ಬಸವಣ್ಣ ಹೇಳ್ತಾನಲ್ಲ ಅಂತರಂಗ ಸತ್ಯ ಮತ್ತು ಬಹಿರಂಗ ಸತ್ಯ ಒಂದೇ ಆಗಿರಬೇಕೂಂತ–ಅದು ನಿಜವಾದ ಸಾಹಿತ್ಯ. ಬಂಡಾಯ ಸಾಹಿತ್ಯ ಅದಾಗಲಿಲ್ಲ. ಸೋವಿಯತ್ ಯೂನಿಯನ್‌ನಲ್ಲೂ ಫೇಲಾಯ್ತು. ಅದನ್ನ ಇವೊತ್ತು ಯಾರೂ ಓದ್ತಿಲ್ಲ. ಅದು 'ಕೋಗಿಲೆ ಮತ್ತು ಸೋವಿಯತ್ ರಷ್ಯ' ಬರೆದ ಕುವೆಂಪುಗೂ ಗೊತ್ತಿತ್ತು. ಇವರಿಗೆ ಗೊತ್ತಾಗಲಿಲ್ಲ. ಅದು ಬಂಡಾಯದ ಸಮಸ್ಯೆ ಅನಿಸುತ್ತೆ.

**ಬಂಡಾಯದಲ್ಲಿ ಲೋಹಿಯಾ ಸೋಷಲಿಸ್ಟರೂ ಇದ್ರು ಸರ್! ದೇವನೂರ ಮಹಾದೇವ ಸಮ್ಮೇಳನವನ್ನು ಉದ್ಘಾಟನೆ ಮಾಡಿದ್ರು. ಸಿ.ಜಿ.ಕೆ., ರೆಡ್ಡಿ ಅಲ್ಲಿ ಮುಖ್ಯ ಅತಿಥಿಗಳಾಗಿದ್ರು. ಚಂಪಾ, ಕಾಳೇಗೌಡ ಇದ್ರು.**

ಇದ್ರೂಂದ್ರೆ ಏನೋ ದೊಡ್ಡದು ಆಗುತ್ತೆ ಅನ್ನೋ ನಿರೀಕ್ಷೆಯಲ್ಲಿ ಇದೆಲ್ಲ ಆಯಿತು. ಆದ್ರೆ...

**ಬಂಡಾಯದವರ ಬಗ್ಗೆ ನೀವು ಹೇಳಿದ್ದಕ್ಕೆ ಸಂಬಂಧಿಸಿದಂತೆ ನಿಮ್ಮ ಬಗ್ಗೆನೂ ಒಂದು ಟೀಕೆ ಇದೆ ಸರ್. ಅಧಿಕಾರದ ಸಮೀಪವಿದ್ದಾಗ ನೀವು ಆ ಸಾಮೀಪ್ಯವನ್ನು, ನಿಮ್ಮದೇ ಭಾಷೆಯಲ್ಲಿ ಹೇಳೋದಾದ್ರೆ, ಸುಖಿಸಿದಿರೇ ಹೊರತು ಅಧಿಕಾರದಲ್ಲಿದ್ದ ನಿಮ್ಮ ಗೆಳೆಯರು ತಪ್ಪು ಮಾಡಿದಾಗ ಅವರಿಗೆ ಬುದ್ಧಿ ಹೇಳಲಿಲ್ಲ, ಅದನ್ನ ಖಂಡಿಸಲಿಲ್ಲ ಅಂತ.**

ಹಾಗಲ್ಲ ಅದು. ಹೆಗ್ಡೆಗೆ ನಾನೇ ಹೇಳಿದ್ದೆ ನಿಮಗೆ passion ಇಲ್ಲಾಂತ. ಅಂದ್ರೆ ದೊಡ್ಡ ವಿಚಾರಗಳ passion ಇಲ್ಲ ಅಂತ. ದೇವರಾಜ ಅರಸ್‌ಗೆ ಅದಿತ್ತು. ಇಲ್ಲ, ತನಗೂ ಇದೇಂತ ಹೆಗ್ಡೆ ಹೇಳ್ತಿದ್ರು. ನೋಡಿ, ಅಧಿಕಾರದ ವಿಕೇಂದ್ರೀಕರಣದ ಕೆಲಸ ನಜೀರ್ ಸಾಬ್ ಮಾಡಿದ್ರೂ ಅದರ ಹಿಂದೆ ಇದ್ದೋರು ಹೆಗ್ಡೆ. ಬೊಮ್ಮಾಯಿ ಮತ್ತು ದೇವೇಗೌಡ were opposed to it. ನಾವು ಆಗ ಯಾವುದನ್ನು ಬೆಂಬಲಿಸ್ತಾ ಇದ್ವೋ ಅದರ ಹಿಂದೆ ಜನಹಿತಾತ್ಮಕತೆ ಇತ್ತು. ಅದೆಂತಹ ಕಾಲ! ನಜೀರ್ ಸಾಬು ಹೋಗಿ ಬಂದು, 'ಇವೊತ್ತು ನಾನು ಹೊಲೇರ ಕಾಲೋನಿಗೇ ಹೋಗಿ ಬೋರ್‌ವೆಲ್ ಹೊಡಿಸಿ ಬಂದೆ, ಅವ್ರಿಗೆ ನೀರು ಇನ್ಮೇಲೆ ಅವರಿದ್ದಲ್ಲೇ ಸಿಕ್ಕುತ್ತೆ' ಅಂತ ಹೇಳ್ತಿದ್ದ...

**ಆದ್ರೆ ನಿಮ್ಮ ಗೆಳೆಯರು ತಪ್ಪು ಮಾಡಿದಾಗ ಏನು ಮಾಡಿದ್ರಿ? ಉದಾಹರಣೆಗೆ ಪಟೇಲ್ ದಾರಿ ತಪ್ಪಿದಾಗ? ಬಹುಶಃ ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಪಟೇಲ್ ತಮ್ಮ ಬೇಜವಾಬ್ದಾರಿ ಮಾತು ಮತ್ತು ವರ್ತನೆಗಳಿಂದ ಪಡೆದಷ್ಟು ಕೆಟ್ಟ ಹೆಸರನ್ನ ಇನ್ನಾರೂ ಪಡೀಲಿಲ್ಲ ಅಂತ ಕಾಣುತ್ತೆ.**

ತಪ್ಪು. ಅವನ ಅಧಿಕಾರ ಹೋದ ನಂತರ ಎಸ್.ಎಂ. ಕೃಷ್ಣರನ್ನ ನಾನು ಟಿವಿಗಾಗಿ ಇಂಟರ್‌ವ್ಯೂ ಮಾಡ್ದೆ. ಕ್ಯಾಮೆರಾ ಆಫ್ ಆದ ಮೇಲೆ ಅವರನ್ನು ಕೇಳ್ದೆ, ಪಟೇಲರ ಆಡಳಿತ ಹೇಗಿತ್ತು ಅಂತ. ಅದಕ್ಕೆ ಅವರು, ಅವರ ಕಾಲದಲ್ಲಿ infrastructure ಕ್ಷೇತ್ರದಲ್ಲಿ ಬಹಳ ಕೆಲಸ ಆಗಿದೆ ಅಂದ್ರು. ಅಲ್ದೆ ನಾಗಭೂಷಣ, ಇನ್ನೊಂದು ಮಾತು. ಲಿಂಗಾಯ್ತರಲ್ಲಿ ಆಗ ಅವನೊಬ್ಬನೇ



ಕ್ಯಾಬಿನೆಟ್ ಸೆಕ್ರೆಟರಿ ಆಗಿದ್ದವನು. ಹೀಗೇ...

**ಆದ್ರೆ ಪಟೇಲರೇ ತಾನೆ ಬಿಜೆಪಿ ಜೊತೆಗೆ ಸಖ್ಯಕ್ಕೂ ಕಾರಣರಾದವರು?**

ಅದಕ್ಕೆ ನಿಜವಾದ ಕಾರಣ, ಜಾರ್ಜ್. ಪಟೇಲ್‌ಗೆ ಜಾರ್ಜ್ ಕಂಡ್ರೆ ತುಂಬ ಪ್ರೇಮ. ಜಾರ್ಜ್ ಪ್ರಧಾನ ಮಂತ್ರಿ ಆಗಬೇಕೂ ಅಂತ ಅವನಿಗೆ ದೊಡ್ಡ ಆಸೆಯಿತ್ತು. ನನಗೂ ಇತ್ತು. ಅವನಿಗೆ ಆ ಶಕ್ತಿ ಇತ್ತೂಂತ ನಾನು ತಿಳಿದಿದ್ದೆ. ಮೊರಾರ್ಜಿನೂ ಹಾಗೆ ಭಾವಿಸಿದ್ರು. ಆದರೆ ಆತ ಎಲ್ಲಿ ಚೆಲ್ಲಿ ಹೋದನೋ ಯಾಕೆ ಹುಸಿಯಾದನೋ ನನಗೆ ಈವರೆಗೆ ಬಿಡಿಸಲಾಗಿಲ್ಲ. ದಾಸ್ತೊವಸ್ಕಿಯಂತಹ ಲೇಖಕನಾಗಿದ್ರೆ ಅದನ್ನ ಹುಡುಕ್ತಿದ್ದೇನೋ!

**ಆದರೆ ಜಾರ್ಜ್‌ಗೆ ನಿಜವಾಗಿ ಆ ಶಕ್ತಿ ಇತ್ತಾ? ಒಮ್ಮೆ ಕಿಷನ್ ಪಟ್ನಾಯಕ್ ನನಗೆ ಹೇಳಿದ್ದು ಜ್ಞಾಪಕ, ಜಾರ್ಜ್‌ದು ಆಳವಿಲ್ಲದ ಬಹು ತೆಳು ವ್ಯಕ್ತಿತ್ವ ಅಂತ.**

ಕಿಷನ್ ಅದನ್ನ ನನಗೂ ಹೇಳಿದ್ರು. ಸ್ವಲ್ಪ ಅವನು ಜನಪ್ರಿಯತೆಯ ಅಬ್ಬರಕ್ಕೆ ಬಿದ್ದುಹೋದ ಅಂತ ಕಾಣುತ್ತೆ. ಅಲ್ಲದೆ ಜಾರ್ಜ್ ಬಗ್ಗೆ ನನಗೆ ಪ್ರೀತಿ ಜಾಸ್ತಿ ಇತ್ತು. ಅವನ ಬಗ್ಗೆ ನಾನು ಸ್ವಲ್ಪ ಉದಾರವಾಗಿ ಯೋಚಿಸಿದೆ ಅಂತ ಕಾಣುತ್ತೆ.

**(ಇದಕ್ಕೆ ಪೂರಕವಾಗಿ ಅನಂತಮೂರ್ತಿಯವರು ದೀರ್ಘವಾಗಿ ಜಾರ್ಜ್ ಆಸ್ತಿ ವಿವಾದ, ಅದನ್ನು ಅವರು ಪರಿಶೀಲಿಸಿದ್ದು, ನಂತರ ಜಯಾ ಜೈಟ್ಲಿ ಕಥೆ ಎಲ್ಲ ಹೇಳಿ, ಕೊನೆಗೆ ಲೇಖಕ ಹೇಗೆ opinionate ಆಗದೆ ಎಲ್ಲ ವಿವರಗಳನ್ನು ಗಮನಿಸ್ತಾ ಇರ್ತಾನೆ ಎನ್ನುವುದನ್ನು ಹೇಳಿದರು)**

**ಆಮೇಲೆ ಸರ್, ನಿಮ್ಮ ಪತ್ನಿಯವರೇ ಒಮ್ಮೆ ಹೇಳಿದ ಹಾಗೆ ಯಾವಾಗ್ಲೂ ಸುದ್ದಿಯಲ್ಲಿರೋಕೆ ಇಷ್ಟಪಡ್ತೀರಿ. ನಾನು ನಿಮ್ಮನ್ನು ಗಮನಿಸ್ತಾ ಇರುವಾಗಿನಿಂದ್ಲೂ ವಿವಾದಗಳನ್ನು ಸೃಷ್ಟಿಸೋದ್ರಲ್ಲಿ ಎತ್ತಿದ ಕೈ ಆಗಿದ್ದೀರಿ!**

ನೋಡಿ ಬೆಳಿಗ್ಗೆ ಪಕ್ಕದ ಪಾರ್ಕ್‌ಗೆ ವಾಕಿಂಗ್ ಹೋಗಿದ್ದೆ. ಅಲ್ಲಿ ಒಬ್ಬ ಹೆಂಗಸು ಇನ್ನೊಬ್ಬ ಹೆಂಗಸಿಗೆ ಹೇಳ್ತಾ ಇದ್ಲು. ಯಾರೋ ಜ್ಞಾನಪೀಠ ಬಂದವನಂತೆ; ಕಲ್ಲಿನ ಮೇಲೆ ಉಚ್ಚೆ ಹುಯ್ದನಂತೆ ಅಂತ. ಇದನ್ನೆಲ್ಲ ಕೇಳಿದಾಗ ನನ್ನ ಹೆಂಡತಿಗೆ ನೋವಾಗೋದು ಸಹಜ.

**ಇದು ಬಿಡಿ ಸರ್. ಇದು ಕಲ್ಬುರ್ಗಿಯವರ ಮಾತನ್ನ ಕೆಲ ಬುದ್ಧಿಗೇಡಿ ಮಾಧ್ಯಮಗಳು ಪ್ರಚಾರ ಮಾಡಿದ ರೀತಿಯಿಂದ ಆದದ್ದು. ಆದ್ರೆ ನೀವೇ ಸೃಷ್ಟಿಸಿದ ಹಲವಾರು ವಿವಾದಗಳು ಇವೆ ಉದಾಹರಣೆಗೆ ಜಾತಿ ಸೃಜನಶೀಲ ಅಂದ್ರಿ, ಆ ಮೇಲೆ ಗೋಕಾಕ್ ಚಳುವಳಿ ಸಂದರ್ಭದಲ್ಲಿ ನೀವೊಬ್ರೇ ಅದನ್ನು ಯಾವುದೋ ಕಾರಣ ಕೊಟ್ಟು ವಿರೋಧಿಸಿದ್ರಿ**

ಏನು ಮಾಡೋದು. ನಾನು ಚೆನ್ನಾಗಿ ಮಾತಾಡ್ತೀನಿ. ಹಾಗಾಗಿ...

**ಬರೀ ಚೆನ್ನಾಗಿ ಮಾತಾಡೋದಷ್ಟೇ ಅಲ್ಲ, ನೋಡೋಕೂ ಚೆನ್ನಾಗಿದೀರಿ... ಅದೇ ನಿಮಗೆ ಪ್ರಾಬ್ಲೆಮ್ಮಾಗಿರೋದು...**

ಈಗ ನೋಡಿ, ಜಾತಿ ಸೃಜನಶೀಲ ಅಂದಾಗ ಅದನ್ನು ವಿಶಾಲಾರ್ಥದಲ್ಲಿ ತಗೋಬೇಕು. ಜಾತಿಯಲ್ಲಿ ಇರೋವನಿಗೆ ಜಾತಿ ಸೃಜನಶೀಲವೇ. ಅದು ಅವನು ಅದರಲ್ಲಿ ಹುಟ್ತಾನೆ, ಬೆಳಿತಾನೆ, ಮದುವೆ ಆಗ್ತಾನೆ, ನಂಟಸ್ತಿಕೆ ಮಾಡ್ತಾನೆ, ಆಶ್ರಯ ಪಡೀತಾನೆ. ಕಷ್ಟ ಆದಾಗ ಮಕ್ಕಳನ್ನ ಜಾತಿ ಹಾಸ್ಟೆಲ್‌ಗೆ ಸೇರ್ಸಿ ಓದಿಸ್ತಾನೆ. ಅಲ್ಲೇ ಸಾಯ್ತಾನೆ. ಜಾತಿಯನ್ನೋದು complete ಆಗಿ ಸಾಕುತ್ತೆ.

**ಇದು ಜಾತಿಯ ಸೃಜನಶೀಲತೆ ಹೇಗಾಗುತ್ತೆ ಸರ್?**

ಇಲ್ಲಿ ಸ್ವಲ್ಪ ಕೇಳಿ. ಇವೊತ್ತು ಕರ್ನಾಟಕದಲ್ಲಿ ಹೊಸ ಮನಸ್ಸುಗಳು ಹೊಸ ಜಾತಿಗಳಲ್ಲಿ ಹುಟ್ಟಿದ್ರೆ ಅದಕ್ಕೆ ಎರಡು ಕಾರಣ. ಒಂದು ಲಿಂಗಾಯ್ತ ಮಠಗಳು ಅವ್ರು ಈ ಐವತ್ತು ವರ್ಷಗಳಲ್ಲಿ ಶಿಕ್ಷಣ ಕೊಡೋದ್ರಲ್ಲಿ ಎಷ್ಟು ಕೆಲಸ ಮಾಡಿದ್ರು ಅಂದ್ರೆ, ಇವೊತ್ತು ಅವರು ಎಲ್ಲ ಮುಖ್ಯ ಸ್ಥಾನಗಳಲ್ಲಿ ಅವರನ್ನು ಕೂರ್ಸಿದ್ದಾರೆ. ಬ್ರಾಹ್ಮಣರು ಮಾಡದ್ದನ್ನು ಇವರು ಮಾಡಿದ್ರು.

**ಇದು ಆ ಜಾತಿಯನ್ನ ಒಂದು ಪಟ್ಟಭದ್ರ ಹಿತಾಸಕ್ತಿಯನ್ನಾಗಿಯೂ ಮಾಡಿದೆ ಸರ್! ಅದನ್ನೂ ನಾವು ಗಮನಿಸಿ ಯೋಚಿಸಬೇಕು.**

ಅದು ಆಗಿದ್ದು ಆಮೇಲೆ. ಚರಿತ್ರೆಯಲ್ಲಿ ಆಗಿದ್ದು, ಮಾಡಿದ್ದಲ್ಲ. ಹೊಸ ಮನಸ್ಸನ್ನು ಹುಟ್ಟಿಸಿರೋ ಇನ್ನೊಂದು ಅಂದ್ರೆ ಮೀಸಲಾತಿ. ಇತ್ತೀಚೆಗೆ ಒಂದು ವಿ.ವಿ.ಗೆ ಕುಲಪತಿ ಹುಡುಕೋ ಕೆಲಸದಲ್ಲಿ ತೊಡಗಿದ್ದಾಗ ನನಗೆ ಇದು ಗೊತ್ತಾಯ್ತು, ಮೀಸಲಾತಿಯಿಂದ ಮೇಲೆ ಬಂದವರ ಸಂಖ್ಯೆ ಎಷ್ಟಿದೇಂತ.

**ಇದು ನಿಮ್ಮ ಹಳೇ stuff ಬಿಡಿ ಸರ್! ಇಲ್ಲಿ ಜಾತಿಗೂ ಸೃಜನಶೀಲತೆಗೂ ಏನು ಸಂಬಂಧ ಅಂತ!**

ಇಲ್ಲಿ ಕೇಳಿ. ಈ ಗೌಡ್ರದ್ದು, ಲಿಂಗಾಯತ್ರದ್ದು, ಕುರುಬ್ರದ್ದು ಜಾತಿ ಸಂಘಟನೆಗಳು active ಆಗಿ ಇದ್ದದ್ದಕ್ಕೇ ಅವರಿಗೆ ಅವಕಾಶ ಸಿಕ್ಕಿ ಅವರು ಸೃಜನಶೀಲರಾಗಿದ್ದು.

**ಬಿಡಿ ಸರ್, ಇದೆಲ್ಲ ಜಾತಿ ವ್ಯವಸ್ಥೆ ಕುರಿತ ನಮ್ಮ ತಿಳುವಳಿಕೆಯಿಂದ, ಜಾತಿ ಅನ್ನೋದು ಚರಿತ್ರೆಯಲ್ಲಿ ಏನು ಮಾಡಿದೆ ಅನ್ನೋ ತಿಳುವಳಿಕೆಯಿಂದ ಇದೆಲ್ಲ ಆಗಿರೋದೇ ಹೊರತು ನೀವು ಹೇಳುವ ರೀತಿಯಲ್ಲಲ್ಲ. ಇದು ಬಹಳ ಅಪಾಯದ ತರ್ಕ ಸರ್.**

ಮೀಸಲಾತಿ gave them seats, jobs, security. ಇದು ಅವನನ್ನ ಸೃಜನಶೀಲನನ್ನಾಗಿ ಮಾಡುತ್ತೆ ಇಲ್ಲ ಭ್ರಷ್ಟನನ್ನಾಗಿಯೂ ಮಾಡಬಹುದು. ಅದು ಬೇರೆ ವಿಷಯ. ಈ ಎರಡೂ ಇಲ್ಲದಿದ್ದೆ ನಿಮ್ಮಲ್ಲಿ ಎಷ್ಟು ಜನ ಮೇಲಕ್ಕೆ ಬರೋದಕ್ಕೆ ಸಾಧ್ಯಾಗ್ತಾ ಇತ್ತು? ಬರೀ ಬ್ರಾಹ್ಮಣರೇ ತುಂಬಿಕೊಂಡಿರ್ತಿದ್ರು. ಈ ದೇಶದಲ್ಲಿ ಎಲ್ಲವನ್ನೂ ಸರ್ಕಾರನೇ ಮಾಡೋಕ್ಕಾಗೊಲ್ಲ. ಅನೇಕ ಅಗತ್ಯಗಳಿಗೆ ಜಾತಿಯನ್ನ ಆಶ್ರಯಿಸಬೇಕಾಗುತ್ತೆ ಇಲ್ಲಿ. ಅಂದ್ರೆ ನಾನು ಜಾತಿ ಇರಬೇಕೂಂತ ಹೇಳ್ತಿಲ್ಲ. ಜಾತಿ ಅನ್ನೋದು ಇದೆ ಅಂತ ಹೇಳ್ತಿದೀನಿ. ಜಾತಿಯೊಳಗೆ ಇರೋ ಸೃಜನಶೀಲತೆ ಬಗ್ಗೆ ಹೇಳ್ತಾನೇ, ಜಾತಿಯನ್ನು ಮೀರಿದಾಗ ಇನ್ನೂ ದೊಡ್ಡ ಸೃಜನಶೀಲತೆಯನ್ನ ಸಾಧಿಸೋದಕ್ಕೆ ಆಗುತ್ತೆ ಅನ್ನೋದೂ ನಿಜ. ಆದ್ರೆ ಇರೋ ಜಾತಿಯನ್ನ ಕಿಂಚಿತ್ತಾದರೂ ಅರ್ಥ ಮಾಡಿಕೊಳ್ಳೋಕೆ ನೀವು ತಯಾರಿಲ್ಲ ಅಂದ್ರೆ... ಏನು ಹೇಳೋದು. ನಿಜ, We have created a middle class which is ugly. ಇವರೆಲ್ಲ ಮೋದಿಗೆ ಓಟು ಹಾಕಿದಾರೆ. ಇದರಲ್ಲಿ ಎಲ್ಲ ಜಾತಿಗಳೂ ಇವೆ, ಶೂದ್ರರೂ ಇದ್ದಾರೆ, ಬ್ರಾಹ್ಮಣರೂ ಇದಾರೆ, ಸಾಬರೂ ಇದ್ದಾರೆ. ಈ ಶಕ್ತಿಗಳೆಲ್ಲ ಲೋಹಿಯಾರ ಜಾತಿ ನೀತಿಯಿಂದ ಸೃಷ್ಟಿಯಾದೋವು.

**ಈ ಮಾತುಗಳನ್ನ ಹಿರಿಯ ಲೋಹಿಯಾವಾದಿಯೊಬ್ಬರ ಬಾಯಿಂದ ಕೇಳಿ ನನಗೆ ಸದ್ಯಕ್ಕೆ ಇದಕ್ಕಿಂತ ದೊಡ್ಡ ಸಂಗತಿಯಿಲ್ಲ ಅನ್ನಿಸ್ತಿದೆ!**

ಲೋಹಿಯಾ, ನಾನು ಶೂದ್ರರ ಬಗ್ಗೆ ಮಾತಾಡ್ತಿದ್ರೂ ನನಗೆ ಹತ್ತಿರವಾದೋನು ಮಧು ಲಿಮಯೆ ಅನ್ತಿದ್ರು. ಕೆಲವು ಮಧ್ಯಮ ಜಾತಿಗಳು ಮೇಲಕ್ಕೆ ಬರ್ತಾ disappoint ಮಾಡಿವೆ ಅನ್ತಿದ್ರು.

**ಕೆಳ ಜಾತಿಗಳು ಮೇಲಕ್ಕೆ ಬರ್ತಾ ಮೇಲ್ಜಾತಿಗಳನ್ನ ಅನುಕರಿಸುವ, ಅವುಗಳ ದುರ್ಲಕ್ಷಣಗಳನ್ನು ಗಳಿಸಿಕೊಳ್ಳುವ ಅಪಾಯಗಳ ಬಗ್ಗೆ ಲೋಹಿಯಾ ಎಚ್ಚರಿಸಿದ್ದರು. ಇವೊತ್ತು ಈ ಸ್ಥಿತಿಯಲ್ಲಿ ಲೋಹಿಯಾ ಅವರ ಜಾತಿ ನೀತಿಯನ್ನು ನಾವು ನಿಷ್ಠುರವಾಗಿ ಪುನರ್‌ವಿಮರ್ಶಿಸಬೇಕಾಗಿದೇಂತ ನನಗಂತೂ ಅನ್ನಿಸ್ತಿದೆ. ಆದ್ರೆ ನೀವು ಜಾತಿ ಕುರಿತಂತೆ ಇನ್ನೊಂದು ಅಪಾಯಕಾರಿ ಹೇಳಿಕೆಯನ್ನೂ ಕೊಟ್ಟು ನಮ್ಮನ್ನ ಗಾಬರಿಗೊಳಿಸಿದ್ದೀರಿ. ಅದೂಂದ್ರೆ, ಜಾತಿ ಬಿಟ್ಟರೂ ಜಾತಿ ಸಂಸ್ಕೃತಿಯನ್ನು ಬಿಡಬೇಡಿ ಅನ್ನೋದು. ಸರ್ ನಿಮ್ಮ ಪ್ರಕಾರ ಜಾತಿ ಸಂಸ್ಕೃತಿ ಅಂದ್ರೆ ಏನು ಸರ್?**

ಜಾತಿ ಸಂಸ್ಕೃತಿ ಊಟದ ಕ್ರಮದಲ್ಲಿದೆ, ಆಚರಣೆಗಳಲ್ಲಿವೆ, ಅನೇಕ ವಿಚಾರಗಳಲ್ಲಿವೆ. ಜಾತಿಗಳ ಮೇಲೆ ಭಾಷೆ ನಿಂತಿದೆ. ನಂನಮ್ಮ ಜಾತಿಗಳ ಜೊತೆ ಸಂಪರ್ಕ ಇಟ್ಟುಕೊಂಡ ಮಟ್ಟಿಗೆ ಭಾಷೆ ಉಳಿದಿರುತ್ತೆ. ಉದಾಹರಣೆಗೆ ಅಂತರ್‌ಜಾತಿ ವಿವಾಹಗಳಲ್ಲಿ ಕನ್ನಡ ಹೊರಟು ಹೋಗುವಷ್ಟು ಇನ್ನಾವುದರಿಂದಲೂ ಹೊರಟು ಹೋಗಲ್ಲ. ಅದೃಷ್ಟಕ್ಕೆ ನೀನು ಕನ್ನಡತಿಯನ್ನು ಮದುವೆಯಾದಿ. ನಿನ್ನ ಕುಟುಂಬದಲ್ಲಿ ಕನ್ನಡ ಉಳಿದಿದೆ.

**ಸರ್ ಇದೆಲ್ಲ ಜಾತಿಗೆ ನಿರ್ದಿಷ್ಟವಾಗಿ ಸಂಬಂಧಿಸಿರೋ ವಿಷಯಗಳಲ್ಲ. ಅವು ನಿಮ್ಮ ಸಾಮಾನ್ಯ ವಿವೇಕಕ್ಕೆ, ನನಗೆ ಯಾವುದು ಬೇಕು, ಯಾವುದು ಬೇಡ, ಯಾವುದು ಒಳ್ಳೆಯದು, ಯಾವುದು ಕೆಟ್ಟದು ಅಂತ ತೀರ್ಮಾನಿಸೋ ಶಕ್ತಿಗೆ ಸಂಬಂಧಿಸಿದ್ದು ಅಲ್ಲವಾ ಸರ್?**

ಅದೂ ಇರಬಹುದು. ಆದ್ರೆ ಇವೆಲ್ಲ ಜಾತಿ ಆಧಾರಿತವಾದ ನಮ್ಮ ದೇಶದ ಕೊಡುಗೆಗಳು. ನೋಡಿ ನೀವು ಹಳ್ಳಿಗೆ ಹೋದ್ರೆ ಮುಸ್ಲಿಮರನ್ನ ಒಂದು ಜಾತಿ ಅಂತಾರೆ. ಆದ್ದರಿಂದ ದ್ವೇಷ ಇಲ್ಲ. ಮತ ಅಂದುಬಿಟ್ರೆ



**ಸಮಾರಂಭವೊಂದರಲ್ಲಿ ಅನಂತಮೂರ್ತಿಯವರೊಂದಿಗೆ' ಸಂದರ್ಶಕ**

ಬೇರೇನೇ ಆಗಿಹೋಗುತ್ತೆ. ಇದನ್ನೆಲ್ಲ ನೀವು ಗಮನಿಸೋಲ್ಲ.

**ನೀವು ಏನೇ ಹೇಳಿದ್ರೂ ಇದನ್ನೆಲ್ಲ ಜಾತಿಗೆ ಕನೆಕ್ಟ್ ಮಾಡೋದನ್ನ ಒಪ್ಪೋಕೆ ಸಾಧ್ಯ ಇಲ್ಲ ಸರ್. ಈಗ ಸ್ವಲ್ಪ ರಾಜಕೀಯಕ್ಕೆ ಬಂದು ಅಲ್ಲಿನ ನಿಮ್ಮ ಒಂದು ವಿವಾದಾಸ್ಪದ ಹೇಳಿಕೆಯನ್ನ ನೋಡೋಣ. ಇತ್ತೀಚೆಗೆ ನೀವು ಮೋದಿ ಪ್ರಧಾನಮಂತ್ರಿ ಆದ್ರೆ ನಾನು ಈ ದೇಶದಲ್ಲಿ ಇರೋದಕ್ಕೆ ಇಷ್ಟಪಡೋಲ್ಲ ಅನ್ನೋ ಅರ್ಥದ ಹೇಳಿಕೆ ಕೊಟ್ಟು ಈಗ ತೊಂದರೆಗಳನ್ನ ಅನುಭವಿಸ್ತಿದೀರಿ. ನಿಮ್ಮ ಹೇಳಿಕೆಯನ್ನ ಅಪವ್ಯಾಖ್ಯಾನ ಮಾಡಲಾಯ್ತು ಮತ್ತು ಅದನ್ನ ಬಳಸಿಕೊಂಡ ಕೆಲವು ಪುಂಡಶಕ್ತಿಗಳು ನಿಮಗೆ ತೊಂದರೆ ಕೊಡ್ತಿರೋದನ್ನ ನಾವಾರೂ ಒಪ್ಪೋಲ್ಲ. ಅದನ್ನ ಖಂಡಿಸ್ತೀವಿ. ಆದರೆ ನೀವು ಮೋದಿ ವಿರುದ್ಧ ಆ ಹೇಳಿಕೆ ಕೊಟ್ಟಿದ್ದು ಮುಖ್ಯವಾಗಿ ಎರಡು ಕಾರಣಗಳ ಮೇಲೆ ಅಂತ ನಾನು ತಿಳ್ಕೊಂಡಿದೀನಿ. ಒಂದು, ೨೦೦೨ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ನಡೆದ ಹತ್ಯಾಕಾಂಡ. ಇನ್ನೊಂದು ಅವರ ಅಭಿವೃದ್ಧಿ ಮಾದರಿ.ನಿಮ್ಮ ಹೇಳಿಕೆಯ ತೀವ್ರತೆಗೆ ಮುಖ್ಯವಾಗಿ ಕಾರಣವಾಗಿದ್ದು ಮುಸ್ಲಿಮರ ಆ ಸಾಮೂಹಿಕ ಹತ್ಯೆ ಅಂತಲೇ ನಾನು ಭಾವಿಸಿದ್ದೀನಿ. ಈ ಹಿನ್ನೆಲೆಯಲ್ಲಿ ಈ ಪ್ರಶ್ನೆ. ಆ ಹತ್ಯಾಕಾಂಡ ನಡೆದಾಗ ನೀವು ಏನನ್ನೂ ಹೇಳದೆ ಈಗ ಇಷ್ಟು ತೀವ್ರ ಹೇಳಿಕೆ ನೀಡಿದ್ದು ಯಾಕೆ ಸರ್?**

ನಾನು ಆಗ ಎಲ್ಲಿದ್ದೆ, ಏನು ಮಾಡ್ತಿದ್ದೆ, ಏನು ಹೇಳಿದೆ, ಏನು ಹೇಳಲಿಲ್ಲ ಅನ್ನೋದು ನನಗೆ ಈಗ ನೆನಪಿಲ್ಲ.

**ನನಗೆ ನೆನಪಿದೆ ಸರ್. ಅದನ್ನ ನನ್ನ ಅಂಕಣವೊಂದರಲ್ಲಿ ಬರೆದಿದ್ದೇನೆ ಕೂಡ. ಆಗ ವಾಜಪೇಯಿಯವರ ಎನ್.ಡಿ.ಎ. ಸರ್ಕಾರ ಇತ್ತು. ಆಗ ನೀವು ಪುಣೆ ಫಿಲ್ಮ್ ಇನ್‌ಸ್ಟಿಟ್ಯೂಟ್‌ನ ಛೇರ್ಮನ್ ಏನೋ ಆಗಿದ್ರಿ.. ಹತ್ಯಾಕಾಂಡದ ಬಗ್ಗೆ, ಅದರಲ್ಲಿ ಮೋದಿ ಪಾತ್ರದ ಬಗ್ಗೆ ನೀವೇನೂ ಹೇಳದಿರುವುದನ್ನು ಗಮನಿಸಿ, ಆ ಬಗ್ಗೆ ಲೇಖನ ಮಾಡುತ್ತಿದ್ದ *ಔಟ್‌ಲುಕ್* ಪತ್ರಿಕೆಯ ವರದಿಗಾರನೊಬ್ಬ ನಿಮ್ಮನ್ನು ಗುಜರಾತ್ ಹತ್ಯಾಕಾಂಡದ ಬಗ್ಗೆ ನಿಮಗೇನೂ ಅನ್ನಿಸುತ್ತಿಲ್ಲವೇ ಅಂತ ಪ್ರಶ್ನೆ ಕೇಳಿದಾಗ ನೀವು ಕೊಟ್ಟ ಉತ್ತರ: 'Both Modi and Lalu are not good for the country'. ಅಂದರೆ ಆಗಿನ ಕಾಲಕ್ಕೆ ಒಂದು ರಾಜಕೀಯ balancing statement ಆಗಿತ್ತು ಅದು.**

ನಾನೊಬ್ಬ ಲೇಖಕ. ಒಬ್ಬ ಲೇಖಕನನ್ನ ಈ ರೀತಿ ಪ್ರಶ್ನಿಸೋಕ್ಕೇ ಆಗೊಲ್ಲ. ಬಹಳ ವಿಷಯ ಜನಕ್ಕೆ ಗೊತ್ತಿರೋಲ್ಲ. ನಾನು ಆಗ ಅಹಮದಾಬಾದ್‌ನಲ್ಲಿರೋ ಗಾಂಧಿ ವಿದ್ಯಾಪೀಠಕ್ಕೆ ಹೋಗಿ ಗಾಂಧಿಯ ಅಹಿಂಸೆ ಬಗ್ಗೆ ಮಾತಾಡಿದ್ದೀನಿ. ಆಮೇಲೆ, ಗಾಂಧಿಯವರ ಕಾರ್ಯದರ್ಶಿ ಇದ್ದರಲ್ಲ (ಮಹದೇವ ದೇಸಾಯಿ), ಅವರ ಮಗ ನಾರಾಯಣ ದೇಸಾಯಿ ಗಾಂಧಿ ಜೀವನ ಚರಿತ್ರೆ ಬರೆದಿದ್ದರು. ಅದನ್ನ ತಾನು ಬಿಡುಗಡೆ ಮಾಡಬೇಕೂಂತ ಮೋದಿ ಹೇಳಿದ್ದ. ಆದ್ರೆ ಗುಜರಾತ್‌ನ ಲೇಖಕರು–ಕಲಾವಿದರು ಅದನ್ನ ತಪ್ಪಿಸೋಕೆ–(ಗಣೇಶ್)ದೇವಿ ಅವರೆಲ್ಲ ಸೇರಿ–ಪುಸ್ತಕದ ಬಿಡುಗಡೆಯನ್ನ ಮುಂಬೈಯಲ್ಲಿ ಏರ್ಪಡಿಸಿ ನನ್ನನ್ನ ಕರೆದು ಬಿಡುಗಡೆ ಮಾಡಿಸಿದ್ರು. ಆಗ ಯಾರ ಮೇಲಾದ್ರೂ ಮೋದಿ ಕೃಪಾಕಟಾಕ್ಷ ಬಿದ್ರೆ ಅವನನ್ನ ಅಸ್ಪೃಶ್ಯನ ಹಾಗೆ ನೋಡೋರು. ಇವೊತ್ತು ಮೋದಿ ಎಲ್ಲರಿಗೆ ಬೇಕಾಗಿದ್ದಾನೆ. ಗುಜರಾತ್‌ನ ಒಬ್ಬ ಕವಿ ಇದ್ದಾನೆ. ಅವನು ಲೋಹಿಯಾಗೆ ಹತ್ತಿರವಾಗಿದ್ದವನು. ನನಗೂ ಹತ್ತಿರವಾಗಿದ್ದವನು. ಅವನು ಹೇಳ್ತಿದ್ದ ಮೋದಿ ಮುಸ್ಲಿಮರ ಬಾಯಿ ಮುಚ್ಚಿಸಿದ್ದಾನೇಂತ, ಅದರಿಂದ ಒಳ್ಳೇದಾಗಿದೆ ಅನ್ನೋ ಅರ್ಥದಲ್ಲಿ ಹೇಳಿದ್ದ. ಇವರಿಗೆಲ್ಲ ಏನಾಗಿದೆ ಅಂತ ಕೇಳ್ತೀನಿ. ಕನ್ನಡದ ಕವಿ ಮಿತ್ರನೊಬ್ಬ ನನಗೆ ಪತ್ರ ಬರೆದು ಮೋದಿ ಭದ್ರ ಸರ್ಕಾರ ರಚಿಸಿ ನಿಷ್ಠ ಆಡಳಿತ ಕೊಟ್ರೆ ನಾವ್ಯಾಕೆ ಸ್ವಾಗತಿಸಬಾರ್ದು ಅಂತಾನೆ. ನಮ್ಮ ಕೊಡಗಿನ ವೀರ ಸುಬ್ಬಯ್ಯ ಮೋದಿ ಏನೇ ಮಾಡಿರಲಿ ಆತನ ಪ್ರಧಾನಮಂತ್ರಿ ಅವತಾರದಿಂದ ಒಳ್ಳೆಯದಾಗುತ್ತೆ ಅಂತ ಹೇಳ್ತಿದ್ದಾರಂತೆ. ನಾನು ಎರಡು ತುದಿಯನ್ನೂ ನೋಡಿದ್ದೇನೆ. ಆ ತುದಿಯಿಂದ ಈ ತುದಿಗೆ ಬಂದವರನ್ನ.

**ಮೋದಿ ಭಯ ಇದಕ್ಕೆಲ್ಲ ಕಾರಣಾಂತ ಅನ್ನಿಸುತ್ತೆ**

ಇಲ್ಲ. ಮೋದಿ ಇವರ ನಿರೀಕ್ಷೆಯಂತೆ ಕೆಲಸ ಮಾಡಿಬಿಡಬಹುದು. ಜನ ಕೆಲಸ ಮಾಡೋ ಹಾಗೆ ಮಾಡಬಹುದು. ಅದು ಲೋಹಿಯಾ ಹೇಳುತ್ತಿದ್ದ Maximum efficiency ನೆಲೆಯಲ್ಲಿ. Total efficiency ನೆಲೆಯಲ್ಲಿ ಅಲ್ಲ. ಅದರಿಂದ ಬಡವರ ಮೇಲೆ ಒತ್ತಡ ಹೆಚ್ಚಬಹುದು ಅವರು ಕೀಳರಿಮೆಗೆ ಒಳಗಾಗಬಹುದು. ಇದನ್ನೆಲ್ಲ ಬರಿತಿದೀನಿ.

**ಬರೀರಿ ಸರ್. ಈ. efficiencyಗಳ ಮಾತನ್ನೆಲ್ಲ ಲೋಹಿಯಾ ಆಡಿದ್ದು ನಾಗರೀಕತೆಗಳ ಉತ್ಥಾನ ಮತ್ತು ಪತನದ ಸಂದರ್ಭಗಳಿಗೆ ಸಂಬಂಧಿಸಿದಂತೆ ಅಂತ ಕಾಣುತ್ತೆ. ಇರಲಿ, ಈಗ ಕೊನೆಯದಾಗಿ ಮೊದಲಿಗೇ, ಸಾಹಿತ್ಯದ ವಿಷಯಕ್ಕೇ ಬರೋಣ.. ನಿನ್ನೆ ನಿಮ್ಮತ್ರ ಮಾತಾಡ್ತಿದ್ದಾಗ ಕಷ್ಟ, ಮುಜುಗರದ ಪ್ರಶ್ನೆ ಅಂತ ನೀವು ಹೇಳಿದ್ದ ಪ್ರಶ್ನೆಯನ್ನ ಕೇಳಲೇಬೇಕು ಅನ್ನಿಸ್ತಿದೆ. ಉತ್ತರಿಸೋದು ಬಿಡೋದು ನಿಮಗೆ ಬಿಟ್ಟದ್ದು. ನೀವು ಒಬ್ಬ ಸಾಹಿತ್ಯದ ಓದುಗರಾಗಿ ಹೇಳಿ ಸರ್, ನೀವು, ಲಂಕೇಶ್, ತೇಜಸ್ವಿ–ಇವರಲ್ಲಿ ನಿಮ್ಮ ಪ್ರಕಾರ ಲೇಖಕರಾಗಿ ನಂಬರ್ ಒನ್ ಯಾರು?**

ನನಗೆ ಈ ಮೂರು ಜನರಲ್ಲಿ ಹೆಚ್ಚು ಇಷ್ಟ ಲಂಕೇಶ್, ಬರವಣಿಗೇನಲ್ಲಿ. ಆದ್ರೆ ನಾವು ಮೂರೂ ಜನ ಲೇಖಕರು ಇಲ್ದೆ ಇದ್ರೆ ಕನ್ನಡದಲ್ಲಿ ಏನೋ ಒಂದು ಶೂನ್ಯ ಇರ್ತಾ ಇತ್ತು. ನಾವು ಮೂರೂ ಜನ ಅಗತ್ಯ.

**ನಿಮಗೆ ಲಂಕೇಶ್ ಹೆಚ್ಚು ಇಷ್ಟ ಯಾಕೆ?**

He was a deeply disturbed man. ಅವನು ಒಂಥರಾ ನ್ಯೂರಾಟಿಕ್. ತೇಜಸ್ವಿನೂ ಹಾಗೇ ಹೇಳ್ತಿದ್ದ. ಯಾಕೆ ಅಂದ್ರೆ ನ್ಯೂರಾಟಿಕ್ ಆದವನು ಒಂದು ಸಲ ಈ ಕಡೆ ಇದ್ರೆ ಇನ್ನೊಂದು ಸಲ ಆ ಕಡೆ ಇರ್ತಾನೆ. ಅದಕ್ಕೆ ಸಮರ್ಥನೆ ಇರೋದಿಲ್ಲ. ಅವನ ಒಂದು ನಾಟಕದಲ್ಲಿ ಮೂರು ಜನ ಬಂದು ಒಬ್ಬನ್ನ ಬೈದು ಬೈದು ಅವನನ್ನ ನೇಣಿಗೆ ಹಾಕಬೇಕು ಅನ್ನುವಾಗ ನಾಟಕ ಸಂಪೂರ್ಣವಾಗಿ ತಿರುಗುಮುರುಗಾಗಿ ಬಿಡುತ್ತೆ. ಅದೊಂದು ನ್ಯೂರಾಟಿಕ್ ನಾಟಕ. ಈ ನ್ಯೂರಾಟಿಕ್ ಆದ ಎನರ್ಜಿ ಇದೆಯಲ್ಲ, ಅದು ಕೆಲವು ಪ್ರಾಮಾಣಿಕವಾದ ಸತ್ಯಗಳನ್ನ ಹೊರಕ್ಕೆ ತಂದುಬಿಡುತ್ತೆ. ಒಂದು, ಮಾಸ್ತಿಯವರ ತರಹ ಎಲ್ಲವನ್ನೂ ಮುಚ್ಚಿಟ್ಟುಕೊಳ್ಳುವುದು. ಅದು ಮುಚ್ಚಿಟ್ಟುಕೊಳ್ಳುವ ಭಾಷೆ. ಇನ್ನೊಂದು ಲಂಕೇಶನದು ಮುಚ್ಚಿಡಲಾರದವನ ಭಾಷೆ. ಅದು ಬಿಚ್ಚುವ ಭಾಷೆ ಅವನ 'ಬಿಚ್ಚು' ಕವನ ಸಂಕಲನ ಬಿಡುಗಡೆಯಾದಾಗ ಅಡಿಗರು ಹೇಳಿದ್ರು, ಕಟ್ಟುವ ಕಾಲ ಒಂದಿರುತ್ತೆ, ಬಿಚ್ಚುವ ಕಾಲ ಒಂದಿರುತ್ತೆ ಅಂತ.

ಹಾಗೆ ನಾವು ಮೂರೂ ಜನ ಮುಖ್ಯ. ನನಗೇನೋ ಜ್ಞಾನಪೀಠ ಬಂತು. ಲಂಕೇಶ್‌ಗೆ ಬರಲಿಲ್ಲ, ತೇಜಸ್ವಿಗೂ ಬರಲಿಲ್ಲ. ಅಡಿಗರಿಗೂ ಬರಲಿಲ್ಲ, ಪು.ತಿ.ನ.ಗೆ ಕೂಡ. ಅವರೆಲ್ಲ ನನಗಿಂತ ದೊಡ್ಡವರಲ್ವಾ? ಅಡಿಗರು ನನಗಿಂತ ದೊಡ್ಡವರೂಂತ ಇವೊತ್ತಿಗೂ ತಿಳಿದಿದ್ದೀನಿ ನಾನು.

**ನನಗೆ ಈ ಮೂವರನ್ನೂ ಜೊತೆಯಾಗಿ ನೋಡಿದಾಗ ತರತಮ ಗೊತ್ತಾಗಲ್ಲ. ಆದ್ರೂ ಎಲ್ಲೋ ಲಂಕೇಶ್ ಮೂವರಲ್ಲಿ ವಿಶಿಷ್ಟ ಅಂತ feel ಮಾಡ್ತಿದ್ದೆ ಅಷ್ಟೆ. ಅವರ್ದು intensity ಜಾಸ್ತಿ. ಆದ್ರೆ reachನಲ್ಲಿ ತೇಜಸ್ವಿ ಜಾಸ್ತಿ ಅನ್ನಿಸುತ್ತೆ. ಅಂದ್ರೆ horizontal reachನಲ್ಲಿ**

ತೇಜಸ್ವಿಯಲ್ಲಿ horizontal reach ಬಹಳ ಇದೆ. ಅವನು ತನ್ನ ಅಪ್ಪನ ಗುಣವನ್ನ ಇದರಲ್ಲಿ ಪಡೆದುಕೊಂಡಿದ್ದಾನೆ.

**ಸರ್ ಬಹಳ ಮಾತಾಡಿದೀವಿ. ನಿಮಗೆ ದಣಿವಾಗಿರಬೇಕು. ಇಲ್ಲಿಗೆ ಈ ಮಾತುಕತೆ ಸಾಕು ಅಂತ ಕಾಣುತ್ತದೆ. ಥ್ಯಾಂಕ್ಸ್, ನಮಸ್ಕಾರ.**

ನಮಸ್ಕಾರನಪ್ಪ.

(ಧ್ವನಿಯಿಂದ ಲಿಪಿಗೆ: **ಸವಿತಾ ನಾಗಭೂಷಣ**)

**ಈ ಪುಟದಲ್ಲಿ ಬಿ.ಡಿ.ಎ. ಜಾಹೀರಾತನ್ನು ಅಂಟಿಸಿ**




# ದಾಯಾ ಚಿನ್ನದ ಕೇರಿ

–ಜಯಂತ ಕಾಯ್ಕಿಣಿ

ವಿಹಂಗಮ ನಸುಕಿನಲ್ಲೆ ಎದ್ದು ಪೇಪರು ಹಾಕಲು ಹೋಗುತ್ತಿದ್ದ. ಇನ್ನೂ ಎದ್ದಿರದ ಮನೆಗಳ ಬಾಗಿಲಲ್ಲಿ, ಹಜಾರದಲ್ಲಿ, ಕಟಾಂಜನಗಳಲ್ಲಿ, ಪೇಪರು ಹಾಕುವಾಗ, ಅವರೆಲ್ಲರಿಗಿಂತ ಸಮಯದಲ್ಲಿ ತಾನು ತುಸು ಮುಂದೆ ಇದ್ದೇನೆ ಎಂಬ ಹುರುಪು ಅವನಿಗಿರುತ್ತಿತ್ತು. ಜೋರು ಮಳೆಯಲ್ಲಿ ಪೇಪರು ಒದ್ದೆಯಾಗದಂತೆ ನೋಡಿಕೊಳ್ಳುವ ಗೋಳೊಂದನ್ನು ಬಿಟ್ಟರೆ ಅವನಿಗೆ ಈ ಪೇಪರ್ ಕೆಲಸದ ಸೈಕಲ್ ಸುತ್ತಾಟ ಖುಶಿಯನ್ನೇ ಕೊಡುತ್ತಿತ್ತು. ಆದರೆ ಒಮ್ಮೊಮ್ಮೆ ಪೇಪರ್ ವ್ಯಾನು ಬರಲು ತಡವಾದರೆ ಅವನ ಬೆಳಗಿನ ಲಯವೇ ತಪ್ಪಿಹೋದಂತಾಗುತ್ತಿತ್ತು. ಹೀಗೆ ತಡವಾದಾಗೆಲ್ಲ ಅವನು ಯಾರೋ ಬೆನ್ನಟ್ಟಿ ಬಂದಂತೆ ಓಡೋಡುತ್ತ ಪೇಪರು ಹಾಕುತ್ತಿದ್ದ. ಹೀಗೊಮ್ಮೆ ಓಡುವಾಗ ನೋಡಿದ ಮಾದೇವಕ್ಕೋರು "ಏ ಮಳ್ಳಾ, ತಡಾ ಆದರೆ ಜೀವಾ ಹೋಗುವಂಥದ್ದೇನೂ ಇರೂದಿಲ್ಲಾ ಪೇಪರಲ್ಲಿ.. ಸಾವ್‌ಕಾಶ್ ಹೋಗು" – ಎಂದು ಕೂಗಿದರು. ಅವರು ತಮ್ಮ ಸೀರೆಗೆ ಹೊಂದಿಕೆಯಾಗದ ವಿಚಿತ್ರ ಕ್ಯಾನ್‌ವಾಸ್ ಶೂಸ್‌ನಲ್ಲಿ ವಾಕ್ ಮಾಡಿ ಬರುತ್ತಿದ್ದರು. ಅವರ ಒಬ್ಬಳೇ ಜಾಣ ಮಗಳು ಬೇಬಿ ವಿದೇಶದಿಂದ ತಂದುಕೊಟ್ಟಿದ್ದ ಶೂಸ್ ಇರಬಹುದು ಅದು. ಎಷ್ಟೋ ದಿನ ಹಾಗೇ ಇಟ್ಟು ಕೊನೆಗೂ ಧೈರ್ಯ ಮಾಡಿ ಮಾದೇವಕ್ಕೋರು ಅದನ್ನು ಹಾಕಲು ಶುರು ಮಾಡಿದ್ದರು. ಅದರ ಹೊಳಪು, ನಾವೀನ್ಯ ಎದ್ದುಕಾಣುತ್ತಿತ್ತು. ಅದೇ ಮಾದೇವಕ್ಕೋರನ್ನು ಧರಿಸಿಕೊಂಡು ಬಂದಂತೆ ಕಾಣುತ್ತಿತ್ತು. ದಾರಿಯಲ್ಲಿ ಸಿಕ್ಕವರೆಲ್ಲ ಮುಖದ ಬದಲು ಅದನ್ನೇ ನೋಡುತ್ತ ತನ್ನೊಡನೆ ಮಾತಾಡಿದಂತೆ ಭಾಸವಾಗಿ ಅವರಿಗೆ ಸಿಗ್ಗಾಗತೊಡಗಿತ್ತು. ಒಂದು ದಿವಸ ಮನೆ ಬಾಗಿಲಲ್ಲೆ ಕಾದು ನಿಂತವರು ವಿಹಂಗಮ ಬಂದಿದ್ದೇ "ತಗೋ ನಿನಗೆ ಆಗ್ತದೊ ನೋಡು" – ಎಂದು ಅವುಗಳನ್ನು ಸುಂದರವಾದ ರಟ್ಟಿನ ಪೆಟ್ಟಿಗೆಯ ಸಮೇತ ಕೊಟ್ಟುಬಿಟ್ಟರು. ಅವನಿಗೆ ಅದನ್ನು ನಂಬಲಾಗದೇ ವಿಚಿತ್ರವಾಗಿ ನಕ್ಕುಬಿಟ್ಟ. "ನಾನು ಜಾಸ್ತಿ ಹಾಕಲಿಲ್ಲ ಹಾಂ?" ಎಂದು ವಿನೀತರಾಗಿ ಹೇಳಿದ ಮಾದೇವಕ್ಕೋರು "ಅಲ್ಲೋ, ನೀನು ಪೇಪರ್ ಓದತ್ಯೋ ಇಲ್ಲೋ?" ಎಂದು ಕೇಳಿಬಿಟ್ಟರು. ವಿಹಂಗಮನಿಗೆ ತಾನು ಏನು ಹೇಳಬೇಕು ಅಂತ ತಿಳಿಯದೆ – "ಹೆಹೆಹೆ.. ಅದೆಲ್ಲಾ ನಮಗೆಂತಕ್ಕೆ? " – ಎಂದು ಶೂಸಿನ ಚೀಲವನ್ನು ಸೈಕಲ್‌ಗೆ ಸಿಕ್ಕಿಸಿ ಹೊರಟೇಬಿಟ್ಟ. ಅವನನ್ನು ತಟ್ಟಿ ತಡೆದು ಮಾದೇವಕ್ಕ "ಮತ್ತೆಂದಕ್ಕೂ ಅಲ್ಲ, ಜಗತ್ತಿಗೆ ಎಷ್ಟು ಮಳ್ಳ ಹಿಡದದೆ ಅಂತ ಗೊತ್ತಾಗ್ತದೆ ಅದರಲ್ಲಿ" – ಎಂದು ಒಂದು ಪ್ರೋತ್ಸಾಹಕರ ನಗುವಿನೊಂದಿಗೆ ಅವನನ್ನು ಬೀಳ್ಕೊಟ್ಟರು. "ಬೂಟು ಸರಿ ಆಗದೆ ಹೋದ್ರೆ ವಾಪಸ್ ತಂದ್ಕೊಡು, ಬೇರೆ ಯಾರಿಗಾದ್ರೂ ಕೊಡ್ತೆ" ಎಂದು ಕಡೇ ಗಳಿಗೆಯಲ್ಲಿ ಅವಸರದಲ್ಲಿ ಹೇಳಿದರು.

ಗಾಳಕ್ಕೆ ಸಿಕ್ಕ ತುಸು ದೊಡ್ಡ ಮೀನಿನಂಥ, ಬೂಟಿನ ಚೀಲವನ್ನು ತೂಗಿಸಿಕೊಂಡೇ ಆತ ಅಂದಿನ ಪೇಪರ್ ವಿಲೇವಾರಿ ಮುಗಿಸಿ ಸೀದಾ ಬಂಗ್ಲೆಗುಡ್ಡೆಗೆ ಸೈಕಲ್ ಹೊಡೆದ. ಅವನ ನಿತ್ಯದ ಲಯವನ್ನು ಬದಲಿಸುವ ಅಥವಾ ಅವನನ್ನು ಒರೆಗೆ ಹಚ್ಚಬಲ್ಲ ಪ್ರಸಂಗ ಬಂದಾಗಲೆಲ್ಲ ಅವನು ಬಂಗ್ಲೆಗುಡ್ಡೆಗೆ ಓಡುವುದುಂಟು. ಅಲ್ಲಿಂದ ಕಾಣುವ ಸಮುದ್ರದ ಸುದೂರ ವಿಶಾಲತೆಯೇ ಬೇರೆ. ಅದನ್ನು ನೋಡುತ್ತ ಪಾಳುಬಿದ್ದಿರುವ ಹಳೇ ಟೂರಿಸ್ಟ್ ಬಂಗ್ಲೆಯ ನಿರ್ಜನ ಮೆಟ್ಟಿಲ ಮೇಲೆ ಕೂತರೆ ಆವರಿಸುವ ನೀರವವೆ ಬೇರೆ. ಎಡಕ್ಕೂ ಬಲಕ್ಕೂ ಗುಂಪು ಗುಂಪಾಗಿ ಚಾಚಿಕೊಂಡ ಗುಡ್ಡಗಳು. ಮಂಜು, ಮೋಡ ಇತ್ಯಾದಿಗಳನ್ನು ಅವಲಂಬಿಸಿ ಅವುಗಳ ಬಣ್ಣ ಬಯಲಾಗುತ್ತಿರುತ್ತದೆ. ಒಂದೊಂದು ಸಲ ಅತೀ ದೂರದ ಹಿಂದಿನ ಸಾಲಿನ ನೆತ್ತಿಗಳೂ ಸ್ಪಷ್ಟವಾಗಿ ಗೋಚರಿಸುತ್ತವೆ. ಇನ್ನೊಮ್ಮೆ ನಾವು ಈವತ್ತು ಆಟಕ್ಕಿಲ್ಲ ಎನ್ನುವಂತೆ ಅವು ಅಸ್ಪಷ್ಟವಾಗಿ ಹಿನ್ನೆಲೆಯಲ್ಲಿ ಮರೆಯಾಗಿರುತ್ತವೆ. ಎದುರಿನ ಕಿನಾರೆ ಗಾಳಿ ಮಾತ್ರ ಎಲ್ಲ ಗುಡ್ಡಗಳ ನೆತ್ತಿಯನ್ನೂ ಸತತವಾಗಿ ಮಾಲೀಶು ಮಾಡುತ್ತ ಇಲ್ಲಿಯ ಸಕಲವನ್ನೂ ಒಂದೇ ಶ್ರುತಿಗೆ ಹದಗೊಳಿಸುತ್ತಿರುತ್ತದೆ. ಇಲ್ಲಿ ಕೂತರೆ ಸಾಕು, ಪ್ರಶ್ನೆಗಳೆಲ್ಲ ಬಾಲ ಮುದುರಿಸಿಕೊಂಡು, ತಿಳಿಯುವ ಮೊದಲೇ ಮಾಯವಾಗಿರುತ್ತವೆ. ಹೊರಟು ನಿಂತಾಗ, ಈ ಗಾಳಿಯನ್ನು ಇಲ್ಲೇ ಬಿಟ್ಟು ಹೋಗುತ್ತಿದ್ದೇನಲ್ಲ ಎಂಬಂಥ ವಿಚಿತ್ರ ಬೇಜಾರಾಗುತ್ತದೆ. ಎಂದಿನಂತೆ, ಒಂದಿಷ್ಟು ಹೊತ್ತು ಸುಮ್ಮನೆ ಕೂತ ವಿಹಂಗಮ, ಚೀಲದಿಂದ ಮೆಲ್ಲಗೆ ರಟ್ಟಿನ ಪೆಟ್ಟಿಗೆಯನ್ನು ಹೊರತೆಗೆದ. ಬೆಳ್ಳನೆ ಮೃದು ದಪ್ಪನೆ ಶೂ, ಬಿಲದಿಂದ ಹೊರಬಂದ ವಿಧೇಯ ಮೊಲದ ಮುದ್ದು ಜೋಡಿಯಂತೆ ಕಾಣುತ್ತಿತ್ತು. ಮಾದೇವಕ್ಕೋರ ಆಪ್ತತೆ ಅದಕ್ಕಿದ್ದರೂ, ಯಾಕೋ ಈ ಬಂಗ್ಲೆಗುಡ್ಡೆಯ ನ್ಯಾಯಸ್ಥಾನದಲ್ಲಿ ಅದು ತುಸು ವಿಚಿತ್ರ ಪರದೇಶಿಯಂತೆಯೂ ಕಾಣತೊಡಗಿತು. ಅದನ್ನು ಹಾಕಿ, ತನಗೆ ಸರಿ ಹೋಗುತ್ತದೋ ಎಂಬುದನ್ನು ನೋಡುವ ಮೊದಲೇ ಅದರ ಅಂದ ಚಂದವನ್ನು ಆಸ್ವಾದಿಸುತ್ತ ಕೂರುವುದು ಮಳ್ಳತನ ಅನಿಸಿ, ವಿಹಂಗಮ ಅದರ ಲೇಸುಗಳನ್ನು ಸಡಿಲ ಮಾಡತೊಡಗಿದ. ಆ ಶೂ ಮಾದೇವಕ್ಕೋರನ್ನು ಒಂದಿಷ್ಟು ಅಡ್ಡಾಡಿಸಿದೆ ಎಂಬ ಭಾವನೆಯಿಂದಾಗಿ ಅವನಿಗೆ ಅವುಗಳ ಕುರಿತು ವಿನೀತ ಭಾವನೆ ಮೂಡತೊಡಗಿತು. ಅವರ ಚರಣಗಳೇ ತನ್ನ ಕೈಲಿವೆ ಅನಿಸಿ ಬಾಯೊಡೆಯದ ಕೃತಜ್ಞತೆಯೊಂದು ಅವನಲ್ಲಿ ಉಕ್ಕತೊಡಗಿತು. ಪಿಯುಸಿಯ ನಂತರ ವಿಹಂಗಮ ಶಿಕ್ಷಣ ಮುಂದುವರೆಸಲಿಲ್ಲ ಅಂತ ಸೈಕಲ್ ಶಾಪ್ ತನಕ ಬಂದು, ಅಲ್ಲಿ ನೀರಿನಲ್ಲಿ ಟ್ಯೂಬ್ ಅದ್ದಿಸಿ ಗುಳ್ಳೆಗಳನ್ನು ನೋಡುತ್ತಿದ್ದ ಅವನ ಅಪ್ಪನನ್ನು ತರಾಟೆಗೆ ತೆಗೆದುಕೊಂಡ ಅಕ್ಕೋರು, ಸಿಕ್ಕಾಗೆಲ್ಲ ಕರೆಸ್ಪೊಂಡೆನ್ಸ್ ಕೋರ್ಸ್ ಮಾಡು ಅಂತ ತಲೆ ತಿನ್ನುತ್ತಿದ್ದರು. ಒಂದ್ ನಮೂನೆ ವಾತ್ಸಲ್ಯದ ಹಕ್ಕು ಅವರದು.

ತುಂಬ ನಾಜೂಕಾಗಿ, ಹೇಳಿ ಮಾಡಿಸಿದಂತೆ ವಿಹಂಗಮನ ಸಪೂರ ಪಾದಗಳು ಅಕ್ಕೋರ ಶೂಗಳಲ್ಲಿ ಕೂತುಕೊಂಡವು. ಅಬ್ಬಾ... ನಂಬಿಕೆಯೇ ಆಗುತ್ತಿಲ್ಲ... ಲೇಸುಗಳನ್ನು ಬಿಗಿದು ಕಟ್ಟುವ ಮೊದಲೇ ವಿಹಂಗಮ ಉತ್ಸಾಹ ತಡೆಯಲಾಗದೆ ಎದ್ದು ನಿಂತ. ದಿಂಬಿನ ಮೇಲೆ ನಿಂತಷ್ಟೇ ಸ್ವಪ್ನಸದೃಶ ಮೃದುತ್ವ... ಕಣ್ಣಿಗೆ ಹೊಸ ಕಪ್ಪು ಕನ್ನಡಕ ಹಾಕಿಕೊಂಡಾಗ ಎದುರಿಗಿದ್ದದ್ದು ಬೇರೆಯೇ ಆಗಿ ತೋರುವಂತೆ, ತೊಟ್ಟ ಹೊಸ ಪಾದರಕ್ಷೆಯಿಂದ ನಿಂತ ನೆಲೆಯೇ ಬದಲಾದಂತೆ ಅವನಿಗೆ ಅನಿಸಿತು. ಸಣ್ಣಗೆ ಹಾಗೇ ಕುಪ್ಪಳಿಸುತ್ತ ಮೆಟ್ಟಿಲಿನಿಂದಿಳಿದ. ಹಿಂದೆ ಮುಂದೆ ಕ್ರೀಡಾಪಟುವಿನಂತೆ ಸ್ವಲ್ಪ ಓಡಿ ಮತ್ತೆ ಮೆಟ್ಟಿಲ ಮೇಲೆ ಕಾಲಿಟ್ಟು ಲೇಸನ್ನು ನಾಜೂಕಾಗಿ ಬಿಗಿದ. ಪಕ್ಕದಲ್ಲೇ ಇದ್ದ ವಾಚಮನ್ ಬಿಡಾರದ ಒಂದೆರಡು ಕೋಳಿಗಳು ತಮ್ಮದೇ ಗತ್ತಿನಲ್ಲಿ ಕೊಕ್ಕೊಕ್ಕೊ ಎಂದು ಓಲಾಡುತ್ತ ಸಮೀಪ ಬಂದವು. ಬಿಗಿದ ಶೂಸಲ್ಲಿ ಅವನು ಇನ್ನೊಮ್ಮೆ ಕುಪ್ಪಳಿಸಿದಾಗ ಭೂಕಂಪವಾದಂತೆ ದೂರ ಓಡಿಹೋದವು.

ವಿಹಂಗಮನಿಗೆ ಶಾಲಾ ದಿನಗಳ ನೆನಪೊಂದು ಒತ್ತರಿಸಿ ಬಂತು. ಅವರ ಪಕ್ಕದ ಮನೆಯಲ್ಲಿ ಉಪ್ಪೋಣಿ ಎನ್ನುವ ಕುಟುಂಬ ಬಿಡಾರಕ್ಕಿತ್ತು. ಅವರ ಮನೆಗೆ ಎರಡು ವರುಷಕ್ಕೊಮ್ಮೆ ಮುಂಬಯಿಯಿಂದ ಅವರ ಸಂಬಂಧಿಕರು ಬರುತ್ತಿದ್ದರು. ಆ ಸಂಬಂಧಿಕರ ಪುಟ್ಟ ಮಕ್ಕಳಿಗೂ ಮುದ್ದಾದ ಬಣ್ಣ ಬಣ್ಣದ ಶೂಗಳು ಇರುತ್ತಿದ್ದವು. ತಿಂದುಬಿಡಬೇಕೆನಿಸುವಷ್ಟು ಅವು ಚಂದವಾಗಿರುತ್ತಿದ್ದವು. ಅವರ ಜೊತೆ ಆಟವಾಡಲು, ಅವರಿಗೆ ಸಮುದ್ರ ಬೇಲೆ ಸುತ್ತಾಡಿಸಲು ವಿಹಂಗಮನೂ ಹೋಗುತ್ತಿದ್ದ. ಬೇಲೆಯಲ್ಲಿ ಆಡಿ ಬಂದ ಮೇಲೆ ಹೊಯಿಗೆ ತುಂಬಿರುತ್ತಿದ್ದ ಆ ಶೂಗಳನ್ನು ರಾಮತೀರ್ಥದ ನೀರಿನ ಧಾರೆಯಲ್ಲಿ ಹಿಡಿದರೆ ತೊಳೆಯುವುದು ಸುಲಭ ಎಂದು ಸಲಹೆ

ಕೊಟ್ಟು ಆ ಮಕ್ಕಳ ತಾಯಿಯನ್ನು ಇವನೇ ಸಂಪ್ರೀತಗೊಳಿಸಿದ್ದ. ರಾತ್ರಿ ಊಟ ಆದ ಮೇಲೆ ಅವರ ಅಂಗಳದಲ್ಲಿ ಅವರ ಹಾಡು ಜೋಕು ಆದ ಮೇಲೆ ಅವರೆಲ್ಲರ ಫರಮಾಯಿಶ್ ಮೇಲೆ ಯಕ್ಷಗಾನದ ಕುಣಿತವನ್ನೂ ಮಾಡಿ ತೋರಿಸುತ್ತಿದ್ದ. ಅವರೆಲ್ಲ ಹೊರಡುವ ದಿನ ಅವರ ತಾಯಿ "ಮುಂದಿನ ಸಲ ನಿನಗೆ ಬೂಟು ತರುತ್ತೇವೆ. ನಿನ್ನ ಕಾಲಿನ ಮಾಪು ಕೊಡು" ಎಂದು 'ಸಂಯುಕ್ತ ಕರ್ನಾಟಕ'ದ ಮೇಲೆ ಅವನನ್ನು ನಿಲ್ಲಿಸಿ ಬಾಲ್ ಪೆನ್ನಿನಿಂದ ಅವನ ಪಾದದ ಮಾಪನ್ನು ತೆಗೆದುಕೊಳ್ಳುತ್ತಿದ್ದರು. ಆ ಬಾಲ್ ಪೆನ್ನು ಬೆರಳುಗಳ ನಡುವೆ ಮಾಡಿದ ಕಚಗುಳಿಯನ್ನು ಈಗಲೂ ಆತ ಅನುಭವಿಸಬಲ್ಲ. ಆದರೆ ಅವರು ಮುಂದಿನ ಬಾರಿ ಬಂದಾಗ ತಪ್ಪದೇ ಅದನ್ನು ಮರೆತಿರುತ್ತಿದ್ದರು. ಮತ್ತು ಅವನಿಗೆ ಸಮಾಧಾನ ಮಾಡುವಂತೆ "ನಿನ್ನ ಮಾಪು ಎರಡು ವರುಷ ಹಳೆಯದಾಯ್ತಲ್ಲ, ನಿನ್ನ ಕಾಲಳತೆ ಈಗ ದೊಡ್ಡದಾಗಿರಬಹುದಲ್ಲ. ಅದಕೇ ತರ್ಲಿಲ್ಲ, ಈ ಸಲ ಫ್ರೆಶ್ ಮಾಪು ಕೊಡು" – ಎಂದು ಮತ್ತೆ 'ಸಂಯುಕ್ತ ಕರ್ನಾಟಕ'ದ ಮೇಲೆ ನಿಲ್ಲಿಸುತ್ತಿದ್ದರು. ಮತ್ತೆ ಹೊಸ ಆಸೆಯಿಂದ ವಿಹಂಗಮ ಬೆರಳ ಸುತ್ತ ಚಲಿಸುವ ಬಾಲ್ ಪೆನ್ನನ್ನು ತಟಸ್ಥನಾಗಿ ನೋಡುತ್ತ ನಿಲ್ಲುತ್ತಿದ್ದ. ಈ ಚಟುವಟಿಕೆಯಿಂದ ವಿಹಂಗಮನ ಅಮ್ಮನಿಗೆ ಮೂಕ ಸಂಕಟವಾಗುತ್ತಿತ್ತು. "ಮರ್ಯಾದೆಯಿಲ್ಲ ನಿನಗೆ.. ಕುಣಿ ಅವರ ಹಿಂದೆ" ಎಂದು ಗೊಣಗುತ್ತಿದ್ದಳು. ಎಲ್ಲರ ಕಣ್ಣಿನ ಕೇಂದ್ರವಾಗಿ, ಪದಕ ಗೆದ್ದವನಂತೆ ಪೇಪರ್ ಮೇಲೆ ನಿಂತ ಆ ಕ್ಷಣ, ತನಗೆ ಗೊತ್ತಿರದ ಆದರೆ ತನಗೆ ಸಂಬಂಧ ಪಡಬೇಕಾದ ಇನ್ನಾವುದೋ ಲೋಕಕ್ಕೆ ತನ್ನನ್ನು ಕಿಂಚಿತ್ ತಾಗಿಸುವಂತಿರುವ ಆ ಕ್ಷಣ, ಅವನಿಗೆ ಕೊಡುತ್ತಿದ್ದ ಖುಷಿ ಸಣ್ಣದಾಗಿರಲಿಲ್ಲ. ಅವನ ದೋಸ್ತ ವೆಂಕಟಿಯ ಹುಟ್ಟಿದ ಹಬ್ಬದ ದಿನ ವೆಂಕಟಿಯ ಮನೆಯಲ್ಲಿ ಪುಟ್ಟ ಸಂಭ್ರಮ ಇರುತ್ತಿತ್ತು. ವೆಂಕಟಿ ಹೊಸ ಅಂಗಿ ಹಾಕಿ ಕೂತಿರುತ್ತಿದ್ದ. ಅವನ ಅಕ್ಕ ಪಕ್ಕದಲ್ಲಿ ವಿಹಂಗಮನನ್ನು ಮತ್ತು ಇತರ ಗೆಳೆಯರನ್ನು ಕೂರಿಸಿ ವೆಂಕಟಿಯ ಅಮ್ಮ ಆರತಿ ಬೆಳಗುತ್ತಿದ್ದರು. ವೆಂಕಟಿಗೆ ಬೆಳಗಿ ಆದ ನಂತರ ಇತರ ಮಕ್ಕಳ ಮೊಗದೆದುರೂ ಒಂದು ಬಾರಿ ಸುತ್ತಿಸುತ್ತಿದ್ದರು. ಅದು ತನ್ನ ಮೊಗದೆದುರು ಬೆಳಗುವಾಗ ವಿಹಂಗಮನಿಗೆ ಏನೋ ಒಂದು ನಮೂನಿ ಆಗುತ್ತಿತ್ತು. ಅದೂ ಕೂಡ ಈ ಪೇಪರ್ ಮೇಲೆ ನಿಂತ ಕ್ಷಣದಂತೆಯೇ ಇತ್ತು. ಮತ್ತು ಅದರಲ್ಲೊಂದು ಅಮೂಲ್ಯವಾದ ಮುಜುಗರವಿತ್ತು. ಇಂಥ ಮುಜುಗರ ಅವನನ್ನು ಇನ್ನೂ ಪ್ರಶಾಂತಗೊಳಿಸುತ್ತಿತ್ತು. ಆಗ ಸುತ್ತಲಿನವರು – "ಯಾಕೊ? ಮರ್ಯಾದೆ ಆಯ್ತೇನೋ" ಎಂದೆಲ್ಲ ಮುಗಿಬೀಳುತ್ತಿದ್ದರು. ಆಗ 'ಇಲ್ಲ' ಅನ್ನಬೇಕೋ 'ಹೌದು' ಅನ್ನಬೇಕೋ ಅಂತ ತಿಳಿಯುತ್ತಿರಲಿಲ್ಲ.

ಅಪ್ಪನ ಸೈಕಲ್ ಶಾಪಿನಲ್ಲಿ ಒಂದು ಮಧ್ಯಾಹ್ನ ವಿಹಂಗಮ ಇದ್ದಾಗಲೇ ಏನಾಯಿತೆಂದರೆ, ದೇವರ ಭಾವಿಯ ಕಡೆಯವರೊಬ್ಬರು ಅವಸರದಿಂದ ಸೈಕಲನ್ನು ಅಂಗಡಿಯೆದುರು ನಿಲ್ಲಿಸಿ – "ವಿಠೋಬಾ.. ಪಂಚಾಯತದಲ್ಲಿ ಕೆಲಸ ಉಂಟು. ಮುಗಿಸಿ ಬರೂದ್ರೊಳಗೆ ಚೇನು ಸಾಫ್ ಮಾಡಿಕೊಡು. ಮುಂದಿನ ಬ್ರೇಕೂ ತಾಗೂದಿಲ್ಲ. ಅದ್ನೂ ಸಲ್ಪ ನೋಡು" – ಎಂದು ಮಾಯವಾದರು. ಅದಾದ ಕೆಲವೇ ಹೊತ್ತಿನಲ್ಲಿ ಮತ್ತೆ ಹಾಜರಾಗಿ "ರೆಡಿ ಇಲ್ಲಾ? ರೆಡಿ ಇಲ್ಲಾ? " – ಎಂದು ದಾಂಧಲೆ ಹಾಕತೊಡಗಿದರು. ಅದಾಗಲೇ ಆ ಚೇನನ್ನು ಎಣ್ಣೆಯಲ್ಲಿ ನೆನೆಹಾಕಿದ್ದ ಅಪ್ಪ – "ಗಡಿಬಿಡಿ ಮಾಡದ್ರೆ ಆಗೂದಿಲ್ಲಾ ಇವರೆ" – ಎಂದಿದ್ದೇ, ಆ ವ್ಯಕ್ತಿ ತಾಂಡವ ನೃತ್ಯವನ್ನೇ ಮಾಡಿಬಿಟ್ಟರು. ಬಾಯಿಗೆ ಬಂದ ಹಾಗೆ ಬೈಯತೊಡಗಿದರು ಮತ್ತು ನಡುವೆ ವಿಹಂಗಮನ ಕಡೆ ಬೆಟ್ಟು ಮಾಡಿ "ಸಾಕ್ಷಿ ಬೇಕಿದ್ರೆ ಈ ಪೋರ ಇದ್ದಾನೆ. ಹೇಳೋ ಪೋರಾ, ನಾನು ಬರೂದ್ರೊಳಗೆ ರೆಡಿ ಇರಬೇಕೂ ಅಂತ ಹೇಳಿದ್ನೋ ಇಲ್ವೋ ನಾನು? ಹೇಳು ನಿನ್ನ ಅಪ್ಪಗೆ" – ಎಂದು ಅಪ್ಪನ ವಿರುದ್ಧವೇ ಸಾಕ್ಷಿಯ ಕಟಕಟೆಗೆ ನೂಕತೊಡಗಿದರು. ವಿಹಂಗಮನಿಗೆ ಆ ಕ್ಷಣ ಎಲ್ಲಿ ನೋಡಬೇಕೆಂದೇ ತಿಳಿಯಲಿಲ್ಲ. ಮತ್ತು ತನ್ನ ಹಾಜರಿಯಿಂದಲೇ ಈ ಪ್ರಸಂಗ ಇನ್ನೂ ಹದಗೆಡಬಹುದು ಎಂಬಂತೆ, ಏನೋ ಕೆಲಸ ನೆನಪಾದವನಂತೆ ಅಲ್ಲಿಂದ ಎದ್ದು ಮಾಯವಾಗಿಬಿಟ್ಟ. ಕಣ್ಣಿಂದ ಮರೆಯಾದ ತಕ್ಷಣ, ಕರೆಂಟ್ ಹೋದಾಗ ಲೌಡ್ ಸ್ಪೀಕರ್ ಬಂದಾಗುವಂತೆ, ಕರ್ಕಶ ಪ್ರಸಂಗ ಕಿವಿಯಿಂದಲೂ ಮರೆಯಾಗಿಬಿಟ್ಟಿತು. ಆದರೆ ಆ ವ್ಯಕ್ತಿಯ ಹಠಾತ್ ಏರುದನಿಗೆ ಅಪ್ಪ ತುಸು ಗಲಿಬಿಲಿಗೊಂಡು ವಿನೀತನಾದ ಕ್ಷಣ ವಿಹಂಗಮನಲ್ಲಿ ಅತೀವ ವ್ಯಾಕುಲ ಮುಜುಗರವನ್ನು ಹುಟ್ಟಿಸಿತ್ತು. ನಂತರ ನಾಲ್ಕು ಗಂಟೆಗೆ ಮನೆಯಿಂದ ಅಪ್ಪನಿಗೆ ಚಾ ತಗೊಂಡು ಹೋದಾಗ, ಅಪ್ಪ ಎದುರಿನ ಐಸ್‌ಕ್ರೀಂ ಅಂಗಡಿಯ ತ್ರಯಂಬಕನೊಂದಿಗೆ ಜೋರಾಗಿ ನಗೆಯಾಡುತ್ತ ಮಾತಾಡುತ್ತಿದ್ದ. ಅದನ್ನು ನೋಡಿಯೇ ಮನ ಹಗುರಾಯಿತು. ಚಾ ಕುಡಿಯುತ್ತ "ಎಂತಕೆ ಓಡ್‌ಹೋದೆ ನೀನು. ಅವರ ಪಂಚಾಯತ್ ಕೆಲಸಾ ಆಗ್ಲಿಲ್ಲ. ನನ್ ಮೇಲೆ ಆ ಸಿಟ್ ಹಾಕ್‌ತಿದ್ರು ಅವರು" – ಎನ್ನುವ ಅಪ್ಪನ ಮಾತುಗಳು ತನಗಾದ ಅವಮಾನವೊಂದನ್ನು ತನ್ನಿಂದಲೇ ದೂರವಿಡುವ ಅವನ ಯತ್ನದಂತೆ ಕೇಳಿಸುತ್ತಿದ್ದವು. ಅವನು ತ್ರಯಂಬಕನ ಸಂಗಡ ತುಸು ಏರಿಸಿದ ದನಿಯಲ್ಲೇ ಆಡಿದ ನಗುವೂ ಅದೇ ಥರ ಇತ್ತು. "ಸಣ್ ಸಣ್ ವಿಷಯಕ್ಕೆಲ್ಲಾ ಬೇಜಾರ್ ಮಾಡ್ಕಳ್ತೇ ಹೋದ್ರೆ ಮುಗ್ದೇ ಹೋಯ್ತು..." ಎಂದು ಅವನು ತ್ರಯಂಬಕನಿಗೆ ಕೇಳುವಂತೆ ಇನ್ನೊಮ್ಮೆ ದೊಡ್ಡದಾಗಿ ಹೇಳಿದ. ಅದಕ್ಕೆ ತ್ರಯಂಬಕ "ಬೇಜಾರಿಗೆ ಸಣ್ ವಿಷಯಾ, ದೊಡ್ ವಿಷಯಾ ಹೇಳೆಲ್ಲಾ ಇಲ್ವೊ... ಬೇಜಾರು ಬೇಜಾರೇಯಾ..." – ಎಂದ. ವಿಹಂಗಮನಿಗೆ 'ಹೌದಲ್ಲಾ' – ಅನಿಸಿ ಹೋಯಿತು. ಬೇಲೆಯಲ್ಲಿ ಆಡ್ತಾ ಆಡ್ತಾ ಕತ್ತಲಾದ ತಕ್ಷಣ ಆಗುವ ಬೇಜಾರು, ಶಾಲೆಯಲ್ಲಿ ಗಣು ಮಾಸ್ತರ್ರು "ಏನು ಲಕ್ಷ್ಯ ಎಲ್ಲುಂಟು... ಸೈಕಲ್ ಟೈರಿಗೆ ಗಾಳಿ ಹಾಕ್ತಾ ಉಂಟೋ... ಕೊಡೆ ಕಡ್ಡಿ ರಿಪೇರಿ ಮಾಡ್ತಾ ಉಂಟೋ..." ಎಂದು ಛೇಡಿಸಿದಾಗ ಆಗುವ ಬೇಜಾರು... ಇವೆರಡರಲ್ಲಿ ಸಣ್ಣದ್ಯಾವುದು, ದೊಡ್ಡದ್ಯಾವುದು... ಅವರು ಪರೋಕ್ಷವಾಗಿ ಗೇಲಿ ಮಾಡಿದ್ದು ಅಪ್ಪನ ನಿತ್ಯದ ಕಸುಬನ್ನು ಎಂದು ಮನಸ್ಸಿಗೆ ಬಂದಾಗ ಮಾಸ್ತರರ ಮೇಲೆ ಸಿಟ್ಟೇ ಬರುತ್ತಿತ್ತು. ಆದರೆ ಅದೇ ಮಾಸ್ತರರು ಬಸ್‌ಸ್ಟಾಂಡ್ ಪಕ್ಕದ ರೇಶನ್ ಅಂಗಡಿಯಲ್ಲಿ ಇನ್ನೂರು ಗ್ರಾಂ ಸಕ್ಕರೆಗೆ ತಮ್ಮ ಬಿಳೀ ಚೀಲವನ್ನು ಅಗಲಿಸಿ ತಕ್ಕಡಿಯ ಬಾಯಿಯ ಎದುರು ಸೆರಗೊಡ್ಡಿ ನಿಂತಾಗ ನೋಡಲು ತುಂಬಾ ಮುಜುಗರವಾಗುತ್ತಿತ್ತು. ಎಷ್ಟೇ ಅವಸರದಿಂದ ಕಣ್ಣು ತಪ್ಪಿಸಿ ಬೇರೆ ಕಡೆ ನೋಡಿದರೂ ಇಂಥ ಕೆಲವು ಚಿತ್ರಗಳು ಶಾಶ್ವತವಾಗಿ ಮನಸ್ಸಲ್ಲಿ ಕೂತೇ ಬಿಡುತ್ತವೆ. ಗುಂಗುರು ಜೋಡಿ ಜಡೆಯ ಸಹಪಾಠಿ, ಚಿನ್ನದ ಕೇರಿಯ ದಿವ್ಯಾ ಸರಾಫ್, ಒಂದು ದಿನ ತನ್ನ ಒಂದು ಕಿವಿಯ ರಿಂಗು ಎಲ್ಲೋ ಬೀಳಿಸಿಕೊಂಡು ಅಳುತ್ತ ಶಾಲೆಯ ದಾರಿಯುದ್ದಕ್ಕೂ ಹುಡುಕುತ್ತ ಬರುತ್ತಿರುವಾಗ ಅನಾಥವಾಗಿ ಅಲ್ಲಾಡುತ್ತಿದ್ದ ಅವಳ ಇನ್ನೊಂದು ಕಿವಿಯ ಚಂದ ರಿಂಗಿನಂತೆ. ಯಾವುದೋ ಅಮೂರ್ತವಾದ ಸಣ್ಣ ಇಶಾರೆ ಸಿಕ್ಕರೂ ಸಾಕು ಮನಸ್ಸಿನ ಟಾಕೀಸಲ್ಲಿ ಸ್ಲೈಡ್ ಶೋ ಶುರುವಾಗಿಯೇ ಬಿಡುತ್ತದೆ... ಮೇನ್ ಪಿಕ್ಚರ್ ಮಾತ್ರ ಯಾವತ್ತೂ ಶುರುವಾಗುವ ಲಕ್ಷಣವೇ ಇಲ್ಲ...

ಬೆಳ್ಳನೆ ಬೂಟು ಕಾಲ್ಗಳನ್ನು ಎರಡೂ ಕಡೆ ಚಾಚಿ ಬಂಗ್ಲೆ ಗುಡ್ಡೆಯ ಶಾರ್ಟ್‌ಕಟ್ ದಾರಿಯಿಂದ ಸೀದಾ ಪೇಟೆಗೇ ಸೈಕಲ್ ಇಳಿಸಿದ ವಿಹಂಗಮನಿಗೆ ಮುಂದೆ ಪೆಡಲ್ ಹೊಡೆಯುವುದು ಒಂದು ಅತ್ಯಂತ ನಾಜೂಕಿನ ಕೆಲಸ ಅನಿಸತೊಡಗಿತು. ಮತ್ತು ಈಗ ಎಲ್ಲಿ ಹೋಗಬೇಕು, ಏನು ಮಾಡಬೇಕು ಎಂಬುದೇ ತಿಳಿಯದಾಯಿತು. ಇಳಿದು ಬಿಟ್ಟರೆ ಮತ್ತೆ ಮಂದಿಯೆದುರು ಬೂಟುಗಾಲಲ್ಲಿ ನಡೆಯಬೇಕು... ಆ ಮುಜುಗರವನ್ನು ಮುಂದೆ ಹಾಕುವಂತೆ ಕೋಟಿತೀರ್ಥಕ್ಕೆ ಎರಡು ರೌಂಡು ಹಾಕಿ ನಾಗಬೀದಿ ಕಡೆಯಿಂದ ಸಮುದ್ರ ಬೇಲೆಗೆ ಬಂದು ಅಲ್ಲಿಂದ ಮತ್ತೆ ಮೀನುಪೇಟೆ ದಾಟಿ ತಾರಮಕ್ಕಿ ಶಾಲೆಯ ದಾರಿಯಿಂದ ಮೇಲಿನ ಕೇರಿ ತಲುಪಿ ಅಲ್ಲಿಯ ಆಲದಕಟ್ಟೆಯ ಕಲ್ಲುಮಟ್ಟಿಲಿಗೆ ಕಾಲುಕೊಟ್ಟು ಏದುಸಿರು ಬಿಡುತ್ತ ನಿಂತ. ಬಂಕಿಕೊಡ್ಲದ ಕಡೆಗೆ ಹೋಗುವ ಬಸ್ಸೊಂದು ಆಗಷ್ಟೆ ಅಲ್ಲಿಂದ ಹೊರಟಿತ್ತು. ಚಾ ದುಕಾನಿನ ಶೆಟ್ರು "ಬಾರೊ ಚಾ ಕುಡಿಯೊ" ಎಂದರು. ಆಕಡೆ ಈಕಡೆ ನೋಡಿ ರಸ್ತೆ ದಾಟಿ ಮಟ್ಟಿಲೇರಿ ವಿಹಂಗಮ ಶೆಟ್ಟರ ಚಾ ದುಕಾನಿನ ಜಗಲಿಯ ಬೆಂಚಿನ ಮೇಲೆ ಕೂತು, ತಾನು ಬೆಳಿಗ್ಗೆಯೇ ಅಲ್ಲಿ ಹಾಕಿದ್ದ ಪೇಪರನ್ನು ಬಿಡಿಸಿ ನೋಡತೊಡಗಿದ. ಶೆಟ್ರಿಗೆ ಬಲಗೈಯಾಗಿ ದುಕಾನು ನೋಡಿಕೊಳ್ಳುತ್ತಿದ್ದ ಶೆಟ್ರ ಹೆಂಡತಿ ಮಾಲಕ್ಕ ಕಾಜಿನ ಕಪಾಟಿನಲ್ಲಿ ಬನ್ಸ್‌ನ್ನು ಸುಂದರವಾಗಿ ಪೇರಿಸುತ್ತಿದ್ದವರು, ಅದನ್ನು ಅರ್ಧಕ್ಕೆ ನಿಲ್ಲಿಸಿ ವಿಹಂಗಮ ಪೇಪರು ಬಿಡಿಸಿ ನೋಡುವ ಭಂಗಿಯನ್ನೇ ಕೌತುಕದಿಂದ ನೋಡಿದಳು. ಮತ್ತು "ಹೆಹೆ.. ನೀನೇ ಹಾಕ್‌ದ ಪೇಪರೋ ಅದು... ಅದ್ರಲ್ಲೆಂತಾ ನೋಡುದು ನೀನು" ಎಂದು ನೆಗೆಯಾಡಿದಳು. ಮತ್ತು ಚಾ ಜೊತೆಗೆ ಒಂದು ಬನ್ಸ್ ತಂದಿಟ್ಟು, ಅವನ ಬೂಟನ್ನು ನೋಡಿ, ತುಟಿ ಹುಬ್ಬು ಗದ್ದ ಎಲ್ಲವನ್ನೂ ವಾರೆ ಮಾಡಿ ಅಲ್ಲಾಡಿಸಿ ಕೌತುಕಭರಿತ ಸಂತೋಷವನ್ನು ತೋರಿಸಿದಳು. ಎಂದಿನಂತಾಗಿದ್ದರೆ ಮೂಲೆಯಲ್ಲಿ ನಿಂತು ಯಾರೋ ಅಟ್ಟಿಸಿಕೊಂಡು ಬರುವವರಿದ್ದಾರೆ ಎಂಬಂತೆ ಸೊರೆ ಸೊರೊ ಎಂದು ಚಾ ಗ್ಲಾಸನ್ನು ಖಾಲಿ ಮಾಡಿ ಓಡುವ ಇಸಮು... ಈವತ್ತು ಹೀಗೆ ಕೂತುಕೊಂಡು ಪೇಪರ್ ಬಿಡಿಸುತ್ತಿರುವಂತಾದ ಜಾದು ಸ್ವತಃ ಅವನಿಗೇ ಕಾಣುವಂಥದಾಗಿರಲಿಲ್ಲ. ಚಟ್ನಿಗೆ ಸೋಕಿಸದೆ ಬಾಯಿಗಿಟ್ಟ ಬನ್ಸ್ ತುಂಬಾ



ಮೃದುವಾಗಿತ್ತು. ಬಾಯಲ್ಲಿ ಬನ್ಸ್ ಮೃದು. ಕಾಲಲ್ಲಿ

ಮೂಲಚಿತ್ರ:

ಅಪಘಾತದಲ್ಲಿ ಹೋಗಿರಬೇಕು ಪಾಪ ಎಂದು ಕೆಳಗೆ 'ಶ್ರದ್ಧಾಂಜಲಿ' ಪದಕ್ಕಾಗಿ ಹುಡುಕಿದರೆ, ಅಲ್ಲಿ "ವಿದೇಶ ಪ್ರಯಾಣ" ಅಂತಿತ್ತು. ಮತ್ತು ಅವರಿಗೆ ಶುಭಯಾನ ಕೋರುವವರ ದೊಡ್ಡ ಯಾದಿಯೇ ಇತ್ತು. ಮತ್ತೊಮ್ಮೆ ಅವರ ಮುಖದ ಕಡೆ ನೋಡಿದಾಗ ಅವರು ಮುಂಚಿಗಿಂತ ಜಾಸ್ತಿ ನಕ್ಕ ಹಾಗೆ ತೋರಿತು. ಇಷ್ಟರಲ್ಲೇ, ನಿರ್ಗಮಿಸಿದ್ದ ಲೈನ್‌ಮನ್ ಮಂಜಣ್ಣನ ಬಗ್ಗೆ ಶೆಟ್ರು ಈಗ 'ಆತ ನಿಜಕ್ಕೂ ಚಲೋ ಮನುಷ್ಯ' ಎಂದು ಹೇಳಲು ತೊಡಗಿದ್ದರು. ಜೋರು ತೂಫಾನೀ ಮಳೆಗಾಳಿಯ ಇರುಳಲ್ಲಿ ಎಲ್ಲೇ ಮರಗಿಡ ಬಿದ್ದು, ವಾಯರ್ ತುಂಡಾಗಿ ಕರೆಂಟ್ ಹೋದರೂ, ನಿದ್ದೆ ಕಣ್ಣಲ್ಲಿ ಎದ್ದು ಬರುವ ಅವನ ನಿಷ್ಠೆ ಎಲ್ಲರಿಗೂ ಗೊತ್ತಿತ್ತು. ಮಳೆಯಲ್ಲಿ ಒದ್ದೆ ಕಂಬ ಹತ್ತಿ ಫ್ಯೂಸು ಹಾಕುವುದು ಕಡಿಮೆ ಸಾಹಸವಲ್ಲ... ತನ್ನ ಪುಟ್ಟ ಮೂರು ವರುಷದ ಮಗನನ್ನು ಸೈಕಲ್ ಮುಂದೆ ಕೂರಿಸಿ ದಿನಕ್ಕೊಮ್ಮೆಯಾದರೂ ಸಮುದ್ರ ಬೇಲೆಗೆ ಬರುವುದನ್ನು ಅವನು ತಪ್ಪಿಸುವುದಿಲ್ಲ. ಹೀಗೆ ಮಗನ ಜೊತೆ ವಿಹಾರಕ್ಕೆ ಬಂದಿದ್ದರೂ ನಡುವೆ ಯಾರಾದರೂ ಬೀದಿ ದೀಪದ ಬಗ್ಗೆ ಹೇಳಿದರೆ ಮಗನನ್ನು ಕೆಳಗೆ ನಿಲ್ಲಿಸಿ ಸರಸರ ಅಂತ ಕಂಬ ಹತ್ತಿ ಅವನು ಟ್ಯೂಬ್‌ಲೈಟನ್ನು ಸರಿಮಾಡಿದ್ದೂ ಇದೆ. ವಿಹಂಗಮನ ಕಣ್ಣಿನಲ್ಲಿ ಕೂತಿರುವ ಮಂಜಣ್ಣನ ಚಿತ್ರವೂ ಅದೇ. ಗಂಜಿಗದ್ದೆಯ ಕಂಬದ ಮೇಲೆ ಹತ್ತಿ ವಾಯರುಗಳನ್ನು ಪಳಗಿದ ಎಚ್ಚರದಿಂದ ಸಲೀಸಾಗಿ ತಿರುಚುತ್ತಿರುವ ಮಂಜಣ್ಣ ಮತ್ತು ಕೆಳಗೆ, ಸೈಕಲ್‌ಗೆ ಆತುಕೊಂಡು, ಮೇಲೆ ಬೆಳಕಿನ ಜೊತೆ ಆಟವಾಡುತ್ತಿರುವ ಅಪ್ಪನನ್ನೇ ಬೆರಗುಗಣ್ಣಿನಲ್ಲಿ ಆ ಎಂದು ನೋಡುತ್ತ ನಿಂತ ಪುಟಾಣಿ ಮಗ. ವಿಹಂಗಮ ಅವನನ್ನು ಎತ್ತಿ ಸೈಕಲ್ ಸೀಟಿನ ಮೇಲೆ ಕೂರಿಸಿ, ಅವನ ಸಂತಿಗೆ ತಾನೂ ಮಂಜಣ್ಣನ ಬೆಳಕಿನ ಕೆಲಸವನ್ನು ಮೈಮರೆತು ನೋಡುತ್ತ ನಿಂತಿದ್ದೂ ಇದೆ. ಕತ್ತಲ ರಾಶಿಯಲ್ಲಿ ಮುಳುಗಿದ್ದ ಇಡೀ ಕೇರಿಯನ್ನು ತನ್ನ ಕೈಚಳಕದಿಂದ ಝಗ್ಗೆಂದು ಬೆಳಗಿಸುವುದೇನು ಸಣ್ಣ ಕೆಲಸವೆ. ಆಗ ಅವನ ಮಗ ತನ್ನ ಪುಟಾಣಿ ಕರಗಳಿಂದ ಚಪ್ಪಾಳೆ ತಟ್ಟುತ್ತಿದ್ದ. ಮತ್ತು "ಚಾಪಾ.." "ಚಾಪಾ.." – ಎಂದು ಮುದ್ದಾಗಿ ಚೀರುತ್ತಿದ್ದ. ಮನೆಯಲ್ಲಿ ಅವನು ಸರಿಯಾಗಿ ತುತ್ತನ್ನು ಉಂಡಾಗ ಎಲ್ಲರೂ "ಶಾಭಾಷ್", "ಶಾಭಾಷ್" – ಎಂದು ಹೇಳಿದ್ದರ ತದ್ಭವ ರೂಪ ಅದು ಅಂತ ನಂತರ ಮಂಜಣ್ಣನಿಂದ ತಿಳಿಯಿತು. ನಂತರ ತುಂಬ ಖುಷಿಯಾದಾಗೆಲ್ಲ ವಿಹಂಗಮನ ಬಾಯಿಗೂ "ಚಾಪಾ.." ಶಬ್ದ ಆ ಪುಟ್ಟ ಕಂದನ ನೆನಪಿನೊಟ್ಟಿಗೇ ಬರತೊಡಗಿತು. ಈ ಮಂಜಣ್ಣನಿಗೆ ನಾಲ್ಕು ಕಂತಿನಲ್ಲಿ 'ಹರ್ಕ್ಯೂಲಸ್' ಸೈಕಲ್ ತರಿಸಿ ಕೊಟ್ಟವನು ಅಪ್ಪನೇ. ವಿಹಂಗಮನಿಗೂ ವಿದ್ಯುತ್ ಇಲಾಖೆಯಲ್ಲಿ ಇಂಥದೇ ಕೆಲಸ ಸಿಗಬಹುದೋ ಎಂದು ಅಪ್ಪ ಮಂಜಣ್ಣನ ಬಳಿ ಕೇಳಿದ್ದೂ ಉಂಟು. ಮಂಜಣ್ಣ ಮಾತ್ರ – "ಬೇಡವೋ ಮಾರಾಯ. ನಾವು ಅನುಭೋಸಿದ್ ಸಾಕು. ಬೇರೆ ಚಲೋ ಕೆಲಸಾ ಮಾಡಲಿ ಅಂವಾ. ಲೈನ್‌ಮನ್ ಕೆಲಸ ಹೆಂಗೆ ಅಂದ್ರೆ, ಒಂದ್ಸಲ ಲೈಟ್ ಬಂದ ಮೇಲೆ ಯಾರಿಗೂ ನಮ್ ನೆನಪಾಗೂದೇ ಇಲ್ಲಾ" – ಎಂದು ಕೈ ಅಲ್ಲಾಡಿಸಿಬಿಟ್ಟ.

ವಿಹಂಗಮ ಮೆಲ್ಲಗೆ ಎದ್ದು ಚಾ ದು ಕಾನಿನಿಂದ ಕೆಳಗಿಳಿಯುವಷ್ಟರಲ್ಲಿ ಸ್ಪರ್ಧೆಗೆ ಬಿದ್ದವರಂತೆ ಒಂದರ ಹಿಂದೆ ಒಂದು ಮೂರು ಬೆಂಗಳೂರು ಬಸ್ಸುಗಳು ಬಂದು ರೌಂಡ ಹಾಕಿ ನಿಂತವು. ಆಟೋದವರು 'ಓಂ ಬೀಚ್.. ಓಂ ಬೀಚ್.." – ಎನ್ನುತ್ತ ಬಸ್ಸು ನಿಂತ ಕಡೆ ಓಡಿದವು. ಮತ್ತು ಅರ್ಧಮರ್ಧ ಶಾಪ ವಿಮೋಚನೆ ಆದವರಂತೆ ಕಾಣುವ ಪ್ರವಾಸಿಗಳು ಇಳಿದು ಬರಲಾರಂಭಿಸಿದರು. ಬೆಂಗಳೂರಲ್ಲಿ ನೌಕರಿ ಮಾಡುವವರು, ವಾರಾಂತ್ಯದ ಪಿಕ್‌ನಿಕ್ ಅಂತ ಬರುವವರು, ಅಥವಾ ಬೆಂಗಳೂರಿನಲ್ಲಿ ಬಿಡಾರ ಹೂಡಿರುವ ಮಕ್ಕಳ ಮನೆಗೆ ಹೋಗಿ 'ಚೆಕಪ್' ಮಾಡಿಸಿಕೊಂಡ ಸ್ಥಳೀಯರು, ದೇವರ ದರ್ಶನಕ್ಕೆ ಅಂತಲೇ ಬಂದ ಯಾತ್ರಾರ್ಥಿ ಕುಟುಂಬಗಳು... ಹೀಗೆ ನಾನಾ ನಮೂನಿಯ ಜನ ಚದುರಿ ಹೋಗುತ್ತಿದ್ದರು... ಒಂದು ಚೀಲದಿಂದ ಬೇರೆ ಊರಿನ ಕಾಯಿಪಲ್ಲೆಯನ್ನು ತಂದು ಇಲ್ಲಿ ಉದುರಿಸಿದಂತೆ ಕಾಣುತ್ತಿತ್ತು. ಕೆಲವು ಉರುಳಿ ಹೋಗುತ್ತಿದ್ದವು... ಕೆಲವು ಬಿದ್ದಲ್ಲೇ ಇದ್ದವು... ಹೆಚ್ಚಿನ ಯುವಕರ ಕಾಲುಗಳಲ್ಲಿ ಬಿಳೀ ಬೂಟುಗಳಿದ್ದವು. ಸಾಲಾಗಿ ರಸ್ತೆ ಬದಿಗೆ ಮಾರಾಟಕ್ಕೆಂದು ಬುಟ್ಟಿಯಲ್ಲಿ ಕಾದಿರುವ ಕೆಂಪು ಹರಗಿ ಸಪ್ಪು, ಬಸಳೆ ಸಪ್ಪು, ನುಗ್ಗೀದಡಿ, ಪಟ್ಲಕಾಯಿ, ಬೇರಹಲಸು, ಮೂರೇ ಮೂರು ಗಾಂವಟಿ ಮೊಟ್ಟೆ...ಗಳ ನಡುವೆ ನಡೆದ ಆ ಬೂಟುಗಳು, ನಾಗರಿಕ ಪ್ರದೇಶಗಳಲ್ಲಿ ದಾಳಿಗೆ ಬಂದ ಸೇನಾ ತುಕಡಿಗಳಂತೆ ಕಾಣುತ್ತಿದ್ದವು. ಅವು ಹೊರಡಿಸುವ ಸದ್ದಿನಲ್ಲೇ ಅವುಗಳ ಮಾತು ಕೇಳಿಸಿದಂತೆ ಆಗುತ್ತಿತ್ತು. ಆ ನುರಿತ ಪಳಗಿದ ಇಂಗ್ಲಿಷ್ ಮೀಡಿಯಂ ಬೂಟುಗಳೆದುರು ಏನೇನೂ ಚಿತ್ತುಕಲೆಯಿಲ್ಲದ

**ಅದಕ್ಕೆ ಹುಬ್ಬಳ್ಳಿ ಮಾಮಾ – "ಯೆಸ್ ಯೆಸ್ ಊರಲ್ಲಿ ಟೂರಿಸಂ ಬೆಳೀತಾ ಉಂಟು. ಇಂಟರ್‌ನೆಟ್, ಸಿಮ್‌ಕಾರ್ಡ್ ಅಂಗಡಿ ತೆಗಿಬಹುದು. ಈ ಫೊರೆನರ್ಸಿಗೆ ದೇಶಿ ವಸ್ತುಗಳ ಬಗ್ಗೆ ಆಕರ್ಷಣೆ ಇರ್ತದೆ. ಪ್ಯಾಕೆಟ್ಟಲ್ಲಿ ಬರೂ ಹಾಲನ್ನೇ ಯಾವುದೋ ಹಳೇ ಬಾಟಲಿಲಿ ಹಾಕಿ "ಲೋಕಲ್ ನ್ಯಾಚುರಲ್ ಮಿಲ್ಕ್" ಎಂದು ಬಿಟ್ಟರೆ, ಬೆರಣಿ ಪುಡಿನ ಟೂಥ್‌ಪೌಡರ್ ಅಂದರೆ ಡಬಲ್ ದುಡ್ಡು ಕೊಡ್ತಾರೆ. ಯೆಸ್ ಯೆಸ್. ಏನಾದರೂ ಇಲ್ಲೇ ಬಿಸಿನೆಸ್ ಶುರುಮಾಡು. ಬೇಕಿದ್ರೆ ನಾನು..." ಎಂದು ಲೊಚಗುಟ್ಟಿದ.**

ವಿಹಂಗಮನ ಹೊಸ ಬೂಟು ಈಗಷ್ಟೆ ಮೀಯಿಸಿದ ಸರ್ಕಾರಿ ದವಾಖಾನೆಯ ನವಜಾತ ಶಿಶುವಿನಂತೆ ಇತ್ತು.


ಚಿಟಿಕೆ ಬಾರಿಸುವುದರೊಳಗೆ ವಿಹಂಗಮ ಮನೆಯಲ್ಲಿದ್ದ. ಸೈಕಲ್ಲನ್ನು ಪಾಗಾರಕ್ಕೆ ಆನಿಸಿ, ದಣಪೆ ದಾಟಿ ಒಳಬರುತ್ತಿದ್ದ ಮಗನ ಹೊಸ ನಡಿಗೆಯನ್ನು ಕಂಡು ಪಾರ್ವತಕ್ಕನಿಗೆ ಅಳುವೇ ಬಂದು ಹೋಯಿತು. ತನ್ನೆದುರು ಕೂಡ ಒಂದು ರೀತಿಯ ಸಿಗ್ಗಿನಲ್ಲಿ ಮುದುಡಿ ಬರುತ್ತಿದ್ದ ಪೋರನನ್ನು ನೋಡುತ್ತ... ಇವನನ್ನು ಊರಿಗೇ ಕಟ್ಟಿಹಾಕಿಬಿಟ್ಟೆವಲ್ಲ ಅನಿಸಿ, ಧಳ ಧಳ ದುಃಖ ಒತ್ತರಿಸಿ ಬಂತು... ಏನೇನೆಲ್ಲ ಉಕ್ಕಿ ಬಂತು. ಮದುವೆಗೆ ಕರೆಯಲು ಬರುವ ನೆಂಟನಂತೆ ಕಂಡ ಮಗನನ್ನು ಚಿಟ್ಟೆಯ ಮೇಲೆ ಕೂರಿಸಿ ಮುದ್ದು ಮಾಡಿದಳು. ಹೋದ ವರ್ಷ ಹುಬ್ಬಳ್ಳಿಯ ಅಣ್ಣ "ಅವನನ್ನು ಕಳಿಸಿಕೊಡು, ನಾನಾ ನಮೂನಿಯ ಕೆಲಸಗಳು ಈಗ ಸಿಗ್ತಾವೆ" – ಎಂದು ಹೇಳಿ ಹೋಗಿದ್ದ. "ಬೇಡ ಬೇಡ, ಅವನ ಋಣಾ ಬೇಡವೇ ಮಾರಾಯ್ತಿ. ಅವನ ಮಗಂದು ಇವಂದು ಒಂದೇ ಕ್ಲಾಸು. ಅವನಿಗೆ ಚಲೋ ಕಾಲೇಜಲ್ಲಿ ಪಿಯುಸಿ ಓದ್ಸುವಾಗ ಇವನ ನೆನಪೆಂತಕ್ಕೆ ಆಗಲಿಲ್ಲ. ಇವನನ್ನ ಮುಂದೆ ಓದ್ಸು ಹೇಳಿ ಒಂದ್ ಮಾತಾದ್ರೂ ಆಡದ್ನೋ? ಅವರ ಮನೆಗೆ ಕಲರ್ ಟಿವಿ ತಗಂಡ ಮೇಲೆ, ಹಳೆ ಟೀವಿ ನಮಗೆ ಬೇಕೋ ಅಂತ ಕೇಳೂ ಮನಷ್ಯಾ ಅಂವಾ. ಅವನ ಮಗನ ಹಳೆ ಶರ್ಟು, ಪ್ಯಾಂಟು ತಂದು ಕೊಡ್ತಾ. ಒಂದ್ ಸಲಾನಾದ್ರೂ ಒಂದು ಹೊಸಾ ಶರ್ಟು ತಂದ್ ಕೊಡಬೇಕು ಅಂತ ಅನಸುದಿಲ್ಲಾ ಅವನಿಗೆ? ಮನೆ ಮಂದಿ ಹೌದು. ಆದ್ರೂ.." – ಎಂದು ವಿಠೋಬ ಪಟ್ಟು ಹಿಡಿದು ವಿಹಂಗಮನನ್ನು ಹುಬ್ಬಳ್ಳಿಗೆ ಹೋಗದಂತೆ ತಡೆದ. ರಜಾ ದಿನಗಳಲ್ಲಿ ಸಕುಟುಂಬ ಸಪರಿವಾರ ಸಮೇತ ಬರುವ ಈ ಹುಬ್ಬಳ್ಳಿ ಮಾವಾ ದಿನಾ ಸಮುದ್ರ ಬೇಲೆಯ ಚಿಂತು ಹೋಟಲಿನಲ್ಲಿ ಬೃಹತ್ ಗಾತ್ರದ ಪುರಿಭಾಜಿ, ಐಸ್‌ಕ್ರೀಮು – ಕುಟುಂಬಕ್ಕೆ ತಿನಿಸುತ್ತಿದ್ದ. ಒಂದ ಸಲವೂ ಅಮ್ಮನಿಗೆ ಕರೆಯುವುದಿರಲಿ, ಕಟ್ಟಿಸಿಕೊಂಡೂ ಬರುತ್ತಿರಲಿಲ್ಲ. ಅಪ್ಪನ ಕಣ್ಣಲ್ಲಿ ಕಣ್ಣಿಟ್ಟು ಅವನು ಮಾತನಾಡುವುದು ಅಪರೂಪವೇ. ಆದರೂ ಒಂದು ಸಲ ಬಾಯಿಬಿಟ್ಟು – "ಇಂವ ಮುಂದೆ ಎಲ್ಲಿ ಹೋಗ್ತಾ? ಎಂತಾ ಮಾಡ್ತಾ?" – ಎಂದು ಅಪ್ಪನನ್ನು ಕೇಳಿಯೇ ಬಿಟ್ಟ. ಅಪ್ಪ – "ಅಂವ್ ಎಂತಕ್ಕೆ ಎಲ್ಲಾರೂ ಹೋಗಬೇಕು? ನಮ್ದೇ ಕೆಲಸಾ ಅದೆ. ತಾಜಾ ಮೀನು ಸಿಗ್ತದೆ. ಸೋವಿ ತರಕಾರಿ ಮನೆ ಬಾಗಿಲಿಗೆ ಬರ್ತದೆ. ನಿಮ್ಮ ಹಾಂಗೆ ನೀರಿಗೂ ದುಡ್ಡ ಕೊಡೂ ಪರಿಸ್ಥಿತಿ ಇಲ್ಲಾ. ಊರ್ನಲ್ಲಿ ರಾಜನ್ಹಾಂಗೆ ಇರಬಹುದು ಅಂವಾ. ಅವನಿಗೆ ಬೇಕಿದ್ರೆ ಹೋಗಲಿ. ನನ್ ತಕರಾರಿಲ್ಲ" ಎಂದ. ಅದಕ್ಕೆ ಹುಬ್ಬಳ್ಳಿ ಮಾಮಾ – "ಯೆಸ್ ಯೆಸ್ ಊರಲ್ಲಿ ಟೂರಿಸಂ ಬೆಳೀತಾ ಉಂಟು. ಇಂಟರ್‌ನೆಟ್, ಸಿಮ್‌ಕಾರ್ಡ್ ಅಂಗಡಿ ತೆಗಿಬಹುದು. ಈ ಫೊರೆನರ್ಸಿಗೆ ದೇಶಿ ವಸ್ತುಗಳ ಬಗ್ಗೆ ಆಕರ್ಷಣೆ ಇರ್ತದೆ. ಪ್ಯಾಕೆಟ್ಟಲ್ಲಿ ಬರೂ ಹಾಲನ್ನೇ ಯಾವುದೋ ಹಳೇ ಬಾಟಲಿಲಿ ಹಾಕಿ "ಲೋಕಲ್ ನ್ಯಾಚುರಲ್ ಮಿಲ್ಕ್" ಎಂದು ಬಿಟ್ಟರೆ, ಬೆರಣಿ ಪುಡಿನ ಟೂಥ್‌ಪೌಡರ್ ಅಂದರೆ ಡಬಲ್ ದುಡ್ಡು ಕೊಡ್ತಾರೆ. ಯೆಸ್ ಯೆಸ್. ಏನಾದರೂ ಇಲ್ಲೇ ಬಿಸಿನೆಸ್ ಶುರುಮಾಡು. ಬೇಕಿದ್ರೆ ನಾನು..." ಎಂದು ಲೊಚಗುಟ್ಟಿದ. ಆಮೇಲೆ ಹುಬ್ಬಳ್ಳಿ ಮಾಮಾ ಸಮಯ ಸಾಧಿಸಿ, ಅಪ್ಪ ಇರದಿದ್ದಾಗ ವಿಹಂಗಮನನ್ನು ಒಂದು ಸಲ ಕದ್ದು "ಅಲ್ವೋ ತಮಾ, ಈ ಫೋರೇನರು ಯಾವ ಬೀಚಲ್ಲಿ ಇರ್ತಾರೋ?" – ಎಂದು ಕೇಳಿಯೇಬಿಟ್ಟ. ವಿಹಂಗಮ "ಕುಟ್ಲೆ ಬೀಚು, ಓಂ ಬೀಚು, ಹಾಫ್ ಮೂನ್ ಬೀಚು..." ಎನ್ನುತ್ತ ಹೋದಾಗ "ಅಲ್ಲಲ್ಲಾ, ಎಲ್ಲದೂ ಬೇಡಾ, ಅವರು ಈಜಾಡ್ತಾರಂತಲ್ಲಾ ಅದು ಎಲ್ಲಿ?" – ಎಂದು ಅವಸರಪಡಿಸಿದ. ವಿಹಂಗಮನಿಗೆ ಅವನ ಫಾಜೀಲ ಅಸಹಾಯಕತನ ನೋಡಿ ನಗೆಯ ಬದಲು ಮುಜುಗರವೇ ಆಯಿತು. ಏಕೆಂದರೆ ಅದರ ಮುಂಚಿನ ದಿನವೇ ಮಾಮಾನ ಮಗ ತೇಜಸ್ವಿನೂ ಗುಟ್ಟಾಗಿ ವಿಹಂಗಮನಲ್ಲಿ ಅದನ್ನೇ ಸ್ವಲ್ಪ ಬೇರೆ ನಮೂನೆಯಿಂದ ಕೇಳಿದ್ದ. ಇಬ್ಬರನ್ನೂ ಒಟ್ಟಿಗೇ ಕರೆದೊಯ್ದರೇ ಮಜಾ ಎಂದುಕೊಂಡ ವಿಹಂಗಮನ ಕಣ್ಣು ತಪ್ಪಿಸಿ ಮಾಮಾನೇ ಚೂರೂ ಪತ್ತೆ ಕೊಡದಂತೆ ಒಂದು ದಿವಸ ಹೋಗಿ ಬಂದುಬಿಟ್ಟ. ಸ್ವಲ್ಪ ಮಂಕಾಗಿಯೇ ಇದ್ದ. ಹೋದ ವರ್ಷ ಗ್ರಾಮೀಣ ಬ್ಯಾಂಕಿನ ಅವನ ಗೆಳೆಯರೆಲ್ಲ ಟಾಟಾಸುಮೋ ಮಾಡಿಕೊಂಡು ಮುರ್ಡೇಶ್ವರ ಗೋಕರ್ಣ ಟ್ರಿಪ್ ಮುಗಿಸಿಕೊಂಡು ಹೋದವರು ದೇವ ದರ್ಶನದ ಬಗ್ಗೆ ಮಾತಾಡುವುದನ್ನು ಬಿಟ್ಟು ಓಂ ಬೀಚಿನಲ್ಲಿ ತಾವು ಪಡೆದ ವಿದೇಶೀ ಸೃಷ್ಟಿ ಸೌಂದರ್ಯದ ಬಗ್ಗೆ ಉಪ್ಪು ಹುಳಿ ಖಾರಾ ಹಚ್ಚಿ ಅವನ ತಲೆ ತಿಂದುಬಿಟ್ಟಿದ್ದರು. ಅವನಿಗೆ ತನ್ನ ನರಜನ್ಮವೇ ವೇಸ್ಟು ಅಂತನಿಸಿ ಬಿಟ್ಟಿತ್ತು. ಸ್ವತಃ ಊರಿನವನಾದ ತಾನೇ ಈ ತನಕ ನೋಡಿರದಿದ್ದುದನ್ನು ಇವರು ನೋಡಿಬಂದರಲ್ಲಾ, ಎಲಾ– ಎಂದು, ಈ ಸಲ ಪಟ್ಟು ಹಿಡಿದು ಎರಡು ಗುಡ್ಡೆ ಹತ್ತಿ ಇಳಿದು ಅಲೆದಾಡಿ ಬಂದಿದ್ದ. ಮಗ "ಅಪಾ ಅಪಾ, ಓಂ ಬೀಚಿಗ್ ಹೋಗ್ವನೋ.. ಅಲ್ಲಿ ಸನ್‌ಸೆಟ್ ನೋಡ್ವನೋ..." – ಎಂದು ಸಂಭಾವಿತನಂತೆ ಗೋಗರೆವಾಗ, ಮಾಮಾ "ಹೋಗಿ ಉಪಯೋಗಿಲ್ಲಾ, ಸನ್ನೂ ಇಲ್ಲಾ ಡಾಟರೂ ಇಲ್ಲಾ.. ಸೀಸನ್ ಮುಗದೇ ಹೋಗದೆ ಅಲ್ಲಿ" – ಎಂದುಬಿಟ್ಟ.

ಅಂಥ ಹುಬ್ಬಳ್ಳಿ ಮಾಮಾನ ಸಂಸಾರವನ್ನು ನಿವಾಳಿಸಿ ಒಗೆಯುವಷ್ಟು ಚಂದವಾಗಿ ತನ್ನ ಪೋರ ಈ ಬೂಟಿನಲ್ಲಿ ಕಾಣುತ್ತಿರುವ ರೀತಿಗೆ ಪಾರ್ವತಕ್ಕನಿಗೆ ನಿಜಕ್ಕೂ ಹೆಮ್ಮೆಯಾಯಿತು. ಬ್ಯಾಂಕಿನ ಪಿಗ್ಮಿ ಕಲೆಕ್ಟರ್‌ನಂತೆ ಅಥವಾ ಆರೋಗ್ಯ ಇಲಾಖೆಯ ಸ್ವಯಂಸೇವಕನಂತೆ ಉಠಾವ್ ಆಗಿ ಕಾಣುತ್ತಿರುವ ಈ ಪೋರ ನಾಳೆಯಿಂದ ಪೇಪರ್ ಹಾಕಲು ಹೋಗಬಾರದು ಅನಿಸಿಬಿಟ್ಟಿತು. ಆದರೆ ಅದನ್ನು ಹೇಳುವುದು ಹೇಗೆ ಅಂತ ತಿಳಿಯುತ್ತಿರಲಿಲ್ಲ. ಏಕೆಂದರೆ ಹೇಳಲು ಹೋದರೆ ಅದು ಬೇರೆಯೇ ಆಗಿ ಕೇಳಿಸುವಂತಿತ್ತು. ಏಕೆಂದರೆ ಅವರ ಮಾವನ ಅಪ್ಪನ ಅಂದರೆ ವಿಠೋಬನ ಅಜ್ಜನ ಕಾಲದಿಂದಲೂ ಈ ಪೇಪರ್ ಏಜೆನ್ಸಿ ನಡೆದು ಬಂದಿತ್ತು. ಅದಕ್ಕೆ ತನ್ನದೇ ಆದ ಮಹತ್ವ ಮತ್ತು ಕೌಟುಂಬಿಕ ಘನತೆ ಇತ್ತು. ಅದರಿಂದ ಸಿಕ್ಕುವ ಮುನಾಫೆ ಅಂಥದೇನೂ ಇರದಿದ್ದರೂ ಅತ್ಯಂತ ಸಾಮಾಜಿಕವಾದ, ಸುಶಿಕ್ಷಿತವಾದ ಒಂದು ಸಂಬಂಧವನ್ನು ಅದು ಇಡೀ ಊರೊಂದಿಗೆ ಈ ಕುಟುಂಬಕ್ಕೆ ಕಲ್ಪಿಸಿಕೊಟ್ಟಿತ್ತು. ಎಷ್ಟರಮಟ್ಟಿಗೆ ಅಂದರೆ ಎಸ್ಸೆಲ್ಸಿ ರಿಸಲ್ಟ ಬಂದಾಗ "ರಿಸಲ್ಟ ಬಂದದೆ" ಎಂದು, ಬಸ್‌ಸ್ಟ್ಯಾಂಡ್ ಮಂಜೂರಾದ ಸುದ್ದಿ ಬಂದಾಗ "ಬಸ್‌ಸ್ಟಾಂಡ್ ಮಂಜೂರಾಗದೆ" – ಎಂದು ಪ್ರತಿಯೊಬ್ಬರಿಗೂ ಹೇಳಿ ಪೇಪರ್ ಹಾಕುವಂಥ ಅಭಿಮಾನದ ಕೆಲಸವಾಗಿತ್ತು. ಮೊದಲೆಲ್ಲ ದಿನಪತ್ರಿಕೆ ಸಂಜೆ ಸೂರ್ಯಾಸ್ತದ ವೇಳೆಗೆ ಹುಬ್ಬಳ್ಳಿಗಾಡಿಗೆ ಬರುತ್ತಿತ್ತು. ಆಗ ಅದರಲ್ಲೇ ಪರೀಕ್ಷೆ ರಿಸಲ್ಟು ಅಚ್ಚಾಗಿ ಬರುತ್ತಿತ್ತು. ವಿಠೋಬನ ಅಪ್ಪ ಬಸ್‌ಸ್ಟಾಂಡಿನಲ್ಲೇ ನಿಂತು ಪಾಸಾದವರ ನಂಬರುಗಳನ್ನು ನೆರೆದ ಪಾಲಕರು, ವಿದ್ಯಾರ್ಥಿಗಳೆದುರು ದೊಡ್ಡಕ್ಕೆ ಓದಿ ಹೇಳುತ್ತಿದ್ದುದು ವಿಠೋಬನಿಗೆ ನೆನಪಿದೆ. ಒಂದೊಂದು ಸಲ ಪೇಪರ್ ಪಾರ್ಸಲ್ ಬರದೇ ಸ್ಟಾಂಡಿನಲ್ಲಿ ಸ್ಮಶಾನ ಮೌನ ಆವರಿಸುತ್ತಿತ್ತು. ಮರುದಿನ ಎರಡು ದಿನದ್ದು ಒಟ್ಟಿಗೇ ಬಂದಿದ್ದೂ ಇದೆ. ಹೀಗೆ ಪೇಪರಿನ ಮೂಲಕ ಊರಿನ ಪ್ರತಿ ಬಾಗಿಲುಗಳೂ ಈ ಮನೆತನಕ್ಕೆ ಹೆಚ್ಚಿಗೆ ಆಪ್ತವಾಗಿದ್ದವು. ವಿಹಂಗಮ ಶಾಲೆ ಮುಗಿಸಿದ ನಂತರವೇ ಸ್ವಯಂಸ್ಫೂರ್ತಿಯಿಂದ ಈ ಕಾಯಕಕ್ಕೆ ಮುಂದಾಗಿದ್ದನೇ ಹೊರತು ಅವನ ಮೇಲೆ ಕುಟುಂಬದ ಯಾವ ಜುಲುಮೆಯೂ ಇರಲಿಲ್ಲ. ವಿಠೋಬನಿಗೆ ಮಗ ಹತ್ತಿರವೇ ಇರ್ತಾನಲ್ಲ ಅನ್ನುವ ಸಮಾಧಾನವಿತ್ತು. ಆದರೆ ಪಾರ್ವತಕ್ಕನಿಗೆ ಅವನೊಂದು ಅಮೂಲ್ಯ ಅವಕಾಶವನ್ನು ತಪ್ಪಿಸಿಕೊಳ್ಳುತ್ತಿದ್ದಾನೆ... ಅವನ ಬದುಕಿನಲ್ಲಿ ಹೊಸದೇನೋ ಆಗಬೇಕಿತ್ತು ಅಂತನಿಸುತ್ತಿತ್ತು. ಅವನ ವಿನಮ್ರತೆ, ಮುಜುಗರಗಳೇ ಅವನ ನಿಜವಾದ ಸಂಪತ್ತು ಎಂದು ಬಲವಾಗಿ ನಂಬಿಕೊಂಡು ಬಂದಿದ್ದ ಆಕೆಗೆ, ಅವನ ಆ ಗುಣದಿಂದಾಗಿಯೇ ಜನ ಅವನನ್ನು 'ಕೆಲಸಕ್ಕೆ ಬಾರದವ' ಎನ್ನುವ ರೀತಿಯಲ್ಲಿ ನೋಡಿದಂತೆ ಭಾಸವಾಗಿ ಕಾಳಜಿಯಾಗುತ್ತಿತ್ತು... ಅಂಗಡಿಯಿಂದ ತಂದ ತೆಂಗಿನಕಾಯಿ ಚಲೋ ಇಲ್ಲ.. ಹೋಗಿ ಜಗಳಾಡಿ ಬೇರೆ ತೆಗೆದುಕೊಂಡು ಬಾ... ಆರತಿ ನಂತರ ಪ್ರಸಾದ ಯಾಕೆ ತಕಳ್ಳಲಿಲ್ಲ... ಹೋಗಿ ಮತ್ತೆ ಕೇಳಕಂಡ ತಕಂಡ ಬಾ... ಹೀಗೆ ಅವನಿಗೆ ತ್ರಾಸದಾಯಕವಾದ ಕೆಲಸಕ್ಕೇ ಅವನನ್ನು ಮತ್ತೆ ಮತ್ತೆ ಕಳಿಸುತ್ತಿದ್ದಳು... ಆಗಿನ ಅವನ ಸಿಗ್ಗು ಸಂಕಟ ಆಕೆಗೇ ನೋಡಲಾಗುತ್ತಿರಲಿಲ್ಲ. ಹಾಗಂತ ಅಂವ ಮಿಜಿ ಮಿಜಿ

ಅಲ್ಲ... ಗಟ್ಟಿ, ಪ್ರಶಾಂತ ಮನಸ್ಸಿನವ ಅಂತ ಸಾಬೀತಾದದ್ದು ಅವಳ ಅತ್ತೆ ಅಂದರೆ ವಿಠೋಬನ ತಾಯಿ ತಿಂಗಳುಗಟ್ಟಲೆ ಆಸ್ಪತ್ರೆಯಲ್ಲಿದ್ದಾಗ... ಯಾರ ಗುರುತೂ ಹಿಡಿಯದ ಸ್ಥಿತಿಯಲ್ಲಿದ್ದ ಆಕೆ ಅವನು ಬಂದಾಗ ಮಾತ್ರ ತಲೆ ಅಲ್ಲಾಡಿಸಿ 'ಬಾ' ಎನ್ನುವಂತೆ ನಗುತ್ತಿದ್ದಳು... ಅವಳು ಏನೇನೋ ಬಡಬಡಿಸುವಾಗ ಉಳಿದವರೆಲ್ಲ ಭಯವಾದಂತಾಗಿ ಹಿಂಜರಿದರೆ ವಿಹಂಗಮ ಅವಳು ಮಾತನಾಡಿದ್ದನ್ನು ಲಕ್ಷಕ್ಕೆ ತಗೊಳ್ಳದೇ ತನಗೇನು ಹೇಳಬೇಕಿದೆಯೋ ಅದನ್ನೇ ಪ್ರಶಾಂತವಾಗಿ ಹೇಳುತ್ತ ಹೋಗುತ್ತಿದ್ದ.. ಉದಾಹರಣೆಗೆ ಪೇಟೆಯಲ್ಲಿ ಕಳಲೆ ಬರಲು ಶುರುವಾಗಿದೆ, ಮಳೆಗಾಲದಲ್ಲಿ ಈ ಸಲ ಸಮುದ್ರ ಹೆಚ್ಚು ಮುಂದೆ ಬಂದಿಲ್ಲ, ಸಮುದ್ರ ಬೇಲೆಯಲ್ಲಿ ದೊಡ್ಡ ಹಳದೀ ಬಣ್ಣದ ದೀಪಗಳ ಎತ್ತರದ ಕಂಬ ಹಾಕಿದ್ದಾರೆ, ಮುಂದಿನ ವಾರದಿಂದ ನೀನು ಮೀನು ತಿನ್ನಲು ಅಡ್ಡಿಲ್ಲ ಅಂತ ಡಾಕ್ಟರು ಹೇಳಿದ್ದಾರೆ, ತೂರೆ ಬಂಗಡೆ ಬೇಡಾ, ಬೆಳಂಜಿ ಅಡ್ಡಿಲ್ಲಂತೆ... ಹೀಗೆ.. ಅದನ್ನು ಆಲಿಸುತ್ತ ಅಜ್ಜಿ ಪ್ರಶಾಂತಳಾಗುತ್ತಿದ್ದಳು. ನಂತರ ವಿಹಂಗಮನೇ "ಅಜ್ಜಿಗೆ ಎಲ್ಲಾನೂ ತಿಳೀತದೆ. ಮಾತಾಡಲಿಕ್ಕೆ ಆಗೂದಿಲ್ಲ ಅಷ್ಟೇಯಾ. ಏನೋ ಹೇಳಲಿಕ್ಕೆ ಹೋದರೆ ಬೇರೇನೋ ಬರ್ತದೆ. ಆಗ ನಾವು ಅದಕ್ಕೆ ಲಕ್ಷ್ಯ ಕೊಡಬಾರ್ದು. ಸುಮ್‌ಸುಮ್ನೆ ಪರೀಕ್ಷೆ ಮಾಡುವವರಂಗೆ ನಾ ಯಾರು? ಇವರು ಯಾರು? ಇದೆಷ್ಟು! – ಅಂತೆಲ್ಲ ಅವಳ ಜೀವಾ ತಿನ್‌ಬಾರ್ದು" ಎಂದು ಎಲ್ಲರಿಗೂ ಸಲಹೆ ಕೊಡುತ್ತಿದ್ದ. ಆಗ ನರ್ಸ್‌ಬಾಯಿ "ನೀ ಡಾಕ್ಟರಾಗಿದ್ರೇ ಚಲೋ ಆಗಿತ್ತಲೋ" – ಎಂದು ಮೆಚ್ಚುಗೆ ತೋರಿಸಿದ್ದಳು. ಹೌದು ಈ ಪೋರ ಇನ್ನು ಮುಂದೆ ಅಜೀಬಾತ್ ಪೇಪರ್ ಹಾಕಬಾರ್ದು... ಅದನ್ನು ಬೇರೆ ಯಾರಗಾದ್ರೂ ಕೊಟ್ರಾಯ್ತು... ಪಾರ್ವತಕ್ಕನಿಗೆ, ದುಬಾರಿ ಆಗಿರಬಹುದಾದ ಈ ಬಿಳಿ ಬೂಟನ್ನು ಮಗನಿಗೆ ಕೊಡಿಸಿಕೊಟ್ಟ ಗಂಡನ ಮೇಲೆ ನಿಜಕ್ಕೂ ಅಭಿಮಾನ ಉಕ್ಕತೊಡಗಿತು. ಅಷ್ಟರಲ್ಲಿ ವಿಹಂಗಮನೇ "ಮಾದೇವಕ್ಕೋರು ಕೊಟ್ರು. ಬೇಡಾಂದ್ರೂ ಕೊಟ್ರು. ಮಗಳು ತಂದದ್ದಂತೆ. ಅವರಿಗೆ ಸಮಾ ಆಗುದಿಲ್ಲಂತೆ. ಹಾಕ್ ನೋಡು ಅಂದ್ರು. ನನಗೆ ಬೇಡಾದ್ರೆ ವಾಪಸ್ ಕೊಡಬೇಕಂತೆ. ಇನ್ಯಾರಿಗಾದ್ರೂ ಕೊಡ್ತರಂತೆ" ಎಂದ. "ಇನ್ಯಾರಿಗೆಂತಾ ಕೊಡೂದು? ನಮ್ದೇ ಅದು. ಸುಮ್ನಿರು ನೀನು" ಎಂದು ತಲೆ ತಟ್ಟಿ ಜಬರಿಸಿದಳು. ವಿಹಂಗಮನಿಗೆ ಎಲ್ಲಿ ನೋಡಬೇಕೆಂದು ತೋಚದಷ್ಟು ಸುಮಾರಾಗಿ ಹೋಯಿತು.

"ಮಾದೇವಕ್ಕೋರ ಮಗಳು ಬೇಬಿ ಏಳೂವರೆ ತಿಂಗಳಿಗೇ ಹುಟ್ಟಿದ್ದು. ಮಾದೇವಕ್ಕೋರನ್ನ ಉಳಸಬೇಕೋ, ಶಿಶುನ ಉಳಸಬೇಕೋ ಗೊತ್ತಾಗದೆ ಡಾಕ್ಟರರು ಹೈರಾಣಾಗಿ ಹೋಗಿದ್ರಂತೆ. ಆಗ ನಿನ್ನ ಅಜ್ಜಿ ಅಲ್ಲಿ ಎಣ್ಣೆ ಮಾಲೀಶಿಗೆ ಹೋಗ್ತಿದ್ಳು. ಇಲಿಮರಿ, ಇಲಿಮರಿ ಇದ್ದಾಂಗೆ ಇಟೇ ಇತ್ತಂತೆ ಶಿಶು... ಹಾಲ್ ಕುಡೀಲಿಕ್ಕೂ ಆಗದೆ ಹತ್ತಿ ಹಾಲಲ್ಲದ್ದಿ ಬಾಯಲಿ ಹನಿ ಹನಿ ಹಿಂಡತಿದ್ರಂತೆ. ಎತ್ತಲಿಕ್ಕೂ ಹೆದ್ರಿಕೆ ಆಗವಷ್ಟು ನಾಜೂಕಿತ್ತಂತೆ ಜೀವಾ. ಅಂಥ ಶಿಶುಗೆ ನಾಲ್ಕು ತಿಂಗಳು ಎಣ್ಣೆ ಮಾಲೀಶು ಮಾಡಿ ಮೀಸದ್ದು ಏನು ಕಡ್ಮೆ ಕೆಲಸಾ? ಮಾದೇವಕ್ಕೋರದೂ ಹೆದ್ರಕೆ ಜೀವಾ. ಮಗಳಿಗೆ ಏನೇ ಆದರೂ ಮಧ್ಯರಾತ್ರಿಗೆ ಮಂಗರ್ಶಿ ಬಾಬುನ ಸೈಕಲ್ ಮೇಲೆ ಕಳಸೂರು. ಅಂವ ಅಜ್ಜಿನ ಕರ್ಕಂಡ ಹೋಗ್ತಿದ್ದ. ಅದೇ ಬೇಬಿ ಶಾಲೆ ಗೆದರಿಂಗಲ್ಲಿ 'ಬೇಡ ಕೃಷ್ಣ ರಂಗಿನಾಟ' ರೆಕಾರ್ಡ್ ಡಾನ್ಸ ಮಾಡದಾಗ ಅಜ್ಜಿಗೆ ಖುಶಿಯೋ ಖುಶಿ... ಆಗೆಲ್ಲಾ ಗೆದರಿಂಗಗೆ ನಾವೆಲ್ಲಾ ಹೋಗಾಗ್ತಿತ್ತು... ಅವಳು ಅಲ್ಲಿ ಕುಣಿವಾಗ ಇಲ್ಲಿ ಅಜ್ಜಿ ಆಚಿಬದಿ ಇಚಿಬದಿ ಕೂತವರ ಹತ್ರೆ 'ಇಲಿ ಇದ್ದಾಂಗ ಇಟೇ ಇತ್ತು. ಈಗ ಹ್ಯಾಂಗೆ ಕುಣೀತದೆ ನೋಡು ಬೇಬಿ' ಅಂತ ಹೆಮ್ಮೆಯಿಂದ ಹೇಳಿದ್ದೇ ಹೇಳಿದ್ದು. ಹಾಂಗೆ ಋಣಾ ಭಾಳ ಅದೆ. ಆ ಕಾಲಕ್ಕೆ ಮಾಲೀಶಿಗೆ ನಾಕು ತೆಂಗಿನಕಾಯಿ, ನಾಕು ಶೇರು ಅಕ್ಕಿ ಕೊಟ್ಟದ್ದೇಯಾ. ಸೀರೆ ಹೋಗಲಿ, ಪಲಕಿ ಕಣಾನೂ ಕೊಡಲಿಲ್ಲಾ. ಅದನ್ನೆಲ್ಲಾ ಬಾಯ್ಬಿಟ್ಟು ಕೇಳುಕೆ ಆಗ್ತದೆ? ಅಲ್ಲಾ, ಫುಕ್ಸಟ್ಟೆ ಬಂದದ್ದಲ್ಲಾ ಬೂಟು ಅಂದೆ. ಋಣ ಉಂಟು ಋಣ. ಅವರಿಗೆ ಹೇಳುದಲ್ಲಾ ಬಿಡು. ನಮಗೆ ಗೊತ್ತಿರಬೇಕಲ್ಲಾ ಅದಕೇ ಹೇಳ್ದೆ. ಬೇಟಿ ಪೊರೆನ್ನಲ್ಲಿದ್ದಾಳೆ ಈಗ. ಏನ ಕಮ್ಮಿಯಿಲ್ಲ ಅವರಿಗೆ". ಗಂಜಿ ಊಟದುದ್ದಕ್ಕೂ ಈ ಮಾತು ಸಾಗಿತು. ಮಗ ಎಲ್ಲಿ ಈ ಬೂಟನ್ನು ಒಯ್ದು ವಾಪಸ್ ಕೊಟ್ಟು ಬಿಡ್ತಾನೊ ಎಂಬ ಗಾಬರಿಯಲ್ಲೇ ಪಾರ್ವತಕ್ಕ ಹೇಳಿ ಮುಗಿಸಿದ್ದರಿಂದ, ಮುಗಿದ ನಂತರದ ನಿಶ್ಶಬ್ದದಲ್ಲಿ ಗಂಜಿ ಸುರಿಯುವ ಸದ್ದು ಇನ್ನೂ ದೊಡ್ಡದಾಗಿ ಕೇಳಿಸತೊಡಗಿತ್ತು.

"ಬೆಂಗಳೂರಿಗೆ ಹೋಗು ನೀನು. ಗಿಡಗನ ಮನೆ ಸಾವಿತ್ರಿ ನೋಡು. ಶಾಲೆ ಮುಗದದ್ದೆ ಹೋಗಿ, ಅಲ್ಲೇ ಕಂಪ್ಯೂಟರ್ ಕಲ್ತಕಂಡು ದೊಡ್ಡ ಮಾಲಲ್ಲಿ



ಚಿತ್ರ: ಪಿ. ರವೀಂದ್ರನಾಥ್


ಸೇಲ್ಸ್‌ಗರ್ಲ ಅಂತೆ. ಹೋಗು. ಏನ ಬೇಕೋ ಕಲಿ ಅಲ್ಲಿ" ಎಂದು ಉಪ್ಪಿನ ಸೊಸೈಟಿಯ ಸಾತುಸ್ಕರ್ ಸಿಕ್ದಾಗೆಲ್ಲ ಹೇಳ್ತಾನೆ. ಅವನ ಸಂಬಂಧಿಕ ಬೇಕಿದ್ರೆ ಶಾಪಿಂಗ್ ಮಾಲ್‌ನಲ್ಲಿ ನಿಕ್ಕಿ ಕೆಲ್ಸಾ ಕೊಡಸ್ತಾನಂತೆ. "ಸೆಕ್ಯುರಿಟಿ ಗಾರ್ಡ ಆದ್ರೆ ರುಬಾಬು ಜಾಸ್ತಿ. ಬೂಟು ಕಂಪಲ್ಸರಿ. ಬಂದವರ ಕಿಸೆ ತಪಾಸ ಮಾಡುದು. ಚೀಲಾ ತಪಾಸ್ ಮಾಡೂದು, ಎಲ್ಲಾ ಗಿರಾಕಿಗಳ ಮೇಲೆ ಕಣ್ಣಿಡುದು..." ಎಂದವನು ಹೇಳಿದಾಗ ವಿಹಂಗಮನಿಗೆ ಬೇಸರವಾಯಿತು. ಅಪನಂಬಿಕೆಯೇ ಆ ಕೆಲಸದ ಜೀವಾಳದಂತೆ ಅನಿಸಿ "ಛೇ ಅದೆಂಥ ಬೊಡ್ಡು ವ್ಯಾಪಾರ" ಎಂದುಬಿಟ್ಟ. ಆದರೆ ಈಗ ಗಡದ್ದು ಗಂಜಿ ಊಟದ ನಂತರ ಆರಾಮ ಖುರ್ಚಿಯಲ್ಲೇ ಅಡ್ಡಾದಾಗ ಜೊಂಪಿನಲ್ಲಿ ಯಾಕೋ ತಾನು ಬೆಂಗಳೂರಿಗೆ ಹೋಗುವ ಸ್ಲೀಪರ್ ಕೋಚ್ ಬಸ್ಸಿನಲ್ಲಿ ಇರುವಂತೆ ಭಾಸವಾಯಿತು... ಬಸ್ಸು ಅಪರಿಚಿತ ಇರುಳನ್ನು ತನ್ನ ಪ್ರಖರ ದೀಪಗಳಿಂದ ಬತ್ತಲೆಗೊಳಿಸುತ್ತ ಓಡುತ್ತಿತ್ತು.. ಮೇಲಿನ ಸ್ಲೀಪರ್‌ನಲ್ಲಿ ಅಂಗಾತ ಮಲಗಿದ್ದ ವಿಹಂಗಮ ಮಲಗಿದಲ್ಲಿಂದಲೇ ಆಕಾಶ ನೋಡಲು ಯತ್ನಿಸಿದ... ಆಕಾಶಕ್ಕೇನು ಧಾಡಿ, ಅದು ಅಲ್ಲಿಯೇ ಇತ್ತು. ಆದರೆ ಚಲಿಸುತ್ತಿರುವ ಬಸ್ಸಿನಿಂದ ಅಂಗಾತ ಮಲಗಿ ಅದನ್ನು ನೋಡುವ ಯತ್ನದಲ್ಲೇ ಒಂದು ಹಾಸ್ಯಾಸ್ಪದ ಅಂಶವಿತ್ತು.. ಮಂಕು ದೀಪಗಳಲ್ಲಿ ತಿಳಿನೀಲಿ ಪರದೆಗಳ ನಡುವೆ, ಅಂಗಾತ ಮಲಗಿಕೊಂಡೇ ಚಲಿಸುತ್ತಿರುವ ವಿಹಂಗಮನಿಗೆ ಒಂದು ಕ್ಷಣ ತಾನು ಅಂಬ್ಯುಲೆನ್ಸ್‌ನಲ್ಲಿದ್ದೇನೆ ಎಂದೆನಿಸಿ ಹೋಯಿತು. ಈ ಇಡೀ ಬಸ್ಸೇ ಒಂದು ಅಂಬ್ಯುಲೆನ್ಸು, ಅದರಲ್ಲಿ ತಮ್ಮೆಲ್ಲರನ್ನು ಯಾವುದೋ ಮಹಾ ಆಸ್ಪತ್ರೆಗೆ ಅತ್ಯಂತ ತುರ್ತಿನಲ್ಲಿ ಒಯ್ಯಲಾಗುತ್ತಿದೆ ಎಂಬ ವಿಲಕ್ಷಣ ಭಯದ ಭಾಸ. ಎಲ್ಲರೂ ಮಿಕಿಮಿಕಿ ಮೇಲ್ನೋಡುತ್ತ ಪರದೆಗಳ ಹಿಂದೆ ಅಂಗಾತ ಮಲಗಿದ್ದಾರೆ. ಮಲಗಿದಲ್ಲೇ ಏನೆಲ್ಲಾ ಹಿಂದೆ ಹೋಗುತ್ತಿದೆ... ಮಲಗಿದಲ್ಲೇ ಎಲ್ಲಾ ಹಳತಾಗುತ್ತಿದೆ... ಮಲಗಿದಲ್ಲೇ ಎಲ್ಲರಿಗೂ ಜೊತೆಯಲ್ಲಿಯೇ ವಯಸ್ಸಾಗುತ್ತಿದೆ... ಚಿನ್ನದ ಕೇರಿಯ ದಿವ್ಯಾಳ ದನಿ ಕೇಳ್ತಿದೆಯಲ್ಲಾ... ಅವಳು ಕಾರವಾರದ ಅವಳ ಸಂಬಂಧಿಕರ ಮದುವೆಗೆ ಹೋದವಳು ಹೊಸ ಫ್ಯಾಶನ್ ಕಲಿತು ಬಂದ ಹಾಗಿದೆಯಲ್ಲ... ಇನ್ನೂ ಚಂದ ಕಾಣ್ತಾಳಲ್ಲಾ... "ನೀನು ಟೀವಿಲಿ ಮ್ಯಾಚ್ ನೋಡ್ಲಿಕ್ಕೆ ನಮ್ಮನೆಗೆ ಬಾ" ಎಂದು ಕರ್‌ದ್ಲಲ್ಲಾ... "ನೀ ಬಂದ್ರೆ, ಇಂಡಿಯಾ ಸೋತರೂ ಅಡ್ಡಿಲ್ಲ" ಅಂದ್ಲಲ್ಲಾ... ಯಾವ ಸ್ಲೀಪರಲ್ಲಿದಾಳೆ... ಹೀಗೆಯೇ ಇದೇ ವೇಗದಲ್ಲೇ ಚಲಿಸಿದರೆ ಒಂದು ಕಡಿದಾದ ಅಂಚಿನಲ್ಲಿ ಒಂದು ಮೋಡ ನಮ್ಮೆಲ್ಲರನ್ನೂ ಕಬಳಿಸಿಬಿಡಬಹುದೆ – ತೀವ್ರ ದಿಗಿಲಿನಲ್ಲಿ ವಿಹಂಗಮ ಧಿಗ್ಗನೆದ್ದು ಕೂತ... ಬಸ್ಸಿನ ಕಿಟಕಿಯಲ್ಲಿದ್ದ ಆಕಾಶದ ಚಿತ್ರ ಒಮ್ಮೆಗೇ ವಾರೆಯಾಯಿತು... ಗುಡ್ಡದ ಹಿಂದೆ ಗುಡ್ಡದ ಹಿಂದೆ ಗುಡ್ಡದ ಹಿಂದೆ ನೆರಳುಗಳು ನೆಲೆಸಿದ್ದವು... ತನ್ನ ಮನೋಬಲದಿಂದಲೇ ಎಂಬಂತೆ ಬಸ್ಸು ಅನಿರೀಕ್ಷಿತವಾಗಿ ತನ್ನೆಲ್ಲ ಸದ್ದುಗಳನ್ನು ಏಕ್‌ದಂ ಕೊಡವಿಕೊಂಡು ನಿಂತುಬಿಟ್ಟಿತು... ತನ್ನ ತುರೀಯ ತಿರುವಿನ ಕ್ಷಣದಲ್ಲಿ ಬುಗುರಿ ನೇರ ನಿಶ್ಚಲವಾಗಿ ತೋರುವಂತೆ...

ಈ ನಿಶ್ಚಲತೆಯನ್ನು ನಂಬುತ್ತ, ಆದರಿಸುತ್ತ, ತನ್ನ ಮೇಲ್ಮಂಚದಿಂದ ನಿಶ್ಶಬ್ದದ ಕಣಿವೆಯೊಳಗೆ ನಾಜೂಕಾಗಿ ಜಿಗಿದ.. ಎಲ್ಲರೂ ತಂತಮ್ಮ ಪರದೆಗಳಾಚೆ ನಿದ್ದೆಯಲ್ಲಿದ್ದರು.. ದಿವ್ಯಾ.. ದಿವ್ಯಾ ಸರಾಫ್ ಎಲ್ಲಿರಬಹುದು... ಯಾವ ಪರದೆಯ ಹಿಂದೆ.. ಕ್ಯಾಬಿನ್‌ನಲ್ಲಿ ಯಾರೂ ಇಲ್ಲ.. ಚಾಲಕನ ಸೀಟಿನ ಮೇಲೆ ಅವನು ಮಡಿಸಿದ್ದ ಖಾಸಗಿ ಸೋಲಾಪುರಿ ಚಾದರ ಹಾಗೇ ಇದೆ.. ಚಾಲಕ ಮತ್ತು ಸಹಾಯಕ ಇಳಿದು ಎಲ್ಲಿ ನಾಪತ್ತೆಯಾದರು.. ತನ್ನ



ದೇಹವೂ ಕೂಡ ಕೆಲ ಹಳೆಯ ಕಿಸೆಗಳೊಂದಿಗೆ ಅಲ್ಲೆ ಮೇಲಿನ ಬರ್ತ್‌ನಲ್ಲೇ ಉಳಿದಿರಬಹುದೆ ವಿಹಂಗಮ ತೆರೆದ ಬಾಗಿಲಿಂದ... ಅದೃಶ್ಯದ ಬೃಹತ್ ಹೂವೊಂದರ ದಳದ ಮೇಲೆ ಕಾಲೂರುವವನಂತೆ ಹಗುರಾಗಿ ಬಸ್ಸಿನಿಂದ ಇಳಿದ... ಅವನು ಬೂಟುಗಳನ್ನು ಮೇಲ್ಮಂಚದಲ್ಲಿ ಅವಕ್ಕೆಂದೇ ವಿನ್ಯಾಸಗೊಳಿಸಲಾದ ಖಾನೆಯಲ್ಲೇ ಕಳಚಿಟ್ಟು ಬಂದಿದ್ದರಿಂದ, ಬರಿದಾದ ಅಂಗಾಲಿಗೆ ಇರುಳಿನ ಭೂ ಸ್ಪರ್ಶ ಅಪೂರ್ವವಾಗಿತ್ತು... ಅದರ ಮೇಲೆ ಕಾಲೂರಿದ್ದೇ ತಡ ಅವ ಅರ್ಥಿಂಗ್ ಸಿಕ್ಕಿದ ಹಳೆಯ ರೇಡಿಯೋದಂತಾದ... ಒಂದೇ ಕ್ಷಣದಲ್ಲಿ ಬಸ್ಸು ಥಟ್ಟಂತ ಬೇರ್ಪಟ್ಟು ಒಂದು ಚಿತ್ರದಂತಾಯಿತು... ಸಣ್ಣ ಗಾಳಿಗೂ ಹಾರಿಹೋಗಬಹುದಾದ ಕ್ಯಾಲೆಂಡರಿನಂತಾಯಿತು... ಮತ್ತು ನೋಡನೋಡುತ್ತಿದ್ದಂತೆಯೇ ಶಿವರಾತ್ರಿ ಜಾತ್ರೆಗೆ ಬಂದ ಧುತ್ತರಗಿ ಕಂಪನಿಯ ನಾಟಕದ ಸೀನರಿಯಂತೆ ಅವನನ್ನು ಅಲ್ಲಿಯೇ ಬಿಟ್ಟು ಸರ್ರಂತ ಬೂಟಿನೊಂದಿಗೇ ಮಾಯವಾಗಿಬಿಟ್ಟಿತು...

ಏ ಏ ಏ ಏ ಎನ್ನುತ್ತ ಆರಾಮ ಖುರ್ಚಿಯಲ್ಲಿ ಮೈ ತೆಗೆದು ಎದ್ದು ಕೂತ. ಒಂದು ಕ್ಷಣ ಹಗಲೋ, ರಾತ್ರಿಯೋ, ಬಸ್ಸೋ, ರಸ್ತೆಯೋ, ಮನೆಯೋ ಗೊತ್ತಾಗುವಂತಿರಲಿಲ್ಲ... ಕಣ್ಣುಜ್ಜಿಕೊಂಡು ನೋಡಿದ... ಎದುರು ಬಾಗಿಲ ಹತ್ತಿರ ಇಟ್ಟಿದ್ದ ಬಿಳಿ ಬೂಟು ಕಾಣಲಿಲ್ಲ... ಅರೇ ಆ ಬಸ್ಸಲ್ಲೇ ಉಳಿದು ಬೆಂಗಳೂರಿಗೆ ಹೋಯಿತೋ ಹೇಗೆ ಎಂದು ಗಲಿಬಿಲಿಗೊಂಡ... ಅ ಕ್ಷಣದಲ್ಲೇ ಅಪೂರ್ವವಾದ ಸಮಾಧಾನವೊಂದು ಸಮೀಪ ಬಂದು ನಿಂತ ಹಾಗೆ ಅವನಿಗಾಯಿತು. "ಎಷ್ಟು ಅಂತ ಮಲಗುದು... ದಿವ್ಯಾ ಬಂದಿತ್ತು... ಬೆಳಿಗ್ಗೆ ನೀನು ಹೊಸಾ ಬೂಟಲ್ಲಿ ಸೈಕಲ್ ಹೊಡಕೊಂಡ ಬರವಾಗ ಭಾಳ ಚಂದ ಕಂಡ್ಯಂತೆ... ಮ್ಯಾಚ್ ನೋಡುಕೆ ಅವರ ಮನೆಗೇ ಬರಬೇಕಂತೆ ನೀನು... ಬಾ ಅಂತ ಕರದದೆ... ಹೋಗು... ಹೋಗು..." – ಎಂದು ಪಾರ್ವತಕ್ಕ ಅವನನ್ನು ಪೂರ್ತಿ ಎಬ್ಬಿಸಿದಳು. "ತಕೋ, ಹಾಕ್ಕಂಡೆ ಹೋಗು" ಎಂದು ಒರೆಸಿ ಒಳಗಿಟ್ಟಿದ್ದ ಬೂಟನ್ನು ತಂದು ಕಾಲ ಬಳಿ ಇಟ್ಟಳು. ಲೇಸು ಬಿಗಿದು, ಲಘುವಾಗಿ ಕುಪ್ಪಳಿಸಿದ ವಿಹಂಗಮ ಚಿನ್ನದ ಕೇರಿಗೆ ಹೋಗಲು ದಣಪೆ ದಾಟಿದ. ಸೈಕಲನ್ನು ಏರುವ ಮುನ್ನ ಅಮ್ಮ – "ಹೇಗೂ ಚಿನ್ನದ ಕೇರಿಗೆ ಹೋಗ್ತ್ಯಲ್ಲಾ, ಅಲ್ಲೇ ಮೀನ್ ಪೇಟೇಲಿ ತಾಜಾ ಮಡ್ಲೆ ಅಥವಾ ಚಿಪ್ಪಿಕಲ್ ಇದ್ರೆ ತಕಬಂದು ಕೊಟ್ ಹೋಗು" – ಎಂದಳು. "ಬೂಟ್ ಹಾಕ್ಕಂಡು ಮೀನ್ ಪೇಟೆಗೆ ಹೋಗೂದೇ.. ಹೆ ಹೇ.." – ಎಂದು ವಿಹಂಗಮ ಚಂದವಾಗಿ ಅಮ್ಮನ ಹತ್ರ ನಗೆಯಾಡಿ ಮಹಾದೊಡ್ಡ ರಾಜಕಾರ್ಯ ಇರುವವನಂತೆ ಚಿನ್ನದ ಕೇರಿಯ ಕಡೆಗೆ ಶರವೇಗದಿಂದ ಪೆಡಲ್ ತುಳಿದ. ಈ ತನಕ ಹೆಣ್ಮಕ್ಕಳಂದ್ರೆ ನಾಚಿ ಮಾಯವಾಗುತ್ತಿದ್ದ ಪೋರನ ಈ ಹೊಸ ಉಮೇದಿಯನ್ನು ಆ ಸೈಕಲ್ಲಿಗೂ ಸ್ವತಃ ನಂಬಲಾಗಲಿಲ್ಲ. "ದಿವ್ಯಾ.. ಸಂಜೆಗೆ ಬಂಗ್ಲೆಗುಡ್ಡೆಗೆ ಬರ್ತೆ?" ಎಂಬ ಪ್ರಶ್ನೆಯನ್ನು ಅವನಿಗಿಂತ ಮುಂಚೆ ಆ ಬೂಟೇ ಈಗ ಮೃದುವಾಗಿ ನಾನಾ ಧಾಟಿಯಲ್ಲಿ ತಾಲೀಮು ಮಾಡಿಕೊಳ್ಳತೊಡಗಿತು. ಬಿಟ್ಟ ಬಾಣದಂತೆ ಚಿನ್ನದ ಕೇರಿ ಪ್ರವೇಶಿಸಿದ ವಿಹಂಗಮನ ವೇಗವನ್ನು ನೋಡಿ ರಸ್ತೆಯಲ್ಲಿ ನಿಂತವರ್‍ಯಾರೋ " ಏ.. ಏ.. ಸಾವ್‌ಕಾಶ್‌ವೋ ಮಾರಾಯಾ.. ಇಲ್‌ದಿದ್ರೆ ನಾಳೆ ನಿನ್ ಪೇಪರಲ್ಲಿ ನಿಂದೇ ಸುದ್ದಿ ಓದ್‌ಬೇಕಾಗೂದು..." ಎಂದರು. ಮಾತಿಗೀಗ ಟೈಮಿಲ್ಲ ಎನ್ನುವಂತೆ, ವಿಹಂಗಮ ಗಿಣಿ ಗಿಣಿ ಬೆಲ್ ಬಾರಿಸುತ್ತ, ತಡೆಯಲಾಗದೆ "ಚಾಪಾ..." ಎಂದು ಕೂಗಿದ.



**(ಜಯಂತ ಕಾಯ್ಕಿಣಿ ಇತ್ತೀಚಿನ ವರ್ಷಗಳಲ್ಲಿ ಜನಪ್ರಿಯ ಚಲನಚಿತ್ರ ಗೀತರಚನಾಕಾರರೆಂದು ಹೆಸರಾಗಿದ್ದರೂ ಮೂಲತಃ ಅವರು ಕನ್ನಡದ ಶ್ರೇಷ್ಠ ಕಥೆಗಾರರಲ್ಲೊಬ್ಬರು ಅಷ್ಟೇ ಮುಖ್ಯ ಕವಿ, ನಾಟಕಕಾರ ಮತ್ತು ಅಂಕಣಕಾರ ಕೂಡ.)**

---

## ಮನೆ – ಹಾಯ್ಕುಗಳು



ಈ ಮನೆ ಕಟ್ಟಿದ
ಖುಷಿಯಲ್ಲಿದೆ
ಹೆಸರಿಲ್ಲದ ಒಂದು ಮರಳ ಕಣ ?

–

ಹೊಸ ಮನೆಯ ಬಾಗಿಲು
ತೆರೆದಾಗ
ಕಾಡಲ್ಲಿ ಮರಬಿದ್ದ ಸದ್ದು

–

ಸುಡುವ ಇಟ್ಟಿಗೆಯ
ಕಣ ಕಣಗಳು
ಕಟ್ಟುವ ಧ್ಯಾನದಲ್ಲಿವೆ

–

ಇಟ್ಟಿಗೆ
ನನ್ನ ಹೆಜ್ಜೆ ಗುರುತು
ಅಪ್ಪನ ಗೋರಿ

–

ಈ ಮನೆಯ ಮರಳಕಣ, ಇಟ್ಟಿಗೆ
ಸುಖ ದುಃಖದಲ್ಲಿ ಭಾಗಿ
ಅಪರಿಚಿತನಾಗಿ ನಿಂತಿದ್ದೇನೆ

–



ಈ ಸುಂದರ ಮನೆ
ನನ್ನದು
ನನ್ನದಲ್ಲ

–

ಈ ಮನೆ ತುಂಬಿದ ಬೆಳಕಿನ ಜೊತೆ
ಮಾತನಾಡುತ್ತಿದೆ
ಒಂದು ಮಿಂಚುಹುಳು

–

ನಿಶ್ಯಬ್ದ ರಾತ್ರಿ
ತಾರಸಿಯ ಕೊಳದಲ್ಲಿ
ಈಜುತ್ತಿದ್ದಾನೆ ಒಂಟಿ ಚಂದಿರ

–

ಮನೆಬಿಟ್ಟು ಹೊರಟಿವೆ
ಇರುವೆಗಳು
ಬೇಗ ಸಕ್ಕರೆ ತರಬೇಕು

–

ಗೋಡೆಯ ಬಿರುಕಿನಲ್ಲಿ
ಅರಳಿಯ ಸಸಿ
ಪುಟ್ಟ ಕಪ್ಪೆಗೆ ನೆರಳಾಗಿದೆ

–

ಮತ್ತೆ ಎಂದಾದರು ಬರಬೇಕು
ಈ ಮನೆಯಲ್ಲಿ
ಮಗುವಾಗಿ

**–ಸಿ. ರವೀಂದ್ರನಾಥ್**

## ಕೃಷ್ಣ, ಮಹಮ್ಮದ್



ಸುಗಂಧ
ಸಂಗೀತಕ್ಕಿಂತಲೂ
ಹೆಚ್ಚು ಮುದ.
ಹಾಗಾದರೆ
ಏನು ವ್ಯತ್ಯಾಸ ಅವುಗಳ
ನಡುವೆ?
ಸುಗಂಧ ಮೂಗಿಗೆ
ಸಂಗೀತ,
ಸಂಗೀತ ಕಿವಿಗಳಿಗೆ
ಸುಗಂಧ, ಅಷ್ಟೆ,
ಮತ್ತೇನೂ ಇಲ್ಲ.
ಕೃಷ್ಣನಿಗೆ ಕೊಳಲು
ಮಹಮ್ಮದರಿಗೆ
ಸುಗಂಧ.



**–ಎಂ.ಎಸ್.ರುದ್ರೇಶ್ವರಸ್ವಾಮಿ**

## ನವಿಲುಗರಿ



### ಬುದ್ಧ ಬಂದ

ಬುದ್ಧನ ಬರವಿಗಾಗಿ ಕಾದು ಕುಳಿತಿದ್ದರು
ಅವರು, ಮೂರು ಹಗಲು ಮೂರು ರಾತ್ರಿ
ಅರಳಿ ಮರದ ಕೆಳಗೆ ಊರಿಗೆ ಊರೇ ನೆರೆದು

ಕೊನೆಯ ಹಗಲು ಕರಗಿ ಇಳಿದಿತ್ತು ಸಂಜೆ
ಬಣ್ಣಬಣ್ಣಗಳಲ್ಲಿ ಅವರ ಕಣ್ಣುಗಳಲ್ಲಿ; ಬುದ್ಧ
ಬರಬಹುದೆಂದು ಕಾದ ಮೈಗಳ ನೇವರಿಸುತ್ತ
ಸುಳಿದ ಸಂಜೆ ಗಾಳಿಯ ತಂಪನ್ನವರೆಂದೂ
ಕಂಡಿರಲಿಲ್ಲ ಹಾಗೆ; ಕೊಂಬೆ ಕೊಂಬೆ ತೂಗಿ
ಎಲೆ ಎಲೆಗಳು ರೆಪ್ಪೆ ಬಡಿದು, ಬಿಡುಗಣ್ಣು
ಬಿಟ್ಟು ನೋಡಿದರು ಅವರು: ಬಾನಲ್ಲಿ ನಡೆದ
ಬಣ್ಣಗಳ ಮೆರವಣಿಗೆ, ಮರುಳಾದರವರು ಅದಕೆ

ಎಲೆಗೊಂದರಂತೆ ಬಂದು ಕುಳಿತವು ಹಕ್ಕಿ
ಎಲ್ಲೆಲ್ಲು ಹೊಮ್ಮಿ ಹಬ್ಬಿತು ಹೊಸ ಹಾಡು
ಆ ಹಾಡು ಕೇಳಿರಲಿಲ್ಲ ಅವರೆಂದೂ, ಬಾನಿಂದ
ಕತ್ತಲಿಳಿಯಿತು ಬುವಿಗೆ ತೆಳು ಪರದೆ ಹರವಿ
ಹೊದ್ದುಕೊಂಡರವರು ಅದನು ಹಿತವಾಗಿ

ಮಾತು ಮರೆಯಾಗಿ ಮೌನ ತೆರೆತೆರೆಯಾಗಿ
ತಬ್ಬಿಕೊಂಡಿತು ಎಲ್ಲವನು, ನೋಡಿದರವರು
ಅಕ್ಕಪಕ್ಕ ಬಿಟ್ಟುಕೊಟ್ಟು ಬಿಗುಮಾನಗಳನು:
ಉಸಿರಾಟ, ಎದೆಬಡಿತ, ಚಿಂತೆಯ ಗೆರೆ
ನೋವಿನ ಬರೆ, ಕಂಡು ಕೇಳಿ ಬೆರಗಾದರು
ತಮ್ಮನು ತಾವೇ ಕಂಡುಕೊಂಡುರವರು



ತೆರೆದವೆದೆಗಳು, ಅರಳಿದವು ಘಮಘಮ
ಹೂವು, ರೆಕ್ಕೆಬಿಚ್ಚಿ ಹಾರಿದವು ಹಕ್ಕಿ
ತೆರೆದ ಬಾನಿಗೆ, ಶುಭ್ರ ನೀಲಿಗೆ; ಉಕ್ಕುಕ್ಕಿ
ಹರಿಯಿತು ಒಳಜಲ, ತುಂಬಿತು ಅಂತರಂಗ

ಬುದ್ಧ ಬಂದ ಒಬ್ಬೊಬ್ಬರಲ್ಲೂ ತಾನೇ
ತಾನಾಗಿ, ಅರಿವಿನ ನಡು ಬಿಂದುವಾಗಿ

**–ಜಿ.ಪಿ.ಬಸವರಾಜು**



### ಹುಚ್ಚರ ಸಂತಿ


ಹೃದಯದಾಳಕೆ
ಕಿಂಡಿ ಕೊರೆಯದೆ
ಅಂತರಾತ್ಮಗೆ ತೋರದೆ
ದಿಕ್ಕು ತಪ್ಪಿ ಕತ್ತಲಲಿ
ಅಲೆದಾಡಿ



ಬೇರು ಬಿಸಿಲಿಗೆ ಒಡ್ಡಿ
ಹಸಿರು ಮಣ್ಣಲಿ
ಹೂವ ಕತ್ತನು ಹಿಸುಕಿ
ಹಕ್ಕಿಗೂಡನು ಕೆಡಿಸಿ

ಮಂಜು ಮುಸುಕಿದ
ಬೆಟ್ಟದಂಚಲಿ
ಕರಗಿ ಹೋಗುವ ಮೋಡಗಳಿಗೆ
ಎರಚಿ ಚಿಲ್ಲರೆ
ಕನಸುಗಳನು
ಹುಸಿ ಮಳೆಯಲಿ ತೋಯ್ಸಿಕೊಂಡು
ಹುಚ್ಚರ ಸಂತ್ಯಾಗ
ಆಡಾಡ್ತ ಕಳೆದೋಯ್ತು ಜೀವನ

**–ಮೀನಾ ಪಾಟೀಲ**



### ಪುಟ್ಟ ಗೆಳತಿಗೆ...

೧

ಉಣ್ಣಲಿಕ್ಕೆ ತಂದ ಕಾಳು
ರಸ್ತೆಯ ತುಂಬ ಸೋರಿಹೋಯ್ತು
ಸೋರಿದ ಕಾಳುಗಳಲಿ
ನಿನ್ನ ಹೆಸರಿತ್ತು

೨

ನೀನು ಕಡಲು ಕಾಡಿನ ಒಡಲು ಸೇರಿಕೊಂಡೆ
ಬಯಲೊಳಗಿನ ನಾವು ಮಾತ್ರ
ನಿನ್ನ ನೆರಳಿಗೆ ಪ್ರತಿದಿನ ವಿದಾಯ ಹೇಳುತ್ತಲೇ ಇದ್ದೇವೆ

೩

ನಾವು ನಮ್ಮ ನಮ್ಮ ಸುತ್ತಲಿಗೆ
ಪರಸ್ಪರರ ಬಗ್ಗೆ ಸುಳ್ಳು ಹೇಳಿದೆವು
ಯಾವುದೋ ಜುಮುರು ಒಂಟಿತನದಲ್ಲಿ
ಕಣ್ಣಾಲಿಗಳು ಮರಗಟ್ಟಿದ್ದನ್ನು
ಲೋಕಕೆ ತೋರಬೇಕಿಲ್ಲ

೪

ನೀ ಹೋದ ಮೇಲೆ
ಈ ಮಗಳನ್ನ ಮತ್ತೊಮ್ಮೆ ಹಡೆದಂತಾಯ್ತು
ಪುಟ್ಟ ಎದೆಗೂಡಲ್ಲಿ
ನೆನಪಿನ ಚಹರೆ ಅಳಿಸುವುದೆಂದರೇನೆಂದು
ಹೋದ ನಿನಗೇನು ಗೊತ್ತು?

೫



ಎಷ್ಟೋ ಮಳೆಗಾಲ ಕಳೆಯಿತು
ಮನೆ ಮುಂದಿನ ಗಿಡ ಮರವಾಯಿತು
ಮತ್ತೂ, ಒಂದು ತಾಟಿನ ಊಟ ನಿಕ್ಕಿ
ಕಣ್ಣು ತೊಯ್ದಿತು

**–ವಿನಯಾ ವಕ್ಕುಂದ**



## ಬೊಗಸೆಯ ಬೀಜಕ್ಕೊಂದು ಪ್ರಾರ್ಥನೆ



ನನಗೊಂದು ಹೆಣ್ಣುಮಗು ಬೇಕು
ಹಠ ಹ್ಯಾಂವ ಜಿದ್ದು
ಥೇಟ್ ಅವ್ವನಂಥದ್ದೇ

ಗೇಣಕಿ ಹಾಕುತ್ತಲೇ
ನನಗೆ ಪಾಠ ಹೇಳಲು
ನಾನು ಮಗಳಾಗಲು
ಮಗಳು ತಾಯಿಯಾಗಲು
ನನಗೊಂದು ಹೆಣ್ಣು ಮಗು ಬೇಕು

ಲೋಕದ ಮಕ್ಕಳು ಮಕ್ಕಳೇ
ಹುಟ್ಟ ಬೇಕು ತಾಯ್ತನ ಎಲ್ಲಕಡೆ
ಸದಾ ಪೊರೆವ ಜೀವ ನೋಡಲು
ಪದೇ ಪದೇ ನನ್ನನ್ನು ನಾನು
ನೋಡಿಕೊಳ್ಳಲು
ನನ್ನ ಹಾದಿಗೆ ನೆರಳು ನೀಡಲು
ನನಗೊಂದು ಹೆಣ್ಣು ಮಗು ಬೇಕು.

ಬೆರಳ ನುಡಿಸುತ್ತಾಳೆ ಹೆಂಡತಿ
ದಿಟ ಆಕೆಯೂ ಮಗುವೇ
ಬೆರಳಿಗೂ ತಂತಿಗೂ ಬೇಕು
ಆಸರೆಯ ತಂಬೂರಿ
ಅಪ್ಪನ ಜೀವಕೂ ಅವ್ವನ ಜೀವಕೂ
ತೊಯ್ದ ಪಾದಗಳು
ಮನೆ ತುಂಬ ಓಡಾಡಲು
ಬೆಳೆದ ಮನೆಯಲ್ಲೊಂದು
ದೀಪ ಹಚ್ಚಲು
ನನಗೊಂದು ಹೆಣ್ಣು ಮಗು ಬೇಕು

ಇದ್ದಾರೆ ಇಬ್ಬರು ಮಗಧೀರರು
ಅವರೂ ತಾಯಿಯಾಗಬೇಕು
ಹುಟ್ಟಬೇಕು ಅವರಲ್ಲಿಯೂ ತಾಯ್ತನ

ಲೋಕ ಒಂದು ಹೆಣ್ಣು
ಎಂದೇ ಜಗತ್ತು ಮಿಡಿಯುತ್ತದೆ
ಹೆಣ್ಣಾಗದ ಪದಗಳಿಗೆ
ಕರುಣೆ ಇರುವುದಿಲ್ಲ
ಸಾಲೂ ಮೂಡುವುದಿಲ್ಲ
ಹೆಣ್ಣಾಗದೇ ಇಲ್ಲಿ
ಕವಿತೆ ಹುಟ್ಟುವುದಿಲ್ಲ
ಬೇಕೇ ಬೇಕು
ನನಗೊಂದು ಹೆಣ್ಣು ಮಗು ಬೇಕು

ನಾನೊಂದು ಹೆಣ್ಣಾಗಬೇಕು.



**–ಬಸವರಾಜ ಹೂಗಾರ**

## ರಾಮು ಸ್ಕೂಲ್



೧
ಹಾಡು ಪಾಡು ರಾಮು
ಎಂದೇ ಪ್ರಸಿದ್ಧರು.
ಹೆಸರಿಲ್ಲದೆ ಹೆಸರಿಗಾಗಿ ಮಾಡದೇ
ಕಂಡ ಕಂಡವರ ಹೆಸರಲ್ಲಿ ಬರೆದದ್ದೇ
ಹಾಡು ಪಾಡಾಗಿದ್ದು!

೨
ಸರಸ್ವತಿ ತಾಣದಲ್ಲಿ ಕಳಸವಿಟ್ಟಂತೆ
ಮನೆ ಮಾಡಿಯ ತುಂಬಾ ಪುಸ್ತಕ
ಹರಿ ಹರಿದ ಕಾವ್ಯ!
ಕಾವ್ಯ ಕಂಗಳ ಪು.ತಿ.ನ, ಲಹರಿಯಲ್ಲಿರುವ ಬೇಂದ್ರೆ,
ರಸಋಷಿ ಕುವೆಂಪು, ಸಂಬಂಜಗಳ ಬೆಸೆದ ಮಹಾದೇವ,
ಹಾಗೇ ಗೋಡೆ ತುಂಬಾ ಬಣ್ಣ ಹಚ್ಚಿಟ್ಟ ಅಮೂರ್ತ ಚಿತ್ರ
ಇವೇ ಅಲಂಕಾರಗಳು!

೩
ಇಲ್ಲಿ ಆಗುವ ಸಾಹಿತ್ಯ ಚರ್ಚೆಗಳಿಗೆ
ಲೆಕ್ಕವಿಲ್ಲ, ಲೆಕ್ಕವಿಟ್ಟವರಿಗೆ ಉಳಿಗಾಲವಿಲ್ಲ.
ಬಸಿದು ಬಸಿದು ಕೃಶಗೊಂಡಂತಾದ ರಾಮು
ಕಾವ್ಯ ಓದಿಬಿಟ್ಟರೆ ಸಾಕು ನಗೆ ಚೆಲ್ಲಿ
ಗೋಡಂಬಿ ಉಪ್ಪಿಟ್ಟು ಕೊಟ್ಟು ಪ್ರೀತಿ ತೋರುತ್ತಾರೆ.

೪
ನಾವು ತುಂಡುಡುಗರು ರಾಮು
ಸ್ಕೂಲೆ ಅಂತಿಮವಲ್ಲ ಎಂಬ
ವಾಗ್ವಾದ ಹಚ್ಚಿಬಿಟ್ಟರೆ
ಮುನಿಸಿಕೊಂಡು, ಪುಳಕಗೊಂಡಂತೆ
ಇಂಥ ಹುಡುಗರನ್ನು ಸಂತೈಸುತ್ತಾ
ಹಳಗನ್ನಡವಾಗಿ ಹೊಸಗನ್ನಡವ ಕಾಣುತ್ತಾರೆ.

೫
ಒಂದಿಷ್ಟು ಪುಣ್ಯಕಟ್ಟಿಕೊಳ್ಳಿ
ಅಲ್ಲಿ ಹೋಗುವವರು
ಹಣ್ಣು ಹಂಪಲನ್ನು ಕೊಂಡು ಹೋಗಿ
ಅದು ಮೆಲ್ಲುವ ಬಾಯಿ
ಕಲಾವಿದರದ್ದು, ಸಾಹಿತಿಗಳದ್ದು,
ಕ್ರಾಂತಿಕಾರಿಗಳದ್ದು!

೬
ನಾನು ಕಂಡಿಲ್ಲ ...ಹೀಗೆ
ಇವರ ತಾಯಿ ಮಹಾತಾಯಿ
ಒಂದೊಂದೆ ಮೆಟ್ಟಿಲು
ಹತ್ತುತ್ತಾ ಹತ್ತುತ್ತಾ
ಜ್ಞಾನದ ಬಟ್ಟಲಿಗೆ
ನಂದಾ ಬಟ್ಟಲಿಗೆ
ಬೆಳಕೆಂಬಂತೆ ಆಗಾಗ ಕಾಣುತ್ತಾರೆ.

೭
ತನ್ನ ಮಡಿಲಲ್ಲಿ ಎಂಥ ಸಂಭ್ರಮ
ಸರಸ್ವತಿಗೆ ಇನ್ನು ಬೇರೆ ಪೂಜೆ ಬೇಕೆ?
ಜ್ಞಾನ ಹಂಚಿಕೊಂಡರೆ ಸಾಕಲ್ಲವೆ
ಮಂತ್ರಗಳೇಕೆ ಬೇಕು?
ಕಾವ್ಯವೇ ಸಾಕಲ್ಲವೆ.



**–ಅಪೂರ್ವ ಡಿ' ಸಿಲ್ವ**

ಲಹರಿ..

# ನಾನೇಕೆ ಬರೆಯುವುದಿಲ್ಲ?

–ವಿಜಯೇಂದ್ರ ಪಾಟೀಲ



**ಚಿ**ಕ್ಕಂದಿನಿಂದಲೂ ನನ್ನಲ್ಲೊಂದು ಸಮಸ್ಯೆಯಿದೆ. ಏನಾದರೂ ಊಹಿಸಿಕೊಂಡು ಅಥವಾ ಕಾಲ್ಪನಿಕ ಸನ್ನಿವೇಶ ನಿರ್ಮಿಸಿಕೊಂಡು ನಾಲ್ಕಾರು ಸಾಲು ಬರೆಯುವುದೆಂದರೆ ಜೀವದ ಸುತ್ತು ಬರುತ್ತದೆ.

ಒಂದು ಸಲ ಮಾಸ್ತರರು 'ನಾನು ವಿಮಾನ ಚಾಲಕನಾದರೆ' ಎಂಬ ವಿಷಯವಾಗಿ ನಿಬಂಧ ಬರೆದುಕೊಂಡು ಬರಲು ಹೇಳಿದರು. ನಾವೆಲ್ಲ ವಿಮಾನ ನೋಡಿದವರೇ. ಅಷ್ಟು ದೂರದ ಆಕಾಶದಲ್ಲಿ ಅದು ಒಂದು – ಒಂದೂವರೆ ಅಡಿಯಷ್ಟು ಅಡ್ಡ – ಉದ್ದದ ಕಡ್ಡಿಯಂತೆ ಗುರ್ ಎಂದು ಶಬ್ದ ಮಾಡುತ್ತ ಹಾರಿ ಹೋಗುವುದನ್ನು ಟೊಪ್ಪಿಗೆ ನೆಲಕ್ಕೆ ಬೀಳುವಷ್ಟು ತಲೆಯೆತ್ತಿ ಎರಡು ಮೂರು ದಿನಕ್ಕೊಮ್ಮೆ ನೋಡಿ ಸಂಭ್ರಮಿಸುತ್ತಿದ್ದೆವು. ಈ ಸಂಭ್ರಮ ನಾನು ಅದರ ಚಾಲಕನಾದರೆ ಎಂಬ ಕಲ್ಪನೆಯೊಂದಿಗೆ ಹೊರಟೇಹೋಯ್ತು. ಇದನ್ನು ಬರೆಯುವ ಮೊದಲೇ ಪ್ರಧಾನಮಂತ್ರಿಗಳು ತೀರಿ ಹೋಗಿ, ಅಷ್ಟರಲ್ಲಿ ವರ್ಷಮಧ್ಯದ ರಜೆ ಬಂದಿದ್ದರಿಂದ ಮಾಸ್ತರರು 'ನಾನು ಪ್ರಧಾನಮಂತ್ರಿಯಾದರೆ?' ಎಂಬ ಇನ್ನೊಂದು ನಿಬಂಧವನ್ನು ಒಟ್ಟಿಗೆ ಎರಡು ರಜೆಯ ಅವಧಿಯಲ್ಲಿ ಬರೆದುಕೊಂಡು ಬರಲು ಆಜ್ಞಾಪಿಸಿದರು. ಅಲ್ಲಿಗೆ ನನ್ನ ರಜೆಯ ಸ್ವಾರಸ್ಯವೇ ಇಲ್ಲದಂತಾಗಿಬಿಟ್ಟಿತು.

ಅಂದಿನ ನಾವೆಲ್ಲ ಸೈಕಲ್ ಬಲ್ಲವರಾಗಿದ್ದೆವು. ಕಾರನ್ನು ನೋಡಿ, ಬಸ್ಸನ್ನು ಏರಿ ಗೊತ್ತಿದ್ದಿತು. ರೈಲು–ಹಡಗುಗಳನ್ನು ಚಿತ್ರದಲ್ಲಿ ಮಾತ್ರ ನೋಡಿದವರಾಗಿದ್ದೆವು. ಈ ಹಿನ್ನೆಲೆಯ ನಾವು ಅಷ್ಟೆತ್ತರದ ವಿಮಾನಕ್ಕೆ ಚಾಲಕರಾಗುವುದೆಂದರೆ! ಬಹುಶಃ ಇಂದು ನನ್ನನ್ನು ಆಗಾಗ ಕಾಡುತ್ತಿರುವ 'ವರ್ಟಿಗೋ' ಕಾಯಿಲೆ ಅಂದಿನ ಭಯದ ಕಾವಿನಲ್ಲೇ ಮೊಳಕೆಯೊಡೆದಿರಬೇಕು. ಮಾಸ್ತರರು ನಮ್ಮನ್ನು ಹಂತಹಂತವಾಗಿ ಕಾರು, ಬಸ್ಸು, ರೈಲು–ಹಡಗುಗಳ ಚಾಲಕರನ್ನಾಗಿಸಿ, ಅನುಭವ ನೀಡಿ, ಪ್ರಯಾಣಿಕರನ್ನು ಬದುಕಿಸಿ ನಾವು ಬದುಕುವಷ್ಟರ ಮಟ್ಟಿಗೆ ತಯಾರು ಮಾಡಿದ್ದರೆ ವಿಮಾನ ಹೊಡೆಯುವ ಧೈರ್ಯ ಮಾಡಬಹುದಿತ್ತೇನೋ! ಒಮ್ಮಿಂದೊಮ್ಮೆಲೆ ವಿಮಾನದ ಎತ್ತರಕ್ಕೇರುವುದೆಂದರೆ? ವಿಮಾನ ನಡೆಸುವಾಗ ಆಕಸ್ಮಾತ್ ಕೆಳಗೆ ದೃಷ್ಟಿ ಬಿದ್ದು ತಲೆ ಸುತ್ತಿ ಬಂದರೆ? ಆಗ ಬೀಳುವುದು ವಿಮಾನದ ಒಳಗೋ ಹೊರಗೋ ಎಂಬುದೂ ನಮಗೆ ಗೊತ್ತಿರಲಿಲ್ಲ.

ಈ ಚಿಂತೆಯ ಜೊತೆಗೆ ರಾತ್ರಿ ಇನ್ನೊಂದು ಆಲೋಚನೆಯೂ ತಲೆಹೊಕ್ಕಿತು. 'ನಾನು ಪ್ರಧಾನಮಂತ್ರಿಯಾದರೆ?' ಎಂಬುದನ್ನು ವಿಮಾನದ ಶಬ್ದದಲ್ಲಿ ಮರೆಯುವಂತಿರಲಿಲ್ಲ. ನಾನು ಪ್ರಧಾನಿಯಾದರೆ ವಿದೇಶಕ್ಕೆ ಹೋಗಬೇಕಾಗುವುದು. ಅದೊಂದು ಅಥವಾ ಅದೊಂದೇ ಚಂದದ ಕೆಲಸ. ಆದರೆ ವಿಮಾನದ ಮೂಲಕವೇ ಹೋಗಬೇಕಾಗುವುದು. ನಾನು ಪ್ರಧಾನಮಂತ್ರಿಯಾಗಿ ನನ್ನ ವಿಮಾನಕ್ಕೆ ನನ್ನಂಥವನೇ ಒಬ್ಬ – ಉದಾಹರಣೆಗೆ ಪತ್ತಾರ ಕಾಳಪ್ಪ – ಚಾಲಕನಾದರೆ? ನಾವು ಸೈಕಲ್ ಹೊಡೆಯುವಾಗ ಬಿದ್ದದ್ದಕ್ಕೆ, ಕೆಡವಿದ್ದಕ್ಕೆ, ಯಾರು ಯಾರಿಗೋ ಹಾಯಿಸಿದ್ದಕ್ಕೆ ಲೆಕ್ಕವೇ ಇಲ್ಲ. ಇಷ್ಟಾಗಿ ಅವನು ಕೂಡ ಈ ಪ್ರಬಂಧಗಳೆರಡನ್ನೂ ಬರೆಯುವವನಾದ್ದರಿಂದ ಚಾಲಕನಾಗಬಹುದು ಅಥವಾ ಪ್ರಧಾನಮಂತ್ರಿಯೇ ಆಗಬಹುದು. ಒಟ್ಟಾರೆ, ಪ್ರಧಾನಮಂತ್ರಿಯಾಗಿ ವಿಮಾನದಲ್ಲಿ ಕೂಡ್ರುವುದು ಅಥವಾ/ಹಾಗೂ ಪ್ರಧಾನಮಂತ್ರಿಯಂಥವರನ್ನು ಕೂಡ್ರಿಸಿಕೊಂಡು ವಿಮಾನ ಚಾಲನೆ ಮಾಡುವುದು ಎರಡೂ ಅಪಾಯಕಾರಿ. ಇಂಥ ಸನ್ನಿವೇಶದಲ್ಲಿ ನಿಬಂಧಗಳನ್ನು ಬರೆದುಕೊಂಡು ಕೂಡ್ರುವುದು ನನ್ನಿಂದಾಗದೇ ಮಾಸ್ತರರನ್ನುದ್ದೇಶಿಸಿ ನಾಲ್ಕು ಐದು ಪುಟಗಳ ನಿ–ವೇದನಾ ಪತ್ರವೊಂದನ್ನು ಬರೆದು. ಕಷ್ಟಗಳನ್ನೆಲ್ಲ ವಸ್ತುನಿಷ್ಠವಾಗಿ ವಿವರಿಸಿ, ದಯವಿಟ್ಟು ಆ ಎರಡೂ ಹುದ್ದೆಗಳ ಜವಾಬ್ದಾರಿಯಿಂದ ನಮ್ಮನ್ನು – ಕನಿಷ್ಠ ನನ್ನನ್ನು – ಬಿಡುಗಡೆ ಮಾಡುವಂತೆ ಕೋರಿದೆ. ಪರಿಣಾಮ ಅನಿರೀಕ್ಷಿತವೂ ಸಂತೋಷಕಾರಕವೂ ಆಗಿದ್ದಿತು. 'ವಿಭಿನ್ನ ಬರಹ!. ಮುಂದೆಯೂ ಹೀಗೇ ಬರೆಯುತ್ತಿರು!' ಎಂದು ಮಾಸ್ತರರು ಬೆನ್ನು ತಟ್ಟಿದರು!!


ಈ ಸುಖಾಂತ್ಯದ ಪ್ರಭಾವವೋ ನನ್ನ ಅನೂಚಾನ ಸ್ವಭಾವದಲ್ಲಿನ ರಚನಾ ದೋಷವೋ, ಅಂತೂ ಯಾರಾದರೂ ಏನಾದರೂ ಕೇಳಿದರೆ ಅದರ ವಿರುದ್ಧ ದಿಕ್ಕಿನತ್ತ ಯೋಚಿಸುವ ಕ್ರಮವೊಂದು ಬೆಳೆದುಕೊಂಡು ಬಂತು. ನಾನು ಯಾರಿಗೂ ಹೇಳಿಲ್ಲದ ವಿಚಿತ್ರ ಸಂಗತಿಯನ್ನು ಹೇಳಬೇಕು. ಯಾರದರೂ ಎದುರು ಬಂದು ನಿಂತರೆ ಫಕ್ಕನೆ ಅವರ ತಲೆಯ ಹಿಂಭಾಗ ಮೊದಲು ಕಂಡಂತಾಗಿ ಆಮೇಲಾಮೇಲೆ ಅವರ ಕಣ್ಣು ಮೂಗು ಬಾಯಿಗಳು ಮುಂದೆ ಬಂದು ನಿಲ್ಲುತ್ತವೆ. ಹೀಗಾಗುವುದನ್ನು ಹೇಳುವುದಾದರೂ ಹೇಗೆ?

ಇದೆಲ್ಲ ಕಳೆದು ಎಷ್ಟೋ ವರ್ಷಗಳಾಗಿ ನೌಕರಿ–ಗೀಕರಿ ಮಾಡಿಕೊಂಡು ಆರಾಮಾಗಿ ಇದ್ದ ಈ ವೇಳೆ, ಮೊನ್ನೆ ಮೊನ್ನೆ ನನ್ನನ್ನು ಹುಡುಕಿಕೊಂಡು ಪತ್ರಿಕಾ ಸಂಪಾದಕರ ಪತ್ರವೊಂದು ಬಂತು. 'ನಾನೇಕೆ ಬರೆಯುತ್ತೇನೆ?' ಎಂಬ ವಿಷಯವಾಗಿ ಲೇಖನವೊಂದನ್ನು ಅವರು ಕೇಳಿದ್ದರು. ನಾನು ಆ ಕ್ಷಣಕ್ಕೇ ಹಕೀಕತ್ತು ಅರ್ಥೈಸಿಕೊಂಡು ಸಾಧ್ಯವಾದರೆ ಎಲ್ಲರಿಗೂ ತಿಳಿಯಲಿ ಎಂಬಂತೆ ನಸುನಕ್ಕು, ಅದೇ ಬೀದಿಯ ಕೊನೆಯಲ್ಲಿರುವ ನನ್ನ ಹೆಸರಿನವರೇ ಆದ ಲೇಖಕ ಮಹಾಶಯರಿಗೆ ಅದನ್ನು ಮುಟ್ಟಿಸಿ ಬಂದೆ. ನನಗೆ ಸಂಬಂಧವಿಲ್ಲದಿದ್ದರೂ 'ನಾನೇಕೆ ಬರೆಯುತ್ತೇನೆ?' ನನ್ನನ್ನು ಕಾಡತೊಡಗಿತು.

ಈ 'ನಾನೇಕೆ ಬರೆಯುತ್ತೇನೆ?' ಅಂತ ಏನೇನೋ ಬರೆದುಕೊಡುವುದೆಂದರೆ ಒಂದು ರೀತಿಯಲ್ಲಿ 'ನೀವೇಕೆ ಬರೆಯುತ್ತೀರಿ?' ಅಥವಾ 'ನೀವು ಏಕಾದರೂ ಬರೆಯುತ್ತೀರಿ?' ಎಂದು ಕಾರಣ ಕೇಳಿ ರವಾನಿಸಿದ ನೋಟೀಸಿನ ಧಾಟಿಯುದ್ದಕ್ಕೆ ಸ್ಪಷ್ಟೀಕರಣ ಕೊಟ್ಟಂತಾಗುವುದಿಲ್ಲವೇ? ಒಂದೇ ಓಣಿಯಲ್ಲಿರುವುದು ಆಕಸ್ಮಿಕವೇ? ವಿಚಿತ್ರವೆಂದರೆ ನನಗೆ ಬರಬೇಕಾದ ಪತ್ರಗಳು ನನಗೇ ಬರುತ್ತವೆ. ಆದರೆ ಅವನ ಸಾಹಿತ್ಯ ಸಂಬಂಧೀ ಕಾಗದಗಳು ನನ್ನಲ್ಲಿಗೆ ಬಂದು ನಾನು ಓದಿದ ಮೇಲೆಯೇ ಅವನಿಗೆ ತಲುಪುತ್ತವೆ. ಇವೆಲ್ಲ ಆಗುತ್ತಿರುವುದು ಹಾಗೇ ಸುಮ್ಮನೇಯೇ? ಇದರ ಹಿಂದೆ ಯಾವುದಾದರೂ ಅಲೌಕಿಕತೆಯ ಪಿತೂರಿ ಇದ್ದಿರಬಹುದೇ? ಇದರ ಜೊತೆಗೆ 'ನಾನೇಕೆ ಬರೆಯುತ್ತೇನೆ?' ಎಂಬ ಪ್ರಶ್ನೆಗೆ ಯಾವುದೋ ಕಾಣದ ಕೈ ನನ್ನಿಂದ ಉತ್ತರವನ್ನಪೇಕ್ಷಿಸುತ್ತಿರುವಂತಿದೆ ಎಂದು ನನ್ನ ಪೂರ್ವಾಗ್ರಹದ ಸಂವೇದನಶೀಲೆ ಸೂಚಿಸತೊಡಗಿದಳು. ಇದೊಂದು ಕುಚೋದ್ಯದಂತೆಯೂ ಕಾಣತೊಡಗಿತು.

'ನಾನೇಕೆ ಬರೆಯುತ್ತೇನೆ?' ಎಂಬುದನ್ನು ಬರೆಯಬೇಕಾದರೆ ಅದಕ್ಕೂ ಮೊದಲು ನಾನು ಏನುಕೇನಾದರೂ ಬರೆಯಬೇಕು. ಅಷ್ಟೇ ಸಾಲದು. ಬರೆಯುತ್ತಲೇ ಇರಬೇಕು. ಇದೆಲ್ಲ ಯಾರಿಗೆ ಬೇಕು? ಒಟ್ಟಾರೆ ಬರೆಯದೇ ಆರಾಮಾಗಿ ಇರುವ ನನ್ನನ್ನು ಬರೆಯಿಸುವ ಮೂಲಕ ಮತ್ತೆ ಪ್ರಧಾನಿ ಅಥವಾ ವಿಮಾನ ಚಾಲಕನನ್ನಾಗಿಸುವ ಹುನ್ನಾರ ಸಾಗಿದಂತೆ ಭಾಸವಾಗತೊಡಗಿ ಪುನರ್‌ನಿ–ವೇದನೆಗೆ ಸಿದ್ಧನಾದೆ. 'ನಾನೇಕೆ ಬರೆಯುವುದಿಲ್ಲ?'

'ನಾನೇಕೆ ಬರೆಯುವುದಿಲ್ಲ?' ಎಂಬುದನ್ನು ಬರೆಹದ ಮೂಲಕವೇ ಹೇಳಬೇಕಾಗಿ ಬಂದದ್ದು ದ್ವೈತವೋ, ದ್ವಂದ್ವವೋ, ದೈವೀ ದುರ್ವಿಪಾಕವೋ ತಿಳಿಯುತ್ತಿಲ್ಲ. ಇದೊಂದು ನಿರೀಕ್ಷಣಾ ಜಾಮೀನಿನಂತೆ ಕಂಡರೂ ನಾನು ಯಾವುದೇ ರೀತಿಯ ಸಂದೇಹಾಸ್ಪದ ಬರವಣಿಗೆಯಲ್ಲಿ ತೊಡಗಿಕೊಂಡವನಲ್ಲ. ಮುಂದೆಯೂ ಜಾತಿ/ಪ್ರದೇಶ/ಸರಕಾರೀ ಪರ ಅಥವಾ ವಿರೋಧ ಆಧಾರಿತ ಲೇಖಕರ ಗುಂಪು ಅಥವಾ ಒಂಟಿಸಲಗದಂಥವರ ನೆರಳನ್ನು ಆಶ್ರಯಿಸುವುದಿಲ್ಲ. ಬರೆಯುವವರ ಹೊಸ ಕೂಟ ಸ್ಥಾಪಿಸುವುದಿಲ್ಲ. ಎಂದೆಂದೂ ಬರೆಯದವರ ಆದರೆ ಓದುವಂಥವರ ಗುಂಪನ್ನು ಕಟ್ಟಬಹುದು.



ಇದರ ಜೊತೆಗೇ ನಾನು ವಯಸ್ಸಿನಿಂದಲೂ ಬುದ್ಧಿಯಿಂದಲೂ minor ಆಗಿದ್ದಾಗ ತಿಳಿಯದೇ ಬರೆದವುಗಳು ಈ ಕ್ಷಣದಿಂದಲೇ ಸನ್ಯಾಸಿಗಳ ಪೂರ್ವಾಶ್ರಮದಂತೆ ಜವಾಬ್ದಾರಿಯಿಂದ ಕಳಚಿ ಹೋಗುತ್ತವೆ.

ನಾನು ಪದದ್ವಯಗಳನ್ನು ನಿರಾಕರಿಸಿ ಬರೆದ ನಿವೇದನಾ ಪತ್ರದ ನಂತರ ನನ್ನ ಹದಿಹರೆಯದಲ್ಲಿ 'ದಾರಿ ತಪ್ಪಿ ನಡೆದೆ, ಸೇರಿದೆ ಕುಜನರ' ಎನ್ನುವಂತಾಗಿ ಕೆಲ ಪದ್ಯದಂಥವುಗಳನ್ನು ಬರೆದೆ. ಸಾಲದ್ದಕ್ಕೆ ಅವುಗಳನ್ನು ಪ್ರೊ. ಭಾಗೋಜಿಯವರಿಗೆ ತೋರಿಸಿದೆ. ಅವರು ಅವುಗಳನ್ನು ಓದಿ, ಕಣ್ಣಲ್ಲಿ ನೀರು ತಂದು, ಕರುಣಾಭಾವದಿಂದೊಮ್ಮೆ ನೋಡಿ, "ಏನಾದರೂ ಬರೆವ ಮೊದಲು ಬಹಳ – ಬಹಳ ಓದಬೇಕು. ಆಮೇಲೆ ಬೇಕೆಂದರೆ ಬರೆಯುವ ಧೈರ್ಯ ಮಾಡಬೇಕು" ಎಂದು ಹೇಳಿ ಮಾಸ್ತಿ, ಕುವೆಂಪು, ಕಾರಂತ, ಬೇಂದ್ರೆ ಮುಂತಾದವರ ಒಂದು ಹೊರೆ ಪುಸ್ತಕ ನೀಡಿದರು. ಹೊತ್ತುಕೊಂಡು ಬಂದೆ. ಅವಮಾನವೆನ್ನಿಸಿದಂತಾಗಿತ್ತು. ಪುಸ್ತಕ ಓದುವ ಮೊದಲು ಪುನಃ ನನ್ನ ಪದ್ಯಗಳನ್ನೋದಿದೆ. ಅದೇ ನನ್ನ ಸ್ವಂತ ಸಾಹಿತ್ಯದ ಅಂತಿಮ ದರ್ಶನವಾದಂತಾಯಿತು. ಮುಂದೆಂದೂ ಬರೆಯಲಿಲ್ಲ.

ಈ ಮಹಾನ್ ಲೇಖಕರ ಓದಿನಿಂದ ಸಂತೋಷ ಹಾಗೂ ದುಃಖ ಏಕಕಾಲಕ್ಕೆ ಉಂಟಾಗುತ್ತಿದ್ದುವು. ಓದಿನ ಸಂತೋಷ ಹಾಗೂ ಅವರಂತೆ ಬರೆಯಲಾಗದ್ದರ ದುಃಖ. ಒಟ್ಟಾರೆ ಒಂದು ರೀತಿಯ ತಳಮಳ. ಅದೇ ಸುಮಾರಿಗೆ ಶಂಕರಚಂದ್ರ ಬಗಲಬಂಡಿಯ ಪರಿಚಯವಾಯ್ತು. ಈ ಶಂಚಂಬಂ (ಕಾವ್ಯನಾಮ) ನಮ್ಮ ಹಾಸ್ಟೆಲ್ಲಿನ ಪ್ರಸಿದ್ಧ ಕವಿ. ಬಿಟ್ಟ ಸ್ಥಳ ತುಂಬಿರಿ ಮಾದರಿಯ ಚುಟುಕು ಬರೆದು ಸಂದರ್ಭಕ್ಕನುಗುಣವಾಗಿ ಅತಿಥಿ, ಅಧ್ಯಕ್ಷರ ಹೆಸರು ತೂರಿಸಿ ಜೀನಿಯಸ್ ಎನ್ನಿಸಿಕೊಂಡಿದ್ದ.

*ಅಂದು ದಾದಾಭಾಯಿ ನವರೋಜಿ*
*ಇಂದು ರಾಧಾಬಾಯಿ ದಾಬೋಜಿ,*

ಎಂದು ಕಾಲೇಜಿನ ಅಧ್ಯಕ್ಷರ ಹೆಂಡತಿಯನ್ನೇ ಹೊಗಳಿದ್ದ. ಅವನ ಬರವಣಿಗೆಯ ಗುಟ್ಟು ತಿಳಿಯಲು ಅವನ ಕೋಣೆಗೆ ಹೋದೆ. ಅವನಿಗೆ ಅನ್ಯರ ಹಂಗಿರದ ಸ್ವಂತದ ಬರವಣಿಗೆಯೇ ಸ್ಫೂರ್ತಿ. ದಿನವಹಿಯಿಂದ ಅಂಕಲಿಪಿ ಸೈಜಿನ ಪುಸ್ತಕಗಳನ್ನು ಬರೆದಿದ್ದ. "ಬೇರೆಯವರದನ್ನು ಓದುತ್ತ ಕಾಲಹರಣ ಮಾಡಿದರೆ ನಮಗೆ ಬರೆಯಲು ವೇಳೆ ಸಿಗುವುದಿಲ್ಲ" ಎಂದು ಎಲ್ಲರತ್ತ ತಿರುಗಿ ಕಿವಿಮಾತು ಹೇಳಿದ.

ಒಳ್ಳೆಯದನ್ನು ಓದುತ್ತ ಹೋದಂತೆ ಬರೆಯುವ ಧೈರ್ಯವೂ ಉಡುಗತೊಡಗಿತು. ಶಂಚಂಬಂ ಮಾದರಿಯನ್ನು ಗಮನಿಸಿದಾಗ ಜಿಗುಪ್ಸೆಯುಂಟಾಗತೊಡಗಿತ್ತು. ಮಧ್ಯದವರು ಅಷ್ಟಿಷ್ಟು ಧೈರ್ಯ ತರಿಸುತ್ತಿದ್ದರೂ ಆ ಸಾಲಿನಲ್ಲೂ ಭರ್ತಿ ಕ್ಯೂ ಇತ್ತು. ಗುಂಪಿನಲ್ಲಿ ಗೋವಿಂದನಾಗುವುದು ನನಗೆ ಬೇಡವಾಗಿತ್ತು.

'ಶ್ರೇಷ್ಠತೆಯ ವ್ಯಸನ' ಕುರಿತಾಗಿ ಆಗ ಚರ್ಚೆ ನಡೆಯುತ್ತಿತ್ತು. ಎಲ್ಲರೂ ಭೀಮಸೇನ ಜೋಶಿ ಆಗಲಾರರೆಂದು ಕೆಲವರು ಹೇಳಿದರೆ, ಕನಿಷ್ಠ ಶ್ರುತಿ–ತಾಳಗಳಾದರೂ ಸಂಗೀತದಲ್ಲಿ ಬೇಕೇ ಬೇಕು, ಇಲ್ಲದಿದ್ದರೆ ಹಾಡಬಾರದೆಂದು ಅನೇಕರು ವಾದಿಸುತ್ತಿದ್ದರು. ಸಾಹಿತಿಗಳ ಬದುಕು–ಬರೆಹಗಳ ಮಧ್ಯದ ಅಂತರವಂತೂ ನಿರಂತರವಾಗಿ ಚರ್ಚೆಯಾಗುತ್ತಿತ್ತು. ಕೆಲವು ಸಾಹಿತಿಗಳು, 'ಬರೆಯುವ ಸಂದರ್ಭ ಬಿಟ್ಟರೆ ನಾವೂ ಕೇವಲ ಮನುಷ್ಯರು" ಎಂದು ಹೇಳಿದ್ದುದು ಅವರನ್ನು ಜಗಲಿಯ ಮೇಲೆ ಇಟ್ಟು ನೋಡಬಯಸಿದವರಿಗೆ ಆಘಾತ ತರುತ್ತಿತ್ತು. ಜಾತಿ, ಪ್ರದೇಶ, ಇಜಮ್ಮುಗಳ ಜೊತೆಗೆ ಸಾಹಿತಿಗಳ ರಾಜಕೀಯ ಪಕ್ಷಗಳ ಸಂಲಗ್ನತೆ ಚರ್ಚೆಯಾಗಿ ಕೆಸರೆರಚಾಟವೂ ಜೋರಾಗಿ ಸಾಗುತ್ತಿತ್ತು. ಪ್ರಶಸ್ತಿ ಪ್ರಕಟಣೆಯ ಸಂದರ್ಭಗಳಂತೂ ಸಾಹಿತಿಗಳನ್ನು 'ಅವರೂ ಕೇವಲ ಮನುಷ್ಯರು' ಎಂಬುದನ್ನು ಸಾಬೀತುಪಡಿಸಲೆಂದೇ ಇರುವಂತಿರುತ್ತಿದ್ದುವು.

ಮನೆಯ ಅನ್ನವನ್ನುಂಡು, ಹಗಲೂರಾತ್ರಿ ಕುಳಿತು ಬರೆದು ಜನರಿಂದ ಏನನ್ನಾದರೂ ಏಕೆ ಅನ್ನಿಸಿಕೊಳ್ಳಬೇಕು? ಅಲ್ಲದೇ ಚಿಕ್ಕ ಪುಟ್ಟ ತಪ್ಪುಗಳನ್ನು ಮಾಡುವ ಹಕ್ಕುಗಳನ್ನು ಏಕೆ ಬಿಟ್ಟುಕೊಡಬೇಕು ಎಂಬುದು ನನ್ನ ಹೆಂಡತಿಯ ಪ್ರಶ್ನೆ. ಹೆಚ್ಚೂ ಕಡಿಮೆ ನನ್ನದೂ ಇದೇ ನಿಲುವು. ಒಂದು ಏನನ್ನಾದರೂ ಬರೆಯಲು ವಾರಗಟ್ಟಲೆ ತಿಂಗಳುಗಟ್ಟಲೆ, ಕೆಲಸಾರಿ ವರ್ಷಗಟ್ಟಲೆ ವೇಳೆ ಬೇಕು. ಕಡೆಗೆ ಅದು ವಿಮರ್ಶಕರ ಬಾಯಿಗೆ ಹೋಗಿ ಬದುಕಿ ಬರಬೇಕು. ಆದರೆ ಅದೇ ವೇಳೆ, ಮಾಡಿಟ್ಟ ಹಲವು ಹತ್ತು ಪಕ್ವಾನ್ನಗಳಲ್ಲಿ ಬೇಕಾದ್ದನ್ನು ಆಯ್ದುಕೊಂಡು ತಿನ್ನುವಂತೆ ಯಾವ ಬೇಕಾದ ಪುಸ್ತಕವನ್ನಾದರೂ ಆಯ್ದುಕೊಂಡು ಎಲ್ಲಾದರೂ ಕೂತುಕೊಂಡು ಓದುತ್ತಿರಬಹುದು. ಈ ಸುಖದ ಮುಂದೆ ಬರವಣಿಗೆಯ ಜವಾಬ್ದಾರಿ ಏಕೆ ಬೇಕು? ಹಾಡುವವರು ಹಾಡಲಿ, ನಾವು ಕೇಳೋಣ. ವಿಮಾನ ನಡೆಸುವವರು ನಡೆಸಲಿ, ಸಾಧ್ಯವಾದರೆ ಕೂಡ್ರೋಣ. ಉದ್ಯಾನವನ ನಿರ್ಮಿಸುವವರು ನಿರ್ಮಿಸಲಿ, ಕುಳಿತು ಆನಂದಿಸೋಣ. ನಾವೇ ಕುಣಿಯದೇ ಕುಳಿತು ನೃತ್ಯ ನೋಡೋಣ.

ಒಂದು ಸಾರಿ ವೇದಿಕೆಯಲ್ಲಿ ೧೨ ಜನ ಲೇಖಕರು, ೧೦ ಜನ ಸಭಿಕರನ್ನು ನೋಡಿದ ಮೇಲಂತೂ ಈ ಅನುಪಾತಕ್ಕೇನಾದರೂ ಮಾಡಬೇಕೆಂದೆನ್ನಿಸಿತು. ಸಭಿಕರನ್ನು ತರುವುದಂತೂ ಕನ್ನಡ ಮಾಧ್ಯಮ ಹೋದ ಮೇಲೆ ತುಂಬ ಕಷ್ಟದ್ದಾಗಿದೆ. ಲೇಖಕರನ್ನೇ ಕಡಿಮೆಯಾಗಿಸಬೇಕು. ಹಾಗಾದರೆ ನಾನು, ನನ್ನಂಥವರು ಬರೆಯುವುದನ್ನು ಮಾಡಬಾರದು. ಸಭಿಕರಾಗಿ ಸಂತೋಷಪಡಬೇಕು. ಬರೆಯದಿರುವುದನ್ನು ಬೇಜವಾಬ್ದಾರಿ ಅಂದುಕೊಳ್ಳಬೇಕಾಗಿಲ್ಲ. ನಿಜಕ್ಕೂ ಒಳ್ಳೆಯ ಓದುಗರಾಗುವುದು ಹೆಚ್ಚು ಜವಾಬ್ದಾರಿಯ ಸಂಗತಿ. ಈ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸುವ ಉದ್ದೇಶದಿಂದಲೇ ನಾನು ಏನನ್ನೋ ಬರೆಯುವುದಿಲ್ಲ. ಇಂದು ಬರುತ್ತಿರುವ ಅಸಂಖ್ಯಾತ ಪುಸ್ತಕಗಳ ಜನನ ನಿಯಂತ್ರಣ ಕೂಡ ನಾನು ಏಕೆ ಬರೆಯುವುದಿಲ್ಲ ಎಂಬುದಕ್ಕೆ ಒಂದು ಮಹತ್ವದ ಕಾರಣ.



***(ಮೂಲತಃ ಬೆಳಗಾಂ ಜಿಲ್ಲೆಯ ಬೆಟಗೇರಿಯವರಾದ ವಿಜಯೇಂದ್ರ ಪಾಟೀಲರು ನಮ್ಮ ನಡುವಿನ ಅಪರೂಪದ ಲಲಿತ ಪ್ರಬಂಧಕಾರರು. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಮ್ಯಾನೇಜರಾಗಿದ್ದ ಪಾಟೀಲರು ಈಗ ನಿವೃತ್ತಿಹೊಂದಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.***

ಪ್ರಿಯ ಓದುಗರೇ


**ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು *ಸಂಪಾದಕರು, ಹೊಸ ಮನುಷ್ಯ*–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ '(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.**

**ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.**

**ಪತ್ರಿಕೆಯಲ್ಲಿನ ಲೇಖನಗಳ ಬಗ್ಗೆ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಬರೆಯ ಬಯಸುವವರು, ಅವನ್ನು ಸಂಕ್ಷಿಪ್ತವಾಗಿ ಬರೆದು ಆಯಾ ತಿಂಗಳ ೨೦ರೊಳಗೆ ನಮಗೆ ತಲುಪುವಂತೆ ಕಳಿಸಬೇಕು. ಈ ಮೇಲ್ ಮಾಡುವುದಾದರೆ ಅದು ನುಡಿ/ಬರಹದಲ್ಲಿ ಇರಬೇಕು.**–ಸಂ.

**ಚಲಚಿತ್ರ**

# ಸಿನಿಮಾ ನೋಡುವ ಕ್ರಮ ಬದಲಾಗಿದೆ: ಗಿರೀಶ್ ಕಾಸರವಳ್ಳಿ



**ಗಿರೀಶ್ ಕಾಸರವಳ್ಳಿಯವರು ರಾಷ್ಟ್ರೀಯ ಮಟ್ಟದಲ್ಲಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲೂ ಹೆಸರು ಮಾಡಿರುವ ಕನ್ನಡದ ಹೆಮ್ಮೆಯ ಚಲಚಿತ್ರ ನಿರ್ದೇಶಕರು. ಪಟ್ಟಾಭಿರಾಮ ರೆಡ್ಡಿ, ಗಿರೀಶ್ ಕಾರ್ನಾಡ್, ಬಿ.ವಿ. ಕಾರಂತರ ನಂತರ ಕನ್ನಡದಲ್ಲಿ ಚಲಚಿತ್ರ ಮಾಧ್ಯಮವನ್ನು ಒಂದು ಕಲಾ ಮಾಧ್ಯಮವೆಂಬ ಬದ್ಧತೆಯಿಂದ ಎಂದೂ ವಿಚಲಿತರಾಗದೆ ಚಿತ್ರಗಳನ್ನು ನಿರ್ದೇಶಿಸುತ್ತಿರುವ ಗಿರೀಶ್, ಈವರೆಗೆ ಯಾರೂ ತಂದುಕೊಡದಷ್ಟು ಜಾಗತಿಕ ಮತ್ತು ರಾಷ್ಟ್ರೀಯ ಮಾನ್ಯತೆ–ಪುರಸ್ಕಾರಗಳನ್ನು ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ಇದಕ್ಕೆ ಕಾರಣ, ಭಾರತದ ಶ್ರೇಷ್ಠ ಚಲಚಿತ್ರ ನಿರ್ದೇಶಕ ದ್ವಯರೆನಿಸಿರುವ ಸತ್ಯಜಿತ್ ರೇ ಮತ್ತು ಋತ್ವಿಕ್ ಘಟಕ್‌ರಂತೆಯೇ ಇವರೂ ಚಲಚಿತ್ರ ಮಾಧ್ಯಮದ ಸಾಮಾಜಿಕ ಆಯಾಮವನ್ನೂ ಬಲ್ಲವರಾಗಿದ್ದು, ಈ ಮಾಧ್ಯಮವನ್ನು ಕೇವಲ ಕಲೆ ಮಾತ್ರವಾಗಿ ಪರಿಭಾವಿಸದೆ, ಇತಿಹಾಸ, ರಾಜಕಾರಣ, ಸಾಹಿತ್ಯ–ಸಂಸ್ಕೃತಿಗಳೊಂದಿಗೆ ಅದನ್ನು ಸಾವಯುವವಾಗಿ ಜೋಡಿಸಬಲ್ಲವರಾಗಿರುವುದು.**

**ಆದರೆ ಗಿರೀಶರ ಇತ್ತೀಚಿನ ಚಿತ್ರಗಳು ನೋಡಬಯಸುವ ಸಾಮಾನ್ಯ ಪ್ರೇಕ್ಷಕರಿಗೆ ಸುಲಭವಾಗಿ ಲಭ್ಯವಾಗುತ್ತಿಲ್ಲ. ಹಿಂದೆ ಇಂತಹವರ ಚಿತ್ರಗಳಿಗೆ ಆಸರೆಯಾಗಿದ್ದ ಚಲಚಿತ್ರ ಸಮಾಜ ಚಳುವಳಿಯೂ ಬತ್ತಿ ಹೋದಂತಿದೆ. ಪ್ರಧಾನವಾಹಿನಿ ಮಾಧ್ಯಮಗಳಲ್ಲಿ ಈ ಚಿತ್ರಗಳ ಚರ್ಚೆಗಳ ಸುಳಿವೂ ಇಲ್ಲ. ಇದಕ್ಕೆಲ್ಲ ಇತ್ತೀಚಿನ ವರ್ಷಗಳಲ್ಲಿನ ಬದುಕಿನ ವಾಣಿಜ್ಯೀಕರಣ ಕಾರಣವಾಗಿರಬಹುದು. ಆದರೂ ಇವರು ಒಂದಾದ ಮೇಲೊಂದರಂತೆ ಚಿತ್ರಗಳನ್ನು ನಿರ್ದೇಶಿಸುತ್ತಲೇ ಇದ್ದಾರೆ. ಇವರ ಈ ನಿರಂತರ ಕ್ರಿಯಾಶೀಲತೆಯ ಮೂಲ ಸೆಲೆಗಳಾದರೂ ಯಾವುವು? ಇವೊತ್ತಿನ ಪ್ರಧಾನವಾಹಿನಿ ಚಿತ್ರೋದ್ಯಮವನ್ನು ಇವರು ಹೇಗೆ ನೋಡುತ್ತಾರೆ ಮತ್ತು ಅದರ ಮಧ್ಯೆ ತಮ್ಮನ್ನು ಹೇಗೆ ಗುರುತಿಸಿಕೊಳ್ಳಬಯಸುತ್ತಾರೆ ಎಂಬ ಕುತೂಹಲದಿಂದ ಪತ್ರಿಕೆ ಅವರಿಗೆ ನಾಲ್ಕಾರು ಪ್ರಶ್ನೆಗಳನ್ನು ಕಳಿಸಿಕೊಟ್ಟಿತು. ತಮ್ಮ ನೆಚ್ಚಿನ ನಿರ್ದೇಶಕ ಅಡೂರ್ ಗೋಪಾಲಕೃಷ್ಣನ್ ಬಗೆಗಿನ ಸಾಕ್ಷ್ಯಚಿತ್ರ ಸಂಬಂಧದ ಪ್ರಯಾಣ ಮತ್ತು ಸಿದ್ಧತಾ ಚಟುವಟಿಕೆಗಳ ಮಧ್ಯೆಯೂ ಅವರು 'ಹೊಸ ಮನುಷ್ಯ' ಪತ್ರಿಕೆಯ ಮೇಲಿನ ಪ್ರೀತಿಯಿಂದ ಇಲ್ಲಿ ಉತ್ತರಿಸಿದ್ದಾರೆ.–**
ಸಂಪಾದಕ

**ನೀವು 'ಕಲಾತ್ಮಕ' ಚಿತ್ರಗಳೆಂಬುವು ಇಲ್ಲ ಎಂದು ಎಷ್ಟೇ ಹೇಳಿದರೂ, ಹಾಗೆಂದೇ ಗುರುತಿಸಲ್ಪಟ್ಟ ಚಲಚಿತ್ರ ಸಂಸ್ಕೃತಿ ಒಂದಿದೆ ಎಂಬುದನ್ನು 'ವ್ಯಾವಹಾರಿಕ' ನೆಲೆಯಲ್ಲಾದರೂ ನೀವು ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸುವೆ. ಈ ಹಿನ್ನೆಲೆಯಲ್ಲಿ ಈ ಮೂರು ಪ್ರಶ್ನೆಗಳು:**


**ಅ) ಅಂತಹ 'ಕಲಾತ್ಮಕ ಚಿತ್ರ ಸಂಸ್ಕೃತಿ'ಯ 'ಕಾಲ' ಮುಗಿದು ಹೋಯಿತು ಎಂದು ನಿಮಗನ್ನಿಸುವುದಿಲ್ಲವೇ?**

ಖಂಡಿತಾ ಇಲ್ಲ. ೨೦೦೦ದಿಂದ ಇತ್ತೀಚೆಗೆ ಮರಾಠಿ. ಮಲೆಯಾಳಂ, ಬೆಂಗಾಲಿಯಲ್ಲಿ ಇಂತಹ ಚಿತ್ರಗಳು ಹೆಚ್ಚೆಚ್ಚು ಬರುತ್ತಿವೆ. ಕನ್ನಡದಲ್ಲೂ– ಆ ಪ್ರಮಾಣದಲ್ಲಿ ಅಲ್ಲದಿದ್ದರೂ – ಈ ಪರಂಪರೆಯ ಚಿತ್ರಗಳು ಬರ್ತಾಯಿವೆ. ೭೦ರ ದಶಕದಲ್ಲಿ ಸಿಕ್ಕಂತಹ ಪ್ರದರ್ಶನಾವಕಾಶಗಳು– ಪ್ರಚಾರ ಸಿಗುತ್ತಿಲ್ಲವಾದ್ದರಿಂದ ಇಂತಹ ಚಿತ್ರಗಳ ತಯಾರಿಕೆ ನಿಂತು ಹೋಗಿದೆ ಎನ್ನುವ ಭಾವನೆ ಅನೇಕರಲ್ಲಿದೆ. ೭೦ರ ದಶಕದಲ್ಲಿ ಕನ್ನಡದಲ್ಲಿ ತಯಾರಾದ 'ಕಲಾತ್ಮಕ' ಚಿತ್ರಗಳು ಎಂದು ಕರೆಸಿಕೊಳ್ಳುತ್ತಿದ್ದ ಚಿತ್ರಗಳಿಗಿಂತ ಇವತ್ತಿನ ಚಿತ್ರಗಳು ಹೆಚ್ಚು ಸಿನಿಮಾತ್ಮಕವಾಗಿವೆ ಎಂದೇ ನನ್ನ ನಂಬಿಕೆ.*(ಸಂಸ್ಕಾರ– ಚೋಮನ ದುಡಿ, ಘಟಶ್ರಾದ್ಧ* ಚಿತ್ರಗಳ ಹೊರತಾಗಿ). ಉದಾಹರಣೆಗೆ ಪಿ. ಶೇಷಾದ್ರಿಯವರ ಚಿತ್ರಗಳನ್ನು ಉದಾಹರಿಸಬಹುದು. ಭಾರತದ ಸಂದರ್ಭದಲ್ಲಂತೂ ಯುವ ನಿರ್ದೇಶಕರು ಹೊಸ ಬಗೆಯ ಚಿತ್ರ ಭಾಷೆಯನ್ನು ರೂಪಿಸುವ ನಿಟ್ಟಿನಲ್ಲಿದ್ದಾರೆ. ಗುರ್ಬಿಂದರ್ ಸಿಂಘ್‌ರ ಪಂಜಾಬಿ ಚಿತ್ರ *ಅನ್ಹೆ ಗೋರೆ ಕೆ ದಾನ್*, ಮರಾಠಿಯ ನಾಗರಾಜ್ ಮುದಲೆಯವರ *ಫ಼ಾಂಡ್ರಿ*, ಬಿಪಿನ್ ವಿಜಯರ ಮಲೆಯಾಳಂ ಚಿತ್ರ *ಚಿತ್ರಸೂತ್ರಂ*ಗಳನ್ನು ಉದಾಹರಿಸಬಹುದು. ಜೊತೆಗೇ ರೇ, ಸೆನ್, ಘಟಕ್ ನಂತರದ ಪೀಳಿಗೆಯ ಎಲ್ಲ ಮುಖ್ಯ ನಿರ್ದೇಶಕರೂ (ಅಡೂರ್ ಗೋಪಾಲಕೃಷ್ಣನ್, ಬುದ್ಧದೇವ್ ದಾಸಗುಪ್ತ, ಜಹ್ನು ಬರುವ, ಶಾಜಿ ಎನ್.ಕರುಣ್, ಸುಮಿತ್ರಾ ಭಾವೆ, ಉಮೇಶ್ ಕುಲಕರ್ಣಿ ಎಲ್ಲರೂ) ಈಗಲೂ ಚಿತ್ರ ಮಾಡುತ್ತಲೇ ಇದ್ದಾರೆ. ಭಾರತೀಯ ಚಿತ್ರರಂಗದ ಸದ್ಯದ ಸ್ಥಿತಿಯ ಸ್ಪಷ್ಟ ಚಿತ್ರಣ ಇಲ್ಲದವರು ಮಾತ್ರ ಕಲಾತ್ಮಕ ಚಿತ್ರ ಸಂಸ್ಕೃತಿಯ ಕಾಲ ಮುಗಿದು ಹೋಯಿತು ಎಂದು ನಿಟ್ಟುಸಿರು ಬಿಡುತ್ತಿರಬಹುದು.

**ಆ) ಎಪ್ಪತ್ತು–ಎಂಬತ್ತರ ದಶಕಗಳಲ್ಲಿ ಚಿತ್ರ ನಿರ್ಮಿಸುತ್ತಿದ್ದಾಗ ಇರುತ್ತಿದ್ದ 'ಉಮೇದು', ಆಗುತ್ತಿದ್ದ 'ಖುಷಿ' ಈಗ ನಿಮಗೆ ಇದೆಯೇ, ಆಗುತ್ತಿದೆಯೇ? ಇಲ್ಲ ಅನ್ನುವುದಾದರೆ, ಏಕೆ?**

ನನಗಂತೂ ಪ್ರತಿ ಚಿತ್ರ ಮಾಡುವಾಗಲೂ ಅದೇ ಖುಷಿ, ಅದೇ ಟೆನ್‌ಶನ್. ಅದೇ ನರ್ವಸ್‌ನೆಸ್ ಆಗುತ್ತಿರುತ್ತದೆ.

**ಇ) ನಿಮ್ಮ ವೀಕ್ಷಕ ಗುರಿ(Target audience)ಯ ವ್ಯಾಪ್ತಿ, ಗುಣಾತ್ಮಕತೆ ಈಗ ಬದಲಾಗಿದೆಯೇ? ಏಕೆ? ಅಥವಾ ಯಾರಿಗಾಗಿ ನೀವೀಗ ಚಿತ್ರಗಳನ್ನು ಮಾಡುತ್ತಿರುವಿರಿ?**










ನಾನು ಯಾವುದೇ ವೀಕ್ಷಕರನ್ನು ಗುರಿಯಾಗಿಟ್ಟುಕೊಂಡು ಚಿತ್ರ ಮಾಡುತ್ತಿಲ್ಲ. ಯಾರು ನೋಡಿದರೂ ಅವರಿಗೆ ಇಷ್ಟವಾಗಬೇಕು ಎನ್ನುವ ತತ್ವ ನನ್ನದು. ಜಿ.ಎಸ್.ಎಸ್‌ರ ಕ್ಷಮೆ ಇರುತ್ತದೆಂದು ಭಾವಿಸುತ್ತಾ ನಾನು ಈ ಮಾತು ಹೇಳಲಿಚ್ಚಿಸುತ್ತೇನೆ. ಎಲ್ಲ ಕೇಳಲಿ ಎಂದು ನಾನು ಹಾಡುತಲಿರುವೆ. ನಾವು ನಮ್ಮೂರ ಚಿತ್ರೋತ್ಸವ ನಡೆಸುವಾಗ ನಮ್ಮ ಅನುಭವಕ್ಕೆ ಬಂದ ಅಂಶ ಪ್ರೇಕ್ಷಕರಿಗೆ ಬರ ಇಲ್ಲವೆಂಬುದು. ಆದರೆ ಸಿನಿಮಾ ನೋಡುವ ಕ್ರಮದಲ್ಲಿ ವ್ಯತ್ಯಾಸ ಆಗಿದೆ ಅಷ್ಟೆ. ಮೊದಲಾದರೆ ಸಿನಿಮಾ ಮಂದಿರಕ್ಕೆ ಪ್ರೇಕ್ಷಕರು ಬರುತ್ತಿದ್ದರು. ಈಗ ಪ್ರೇಕ್ಷಕರಿದ್ದಲ್ಲಿಗೆ ಚಿತ್ರ ಕೊಂಡೊಯ್ಯಬೇಕು. ಡಿಜಿಟಲ್ ತಂತ್ರ ಅದನ್ನು ಸಾಧ್ಯವಾಗಿಸಿದೆ. ನನ್ನ ನಿರೀಕ್ಷೆಯ ಪ್ರಕಾರ ಇನ್ನು ಐದು ಹತ್ತು ವರ್ಷಗಳಲ್ಲಿ ಸಿನಿಮಾ ನೋಡುವ ಕ್ರಮವೇ ಬದಲಾಗುತ್ತದೆ. ಯಾರು ಬೇಕಾದರೂ, ಎಲ್ಲಿಯೋ ಕುಳಿತು ತಮ್ಮ ಆಯ್ಕೆಯ ಸಿನಿಮಾ ನೋಡಬಹುದು. ಆಗ ಈ ಪ್ರಶ್ನೆಯೇ ಅಪ್ರಸ್ತುತವಾಗುತ್ತದೆ.

**ಇವೊತ್ತಿನ 'ಪ್ರಧಾನವಾಹಿನಿ' ಚಲನಚಿತ್ರಗಳನ್ನು (ಭಾರತೀಯ ಮತ್ತು ಕನ್ನಡ ಎರಡೂ) ನೋಡಿದಾಗ ಚಲನಚಿತ್ರಗಳೀಗ ಕಥನಾತ್ಮಕತೆಗಿಂತ ಹೆಚ್ಚಾಗಿ ತಾಂತ್ರಿಕತೆಯನ್ನೇ–ತಂತ್ರಜ್ಞಾನವನ್ನೇ–ಹೆಚ್ಚಾಗಿ ಅವಲಂಬಿಸಿದೆ ಎನ್ನಿಸುತ್ತದೆಯಲ್ಲವೇ? ಇದರಿಂದಾಗಿ ಒಟ್ಟಾರೆಯಾಗಿ ಚಲಚಿತ್ರ ಒಂದು 'ಸಮೂಹ' ಮಾಧ್ಯಮವಾಗಿ ಏನಾಗಬಹುದು? ಇದರ ಪರಿಣಾಮಗಳು ಏನು?**

ಪ್ರೇಕ್ಷಕ ತಂತ್ರಕ್ಕೆ ಮರುಳಾಗುವುದು ಒಂದು ಕ್ಷಣ ಮಾತ್ರ. ಅದೇ ಪುನರಾವರ್ತನೆಯಾಗುತ್ತಿದ್ದರೆ ಅವನಿಗೆ ಅದೂ ಅಪಥ್ಯವಾಗುತ್ತದೆ.

**ನಿಮ್ಮ ಡಬ್ಬಿಂಗ್ ವಿರೋಧಿ ನಿಲುವು(?) ಕಾಲ ಧರ್ಮಕ್ಕೆ ವಿರುದ್ಧವಾದದ್ದು ಮತ್ತು 'ಪ್ರತಿಗಾಮಿ' ಎಂದರೆ ನಿಮ್ಮ ಪ್ರತಿಕ್ರಿಯೆ ಏನು? ಅಥವಾ ಡಬ್ಬಿಂಗ್ ವಿವಾದ ಕುರಿತಂತೆ ನಿಮ್ಮ ನಿಲುವೇನು?**

ಡಬ್ಬಿಂಗ್ ಸಂಸ್ಕೃತಿಯ ಮೂಲಕ ಹಾಲಿವುಡ್ ಚಿತ್ರರಂಗ ಲ್ಯಾಟಿನ್ ಅಮೇರಿಕದ ಚಿತ್ರರಂಗವನ್ನೂ, ಫ್ರೆಂಚ್ ಚಿತ್ರರಂಗ ಆಫ್ರಿಕನ್ ಚಿತ್ರರಂಗವನ್ನೂ ಹೇಗೆ ನಿರ್ವೀರ್ಯವನ್ನಾಗಿಸಿತು ಎನ್ನುವುದರ ಪರಿಚಯ ಇರುವುದರಿಂದ ನಾನು ಡಬ್ಬಿಂಗ್‌ನ್ನು ವಿರೋಧಿಸುತ್ತೇನೆ. ಇದು ಕೇವಲ ವ್ಯವಹಾರದ ಪ್ರಶ್ನೆಯುಲ್ಲ. ಭಾಷೆ, ಸಂಸ್ಕೃತಿಯನ್ನೂ ಆವರಿಸಿಕೊಳ್ಳುತ್ತದಾದ್ದರಿಂದ ಅದರಲ್ಲೊಂದು ರಾಜಕೀಯ ಪ್ರಶ್ನೆ ಎಂದು ನಾನು ನೋಡಲಿಚ್ಚಿಸುತ್ತೇನೆ. ಈ ಕಾರಣಕ್ಕಾಗಿಯೇ ಡಬ್ಬಿಂಗ್ ವಿರೋಧಿ ದನಿ ಮೊದಲು ಎದ್ದಿದ್ದು ಕನ್ನಡದ ಧೀಮಂತ ಸಾಹಿತಿಗಳಾದ ಅ.ನ.ಕೃ, ಮ. ರಾಮಮೂರ್ತಿ ಮೊದಲಾದವರಿಂದ.



(ಆದರೆ ಅನಕೃ ಮತ್ತು ಮ. ರಾಮಮೂರ್ತಿಯವರ ಕಾಲದಲ್ಲಿದ್ದಂತೆ ಬಡಕಲಾಗಿಲ್ಲ. ಚಿತ್ರವೊಂದರ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ಹೂಡುವಷ್ಟು ಉದ್ಯಮ ಬೆಳೆದಿದೆ. ಇಂದಿನ ಕನ್ನಡ ಬಹುತೇಕ ಕನ್ನಡ ಚಿತ್ರಗಳ ಗುಣಮಟ್ಟ ನೋಡಿದರೆ, ಸ್ವಲ್ಪ ಮಟ್ಟಿಗಿನ ಸ್ಪರ್ಧೆ ಅಗತ್ಯವೂ ಎನಿಸುತ್ತಿದೆ. ಜೊತೆಗೆ ಕನ್ನಡಿಗರೇಕೆ ಜಾಗತಿಕ ಮಟ್ಟದ ಕಥನಾತ್ಮಕ, ಸಾಕ್ಷ್ಯ ಮತ್ತು ಮಾಹಿತಿ ಚಿತ್ರಗಳಿಂದ ವಂಚಿತರಾಗಬೇಕು? ಎಂಬ ನನ್ನ ನಂತರದ ಉಪಪ್ರಶ್ನೆಗೆ ಕಾಸರವಳ್ಳಿಯವರೇಕೋ ಉತ್ತರ ಕೊಟ್ಟಿಲ್ಲ)

**ಯು.ಆರ್. ಅನಂತಮೂರ್ತಿಯವರನ್ನು ಕುರಿತ ಸಾಕ್ಷ್ಯಚಿತ್ರದ ನಿರ್ಮಾಣ ನಿಮ್ಮ ಆಯ್ಕೆಯೇ? ಹಾಗಿದ್ದರೆ ಏಕೆ? ಅದನ್ನು ನಿರ್ಮಿಸುವಾಗ ನಿಮ್ಮ ಆಶಯ–ಉದ್ದೇಶಗಳೇನಾಗಿದ್ದವು?**

ಅನಂತಮೂರ್ತಿಯವರ ಕುರಿತ ಸಾಕ್ಷಚಿತ್ರ ನನ್ನ ಆಯ್ಕೆ. ನನ್ನನ್ನು ತುಂಬ ಪ್ರಭಾವಿಸಿದ ಲೇಖಕರೊಬ್ಬರ ಬಗ್ಗೆ ಸಿನಿಮಾ ಮಾಧ್ಯಮದ ಮೂಲಕ ನನ್ನ ವಿಶ್ಲೇಷಣೆಯನ್ನು ನೀಡ ಬಯಸಿ ಈ ಚಿತ್ರ ಮಾಡಿದೆ.

**ನಿಮ್ಮ ಮುಂದಿನ ಕಾರ್ಯ ಯೋಜನೆಗಳೇನು? ಅಡೂರ್ ಬಗ್ಗೆ ಒಂದು ಸಾಕ್ಷ್ಯಚಿತ್ರ ಮಾಡುತ್ತಿರುವಿರಿ ಎಂದು ಕೇಳಿದೆ. ಅವರ ಚಿತ್ರಗಳಲ್ಲಿ ನೀವೇನು ಅಂತಹ 'ವಿಶಿಷ್ಟತೆ' ಕಂಡಿರುವಿರಿ?**


ಸತ್ಯಜಿತ್ ರೇ, ಮೃಣಾಲ್ ಸೇನ್ ನಂತರ ಭಾರತೀಯ ಚಿತ್ರ ರಂಗದಲ್ಲಿ ನನಗೆ ಅತಿ ಮೆಚ್ಚಿಗೆಯಾದ ಚಿತ್ರ ನಿರ್ದೇಶಕ ಅಡೂರ್ ಗೋಪಾಲಕೃಷ್ಣನ್. ಅವರ ಚಿತ್ರ ಶೈಲಿ ನನ್ನ ಚಿತ್ರ ಶೈಲಿಗಿಂತ ಬಹಳ ಭಿನ್ನ. ಅವರ ಮಿನಿಮಲಿಸ್ಟ್ ಶೈಲಿ, ಪಾರದರ್ಶಕವಾದಂತಹ ಅವರ ದೃಶ್ಯ ಬಿಂಬಗಳು, ನಾಟಕೀಯವಾಗಿರದ ಅವರ ಕಥನ ಕ್ರಮ, ಭಾವೋತ್ಕಟತೆಯನ್ನು ಸಂಪೂರ್ಣವಾಗಿ ನಿರಾಕರಿಸುವ ಅವರ ಸಂಯಮದ ನಿರೂಪಣಾ ಶೈಲಿ ಭಾರತೀಯ ಚಿತ್ರ ರಂಗದಲ್ಲೇ ವಿಭಿನ್ನ. ಈ ಚಿತ್ರ ಮಾಡುವ ಮೂಲಕ ಆ ಕಥನ ಕ್ರಮಕ್ಕೆ ನನ್ನ ಪ್ರತಿಕ್ರಿಯೆ ನೀಡುತ್ತಿದ್ದೇನೆ. *



**ಅಡೂರ್ ಗೋಪಾಲಕೃಷ್ಣನ್**



**ಪಿ. ಶೇಷಾದ್ರಿ**



**ಇತಿಹಾಸ**

ಮೂಲ : ಡಾ. ರಾಮಮನೋಹರ ಲೋಹಿಯಾ

# ಭಾರತದ ವಿಭಜನೆಯ ಅಪರಾಧಿಗಳು

ಕನ್ನಡಕ್ಕೆ: ಬಿ.ಎಸ್. ದಿವಾಕರ್



**ಭಾ**ರತದ ವಿಭಜನೆಯಾದದ್ದು ೧೯೪೭ರಲ್ಲಿ. ಅದು ಭಾರತದ ಸ್ವಾತಂತ್ರ್ಯದ ಸವಿಯನ್ನೇ ಕೆಡಿಸಿತ್ತು. ಇದರ ಪರಿಣಾಮಗಳನ್ನು ನಾವು ಹಲವು ರೂಪಗಳಲ್ಲಿ ಇಚಿದೂ ಎದುರಿಸುತ್ತಿದ್ದೇವೆ. ದೇಶದಲ್ಲಿ ಪದೇ ಪದೇ ಸ್ಫೋಟಗೊಳ್ಳುವ ಕೋಮು ಗಲಭೆಗಳು, ಕೋಮುವಾದಿ ರಾಜಕಾರಣ ಮತ್ತು ಕಾಶ್ಮೀರದ ಸಂಕಟಗಳು ಈ ವಿಭಜನೆ ಕೃತಕ, ಹಾಗಾಗಿ ಅಸ್ಥಿರ ಮತ್ತು ಅಪೂರ್ಣವೂ ಆಗಿದೆ ಎಂಬುದನ್ನು ಸೂಚಿಸುತ್ತಿರುವಂತಿದೆ. ವಿಭಜನೆ ಎಂಬ ಈ ದುರಂತದ ಕಥೆಯನ್ನ ಈವರೆಗೆ ಹಲವಾರು ಜನ ಸಾಕ್ಷಿದಾರರಾಗಿ, ಇನ್ನು ಕೆಲವರು ಇತಿಹಾಸಕಾರರಾಗಿ ವಿವಿಧ ಆವೃತ್ತಿಗಳಲ್ಲಿ ಹೇಳಿದ್ದಾರೆ. ಸ್ವಾತಂತ್ರ ಹೋರಾಟಗಾರ ಮತ್ತು ಸಮಾಜವಾದಿ ನಾಯಕ ಡಾ.ರಾಮಮನೋಹರ ಲೋಹಿಯಾ ವಿಭಜನೆಯ ಸಾಕ್ಷಿದಾರರಾಗಿ ತಮ್ಮ **Guilty men of partition** ಪುಸ್ತಕದ ಮೂಲಕ ತಮ್ಮ ಆವೃತ್ತಿಯನ್ನು ದಾಖಲಿಸಿದ್ದಾರೆ.

ಹಾಗೆ ನೋಡಿದರೆ ಈ ಪುಸ್ತಕ ವಿಭಜನೆಯನ್ನು ಕುರಿತ ನಿರೂಪಣೆಯಲ್ಲ. ಅವರು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ **India wins freedom** ಎಂಬ ಪುಸ್ತಕವನ್ನು ವಿಮರ್ಶಿಸುತ್ತಾ ಆರಂಭಿಸಿ ಅದು ಏಕೋ ಈ ಕಥೆಯಾಗಿ ಮಾರ್ಪಾಡಾಯಿತು ಎನ್ನುತ್ತಾರೆ. ವಿಭಜನೆಯ ನಿರ್ಣಯದ ಬಗ್ಗೆ ಚರ್ಚಿಸಲು ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಗೆ ವಿಶೇಷ ಆಹ್ವಾನಿತರಾಗಿ ಹೋಗಿದ್ದ ಲೋಹಿಯಾ ಈ ಕಥೆಯನ್ನು ಸಾಕ್ಷಿದಾರರಾಗಿ ಹೇಳುವಾಗಲೂ, ನಿರ್ಭಿಡೆಯೂ ನಿಷ್ಠುರವೂ ಆದ ಶೈಲಿಯಲ್ಲಿ ಹೇಳಿದ್ದಾರೆ. ಅವರ ಪ್ರಕಾರ ಈ ವಿಭಜನೆಗೆ ಕ್ರಮವಾಗಿ ಈ ಎಂಟು ಕಾರಣಗಳಿವೆ; ಬ್ರಿಟಿಷರ ಕುತಂತ್ರ, ಕಾಂಗ್ರೆಸ್ ನಾಯಕತ್ವದ ಇಳಿ ವಯಸ್ಸಿನ ಬಳಲಿಕೆ, ಹಿಂದೂ–ಮುಸ್ಲಿಂ ದಂಗೆಯ ವಸ್ತುನಿಷ್ಠ ಪರಿಸ್ಥಿತಿ, ಜನತೆಯಲ್ಲಿನ ದೃಢನಿಶ್ಚಯ ಮತ್ತು ಕಸುವಿನ ಕೊರತೆ, ಗಾಂಧೀಜಿಯ ಅಹಿಂಸೆ, ಮುಸ್ಲಿಂಲೀಗ್‌ನ ಪ್ರತ್ಯೇಕತಾವಾದ, ಅವಕಾಶ ಎದುರಾದಾಗ ಅದನ್ನು ಸದ್ಬಳಕೆ ಮಾಡಿಕೊಳ್ಳುವ ಅಸಾಮರ್ಥ್ಯ ಮತ್ತು ಹಿಂದೂ ಗರ್ವ ಇದನ್ನು ಈ ಪುಸ್ತಕದಲ್ಲಿ ಲೋಹಿಯಾ ವಿವರಿಸಿದ್ದಾರೆ. ಈ ಪುಸ್ತಕದ ಒಂದು ಸಣ್ಣ ಮುಖ್ಯ ಭಾಗವನ್ನು ಆಯ್ದು ಅನುವಾದಿಸಿ ಇಲ್ಲಿ ನೀಡಲಾಗಿದೆ.– ಸಂಪಾದಕ.

**ತಾ**ವು ನಿರ್ಗಮಿಸುತ್ತಿರುವ ಇಂಡಿಯಾದಿಂದ ಗರಿಷ್ಠ ಮಟ್ಟದ ಲಾಭ ಪಡೆಯುವ ಉದ್ದೇಶದ ಯೋಜನೆಗಳನ್ನು ಸಿದ್ದಪಡಿಸಿ, ಜಾರಿಗೊಳಿಸುವುದು ಬ್ರಿಟಿಷರಿಗೆ ಸಹಜವಾಗಿತ್ತು. ಅದು ಈ ದೇಶವನ್ನು ಎಷ್ಟು ಘಾಸಿಗೊಳಿಸಿದರೂ ಸರಿಯೇ. ದೇಶ ವಿಭಜನೆಯ ಯೋಜನೆಯು ಇನ್ನಿತರ ಕೆಲವು ಯೋಜನೆಗಳಂತೆಯೇ ಈ ದೇಶವನ್ನು ಘಾಸಿಗೊಳಿಸಿತ್ತು. ಇದು ಭಾರತದ ಮಣ್ಣಿನ ಮೇಲಿನ ಬ್ರಿಟೀಷ್ ಸಾಮ್ರಾಜ್ಯಶಾಹಿಯ ಕೊನೆಯ ಮತ್ತು ಅತಿ ನಾಚಿಕೆಗೇಡಿನ ಕೃತ್ಯವಾಗಿತ್ತು. ಕಾಲಚಕ್ರ ಉರುಳಿದಂತೆ, ತಾವಾಗಿಯೇ ನೀಡಿದ ಸ್ವಾತಂತ್ರದ ಥಳುಕಿನ ಕೀರ್ತಿ, ನೆಮ್ಮದಿಗೆಡಿಸಿರುವ ದೇಶ ವಿಭಜನೆಯ ಕುಖ್ಯಾತಿಯ ಎದುರು ಮಾಸುತ್ತಾ ಹೋಗುತ್ತದೆ.

ಸ್ವಾತಂತ್ರ್ಯ ಚಳುವಳಿಯ ನಾಯಕತ್ವ, ಸಾಮ್ರಜ್ಯಶಾಹಿಯ ಈ ಕುಖ್ಯಾತಿಯ ಯೋಜನೆಯಲ್ಲಿ ಪಾಲ್ಗೊಳ್ಳುವಷ್ಟು ದುಷ್ಟವಾದದ್ದಾದರೂ ಹೇಗೆ ಎಂದು ಇತಿಹಾಸಜ್ಞರು ಶೋಧಿಸುತ್ತಾರೆ ಮತ್ತು ಅಚ್ಚರಿ ಪಡುತ್ತಾರೆ. ಸರ್ಕಾರಗಳು ರೂಪಿಸುವ ಯೋಜನೆಗಳು, ಸಲಹೆಗಳು ಮತ್ತು ಅವುಗಳನ್ನು ಜಾರಿಗೊಳಿಸುವ ದಲ್ಲಾಳಿಗಳು ಹಾಗೂ ಪ್ರತಿನಿಧಿಗಳ ಬಗ್ಗೆ ಪ್ರಸ್ತಾಪಿಸುತ್ತಲೇ, ಇಂಡಿಯಾದ ಪ್ರಸ್ತುತ ಶತಮಾನದ ರಾಜಕೀಯ ಚಳುವಳಿಗಳು ಯಾವ ರೀತಿಯ ನಿರ್ಲಕ್ಷ್ಯತೆಯಿಂದ ತಮ್ಮ ಯೋಜನೆಗಳನ್ನು ಹಾಗೂ ನಿರ್ಣಯಗಳನ್ನು ಸಿದ್ಧಪಡಿಸಿದರೆಂಬುದರ ಬಗ್ಗೆಯೂ ಯೋಚಿಸಬೇಕಾಗುತ್ತದೆ. ನಿರ್ಣಯವೊಂದನ್ನು ಘೋಷಿಸುವುದು, ನಂತರ ಸುಮ್ಮನೆ ಕುಳಿತು ಪ್ರತಿಕ್ರಿಯೆಗಳನ್ನು ಗಮನಿಸುವುದು ಮತ್ತು ತಮ್ಮ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವ ಪೂರ್ವಸಿದ್ಧತೆಗಳನ್ನೂ ಮಾಡದೇ ಯಾವುದೋ ರೀತಿಯ ಅನುಕಂಪ ಸಹಾನುಭೂತಿಗಳ ಸರಮಾಲೆಯಂತೆ, ತಮ್ಮ ನಿರ್ಣಯಗಳಿಗೆ ಅನುಗುಣವಾಗಿ ಸಂಗತಿಗಳು ಘಟಿಸುವವು ಎಂದು ನಿರೀಕ್ಷಿಸುವುದು.


ಇದರ ಬಗ್ಗೆ ಕಿಂಚಿತ್ತೂ ಅರಿವಿರದ ಮಿ. ಆಜಾದ್‌ರು ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿಗೆ ಸಂಬಂಧಿಸಿದಂತೆ ತಮ್ಮ ಬಹು ಮೌಲಿಕವಾದ ಸತ್ಯವೊಂದನ್ನು ಹೊರಗೆಡವಿದ್ದಾರೆ. ಬ್ರಿಟೀಷ್ ಸರ್ಕಾರವು ತನ್ನ ಯೋಜನೆಗಳ್ನು ಕಾಂಗ್ರೆಸ್ ಪಕ್ಷದ ಮರ್ಜಿಯಂತೆ ಸಿದ್ಧಪಡಿಸಿದ್ದಾರೆಂದು ನಂಬಿದ್ದರಿಂದ ತಮ್ಮ ಉಪಮೇಯಾತ್ಮಕ ಚಿಂತನೆಯಲ್ಲಿ ಪ್ರಾಯಶಃ ಅವರು ಎಡವಿದರೇನೋ. ಮಹತ್ವದ ಘಟನೆಯೊಂದು ಸಂಭವಿಸುವ ಮುನ್ನ, ಸಕ್ರಿಯ ಪೂರ್ವಸಿದ್ಧತೆ



ಸಂಘಟನೆಯನ್ನು ಕಡೆಗಣಿಸುವ, ಆಡುವ ಮಾತು ಹಾಗೂ ಉತ್ಸುಕತೆಗೆ ನೀಡುವ ಮಿತಿ ಮೀರಿದ ಪ್ರಾಮುಖ್ಯತೆಯಿಂದಲೇ ಇರಬೇಕು. ಮೌಲಾನ್‌ಅಜಾದ್‌ರವರ "ಮಹಾತ್ಮಗಾಂಧಿ ಮತ್ತು ಮಹಾಯುದ್ಧದ ದಿನಗಳು" ಕುರಿತ ವಿಶ್ಲೇಷಣೆಯನ್ನು ಪರಿಶೀಲಿಸುವ ಘಟ್ಟದಲ್ಲಿ ಮತ್ತೆ ಭಾರತದ ಈ ದುಸ್ಥಿಯ ಬಗ್ಗೆ ಪ್ರಸ್ತಾಪಿಸುತ್ತೇನೆ.

ಬ್ರಿಟೀಷರ ಈ ದುಷ್ಕೃತ್ಯದಲ್ಲಿ ಸರ್ದಾರ್ ಪಟೇಲರು ಭಾಗಿಯಾಗಿದ್ದಾದರೂ ಹೇಗೆ? ನಾನು ಇದಕ್ಕೆ ಉತ್ತರವನ್ನು ಊಹಿಸುವುದು, ಅವರ ನಿಕಟವರ್ತಿಯೂ ಅತೀ ಪ್ರಭಾವ ಶಾಲಿಯೂ ಆದ ನೆಹರೂರವರ ನಡಾವಳಿಯನ್ನು ಪರಿಶೀಲಿಸುವ ಮೂಲಕ ಮಾತ್ರ. ಮತ್ತು ಅವರಿಗೆ ಸಂಬಂಧಿಸಿದಂತಹ ಸತ್ಯಾಂಶಗಳು ನನಗೆ ಚೆನ್ನಾಗಿಯೇ ಗೊತ್ತಿರುವುದರಿಂದಲೂ ಕೂಡ. ಇಂತಹದೊಂದು ಪರೀಕ್ಷೆಗೊಳಪಡುವ ಮುನ್ನ, ದೇಶ ವಿಭಜನೆಯ ಯೋಜನೆಯನ್ನು ಅನುಮೋದಿಸಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯ ವಿವರಗಳನ್ನು ನೀಡ ಬಯಸುತ್ತೇನೆ.





ಜೆ.ಬಿ. ಕೃಪಲಾನಿ ಮೌಲಾನಾ ಆಜಾದ್ ಗಡಿನಾಡ ಗಾಂಧಿ

ಸಮಾಜವಾದಿಗಳಾದ ನನ್ನನ್ನ ಮತ್ತು ಜಯಪ್ರಕಾಶ್ ನಾರಾಯಣರನ್ನ ಈ ಸಭೆಗೆ ವಿಶೇಷವಾಗಿ ಆಹ್ವಾನಿಸಿದ್ದರು. ನಾವಿಬ್ಬರೂ, ಮಹಾತ್ಮಗಾಂಧಿ ಮತ್ತು ಅಬ್ದುಲ್ ಗಫಾರ್ ಖಾನ್‌ರನ್ನು ಬಿಟ್ಟರೆ ಮತ್ತಿನ್ಯಾರೂ ವಿಭಜನೆಯನ್ನು ವಿರೋಧಿಸಿ ಚಕಾರವೆತ್ತಲಿಲ್ಲ.

ನಮ್ಮೆಲ್ಲರನ್ನೂ ಇಡುಕಿರಿದಿದ್ದ ಆ ಸಣ್ಣ ಕೋಣೆಯ ಮೂಲೆಯೊಂದರ ಖುರ್ಚಿಯಲ್ಲಿ ಆ ಎರಡೂ ದಿವಸ ಕುಳಿತು, ಕೊನೆಯಿಲ್ಲದಂತೆ ಸಿಗರೇಟ್‌ಗಳನ್ನು ದಹಿಸಿ ಹೊಗೆಯುಗುಳುತ್ತಿದ್ದ ಮೌಲಾನಾ ಆಜಾದ್ ಒಂದು ಮಾತನ್ನೂ ಆಡಲಿಲ್ಲ. ಅವರಿಗೆ ನೋವಾಗಿರಬಹುದು. ಆದರೆ ವಿಭಜನೆಯನ್ನು ವಿರೋಧಿಸುತ್ತಿದ್ದುದು ಅವರೊಬ್ಬರೇ ಎಂಬಂತೆ ತೋರ್ಪಡಿಸಿಕೊಳ್ಳುವ ಪ್ರಯತ್ನ ಮಾತ್ರ ಸಣ್ಣತನದ್ದಾಗಿತ್ತು. ಸಭೆಯುದ್ದಕ್ಕೂ ತಮ್ಮ ಮೌನವ್ರತವನ್ನು ಮುರಿಯದ ಅವರು, ನಂತರ ವಿಭಜಿತ ಭಾರತದ ಮಂತ್ರಿ ಪದವಿಯಲ್ಲಿ ಒಂದು ದಶಕಕ್ಕೂ ಹೆಚ್ಚುಕಾಲ ಅಧಿಕಾರ ಅನುಭವಿಸಿದರು. ಅನೌಪಚಾರಿಕ ಮಾತುಕತೆ–ಆಪ್ತ ಸಮಾಲೋಚನೆಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಅವರು ವಿಭಜನೆಯನ್ನು ವಿರೋಧಿಸುತ್ತಿದ್ದರು ಎಂಬುದನ್ನು ಒಪ್ಪಿಕೊಳ್ಳುತ್ತೇನೆ ಮತ್ತು ಅರ್ಥ ಮಾಡಿಕೊಂಡಿದ್ದೇನೆ ಕೂಡ. ಆದರೆ ಅವರ ಈ ವಿರೋಧ, ಯಾವುದನ್ನು ವಿರೋಧಿಸಬೇಕೋ ಅದರ ಸೇವೆಯಲ್ಲಿರುವುದಕ್ಕೆ ತಕರಾರನ್ನೇ ಎತ್ತದಂತಹ – ಅವರ ಅಸಾಧಾರಣ ವಿವೇಕ ಅಥವಾ ಅಸಾಧಾರಣ ಹೊಂದಾಣಿಕೆಯ ಮನಸಾಕ್ಷಿಯಲ್ಲಿ – ಒಂದು ವಿಚಿತ್ರ ರೀತಿಯ ವಿರೋಧ ಮತ್ತು ಸೇವೆಯ ಕಲಬೆರಕೆಯಾಗಿತ್ತು. ಮೌಲಾನಾ ಆಜಾದ್‌ರ ಅಂತಃಸಾಕ್ಷಿಯನ್ನು ಶೋಧಿಸುವುದು ಕುತೂಹಲಕಾರಿಯಾಗಬಹುದು, ಏಕೆಂದರೆ ಬುದ್ಧಿವಂತಿಕೆ ಮತ್ತು ಹೊಂದಾಣಿಕೆ ಜೊತೆಜೊತೆಯಲ್ಲೇ ಸಾಗುತ್ತವೆಯೋ ಎಂದು ಕೆಲವೊಮ್ಮೆ ನಾನು ಸಂಶಯ ಪಡುತ್ತೇನೆ.

ಈ ಸಭೆಯಲ್ಲಿ ಆಚಾರ್ಯ ಕೃಪಲಾನಿ ಶೋಚನೀಯ ಸ್ಥಿತಿಯಲ್ಲಿದ್ದರು. ಅವರು ಕಾಂಗ್ರೆಸ್ ಪಕ್ಷದ ಅಂದಿನ ಅಧ್ಯಕ್ಷರು. ಈ ಸಭೆಯುದ್ದಕ್ಕೂ ತೂಕಡಿಸುತ್ತಾ ಒರಗಿಕೊಂಡು ಕುಳಿತುಬಿಟ್ಟಿದ್ದರು. ಚರ್ಚೆಯ ಒಂದು ಹಂತದಲ್ಲಿ ಮಹಾತ್ಮಗಾಂಧಿ ಬಳಲಿ ಬೆಂಡಾಗಿದ್ದ ಕಾಂಗ್ರೆಸ್ ಅಧ್ಯಕ್ಷರನ್ನು ಗಮನದಲ್ಲಿಟ್ಟು **ಪ್ರಸ್ತಾಪಿಸಿದಾಗ** ನಾನು ತುಂಬಾ ಮುಜುಗರದಿಂದಲೇ ಅವರ ಕೈ ಹಿಡಿದೆಳೆದೆ. ಅತಿಯಾದ ತಲೆನೋವಿನಿಂದ ಬಳಲುತ್ತಿದ್ದೇನೆಂದು ತಾವಾಗಿಯೇ ತಿಳಿಸಿದರು. ವಿಭಜನೆಯ ಬಗೆಗಿನ ಅವರ ವಿರೋಧ ಪ್ರಾಮಾಣಿಕವಾಗಿದ್ದಿರಲೇ ಬೇಕು, ಏಕೆಂದರೆ ಅದು ವೈಯಕ್ತಿಕವೂ ಆಗಿತ್ತು. ಆದರೆ ವೃದ್ಧಾಪ್ಯದ ವ್ಯಾಧಿ ಹಾಗೂ ದಣಿವು, ಸ್ವಾತಂತ್ರ್ಯ ಹೋರಾಟದ ಈ ಸಂಘಟನೆಯ ಅತ್ಯಂತ ತಲ್ಲಣದ ಸ್ಥಿತಿಯಲ್ಲಿ ಅವರನ್ನು ಆವರಿಸಿಕೊಂಡು ಬಿಟ್ಟಿತ್ತು.


ಖಾನ್ ಅಬ್ದುಲ್ ಗಫಾರ್‌ಖಾನ್‌ರು ಎರಡೇ ಮಾತು ಆಡಿದರು. ತಮ್ಮ ಸಹವರ್ತಿಗಳು ದೇಶ ವಿಭಜನೆಯ ಯೋಜನೆಯನ್ನು ಅನುಮೋದಿಸಿದ್ದಕ್ಕೆ ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಸಣ್ಣ ದಯೆ ತೋರಿ ಎಂಬಂತೆ, ಜನಾಭಿಪ್ರಾಯ ಸಂಗ್ರಹಣೆಯ ಸಮಯದಲ್ಲಿ ವಾಯುವ್ಯ ಗಡಿನಾಡಿನ ಜನತೆಗೆ, ಭಾರತ ಅಥವಾ ಪಾಕಿಸ್ತಾನದಲ್ಲಿ ವಿಲೀನವಾಗುವುದನ್ನು ಬಿಟ್ಟು ಮತ್ತೊಂದು ಸ್ವತಂತ್ರ ಬದಲಿ ಆಯ್ಕೆಗೆ ಅವಕಾಶ ಕಲ್ಪಿಸಲು ಬೇಡಿಕೊಂಡರು. ಇನ್ಯಾವ ಸಂದರ್ಭದಲ್ಲಿಯೂ ಅವರು ಇನ್ನೊಂದು ಮಾತನಾಡಲಿಲ್ಲ, ಬಹುಶಃ ಅವರು ತೀವ್ರ ವೇದನೆಗೊಳಗಾಗಿರಬೇಕು.

ಮಿ. ಜಯಪ್ರಕಾಶ್ ನಾರಾಯಣರು ಒಂದೇ ಬೀಸಿನಲ್ಲಿ ವಿಭಜನೆಯ ವಿರುದ್ಧ ಕೆಲವು ಸಂಕ್ಷಿಪ್ತವಾದ ಆದರೆ ಖಚಿತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಸಭೆಯ ಉಳಿದ ಭಾಗದುದ್ದಕ್ಕೂ ಮೌನವಾಗಿಬಿಟ್ಟರು. ಅವರು ಈ ರೀತಿ ವರ್ತಿಸುವಂತೆ ಮಾಡಿದ್ದಾದರೂ ಏನು? ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ದೇಶದ ವಿಭಜನೆಯ ವ್ಯವಹಾರವನ್ನು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಜಿಗುಪ್ಸೆಗೊಂಡಿದ್ದರೋ? ಅಥವಾ ವಿಭಜನೆಯನ್ನು ಒಪ್ಪಿಕೊಳ್ಳುವ ತೀವ್ರ ಹಠದಿಂದ ಒಗ್ಗೂಡಿದ್ದ ನಾಯಕತ್ವದೆದುರು ಸುಮ್ಮನಿರುವುದೇ ವಿವೇಕವೆಂದು ಭಾವಿಸಿದರೋ? ಅವರ ಸ್ವಭಾವವೆಂದರೆ, ಬಹುಶಃ ಕೆಲವೊಮ್ಮೆ ಆರೋಗ್ಯಕರ ಪ್ರತಿಸ್ಪಂದನಗಳನ್ನು ನೀಡಿ ಬಹಳಷ್ಟು ಮಟ್ಟಿಗೆ ಮುತ್ಸದ್ದಿತನದಿಂದ ಮೌನವಾಗಿರುವ ಮಿಶ್ರಣವಾಗಿತ್ತು. ಅನುಮಾನವೇ ಬೇಡ, ಬಹಳ ಕಿರಿಕಿರಿ ಉಂಟು ಮಾಡುವ ಈ ಜಾಯಮಾನದಿಂದ ನಾನು ಪದೇ ಪದೇ ಅವರ ಮೇಲೆ ಅತಿಯಾಗಿ ಸಿಟ್ಟಾಗುವಂತಾಗುತ್ತಿತ್ತು.

ವಿಭಜನೆಯನ್ನು ಕುರಿತ ನನ್ನ ವಿರೋಧ ಹಿಡಿದಪಟ್ಟು ಬಿಡದಂತೆ, ಸ್ಪಷ್ಟವಾಗಿತ್ತು ಮತ್ತು ಗಟ್ಟಿ ದನಿಯದಾಗಿತ್ತು. ಆದರೆ ಅದು ಅಷ್ಟು ಗಂಭೀರವಾಗಿ ಪರಿಣಾಮಕಾರಿಯಾಗಿ ಇರಲಿಲ್ಲವೇನೋ ಮತ್ತು ಈಗ ನೆನಪಾಗುವಂತೆ ಆ ದನಿಯಲ್ಲಿ ಕೆಲವು ಹುಸಿ ಎಳೆಗಳಿದ್ದವು. ಏನೇ ಆದರೂ ನನ್ನ ವಿರೋಧ ಬೆಟ್ಟಗಳನ್ನು ಅಲುಗಾಡಿಸುವಷ್ಟು ಶಕ್ತಿಯುತವಾಗೇನೂ ಇರಲಿಲ್ಲ. ಯಾವುದೇ ಪ್ರಭಾವವಿಲ್ಲದ ಸ್ವಾತಂತ್ರ್ಯ ಹೋರಾಟಗಾರನೊಬ್ಬನ ಆರೋಗ್ಯಕರ ವಿರೋಧದ ನಿಲುವಾಗಿ ದಾಖಲಾಗಲಷ್ಟೇ ಸಾಧ್ಯವಾಗಬಹುದಾಗಿತ್ತು. ಆದರೂ ಕೂಡ ಕಿಂಚಿತ್ತೂ ಸ್ವಾರ್ಥವಿಲ್ಲದ, ಯಾವುದೇ ಮಸಲತ್ತು ಮಾಡದ ನನ್ನಂತಹ ಮನುಷ್ಯನ ವಿರೋಧದ ನಡುವೆಯೂ ಕೊರತೆಯಾಗಿ ತೋರಿದ್ದೇನೆಂದರೆ – ಒಬ್ಬ ಸಾಮಾನ್ಯ ಮನುಷ್ಯನಾಗಿ ನಾನು ಸೇರಿದಂತೆ ನಮ್ಮ ಇಡೀ ಜನ ಸಮೂಹ ಯಾವ ಬಗೆಯ ಅಧೈರ್ಯ ಮತ್ತು ಬಲಹೀನತೆಯ ಆಳಕ್ಕೆ ಕುಸಿದಿದ್ದಾರೆಂಬುದನ್ನು. ನನ್ನ ವಿರೋಧದ ಕೆಲವು ಮಗ್ಗುಲುಗಳನ್ನು ತೋರ್ಪಡಿಸುವ ಸಂದರ್ಭವೊಂದು ಮುಂದೆ ಒದಗಿ ಬರಬಹುದು. ಆದರೆ ಮಹಾತ್ಮ ಗಾಂಧಿಯವರು ಈ ಸಭೆಯಲ್ಲಿ ಮಧ್ಯ ಪ್ರವೇಶಿಸಿದ್ದರ ತಾತ್ಪರ್ಯವಾದರೂ ಏನು?

ಗಾಂಧೀಜಿ ಈ ಸಭೆಯಲ್ಲಿ ಪ್ರಸ್ತಾಪಿಸಿದ ಎರಡು ಅಂಶಗಳ ಬಗ್ಗೆ ವಿಶೇಷವಾಗಿ ಗಮನಸೆಳೆಯಬಯಸುತ್ತೇನೆ. ಅವರು ಮಿ.ನೆಹರೂ ಹಾಗೂ ಸರ್ದಾರ್ ಪಟೇಲರನ್ನು, ವಿಭಜನೆಯ ಯೋಜನೆಗೆ ಒಪ್ಪಿಗೆಯನ್ನು ಕೊಡುವ ಮುನ್ನ ತಮಗೆ ಅದರ ಪೂರ್ಣ ಮಾಹಿತಿ ನೀಡಿರಲಿಲ್ಲ ಎಂದು ಮೃದುವಾಗಿ ದೂರಿದರು. ಗಾಂಧೀಜಿ ತಮ್ಮ ಮಾತನ್ನು ಪೂರ್ತಿಯಾಗಿ ಸ್ಪಷ್ಟಪಡಿಸುವ ಮೊದಲೇ ನೆಹರೂ ಸ್ವಲ್ಪ ಆವೇಗ ಆವೇಶದಿಂದಲೇ, ಈ ಮಾಹಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೆ ಎಂದು ತಡೆಯೊಡ್ಡಿದರು. ಯಾವಾಗ ಮಹಾತ್ಮಗಾಂಧಿ ತಮಗೆ ಪೂರ್ಣ ಮಾಹಿತಿ ಇರಲಿಲ್ಲ ಎಂದು ಪುನರುಚ್ಚರಿಸಿದರೋ ಆಗ ಮಿ.ನೆಹರೂ ತಮ್ಮ ವರಸೆಯನ್ನು ಸ್ವಲ್ಪ ಬದಲಾಯಿಸಿದರು. ನೌಖಾಲಿ ಬಹಳ ದೂರವಿದ್ದುದಾಗಿಯೂ ಮತ್ತು ವಿವರವಾಗಿ ಅಲ್ಲದಿದ್ದರೂ ವಿಶಾಲಾರ್ಥದಲ್ಲಿ ವಿಭಜನೆಯ ಬಗ್ಗೆ ತಮಗೆ ನಾನು ಬರೆದು ತಿಳಿಸಿದ್ದೆ ಎಂದರು.

ಇದಕ್ಕೆ ಸಂಬಂಧಿಸಿದಂತೆ ನಾನು ಗಾಂಧೀಜಿಯವರ ಮಾತನ್ನು ಒಪ್ಪುತ್ತೇನೆ, ಮಿ.ನೆಹರೂ ಅವರ ಮಾತನ್ನಲ್ಲ. ಯಾರು ತಾನೇ ಒಪ್ಪಲಾರರು? ನೆಹರೂರವರನ್ನು ಸುಳ್ಳುಗಾರ ಎಂದು ಯಾರೇನು ತಳ್ಳಿ ಹಾಕಬೇಕಿಲ್ಲ. ಇರುವ ವಿಷಯವೇನೆಂದರೆ ದೇಶ ವಿಭಜನೆಯನ್ನು ನೆಹರೂ ಮತ್ತು ಸರ್ದಾರ್ ಪಟೇಲ್ ಒಪ್ಪಿಕೊಂಡು ಬರುವ ಮುನ್ನ ಗಾಂಧೀಜಿಯವರಿಗೆ ಅದರ ಬಗ್ಗೆ ತಿಳಿದಿತ್ತೋ ಇಲ್ಲವೋ ಎಂಬುದು. ಆದರೆ ಮಹಾತ್ಮ ಗಾಂಧಿಯವರಿಗೆ ಬರೆದಿರಬಹುದಾದ ಸ್ಪಷ್ಟತೆ ಇಲ್ಲದ ಪತ್ರಗಳನ್ನು ಪ್ರಕಟಿಸಿ, ಊಹಾತ್ಮಕವಾದ ಮತ್ತು ಸತ್ವವಿಲ್ಲದ ಮಾಹಿತಿಯನ್ನು ಬಹಿರಂಗಗೊಳಿಸುವುದು ನೆಹರೂರವರಿಗೆ ತಕ್ಕದಾದುದಲ್ಲ. ಈ ವಹಿವಾಟಿನ ಮೂಲೆಯಲ್ಲೇನೋ ಕರಾಮತ್ತಿರುವುದು ಖಂಡಿತ. ಮಿ.



ಯೂಸುಫ್ ಮೆಹ್ರೋಲಿ–ಜೆಪಿ–ಲೋಹಿಯಾ–ಸಮಾಲೋಚನೆಯಲ್ಲಿ



ಲಾರ್ಡ್ ಮೌಂಟ್‌ಬೇಟನ್ ಮತ್ತು ಲೇಡಿ ಮೌಂಟ್ಬೇಟನ್ ನಡುವೆ ನೆಹ್ರೂ ಹಾಸ್ಯ ಚಟಾಕಿ

ನೆಹರೂ ಮತ್ತು ಸರ್ದಾರ್ ಪಟೇಲರು ವಿಭಜನೆಯ ಒಪ್ಪಂದ ಸ್ಪಷ್ಟರೂಪ ತಾಳುವ ಮುನ್ನವೇ ಇದನ್ನು ಹೇಳಿ ಗಾಂಧೀಜಿಯವರನ್ನು ಬೆಚ್ಚಿಬೀಳಿಸದಿರುವುದು ಒಳ್ಳೆಯದೆಂದು ತಮ್ಮ-ತಮ್ಮಲ್ಲೇ ತೀರ್ಮಾನಿಸಿಕೊಂಡಿರಲೇಬೇಕು.

ಮಿ. ನೆಹರೂ ಮತ್ತು ಪಟೇಲರತ್ತಲೇ ಮುಖಮಾಡಿದ್ದ ಗಾಂಧೀಜಿ, ತಮ್ಮ ಎರಡನೇ ಅಂಶವನ್ನು ಪ್ರಸ್ತಾಪಿಸಿದರು. ಕಾಂಗ್ರೆಸ್ ಪಕ್ಷವು ತನ್ನ ನಾಯಕರು ಕೊಟ್ಟ ಮಾತನ್ನು ಗೌರವಿಸಬೇಕೆಂಬುದು ಅವರ ಇಂಗಿತವಾಗಿತ್ತು. ಆದ್ದರಿಂದ ಕಾಂಗ್ರೆಸ್ ದೇಶ ವಿಭಜನೆಯ ತತ್ವ ಉದ್ದೇಶಗಳಿಗೆ ಒಪ್ಪಿಗೆ ನೀಡುವಂತೆ ತಿಳಿಸಿದರು. ಒಪ್ಪಿಗೆ ನೀಡಿದ ನಂತರ ವಿಭಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಸೂಕ್ತವಾದ ಘೋಷಣೆಗಳನ್ನು ಮಾಡಲು ಸೂಚಿಸಿದರು. ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ವಿಭಜನೆಯ ಒಪ್ಪಂದಕ್ಕೆ ಅಂಗೀಕಾರದ ಮುದ್ರೆಯನ್ನು ಒತ್ತಿದ ಬಳಿಕ ಬ್ರಿಟೀಷ್ ಸರ್ಕಾರ ಹಾಗೂ ವೈಸ್‌ರಾಯ್ ಅಧಿಕಾರ ಬಿಟ್ಟು ಪಕ್ಕಕ್ಕೆ ಸರಿಯುವಂತೆ ಕಾಂಗ್ರೆಸ್ ಪಕ್ಷ ಆಗ್ರಹಿಸಬೇಕು. ಮೂರನೆಯವರ ಮಧ್ಯಸ್ಥಿಕೆ, ಹಸ್ತಕ್ಷೇಪವಿಲ್ಲದಂತೆ ಕಾಂಗ್ರೆಸ್ ಪಕ್ಷ ಮತ್ತು ಮುಸ್ಲಿಂ ಲೀಗ್‌ನ ಜಂಟಿ ನೇತೃತ್ವದಲ್ಲಿ ವಿಭಜನೆಯನ್ನು ಪೂರ್ಣಗೊಳಿಸಬೇಕು. ಇದು ಮಾತ್ರ, ಅತ್ಯಂತ ಜಾಣ ತಂತ್ರಗಾರಿಕೆಯ ಪ್ರಯೋಗವಾಗಿತ್ತು ಎಂದು ಅಂದು ಮತ್ತು ಇಂದೂ ಕೂಡ ನಾನೆಂದುಕೊಂಡಿದ್ದೇನೆ. ಸಂತನೊಬ್ಬ ಜೊತೆಜೊತೆಗೆ ಚಾಣಾಕ್ಷ ತಂತ್ರಗಾರನೂ ಆಗಿದ್ದರ ಬಗ್ಗೆ ಬಹಳಷ್ಟು ಮಾತು ಚಾಲ್ತಿಯಲ್ಲಿದೆ. ಆದರೂ ಇಂತಹ ಸೊಗಸಾದ ಮತ್ತು ವಂಚನೆಯ ದಾಳ ಉರುಳಿಸಿದ್ದರ ಬಗ್ಗೆ ನನಗೆ ತಿಳಿದಿರುವಂತೆ, ಇಲ್ಲಿಯವರೆಗೂ ಎಲ್ಲಿಯೂ ದಾಖಲಾಗಿಲ್ಲ.

ಮೊಟ್ಟ ಮೊದಲಿಗೆ ಗಡಿನಾಡ ಗಾಂಧಿಯ ಹಿರಿಯಣ್ಣ ಡಾ॥ ಖಾನ್ ಸಾಹೇಬ್ ಮತ್ತು ಅವರೊಬ್ಬರೇ, ಈ ವಿಭಜನೆಯು, ಅತ್ಯಂತ ಅಪ್ರಾಯೋಗಿಕವೂ, ಎಳ್ಳಷ್ಟೂ ಕಾರ್ಯಸಾಧುವಲ್ಲದ್ದು ಎಂದು ಗುಡುಗಿದ್ದು. ಇನ್ನುಳಿದವರಾರಿಗೂ ವಿಭಜನೆಯನ್ನು ವಿರೋಧಿಸುವ ಅಗತ್ಯವೇ ಇರಲಿಲ್ಲ. ಅದನ್ನು ಪರಿಗಣಿಸಲೂ ಇಲ್ಲ. ಈ ಪ್ರಸ್ತಾವನೆಯ ಮರ್ಮ ನಿರ್ದಿಷ್ಟವಾಗಿ ಅದರ ಅಪ್ರಾಯೋಗಿಕತೆಯಲ್ಲೇ ಇದೆ ಎಂದು ನಾನು ಡಾ॥ ಖಾನರಿಗೆ ಎದುರಾಡುತ್ತಾ, **"ದೇಶವನ್ನು ಬ್ರಿಟೀಷರ ಸಹಾಯವಿಲ್ಲದೆ ಯಾವ ರೀತಿ ವಿಭಜಿಸಬೇಕೆಂಬುದಕ್ಕೆ ಜಿನ್ನಾ ಮತ್ತು ಕಾಂಗ್ರೆಸ್ ಪ್ರತಿನಿಧಿಗಳು ಒಪ್ಪದಿದ್ದರೆ ಇಂಡಿಯಾಕ್ಕೇನೂ ನಷ್ಟವಿಲ್ಲ"** ಎಂದು ಎಚ್ಚರಿಸಿದೆ. ಆದರೆ ಈ ಎಚ್ಚರಿಕೆಯ, ಆಕ್ಷೇಪದ ಮಾತುಗಳಿಗೆ ಕಿವಿಗೊಡುವವರಾದರೂ ಯಾರು? ಈ ಪ್ರಸ್ತಾವನೆಯೇ ವಂಚನೆಯಿಂದ ಕೂಡಿತ್ತಾದರೂ, ಒಗ್ಗಟ್ಟನ್ನೂ, ಅಖಂಡತೆಯನ್ನು ಬಲಿ ಕೊಟ್ಟು ದೇಶ ವಿಭಜನೆಗೆ ದೃಢನಿರ್ಧಾರ ಕೈಗೊಂಡಿದ್ದ ಕಾಂಗ್ರೆಸ್ ನಾಯಕತ್ವಕ್ಕೆ ಅದೆಲ್ಲವೂ ಕೆಲಸಕ್ಕೆ ಬಾರದ ಅರ್ಥಹೀನ ವಿಷಯವಾಗಿತ್ತು. ಯಾವ ರೀತಿ ಕಾರ್ಯಸಾಧುವಾಗಿಸಬೇಕೆಂಬ ದೃಷ್ಟಿಯಿಂದಲಾದರೂ ಗಾಂಧೀಜಿಯವರು ತಮ್ಮ ಸಲಹೆಯನ್ನು ನೀಡಿದ್ದರೆ ಅದಕ್ಕೊಂದು ಅರ್ಥವಾದರೂ ಇರುತ್ತಿತ್ತು.

ವಿಭಜನೆಯಿಂದ ಬಹಳವಾಗಿ ಕಳೆದುಕೊಳ್ಳಲಿದ್ದ ಡಾ॥ ಖಾನರು ಈ ಯೋಜನೆಯ ಅಪ್ರಾಯೋಗಿಕತೆಯ ಬಗ್ಗೆ ತಿಳಿಹೇಳಲು ಅದೇಕೆ ಅಷ್ಟು ಕಾತುರರಾಗಿದ್ದರು ಎಂದು ಕೆಲವೊಮ್ಮೆ ಅಚ್ಚರಿಗೊಂಡಿದ್ದೇನೆ. ಬಹಳಷ್ಟು ಮಂದಿ ಸರಳ ಮನೋಭಾವದವರು. ರೂಢಿಗತವಾಗಿ ಪ್ರತಿಕ್ರಿಯಿಸುತ್ತಾರೆ. ಆದರೆ ಅವರು ತಾವಾಗಿಯೇ – ಪ್ರಸ್ತಾಪಿತ ವಿಷಯವೊಂದರ ನೇರ ಪರಿಣಾಮಗಳ ಸಂಪೂರ್ಣ ಚಿತ್ರವನ್ನಾಗಲೀ, ಅದರ ಆರಂಭ, ಮುಂದುವರಿದ ಭಾಗವನ್ನಾಗಲೀ ಗಮನಿಸದೆ ಎಂದಿನ ತಮ್ಮ ಅಭ್ಯಾಸಗಳಿಗನುಗುಣವಾಗಿ ಪರಿಗಣಿಸಿಬಿಡುತ್ತಾರೆ. ಮಿ. ಜಿನ್ನಾರವರನ್ನು ಒಪ್ಪಿಕೊಳ್ಳುವುದು ಅಸಾಧ್ಯವಾಗಿತ್ತು, ಅಂತೆಯೇ ಬಹುತೇಕ ಕಾಂಗ್ರೆಸ್ ನಾಯಕರನ್ನೂ ಕೂಡ. ಅದರಲ್ಲೂ ವಿಶೇಷವಾಗಿ ಮುಸ್ಲಿಂ ನಾಯಕರನ್ನೂ ಕೂಡ. ಡಾ. ಖಾನ್‌ರು ರೂಢಿಗತವಾಗಿ ಪ್ರತಿಕ್ರಿಯಿಸುತ್ತಿದ್ದರಷ್ಟೇ. ಈ ಅಸಾಧ್ಯ ಎನ್ನಲಾಗುವ ಜಿನ್ನಾ ಕೂಡ, ಗಾಂಧೀಜಿ ಪ್ರಸ್ತಾವನೆಯ ಅಡಿಯಲ್ಲಿ ತಮ್ಮ ಅಸಾಧ್ಯ ವ್ಯಕ್ತಿತ್ವದ ಕಾರಣದಿಂದಾಗಿಯೇ ಭಾರತವನ್ನು ವಿಭಜನೆಯಿಂದ ಪಾರು ಮಾಡಿ ರಕ್ಷಿಸಬಲ್ಲರೆಂಬುದನ್ನು ಡಾ. ಖಾನ್ ಅರಿಯಲಾರದೆ ಹೋದರು.

ಮಿ. ನೆಹರೂ ಮತ್ತು ಪಟೇಲರೂ ಗಾಂಧೀಜಿಯವರ ವಿರುದ್ಧ ಸ್ವಲ್ಪ ಉಗ್ರವಾಗಿಯೇ ಹರಿಹಾಯ್ದಿದ್ದರು, ಅವರಿಬ್ಬರಿಗೂ ನನಗೂ ಸ್ವಲ್ಪ ಮಾತಿನ ಜಟಾಪಟಿಯಾಯಿತು. ಅದಕ್ಕೆ ಸಂಬಂಧಿಸಿದ ಕೆಲವನ್ನು ಪ್ರಸ್ತಾಪಿಸುತ್ತೇನೆ. ಅಂದು ನಾನು ದಂಗಾಗಿ ಹೋದರೂ, ಇಂದು ಸ್ವಲ್ಪಮಟ್ಟಿಗೆ ಸರಿಯಾಗಿ ಅರ್ಥವಾಗುತ್ತಿರುವುದು ಏನೆಂದರೆ, ಈ ಇಬ್ಬರೂ ಆಯ್ದ ಆಪ್ತ ಅನುಯಾಯಿಗಳು ತಮ್ಮ ನಾಯಕನತ್ತ ಮಿತಿ ಮೀರಿದ ಒರಟು ವರ್ತನೆಯನ್ನು ತೋರುತ್ತಿದ್ದರು ಎಂಬುದು. ಅದರಲ್ಲೇನೋ ಒಂದು ಬಗೆಯ ಮಾನಸಿಕ ಉದ್ವಿಗ್ನತೆ, ಅಸ್ವಸ್ಥತೆಯಿತ್ತು. ಅವರಿಬ್ಬರು ಯಾವುದರ ಮೇಲೋ ತಮ್ಮ ಗುರಿನೆಟ್ಟು, ಗಾಂಧೀಜಿ ಅದಕ್ಕೆ ಅಡ್ಡಿಪಡಿಸುವರೆಂಬ ಸುಳಿವು ಸಿಕ್ಕೊಡನೆ, ಅವರನ್ನು ವಿರೋಧಿಸುತ್ತ ವ್ಯಗ್ರರಾಗಿ ಕೂಗಾಡುತ್ತಿದ್ದರು.

ಇವರ ವಿಚಿತ್ರ ವರ್ತನೆ, ನಡವಳಿಕೆಗಳ ಕುರಿತಂತೆ ಹಲವು ಪುರಾವೆಗಳು ಈಗ ಒದಗುತ್ತಿವೆ. ನಾನು ಇಲ್ಲಿಯವರೆಗೂ ಹೇಳಿಕೊಂಡು ಬಂದ ಹಾಗೆ, ೧೯೪೨ರ ಕೆಲವು ತಿಂಗಳುಗಳಲ್ಲಿ ಮಿ. ನೆಹರುರವರು ಒಬ್ಬ ಸಮರ್ಥ ಶಾಮೀಲುದಾರರಾಗಿದ್ದರು ಎಂಬುದಕ್ಕೆ ಮೌಲಾನಾ ಅಜಾದ್ ಕೂಡ ತಮ್ಮ ಹೇಳಿಕೆಯ ಸಾಕ್ಷಿಯನ್ನು ನೀಡಿದ್ದಾರೆ. ಗೆಲ್ಲುವ ಕಡೆ ಶಾಮೀಲಾಗುವವರು ಯಾರೂ ಇರಲಿಲ್ಲ. ಅಲ್ಲೇನಿದ್ದರೂ ಮಿತ್ರ ರಾಷ್ಟ್ರಗಳ ಒಕ್ಕೂಟವಿತ್ತು ಮತ್ತು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಮಿತ್ರ ರಾಷ್ಟ್ರಗಳು ಮತ್ತು ಬ್ರಿಟೀಷರು ಯುದ್ಧವನ್ನು ಗೆದ್ದರು. ಈ **'ಶಾಮೀಲುದಾರ'** ಎಂಬುದು ಶತ್ರು ರಾಷ್ಟ್ರಗಳೊಡನೆ ಕೈ ಜೋಡಿಸಿದ ಫ್ರೆಂಚರು ಮತ್ತು ಪೂರ್ವ ಯುರೋಪಿಯನ್ನರಿಗೆ ಅನ್ವಯವಾಗುತ್ತದೆ. ಆದರೆ ಅವಶ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಆಕ್ರಮಿಸಿಕೊಳ್ಳುವ ಪ್ರಭುತ್ವದೊಡನೆ ಶಾಮೀಲಾಗುವ ಬಗ್ಗೆ.

ಮಿ. ನೆಹರೂರವರು ಈ ರೀತಿ ಪ್ರಭುತ್ವದೊಡನೆ ಶಾಮೀಲಾಗಲು ಸಿದ್ಧರಾಗೇ ಇದ್ದರು. ಮಿ. ಅಜಾದ್ ಹೇಳಿರುವಂತೆ ಮಿ.ನೆಹರುರವರು ವೈಸರಾಯ್‌ನ ವಿಸ್ತೃತ ಕಾರ್ಯಕಾರಿ ಪರಿಷತ್ತಿಗೆ ಸೇರಿಕೊಳ್ಳಬಯಸಿದ್ದರು. ಅದೂ, ಈ ಪರಿಷತ್ತು ಯುದ್ಧದ ದಿನಗಳಲ್ಲಿ ಮಂತ್ರಿ ಮಂಡಲದಂತೆ ಕಾರ್ಯನಿರ್ವಹಿಸಿ, ಶಾಂತಿಯನ್ನು ಸಾಧಿಸಿದೊಡನೆ ಭಾರತ ಸ್ವತಂತ್ರವಾಗುವುದೆಂಬ ಬ್ರಿಟೀಷ್ ಸರ್ಕಾರದ ಯಾವುದೇ ಭರವಸೆ, ಘೋಷಣೆಯಿಲ್ಲದೆಯೇ. ಮಿ.ನೆಹರು ಒಂದೋ ಅಧಿಕಾರವನ್ನು ಸುಖಿಸುವ ಹೆಚ್ಚು ಸ್ವಾರ್ಥವಿರುವ ಗುರಿಗಾಗಿಯೋ ಇಲ್ಲಾ ಸರ್ವಾಧಿಕಾರಿ ಮತ್ತು ಮೂಲಭೂತವಾದಿ ಶತ್ರುಗಳನ್ನು ಸೋಲಿಸುವ ಆಕಾರವಿಲ್ಲದ ಗುರಿಗಾಗಿಯೋ ಹಸಿದಿದ್ದರೆಂದು ಕಾಣುತ್ತದೆ. ಈ ಎರಡೂ ಗುರಿಗಳ ನಡುವೆ ಹೋಲಿಕೆಯೇ ಇಲ್ಲದಿರುವುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ಈ ಎರಡು ಗುರಿಗಳ ನಡುವೆ ಒಂದೇ ಉದ್ದೇಶದ ಬಂಧವೇನಾದರೂ ಇತ್ತೋ?

ಇತ್ತೀಚೆಗೆ ಕೆಲವರು ನನ್ನ ಗಮನಕ್ಕೆ ತಂದಂತೆ ೧೯೪೨ ರ ಆರಂಭದಲ್ಲಿ

ಮಿ. ನೆಹರುರವರು, ಜಪಾನಿಯರನ್ನು ಸೆದೆಬಡಿಯಲು ಲಕ್ಷಗಟ್ಟಲೆ ಗೆರಿಲ್ಲಾ ಯೋಧರನ್ನು ಸಂಘಟಿಸುವ ಸಾಮರ್ಥ್ಯ ತನಗಿದೆ ಎಂದು ಸಾರ್ವಜನಿಕವಾಗಿ ಘೋಷಿಸುವ ಹುಚ್ಚು ಹುಚ್ಚು ಪ್ರತಿಕ್ರಿಯೆಗಳು ಸ್ವಲ್ಪಮಟ್ಟಿಗೆ ಮಿ. ಸುಭಾಷ್‌ಚಂದ್ರ ಬೋಸ್‌ರ ಬಗೆಗಿನ ಮಾತ್ಸರ್ಯದಿಂದ ಪ್ರೇರಿತವಾಗಿರಬೇಕು. ಮಿ. ಬೋಸ್ ಆಗಲೇ ಶತ್ರು ರಾಷ್ಟ್ರಗಳಿಗೆ ಹೋಗಿದ್ದರು. ಭಾರತ ರಾಷ್ಟ್ರೀಯ ಸೇನೆಯನ್ನು ಕಟ್ಟಿ ಸಂಘಟಿಸುತ್ತಿರುವ ಬಗ್ಗೆ ಅವರು ಸಾರ್ವಜನಿಕವಾಗಿ ಹೇಳಿಕೊಂಡಿದ್ದರು. ಆದರೆ ನೆಹರುರವರ ವರ್ತನೆಗಳು ಬ್ರಿಟೀಷ್ ಸಾಮ್ರಾಜ್ಯಶಾಹಿಯ ಸೇವೆಗನುಗುಣವಾಗಿತ್ತು. ಮಿ.ನೆಹರು ಹಾಗೂ ಮಿ. ಬೋಸ್‌ರ ನಡುವಿನ ಗುಪ್ತಗಾಮಿಯಾದ ಮಾತ್ಸರ್ಯ ಅವರಿಬ್ಬರ ಸಂಬಂಧವನ್ನು ಹದಗೆಡಿಸುತ್ತಿತ್ತೆಂಬುದನ್ನು ಈಗ ಯಾರೂ ಅಲ್ಲಗಳೆಯಲಾರರು. ೧೯೪೨ರ ಈ ಭಯಾನಕವಾದ ಕೆಲವು ತಿಂಗಳುಗಳಲ್ಲಿ ಮಿ.ನೆಹರು ಜಪಾನಿಯರ ಆಕ್ರಮಣಕ್ಕೆ ಸಿಲುಕಿ ನಾಶವಾಗುವ ಭೀತಿಯಲ್ಲಷ್ಟೇ ಅಲ್ಲದೇ ತಮ್ಮ ಹಳೆಯ ಪ್ರತಿಸ್ಪರ್ಧಿಯಿಂದಲೂ ಧೂಳಿಪಟವಾಗುವ ಭಯದಲ್ಲಿ ತತ್ತರಿಸಿರಬೇಕು. ಇಂಡಿಯಾ, ಮಿತ್ರ ರಾಷ್ಟ್ರಗಳ ಕಾಲಡಿಯಲ್ಲಿ ಅಂಗಾತಾಗಿ ಬಿದ್ದು ಒದ್ದಾಡುತ್ತಿರುವಾಗಲೂ ಕೂಡ, ಶತ್ರು ರಾಷ್ಟ್ರಗಳ ವಿರುದ್ಧ ಮಿತ್ರರಾಷ್ಟ್ರಗಳ ಬೆಂಬಲಕ್ಕೆ, ಉನ್ಮಾದದ ಸ್ಥಿತಿಯಲ್ಲಿ ನಿಂತಿರುವಲ್ಲಿ, ಯಾವುದೋ ವೈಯಕ್ತಿಕ ಖಾಸಗಿ ಕಾರಣಗಳು ಅಡಗಿರಲೇ ಬೇಕು. ಆದರೆ ಈ ಕಾರಣಗಳಿಗೆ ನಾನೇನು ಅಂತಹ ಪ್ರಾಮುಖ್ಯತೆ ನೀಡಲಾರೆ. ಇವೇನಿದ್ದರೂ ಉರಿಯುತ್ತಿರುವ ಬೆಂಕಿಗೆ ಎಣ್ಣೆ ಸುರಿದಿರಬೇಕೆ ಹೊರತು, ಅದಾಗಿಯೇ ಬೆಂಕಿಯನ್ನೇನೂ ಹುಟ್ಟುಹಾಕಿರಲಿಲ್ಲ.

ಮಿ. ನೆಹರು ಬಹಳ ಕಾಲದಿಂದಲೂ ಸರ್ವಾಧಿಕಾರವನ್ನು ವಿರೋಧಿಸುತ್ತಾ ಬಂದವರು. ಇಪ್ಪತ್ತರ ದಶಕದಲ್ಲಿ ಹೇಗೆ ಮುಸಲೋನಿಯನ್ನು ಭೇಟಿ ಮಾಡಲು ಅವರು ನಿರಾಕರಿಸಿದ್ದರು ಮತ್ತು ಅವರು ಬಹುಕಾಲದಿಂದಲೂ ಬ್ರಿಟೀಷ್ ಎಡಪಕ್ಷಗಳ ಮಿತ್ರರೂ ಕೂಡ ಎಂಬುದನ್ನು ನೆನಪಿಸಿಕೊಳ್ಳಬಹುದು. ಅವರ ಈ ಸರ್ವಾಧಿಕಾರಿ ಧೋರಣೆಯ ವಿರೋಧ ಹಾಗೂ ಬ್ರಿಟೀಷ್ ಎಡಪಕ್ಷಗಳೊಡನೆ ಅವರ ಅಸಾಮಾನ್ಯ ಗೆಳೆತನದ ಮೂಲ ಕಾರಣಗಳನ್ನು ಕಂಡುಕೊಳ್ಳುವುದು ಸೂಕ್ತ ಎನಿಸುತ್ತದೆ. ಆದರೆ ಈಗ ಅದರ ಗೊಡವೆಗೆ ನಾನು ಹೋಗುವುದಿಲ್ಲ. ಮಿ. ಬೋಸ್‌ರ ಬಗೆಗಿನ ಮಾತ್ಸರ್ಯವೇ ಇದಕ್ಕೆ ಪ್ರಮುಖ ಕಾರಣವಾಗಿರಬಹುದು, ಆದರೆ ಅದಕ್ಕೇನೂ ಅಂತಹ ಮಹತ್ವ ನೀಡಬೇಕಿಲ್ಲ.


ಮಿ. ಬೋಸ್‌ರ ಬದಲಿಗೆ ನೆಹರುರವರನ್ನು ನಿರಂತರವಾಗಿ ಇಷ್ಟಪಡುವ ಮೂರ್ಖ ನಾನಾಗಿದ್ದೆ. ಈ ತಪ್ಪಿಗೆ ಮತ್ತೊಂದು ಬಲವಾದ ಕಾರಣವೆಂದರೆ ಮಹಾತ್ಮಗಾಂಧಿ. ಆದರೆ ೧೯೪೨ರ ಆರಂಭದಲ್ಲಿ ಶ್ರೀ ನೆಹರುರವರ ಸ್ವಭಾವ, ವರ್ತನೆಯನ್ನು ಕುರಿತು ನನ್ನ ಬಲವಾದ ವಿರೋಧವನ್ನು ಅದುಮಿಡಲಾಗಲಿಲ್ಲ. ಆಲ್ಮೋರ ಜಿಲ್ಲಾ ರಾಜಕೀಯ ಸಮ್ಮೇಳನದ, ನನ್ನ ಅಧ್ಯಕ್ಷೀಯ ಭಾಷಣದಲ್ಲಿ ನೆಹರುರವರನ್ನು **"ಬೇಗ ಬಣ್ಣ, ರೂಪ ಬದಲಾಯಿಸುವ ಚತುರ ನಟ"** ಎಂದು ಬಣ್ಣಿಸಿ, ಅವರಿಗೆ ನೀಡಿದ ಎಚ್ಚರಿಕೆ ಏನೆಂದರೆ – "ನೆಹರು ತಮ್ಮ ಸ್ವಭಾವವನ್ನು ತಿದ್ದುಕೊಳ್ಳದಿದ್ದರೆ ಈ ದೇಶದ ಜನತೆ ಅದರಲ್ಲೂ ವಿಶೇಷವಾಗಿ ಯುವ ಸಮೂಹ ಇಲ್ಲಿಯವರೆಗೂ ಇಬ್ಬರೂ ನಾಯಕರ ಮಾತಿಗೆ ಕಿವಿಗೊಡುತ್ತಿದ್ದು ಇನ್ನು ಮುಂದೆ ಕೇವಲ ಒಬ್ಬರ ಮಾತಿಗೆ ಬೆಲೆಕೊಡುವಂತಾಗುತ್ತದೆ" ಎಂದು. ನಾನಂತೂ ನಿರಂತರವಾಗಿ ಶ್ರೀ ನೆಹರುರವರ ವಿರುದ್ಧ ಸಾರ್ವಜನಿಕವಾಗಿಯೂ, ಖಾಸಗಿಯಾಗಿಯೂ ಆಕ್ಷೇಪಿಸುತ್ತಲೇ ಬಂದಿದ್ದೆ – ಅದರಲ್ಲೂ ನನ್ನ ಯೌವ್ವನದ ದಿನಗಳಲ್ಲಿ ಬ್ರಿಟೀಷರ ಹಾಗೂ ಮಿತ್ರ ರಾಷ್ಟ್ರಗಳ ಪರವಾದ ನೆಹರುರವರ ಸನ್ನಿಹಿಡಿದಂತಹ ಹುಚ್ಚುತನದ ಬೆಂಬಲವನ್ನು ಕಟುವಾಗಿಯೇ ಟೀಕಿಸುತ್ತಿದ್ದೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಗಳು ಅಲಹಾಬಾದಿನಲ್ಲಿ ಪ್ರಾರಂಭವಾದ ದಿನವೇ ಅಲ್ಲಿನ ಕೆಲವು ದಿನಪತ್ರಿಕೆಗಳು "ಬೇಗ ಬಣ್ಣ, ರೂಪ ಬದಲಾಯಿಸುವ ಚತುರ ನಟ" ಎಂಬ ನನ್ನ ಭಾಷಣವನ್ನು ಮುಖಪುಟದಲ್ಲಿ ಪ್ರಕಟಿಸಿದ್ದವು. ನಂತರ ನನಗೆ ಯಾರೋ ಹೇಳಿದಂತೆ ಮಿ.ನೆಹರುರವರ ಕೆಲವು ಗೆಳತಿಯರು ಅದನ್ನೇ ಒಂದು ಪ್ರೀತಿಯ ಅಂಕಿತನಾಮದಂತೆ ಭಾವಿಸಿ, ನೆಹರೂ ಸುತ್ತ ಪ್ರತಿಷ್ಠೆಯ ಪ್ರಭೆಯೊಂದನ್ನು ಸೃಷ್ಟಿಸಿದರಂತೆ. ನಾನು ಆಲ್ಮೋರದಿಂದ ಹಿಂತಿರುಗಿದ ನಂತರ ಶ್ರೀ ನೆಹರುರವರನ್ನು ಭೇಟಿಯಾಗಲು ಮುಜುಗರವಾಯಿತು. ಆದರೆ ಅವರೊಡನೆ ನನ್ನ ಸಂಬಂಧ ಎಂತಹದಿತ್ತೆಂದರೆ, ನಾನು ಅವರನ್ನು ಭೇಟಿಯಾಗಲೇಬೇಕಾಗಿತ್ತು. ಅಂತೆಯೇ ಆ ಮಧ್ಯಾಹ್ನ ಅವರನ್ನು ಭೇಟಿಯಾಗಲು ಹೋದೆ. ಅವರು ತಮ್ಮ ಕೋಣೆಯಲ್ಲಿರಲಿಲ್ಲ.

ನಾನು ಹೊರಟುಹೋಗಲು ಸಿದ್ಧನಾಗುತ್ತಿದ್ದೆ. ಆದರೆ ಬಂದ ಕೆಲಸ ಆಗಲಿಲ್ಲ ಎಂಬಂತೇನೂ ಅಲ್ಲ. ಆಗ ತಾನೆ ತಮ್ಮ ಕೊಠಡಿಯಿಂದ ಹೊರಬರುತ್ತಿದ್ದ ಮೌಲಾನಾ ಅಜಾದ್ ಹಿಂದಿನಿಂದ ನನ್ನನ್ನು ಕೂಗಿ ಕರೆದು ಮಾತನಾಡಿಸುತ್ತ, ನನ್ನ ಭಾಷಣದ ಬಗ್ಗೆ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮೌಲಾನಾರವರ ಈ ಸಂತಸದ ಕಾರಣ ನನಗೆ ಅರ್ಥವಾಗಲಿಲ್ಲ. ಆದರೆ, ಅವರಿಗೆ ವ್ಯಂಗ್ಯದ ಪ್ರತ್ಯುತ್ತರವನ್ನು ಕೊಡುವ ನನ್ನ ಆಸೆಯನ್ನು ಹತ್ತಿಕ್ಕಿದೆ. ಗಾಂಧೀಜಿ ಹಾಗೂ ಭಾರತದ ಜನತೆಯ ಸ್ವಾತಂತ್ರ್ಯದ ಅದಮ್ಯ ಆಶಯವನ್ನು **ಏಮಾರಿಸುವಲ್ಲಿ** ಮಿ.ಅಜಾದ್ ಹಾಗೂ ಮಿ.ನೆಹರು ಚೆನ್ನಾಗಿಯೇ ಒಗ್ಗೂಡಿದ್ದರು. ಮೌಲಾನಾರವರ ಪುಸ್ತಕ, ಈ ಪ್ರಕರಣ ಕುರಿತಂತೆ ನನಗೆ ಸ್ಪಷ್ಟತೆ ನೀಡಿದೆ. ಮಿ. ನೆಹರು, ಮಿ. ಆಜಾದರವರ ಸ್ವಭಾವಗಳಲ್ಲಿ ಸ್ವಲ್ಪ ಮಾತ್ರವೇ ವ್ಯತ್ಯಾಸವಿತ್ತು.

ಇಂಡಿಯಾದ ಸ್ವಾತಂತ್ರ್ಯ ಮತ್ತು ಸ್ವತಂತ್ರ ಸರ್ಕಾರಕ್ಕೆ ತತ್‌ಕ್ಷಣ ಪ್ರಾಪ್ತಿಯಾಗಲಿರುವ ಅಧಿಕಾರಗಳ ಬಗ್ಗೆ ಮಿ.ಆಜಾದ್ ರವರಿಗೆ ಮಿ.ನೆಹರುರವರಿಗಿಂತ ಹೆಚ್ಚಿನ ಕಾಳಜಿ ಇತ್ತು. ಮಿ.ಆಜಾದ್ ತಮ್ಮ ಪುಸ್ತಕದಲ್ಲಿ ತಿಳಿಸಿದಂತೆ ಎಲ್ಲಿಯವರೆಗೂ – ನಿಯೋಜಿತ ಭಾರತ ಸರ್ಕಾರವು ಯಾವಾಗ ಸ್ವತಂತ್ರ ಮಂತ್ರಿಮಂಡಲವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಯಾವಾಗ ಸಂಪೂರ್ಣ ಸ್ವಾತಂತ್ರ್ಯ ಹೊಂದುತ್ತದೆ ಎಂಬ ಸ್ಪಷ್ಟನೆ ನೀಡುವವರೆಗೂ ಬ್ರಿಟೀಷರ ಪ್ರಸ್ತಾವನೆಗಳನ್ನು ಒಪ್ಪಲು ಸಿದ್ದರಿರಲಿಲ್ಲ.

ಮಿ.ನೆಹರುರವರಂತೂ ಬ್ರಿಟೀಷರ ಪ್ರಸ್ತಾವನೆಯನ್ನು ನೇರವಾಗಿ, ಇದ್ದದ್ದು ಇದ್ದಹಾಗೆ ಒಪ್ಪಿಕೊಳ್ಳುವುದರ ಪರವಾಗಿದ್ದರು. ಆ ಕಾಲದಲ್ಲಿ ಇಂಡಿಯಾದಲ್ಲಿದ್ದ ಬ್ರಿಟೀಷ್ ವರದಿಗಾರನೊಬ್ಬ, ಈ ಪ್ರಸ್ತಾವನೆಯಲ್ಲಿ ಬ್ರಿಟೀಷರ ವೈರಿಗಳ ಕೈವಾಡವಿದೆ ಎಂದು ಆರೋಪಿಸಿದ್ದೇನೋ ಹೌದು. ನಿಜವಾಗಲೂ ಆ ಕೆಲವು ತಿಂಗಳುಗಳಲ್ಲಿ ಮಿ. ನೆಹರು ಬಹಳ ಕೆಳಮಟ್ಟಕ್ಕೆ ಇಳಿದುಬಿಟ್ಟಿದ್ದರು. ಮಿ. ಆಜಾದರು ನನ್ನ ತೋಳು ಹಿಡಿದೆಳೆದು ಮಿ. ನೆಹರುರವರು ತಮ್ಮ ಸಮೀಪವರ್ತಿಗಳೊಡನೆ ಚಹ ಸೇವಿಸುತ್ತಿದ್ದ ಕೋಣೆಗೆ ನನ್ನನ್ನು ತಳ್ಳಿದರು. ಮಿ. ನೆಹರುರವರ ನಿವಾಸದಲ್ಲಿ ನಾನು ಕುಡಿದ ಅತ್ಯಂತ ತಣ್ಣನೆಯ ಚಹಾ ಅದಾಗಿತ್ತು. ಆದರೆ ಭೇಟಿಯ ಕೊನೆಯಲ್ಲಿ ಅವರು ಚೇತೋಹಾರಿ ಆತ್ಮೀಯತೆಯನ್ನು ತೋರಿದರು ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಅದು ಅವರ ವ್ಯಕ್ತಿತ್ವದ ಬಲಿಷ್ಠ ಅಂಶವಾಗಿತ್ತು. ಸಂದರ್ಭಕ್ಕೆ ತಕ್ಕಂತೆ ಬದಲಾಗಬಲ್ಲ ಅಸಾಮಾನ್ಯ ಹೊಂದಾಣಿಕೆಯ ಸ್ವಭಾವ ಅವರದಾಗಿತ್ತು ಅಥವಾ ಎಷ್ಟೇ ಪಾಷಂಡಿಯಾಗಿದ್ದರೂ ನಾನಿನ್ನೂ ಅವರ ಶಿಷ್ಯ ಎಂಬ ಕಾರಣಕ್ಕಾಗಿಯಾದರು ಇರಬಹುದು. ಈ ರೀತಿಯ ಅಸಾಮಾನ್ಯ ಹೊಂದಾಣಿಕೆ ಹಾಗೂ ಜಾಯಮಾನ ಬದಲಾಯಿಸುವ ಗುಣವೇ ಮಿ.ನೆಹರುರವರನ್ನು ಪ್ರಪಾತಕ್ಕೆ ಉರುಳಿ ಹೋಗಿ ಕೊಳೆತು ಸರ್ವನಾಶವಾಗುವ ಅಪಾಯದಿಂದ ತಪ್ಪಿಸಿತು. ೧೯೪೨ರಲ್ಲಿದ್ದ ಅವರ ಹಳೆಯ ಸ್ವಭಾವ ವರ್ತನೆಗಳಿಗೆ ಅಂಟಿಕೊಂಡು ಮುಂದೆ ಸಾಗಿದ್ದರೆ, ಖಂಡಿತ ಅದೇ ಗತಿ ಅವರದ್ದಾಗಿರುತ್ತದೆ.




**ಅನುವಾದಕ ಬಿ.ಎಸ್. ದಿವಾಕರ್ ಮೂಲತಃ ಕಾರಿಗನೂರರಾಗಿದ್ದು ವೃತ್ತಿಯಿಂದ ಇಂಜಿನಿಯರ್ ಆಗಿ ವಾಹನದ ಬಿಡಿ ಭಾಗಗಳ ತಯಾರಿಕೆಯ ಕಾರ್ಖಾನೆ ನಡೆಸುತ್ತಿದ್ದು, 'ಪ್ರಗತಿರಂಗ'ದ ಕಾಲದಿಂದಲೂ ಸಮಾಜವಾದಿ ರಾಜಕಾರಣದಲ್ಲಿ ಆಸಕ್ತಿ ಹೊಂದಿದ್ದಾರೆ...**

'ಹೊಸ ಮನುಷ್ಯ'ದ ವಿಮರ್ಶಾತ್ಮಕ ಓದುಗರಾಗಿದ್ದ ಕುವೆಂಪು ವಿಶ್ವವಿದ್ಯಾಲಯದ ಗಣಿತ ಶಾಸ್ತ್ರ ಪ್ರಾಧ್ಯಾಪಕ ಜ್ಞಾನೇಂದ್ರ ಪ್ರಭು ಅವರ ನಿಧನಕ್ಕೆ ಪತ್ರಿಕೆ ತನ್ನ ಸಂತಾಪವನ್ನು ಸೂಚಿಸುತ್ತದೆ–ಸಂ

ಸಂಸ್ಕೃತಿ ಚಿಂತನೆ

# ಜಾಗತೀಕರಣದ ಸಾಂಸ್ಕೃತಿಕ 'ಫಲ'ಗಳು...

–ಡಾ. ರಾಜೇಂದ್ರ ಚೆನ್ನಿ







**ಜಾ**ಗತೀಕರಣ ಹಾಗೂ ಸಾಹಿತ್ಯ–ಸಂಸ್ಕೃತಿಗಳ ಸಂಬಂಧದ ಬಗ್ಗೆ ಚಿಂತನೆ ಮಾಡುವವರಿಗೆ ಅತ್ಯಂತ ಕುತೂಹಲಕಾರಿಯಾದ ಸಂಗತಿಯೆಂದರೆ ಮನುಷ್ಯ ಜಗತ್ತು ಕಂಡ ಮೊದಲ ಹಂತದ ಜಾಗತೀಕರಣದಲ್ಲಿ ಸಂಸ್ಕೃತಿ ಹಾಗೂ ಸಾಹಿತ್ಯ ಮುಂತಾದ ಕಲೆಗಳು ನಿರಂತರವಾಗಿ ಪರಿಭ್ರಮಣದಲ್ಲಿದ್ದು ಪರಸ್ಪರ ಸಂಪರ್ಕ ಹಾಗೂ ಸಂಬಂಧಗಳ ಮೂಲಕ ಶ್ರೀಮಂತಗೊಳ್ಳುತ್ತಿದ್ದವು. 'ಅರೇಬಿಯನ್ ನೈಟ್ಸ್' ಹಾಗೂ ಪಂಚತಂತ್ರದ ಕತೆಗಳು ವಿಶ್ವದ ಎಲ್ಲಾ ಮೂಲೆಗಳಿಗೂ ಸಂಚರಿಸಿದ್ದವು. ಹಾಗೆಯೆ ಪುರಾಣಗಳು ಕೂಡ. ಭಾರತದ ಗಣೇಶನಿಗೂ ಈಜಿಪ್ಟ್‌ನ ಐನಿಸ್‌ಗೂ ಇರುವ ಹೋಲಿಕೆಗಳು ಒಂದು ಹಂತದ ನಾಗರೀಕತೆಯಲ್ಲಿ ವಿಶ್ವದ ಅನೇಕ ಪರಂಪರೆಗಳ ದೇವತೆಗಳಲ್ಲಿ ಕಾಣುತ್ತವೆ. ಬುದ್ಧನ ಅತ್ಯಂತ ಸುಂದರ ವಿಗ್ರಹಗಳು ಕನಿಷ್ಟ ಮೂರು ವಿಭಿನ್ನ ಸಂಸ್ಕೃತಿಗಳ ಲಕ್ಷಣಗಳನ್ನು ಹೊಂದಿವೆ. ಭಾರತದ ಶ್ರೇಷ್ಠ ವಾಸ್ತುಶಿಲ್ಪವು ಹಲವು ಸಂಸ್ಕೃತಿಗಳ ಸಂಗಮವಾಗಿದೆ. ಯೂರೋಪಿನ ವಾಸ್ತುಶಿಲ್ಪದಲ್ಲಿ ಗ್ರೀಕ್, ರೋಮನ್ ಮಾತ್ರವಲ್ಲದೇ ಇನ್ನೂ ಅನೇಕ ಯೂರೋಪೇತರ ನೆಲೆಗಳಿಂದ ಬಂದ ಪರಂಪರೆಗಳಿವೆ. ಇದೆಲ್ಲದರ ಅರ್ಥವೆಂದರೆ ಸಾವಿರಾರು ವರ್ಷಗಳ ವರೆಗೆ ಸಂಸ್ಕೃತಿ ಹಾಗೂ ಕಲೆಗಳು ಹಿರಿದಾದ ಅರ್ಥದಲ್ಲಿ ಜಾಗತೀಕರಣದಗೊಳ್ಳುತ್ತ ಬಂದಿದ್ದವು. ಈ ಪ್ರಕ್ರಿಯೆಯ ಹಿಂದೆಯೂ ಒಂದು ಬಗೆಯ, ಸೀಮಿತವಾದ ಸಾಮ್ರಾಜ್ಯಶಾಹಿಯ ಪ್ರಭಾವವಿತ್ತು. ಆದರೆ ಇಂದಿನ ಜಾಗತೀಕರಣದ ಹಿಂದಿರುವ ನವಸಾಮ್ರಾಜ್ಯಶಾಹಿಯಷ್ಟು ಆಕ್ರಮಣಶೀಲವಾಗಿರಲಿಲ್ಲ. ಅಥವಾ ತನ್ನ ಪ್ರಭಾವದಲ್ಲಿ ಈ ಪ್ರಮಾಣದಲ್ಲಿ ಪ್ರಬಲವಾಗಿರಲಿಲ್ಲ. ವಿವಿಧ ಸಂಸ್ಕೃತಿ–ಕಲಾ ಪರಂಪರೆಗಳ ಜಾಗತಿಕ ಸಂಬಂಧಗಳಲ್ಲಿ ಮುಖ್ಯವಾದ ಬದಲಾವಣೆ ಬಂದದ್ದು ಆಧುನಿಕ ಸಾಮ್ರಾಜ್ಯಶಾಹಿಯಿಂದಾಗಿ. ಹದಿನಾರನೇಯ ಶತಮಾನದದಿಂದ ಸಣ್ಣದಾಗಿ ಶುರುವಾದ ಈ ಸಾಮ್ರಾಜ್ಯಶಾಹಿ ಯೂರೋಪಿನಲ್ಲಾದ ಬದಲಾವಣೆಗಳಿಂದಾಗಿ ಅತ್ಯಂತ ಆಕ್ರಾಮಿಕವಾಗಿ ಬೆಳೆಯಲಾರಂಭಿಸಿತು. ಭೌಗೋಳಿಕವಾಗಿ ತನ್ನ ಜೊತೆಗೆ ಸಂಪರ್ಕವಿಲ್ಲದೆ ದೂರದ ವಸಾಹತುಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿಕೊಂಡ ಯೂರೋಪಿನ ಹಲವು ರಾಷ್ಟ್ರಗಳು ಈ ವಸಾಹತುಗಳನ್ನು ಆರ್ಥಿಕವಾಗಿ ಮಾತ್ರವಲ್ಲ ಸಾಂಸ್ಕೃತಿಕವಾಗಿ ಕೂಡ ಆಕ್ರಮಿಸಲಾರಂಭಿಸಿದವು. ಇದು ಮನುಷ್ಯ ಚರಿತ್ರೆಯು ಕಂಡ ರಕ್ತಚೆಲ್ಲದ ಭೀಕರವಾದ ಹಿಂಸೆಯ ಪರ್ವವಾಗಿತ್ತು. ವಸಾಹತುಗಳ ದೇಶೀ ಜ್ಞಾನ ಪರಂಪರೆಗಳನ್ನು, ಜೀವನ ಪದ್ಧತಿಗಳನ್ನು ಕಲೆ ಹಾಗೂ ಸಂಸ್ಕೃತಿಗಳನ್ನು ಸಾಮ್ರಾಜ್ಯಶಾಹಿಯು ಮೂಲಭೂತವಾಗಿ ಪಲ್ಲಟಗೊಳಿಸಿಬಿಟ್ಟಿತು. ಒಂದು ಪರಿಣಾಮವೆಂದರೆ ಡಿ.ಆರ್. ನಾಗರಾಜ್, ಗಣೇಶ ದೇವಿ ಮುಂತಾದವರು ವಿಸ್ತಾರವಾಗಿ ಚರ್ಚಿಸಿದ ಸಾಂಸ್ಕೃತಿಕ ವಿಸ್ಮೃತಿ. ತನ್ನ ಅಸ್ತಿತ್ವಕ್ಕೆ ನ್ಯಾಯಸಮರ್ಥನೆ ಕೊಟ್ಟುಕೊಳ್ಳುವುದಕ್ಕಾಗಿ ಸಾಮ್ರಾಜ್ಯಶಾಹಿಯು ವಸಾಹತುಗಳಲ್ಲಿ ತಮ್ಮ ಸಂಸ್ಕೃತಿಗಳ ಬಗ್ಗೆ ಕೀಳರಿಮೆ, ವಿಸ್ಮೃತಿ ತಿರಸ್ಕರಣದ ಧೋರಣೆಗಳನ್ನು ರೂಪಿಸಿದವು. ಮುಖ್ಯವಾಗಿ ದೇಶೀ ಸಂಸ್ಕೃತಿಗಳು ಅನಾಧುನಿಕವೆನ್ನುವ ನಂಬಿಕೆಯು ಅತ್ಯಂತ ಆಳವಾಗಿ ನೆಲೆಗೊಂಡಿತು. ಸಾಮ್ರಾಜ್ಯಶಾಹಿಯು ಸೃಷ್ಟಿಸಿದ ಅಧುನಿಕ–ಅನಾಧುನಿಕವೆನ್ನುವ ಶ್ರೇಣೀಕರಣದಿಂದ ಮಾನವ ಜಗತ್ತು ಇಂದಿಗೂ ಹೊರಬಂದಿಲ್ಲ. ಮಾತ್ರವಲ್ಲ, ಈಗ ನಾವು ನೋಡುತ್ತಿರುವ ಜಾಗತೀಕರಣವೆನ್ನುವ ನವ–ವಸಾಹತುಶಾಹಿಯೂ ಕೂಡ ಇಂಥ ಶ್ರೇಣೀಕರಣದ ಆಧಾರದ ಮೇಲೆಯೇ ದೇಶೀ ಸಂಸ್ಕೃತಿಗಳ ಮೇಲೆ ಆಕ್ರಮಣವನ್ನು ಮಾಡುತ್ತದೆ. ಫರಕು ಏನೆಂದರೆ ನವ–ಸಾಮ್ರಾಜ್ಯಶಾಹಿಗೆ ದೇಶೀ ಸಂಸ್ಕೃತಿಗಳನ್ನು ಸಂಪೂರ್ಣವಾಗಿ ವಿನಾಶ ಮಾಡುವ ಪ್ರಾಬಲ್ಯವಿದೆ. ಹೀಗಾಗಿ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ದೇಶೀ ಸಂಸ್ಕೃತಿ ಸಾಹಿತ್ಯಗಳು ಅಬಾಧಿತವಾಗಿ ಉಳಿಯುತ್ತಿವೆ, ಅಥವಾ ಅವು ಗಟ್ಟಿಯಾದ ಪ್ರತಿರೋಧದ ನೆಲೆಗಳಾಗುತ್ತವೆ ಎಂದು ನಂಬುವುದು ತೀರಾ ಬಾಲಿಷವಾಗುತ್ತದೆ. ಹೀಗೆಂದ ಮಾತ್ರಕ್ಕೆ ದೇಶೀ ಸಂಸ್ಕೃತಿಗಳ ಅಂತಿಮ ವಿನಾಶದ ಆಗಮನವನ್ನು ವಿಷಾದದಿಂದ ನಿರೀಕ್ಷಿಸುವುದು ಈಗ ಉಳಿದಿರುವುದು ಎಂದಲ್ಲ. ಯಾವ ಸಾಮ್ರಾಜ್ಯಶಾಹಿಯೂ ಅಂತಿಮವಾದ, ಪರಿಪೂರ್ಣವಾದ ಗೆಲುವನ್ನು ಸಾಧಿಸಲಾರದು. ಆದರೆ ನವ ಸಾಮ್ರಾಜ್ಯಶಾಹಿಯ ಅಗಾಧವಾದ ಪ್ರಾಬಲ್ಯವನ್ನು ಗುರುತಿಸಿಕೊಂಡೇ ನಮ್ಮ ಚರ್ಚೆಗಳು ನಡೆಯಬೇಕಿದೆ.

ಇದಕ್ಕೆ ಮುಖ್ಯ ಕಾರಣವೆಂದರೆ ಜಾಗತೀಕರಣವು ದೇಶೀ ಸಂಸ್ಕೃತಿ ಸಾಹಿತ್ಯಗಳನ್ನು ನಾಶಮಾಡಿಬಿಡುತ್ತದೆ ಎನ್ನುವ ಹುಸಿ ಪಡಿಯಚ್ಚು ಕಲ್ಪನೆ ನಮ್ಮಲ್ಲಿದೆ. ಮಾರುಕಟ್ಟೆಯನ್ನೇ ಅವಲಂಬಿಸಿಕೊಂಡಿರುವ ಜಾಗತೀಕರಣವು ಮಾರುಕಟ್ಟೆಯ ವಿರೋಧಿಯಾದ (ಅಥವಾ ವಿರೋಧಿಯಾಗಬೇಕೆಂದು ನಾವು ನಿರೀಕ್ಷಿಸುವ) ಸಂಸ್ಕೃತಿ ಸಾಹಿತ್ಯಗಳನ್ನು ಬಲವಾಗಿ ಅಂಚಿಗೆ ತಳ್ಳಿ ಅವುಗಳನ್ನು ನಾಶಮಾಡುತ್ತದೆಯೆಂದು ನಿರೀಕ್ಷಿಸುವವರಿಗೆ ಈಗ ಅಚ್ಚರಿಯಾಗಿ ಕಾಣುತ್ತಿರುವುದೆಂದರೆ ಮಾರುಕಟ್ಟೆಯ ಮಧ್ಯದಲ್ಲಿ ಬಿಕರಿಗೆ ಸಿದ್ಧವಾಗಿ ಸಾಹಿತ್ಯ–ಸಂಸ್ಕೃತಿಗಳು ಸಿಂಗರಿಸಿಕೊಂಡು ಕುಳಿತುಬಿಟ್ಟಿವೆ! ಇನ್ನಿತರ ಸರಕುಗಳಿಗಿಂತ ಅತ್ಯಂತ ಬೇಡಿಕೆಯಲ್ಲಿರುವ ಮಾಲುಗಳೆಂದರೆ ಸಾಹಿತ್ಯ ಮತ್ತು ಕಲೆಗಳೇ ಆಗಿಬಿಟ್ಟಿವೆ! ಇಷ್ಟು ಮಾತ್ರವಲ್ಲ ಜಾಗತೀಕರಣದ ಸಂಸ್ಥೆಗಳು ದೇಶೀ ಸಾಂಸ್ಕೃತಿಕ ವೈವಿಧ್ಯಗಳನ್ನು ತಿರಸ್ಕರಿಸುವ ಬದಲಾಗಿ ಅವುಗಳನ್ನೇ ತಮ್ಮ ಮಾರುಕಟ್ಟೆಯ ಪ್ರಧಾನ ತಂತ್ರವಾಗಿ ಬಳಸಿಕೊಳ್ಳುತ್ತಿವೆ. ಬೆಂಗಳೂರಿನ ಪಂಚತಾರಾ ಹೋಟೇಲಿನ ಟಜಟಿಣನಲ್ಲಿ ಜೋಳದ ರೊಟ್ಟಿಯೂ ವಿಜೃಂಭಿಸುತ್ತಿದೆ! ಬಹುಶಃ ಜಾಗತೀಕರಣವು ಸಂಸ್ಕೃತಿಗಳನ್ನು ಬಳಸಿಕೊಳ್ಳುವ ಇಂದಿನ ರೀತಿಗೆ ಅತ್ಯುತ್ತಮ ರೂಪಕವೆಂದರೆ ಪಂಚತಾರಾ ಹೋಟೆಲುಗಳಲ್ಲಿ ಕಾಣುವ ಟಣಟಣು–ಭಿಣ್ಣುಟಿಜ ವ್ಯವಸ್ಥೆಯಾಗಿದೆ. ಇದರಲ್ಲಿ ಹಲವಾರು ರಾಷ್ಟ್ರಗಳ, ಸಂಸ್ಕೃತಿಗಳ ಮೂಲದಿಂದ ಬಂದಿರುವ ತಿಂಡಿ–ತಿನಿಸುಗಳು ಏಕಕಾಲಕ್ಕೆ ಲಭ್ಯವಿವೆ. ಆದರೆ ಅವುಗಳ ಸಾಂಸ್ಕೃತಿಕ ಪರಿಸರದಿಂದ ಬಹು ದೂರದಲ್ಲಿ, ಅದರಿಂದ ಸಂಪೂರ್ಣವಾಗಿ ಬೇರ್ಪಡೆಯಾಗಿ, ಅಷ್ಟು ಮಾತ್ರವಲ್ಲ ಈ ಐಷಾರಾಮಿ ಹೋಟೆಲುಗಳನ್ನು ನಡೆಸುತ್ತಿರುವುದು ಈ ಸಾಂಸ್ಕೃತಿಕ

ಪರಿಸರವನ್ನು ತನ್ನ ಆರ್ಥಿಕ ನೀತಿಗಳಿಂದ ನಾಶಮಾಡಿರುವ ಬಹುರಾಷ್ಟ್ರೀಯ ಬಂಡವಾಳಶಾಹಿ ಶಕ್ತಿಗಳು ಅಥವಾ ಅದರ ದೇಶೀ ಅವತಾರಗಳಾದ ನಮ್ಮ ಬಂಡವಾಳಶಾಹಿಗಳು ಅಮೇರಿಕವು ಮೆಕ್ಸಿಕೋವನ್ನು ಸರ್ವನಾಶ ಮಾಡಲು ಪ್ರಯತ್ನಿಸುತ್ತಿರುವಾಗ ಅದೇ ಅಮೇರಿಕಾದ ಅಂತರ್‌ರಾಷ್ಟ್ರೀಯ KFC ಮುಂತಾದ outlet ಗಳಲ್ಲಿ ನೀವು ಮೆಕ್ಸಿಕನ್ ಊಟವನ್ನು ಮಾಡಬಹುದು. ಮುಂಬಾಯಿ, ದೆಹಲಿಯಂಥ ಮಹಾನಗರಗಳಲ್ಲಿ ಇಂದು ನೈರುತ್ಯ ರಾಜ್ಯಗಳ ವ್ಯಕ್ತಿಗಳನ್ನು ಕೊಲ್ಲಲಾಗುತ್ತದೆ. ಆದರೆ ಈ ಮಹಾನಗರಗಳ ಪಂಚತಾರಾ ಹೋಟೆಲುಗಳಲ್ಲಿ ಓಂಡಿಣು ಇಛೆಣಜಡಿಟ ಆಜಟುಭಿಚೆಭಿಜ ಗಳು ಲಭ್ಯವಿವೆ. ಅದಕ್ಕೆ ಹೇಳಿದ್ದು ಜಾಗತೀಕರಣವು ಮೆಚ್ಚುವ ಒಣಟಣು-ಭಿಣ್ಣುಟಿಜ ಒಂದು ಶ್ರೀಮಂತವಾದ ರೂಪಕ-ನಮ್ಮ ಕಾಲದ ಭೀಕರ ಹಿಂಸೆಗಳಿಗೆ.

ಅಂದರೆ ಜಾಗತೀಕರಣವು ದೇಶೀ ಸಂಸ್ಕೃತಿಗಳನ್ನು ಅಂಚಿಗೆ ತಳ್ಳುವುದಿಲ್ಲ. ಅವುಗಳನ್ನು ಸರಕುಗಳನ್ನಾಗಿ ಪರಿವರ್ತಿಸಿ ಮಾರುಕಟ್ಟೆಯಲ್ಲಿ ಬಿಕರಿ ಮಾಡುತ್ತವೆ. ಬೆಂಗಳೂರಿನ ರೇವ್ ಪಾರ್ಟಿಗೆ ಹೋಗಿ ಅಲ್ಲಿ ಈಗ ಕರ್ನಾಟಕದಲ್ಲಿ ಸುಲಭವಾಗಿ ಲಭ್ಯವಿರುವ ಮಾದಕವಸ್ತುಗಳನ್ನು ಆನಂದಿಸುತ್ತ ಬೇಂದ್ರೆಯವರ 'ಕುರುಡು ಕಾಂಚಾಣ' ಪದ್ಯವನ್ನು ಅತ್ಯಾಧುನಿಕ ತಂತ್ರಜ್ಞಾನದಿಂದಾಗಿ ಸುಶ್ರಾವ್ಯವಾಗಿ ಕೇಳಬಹುದು. ನೀವು ಅತಿಶಯೋಕ್ತಿಯೆಂದುಕೊಂಡರೂ ಸರಿ, ಅಲ್ಲಿ ಬೆಂಗಳೂರಿನ ನಮ್ಮ ಕೆಲವು ಪುರೋಹಿತ ವಿಮರ್ಶಕರು ಆ ಪದ್ಯದ ವ್ಯಾಖ್ಯಾನವನ್ನು ಮಾಡಬಹುದೆಂದು ನಾನು ನಂಬಿದ್ದೇನೆ. ಬೇಂದ್ರೆ ಪದ್ಯದಂತೆಯೆ ದೇಶೀ ಸಂಸ್ಕೃತಿಗಳಲ್ಲಿ ಜಾಗತೀಕರಣದ ಮೂಲದಲ್ಲಿರುವ ಹಲವಾರು ಆಕ್ರಾಮಕ ಪ್ರವೃತ್ತಿಗಳನ್ನು ವಿರೋಧಿಸುವ ನೆಲೆಗಳಿವೆ. ಆದರೆ ಜಾಗತೀಕರಣವು ಈ ನೆಲೆಗಳನ್ನು ಮರೆಮಾಚಿ, ಅವುಗಳ ಪ್ರತಿರೋಧ ಶಕ್ತಿಯನ್ನು ಅಲಕ್ಷ್ಯ ಮಾಡುವಂತೆ ಸಂಸ್ಕೃತಿ, ಕಲೆಯ ವಸ್ತುಗಳನ್ನು aestheticise ಮಾಡುತ್ತದೆ. ಅವುಗಳನ್ನು "ಆನಂದಿಸುವ" ಸರಕುಗಳನ್ನಾಗಿ ಪರಿವರ್ತಿಸುತ್ತದೆ. ಹೀಗಾಗಿ ಸಾಹಿತ್ಯವು "ಸಂಭ್ರಮದ" ವಸ್ತುವಾಗುತ್ತದೆ. ಜೈಪುರದ ಸಾಹಿತ್ಯ ಸಮ್ಮೇಳನಗಳು "Festival"ಗಳಾಗಿ ಬಂಡವಾಳಶಾಹಿಯ event managementನ ಭಾಗಗಳಾಗುತ್ತವೆ. ಅದೇ ಮಾದರಿಯಲ್ಲಿ ಬೆಂಗಳೂರು ಸಾಹಿತ್ಯ ಹಬ್ಬವೂ ನಡೆಯುತ್ತದೆ.

ಆದರೆ ನಾವು ನೆನಪಿಡಬೇಕು. ಜಾಗತೀಕರಣಕ್ಕೆ ತನ್ನದೇ ಆದ ಮಾಂತ್ರಿಕ ಶಕ್ತಿ ಇರುವುದಿಲ್ಲ. ಅದು ಯಾವುದೇ ವ್ಯವಸ್ಥೆ ಅಥವಾ ಸಮಾಜದಲ್ಲಿ ಇರುವ ಅಸಮಾನತೆಗಳು. ಹಾಗೂ ವೈರುಧ್ಯಗಳನ್ನು ಬಳಸಿಕೊಂಡೇ ತನ್ನ ಪ್ರಾಬಲ್ಯವನ್ನು ಮರೆಯುತ್ತದೆ. ಉದಾಹರಣೆಗೆ ಕನ್ನಡ ಸಾಹಿತ್ಯದ ಸಂದರ್ಭವನ್ನು ನೋಡಿ ಇಂದು ಮುಖ್ಯವಾಗಿ ಕಾಣುತ್ತಿರುವುದು ಎರಡು ಅಂಶಗಳು. ಒಂದು mediocrity. ಅತ್ಯಂತ ಕಳಪೆಯಾಗಿರುವುದನ್ನು, ಅಪ್ರಸ್ತುತವಾದುದನ್ನು ಶ್ರೇಷ್ಠವೆನ್ನುವ ಅಪ್ರಾಮಾಣಿಕತೆ. ಇಂದು ಕನ್ನಡದಲ್ಲಿ ನೀವು ಏನನ್ನೂ ಬರೆದರೂ ಅದು ಅದ್ಭುತವೆನ್ನುವ ವೃದ್ಧ ಪುರೋಹಿತ ವಿಮರ್ಶಕರಿದ್ದಾರೆ. ಇವರಲ್ಲಿ ಕೆಲವರೂ ನಾಲ್ಕೈದು ದಶಕಗಳಿಂದ ಬರೆಯುತ್ತಿದ್ದಾರೆಯಾದರೂ ಇಂದಿಗೂ ಸಾಹಿತ್ಯದ ಸತ್ವ ಯಾವುದು ಎನ್ನುವುದು ಅವರಿಗೆ ಗೊತ್ತಿಲ್ಲ. ಹೀಗಾಗಿ ಇಂದು ಗ್ರಂಥದ ಬಿಡುಗಡೆ ಒಂದು event ಮ್ಯಾನೇಜ್‌ಮೆಂಟ್ ಆಗಿ, ಅದಕ್ಕೆ ಅನುಕೂಲಕವಾದ ಮಾಧ್ಯಮ ಮಿತ್ರರಿಂದಾಗಿ ಪ್ರಚಾರ ಪಡೆಯುತ್ತದೆ. ಹಲವು ಪ್ಯಾರಾಗಳನ್ನು ಮೀರದ "ವಿಮರ್ಶೆ" ಯ ಬೆಂಬಲ ಸುಲಭವಾಗಿ ಸಿಕ್ಕುತ್ತದೆ. ಹೀಗಾಗಿ ಕನ್ನಡ ಸಾಹಿತ್ಯವು ಬೂಸಾ ಎಂದಿದ್ದ ಬಸವಲಿಂಗಪ್ಪನವರ ಮಾತು ಇಂದು ನಿಜವೆಂದು ಸಾಬೀತಾಗುತ್ತಿದೆ. ೧೯೭೦ರಿಂದ ಬೆಳೆದ ಜನಪರ ಚಳುವಳಿಗಳು ವಿಶಾಲವಾದ ಅರ್ಥದಲ್ಲಿ ಬ್ರಾಹ್ಮಣ ವಿರೋಧಿ ಹಾಗೂ ಶೂದ್ರ ಪರವಾಗಿದ್ದವು. ತೇಜಸ್ವಿ ಇದನ್ನು ಒಂದು ಅರ್ಥಪೂರ್ಣ ಚಲನೆಯಾಗಿ ಕಂಡಿದ್ದರು. ಆದರೆ ಈಗ ಜಾಗತೀಕರಣವು ತಂದ ಮಂಪರಿನಲ್ಲಿ ಈ ಚಳುವಳಿಗಳು ಬಸವಳಿದು ಹೋಗಿ ಕನ್ನಡ ಸಾಹಿತ್ಯವಲಯವು ಮತ್ತೆ ಬ್ರಾಹ್ಮಣೀಕರಣಗೊಂಡಿದೆ. ಜಾಗತೀಕರಣದ ಇನ್ನೊಂದು ಲಕ್ಷಣವಾದ ವೈಭವೀಕರಣವನ್ನು ಈ ವಲಯವು ಬಳಸಿಕೊಳ್ಳುತ್ತಿದೆ. ಅಂದರೆ ಸಾಹಿತ್ಯ-ಕಲೆಗಳ ನೈಜ ಸತ್ವದ ಬದಲಾಗಿ, ಅವುಗಳಿಗೆ ಮುಖಾಮುಖಿಯಾಗುವ ಪ್ರಯತ್ನದ ಬದಲಾಗಿ ಬಾಹ್ಯ ಲಾಂಛನಗಳಿಗೆ ಮಹತ್ವಕೊಡುವುದು. ಗಾಗಿಯೇ ಪ್ರಶಸ್ತಿ ಪುರಸ್ಕಾರಗಳು ಕೃತಿಗಳಿಗಿಂತ ಮುಖ್ಯವಾಗುತ್ತವೆ. ಇತ್ತೀಚೆಗೆ ನಡೆದ ವಿವಾದವೊಂದು ಪ್ರಶಸ್ತಿಯನ್ನು ಕುರಿತು ಎನ್ನುವುದು ಸಹಜವೇ ಆಗಿದೆ. ಪ್ರಶಸ್ತಿ-ಪುರಸ್ಕಾರ ಹಾಗೂ ವಿಮರ್ಶೆಗಳನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿರುವ



ಬ್ರಾಹ್ಮಣ ವಲಯವೇ ಇಂದು ಕನ್ನಡ ಸಾಹಿತ್ಯದ ಸಾರ್ವಜನಿಕ ವ್ಯಕ್ತಿತ್ವವನ್ನು ರೂಪಿಸುತ್ತಿದೆ. ಹೀಗೆ ರೂಪಿತವಾಗುತ್ತಿರುವ ಕನ್ನಡ ಸಾಹಿತ್ಯ ಪ್ರಾಯಶಃ ಭಾರತೀಯ ಭಾಷೆಗಳಲ್ಲಿಯೇ ಅತ್ಯಂತ ಅಪ್ರಸ್ತುತ (irrelevant) ಸಾಹಿತ್ಯವಾಗುವ ಅಪಾಯದಲ್ಲಿದೆ. ಆದರೆ ಸುದೈವದಿಂದ ಇದು ಒಟ್ಟಾರೆ ಕನ್ನಡ ಸಾಹಿತ್ಯದ ಒಂದು ಭಾಗ ಮಾತ್ರವಾಗಿದೆ. ಇದರ ಆಚೆಗೆ ಜಾಗತೀಕರಣವನ್ನು ವಿರೋಧಿಸುತ್ತಿರುವ, ಸಾಹಿತ್ಯವನ್ನು ವಿಭಿನ್ನವಾಗಿ ನೋಡುವ ವಲಯವೂ ಇದೆ. ಆದರೆ ಈ ವಲಯವೂ ನಮ್ಮ ಇಂದಿನ ಬದುಕಿನ ಅಪಾರವಾದ ಪಲ್ಲಟಗಳನ್ನು ಸಮಗ್ರವಾಗಿ ಎದುರಿಸಿ ತನ್ನ ಸೃಜನಶೀಲಕೃತಿಗಳನ್ನು ರಚಿಸುವ ಸಾಮರ್ಥ್ಯವನ್ನು ತೋರಿಲ್ಲ.

ಈ ಎಲ್ಲಾ ವಿದ್ಯಮಾನಗಳು ಕೇವಲ ಜಾಗತೀಕರಣದ ಪರಿಣಾಮಗಳೆಂದು ನಾನು ಭಾವಿಸುವುದಿಲ್ಲ. ಕನ್ನಡ ಸಾಹಿತ್ಯ ವಲಯವೂ ಕೆಲವು ಸಂದರ್ಭಗಳನ್ನು ಬಿಟ್ಟರೆ ನೈಜವಾದ ಸಾಮಾಜಿಕ ಬದ್ಧತೆಯನ್ನು ಅಥವಾ ಸೂಕ್ಷ್ಮತೆಯನ್ನು ತೋರಿಸಿದ ಉದಾಹರಣೆಗಳಿಲ್ಲ. ಚಳುವಳಿಗಳ ಸಂಪರ್ಕದಲ್ಲಿ ಮಾತ್ರ ಆಗೀಗ ಅದು ಜೀವಂತಿಕೆಯನ್ನು ಪಡೆದಿದೆ. ಉಳಿದ ಹಾಗೆ ಅದು ಮೊದಲಿನಿಂದಲೂ ಮಧ್ಯಮ ವರ್ಗ, ಮೇಲ್ಜಾತಿಗಳ ಸಂವೇದನೆಯ ಪರವಾಗಿದೆ. ಅಲ್ಲದೇ ಇಲ್ಲಿ ನಿಷ್ಠುರವಾದ ವಿಮರ್ಶಾಪರಂಪರೆ ಇಲ್ಲ. ನವ್ಯ ಸಾಹಿತ್ಯವನ್ನು ಅನೇಕ ಕಾರಣಗಳಿಗಾಗಿ ಸಂಶಯದಿಂದ ನೋಡಬಹುದಾದರೂ ಸ್ವಲ್ಪಮಟ್ಟಿಗೆ ಸಾಹಿತ್ಯ ಕೃತಿಗಳ ಸತ್ವದ ಬಗ್ಗೆ ನಿಷ್ಠುರವಾಗಿ ಮಾತನಾಡುವ, ಬರೆಯುವ ಅವಕಾಶವನ್ನು ಅದು ಸೃಷ್ಟಿಸಿತು. ಸದ್ಯದ ಸಂದರ್ಭದಲ್ಲಿ ಅದೂ ಇಲ್ಲವಾಗಿದೆ. ಹೀಗಾಗಿ ಕನ್ನಡ ಸಾಹಿತ್ಯ ಸಂದರ್ಭದ ನ್ಯೂನ್ಯತೆಗಳನ್ನು ಜಾಗತೀಕರಣವು ಉಲ್ಬಣಗೊಳಿಸಿದೆಯೆಂದು ಹೇಳುವುದು ಹೆಚ್ಚು ಸರಿಯಾದೀತು. ಅದೇ ಹೊತ್ತಿಗೆ ಸ್ವತಃ ಪಶ್ಚಿಮದ ರಾಷ್ಟ್ರಗಳಲ್ಲಿ ಜಾಗತೀಕರಣವು ಮಾನವಿಕ ವಿಜ್ಞಾನಗಳ ಬಗ್ಗೆ, ಸಾಮಾಜಿಕ ವಿಜ್ಞಾನಗಳ ಬಗ್ಗೆ ಸೃಷ್ಟಿಯಾಗಿರುವ ಅನಾಸ್ಥೆ, ಅಪಮೌಲ್ಯೀಕರಣವನ್ನು ನಾವೂ ಗಂಭೀರವಾಗಿ ಗಮನಿಸಬೇಕಾಗಿದೆ. ಅಲ್ಲಿಯೂ ಕೂಡ ವಿಶೇಷವಾಗಿ ಕಾರ್ಪೋರೇಟ್ ಬಂಡವಾಳಶಾಹಿಯ ಹಿಡಿತಕ್ಕೆ ಸಿಕ್ಕಿರುವ ಮಾಧ್ಯಮಗಳು ಎಲ್ಲಾ ಸಾಮಾಜಿಕ ವಾಸ್ತವಗಳನ್ನು, ಸಮಸ್ಯೆಗಳನ್ನು ಣಡಿತುಚಿಟುಜ ಮಾಡುವುದರ ಪರಿಣಾಮವಾಗಿ ಒಟ್ಟಾರೆ ನಾಗರೀಕ ಸಮುದಾಯದೊಳಗೆ ನಡೆಯುವ ಚರ್ಚೆಗಳು ತೀರಾ ಕ್ಷುಲ್ಲಕವಾಗುತ್ತ ಬಂದಿವೆ. ಈ ಅಪಾಯಗಳು ನಮ್ಮಲ್ಲಿಯೂ ಈಗಲೇ ಗೋಚರವಾಗಿವೆ. ನಮ್ಮ ವೈಚಾರಿಕ, ಬುದ್ಧಿಜೀವಿ ವಲಯವು ಈ ಅಪಾಯಗಳ ಬಗ್ಗೆ ಸ್ಪಂದಿಸಿದಂತೆ ತೋರುವುದಿಲ್ಲ. ವಿವೇಕ, ತಾರತಮ್ಯ, ನಿಷ್ಕರ್ಷೆ ಇವುಗಳೇ ಇಲ್ಲದ ಸಾಂಸ್ಕೃತಿಕ ವಿದ್ಯಮಾನಗಳು ಸಂಭ್ರಮದಲ್ಲಿರುವ ಕಾಲವಿದಂತ ತೋರುತ್ತದೆ.




*(ಕನ್ನಡದ ಮುಖ್ಯ ಸಾಹಿತ್ಯ ವಿಮರ್ಶಕರೂ ಮತ್ತು ಸಂಸ್ಕೃತಿ ಚಿಂತಕರೂ ಆದ ಡಾ. ರಾಜೇಂದ್ರ ಚೆನ್ನಿವರು ಸದ್ಯ ಕುವೆಂಪು ವಿಶ್ವಿದ್ಯಾಲಯದಲ್ಲಿ ಇಂಗ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.)*

## ಪುಸ್ತಕಾವಲೋಕನ

ಪು: **ಇಂತೀ ನಮಸ್ಕಾರಗಳು** ಲೇ: **ನಟರಾಜ್ ಹುಳಿಯಾರ್** ಪ್ರ: **ಪಲ್ಲವ ಪ್ರಕಾಶನ,** ಚನ್ನಪಟ್ಟಣ ಪು: 233 ಬೆಲೆ: ರೂ.**180/–**

# ಆಕರ್ಷಕ ಆರಾಧನೆ




**ಲ**ಂಕೇಶ್ ಮತ್ತು ಡಿ.ಆರ್. ನಾಗರಾಜ್ ನಮ್ಮ ಕಾಲ ಕಂಡ ಕನ್ನಡದ ಎರಡು ವಿಶೇಷ ಪ್ರತಿಭೆಗಳು. ಈ ಇಬ್ಬರೂ ಮೂಲತಃ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿತ್ವಗಳಾದರೂ, ಇಬ್ಬರೂ ಅದರ ಎಲ್ಲೆಗಳನ್ನು ದಾಟಿ, ಮುಖ್ಯವಾಗಿ ಸಂಸ್ಕೃತಿ ಮತ್ತು ರಾಜಕಾರಣದ ಚರ್ಚೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ ಸಾಹಿತ್ಯವೆಂಬ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿ ಹಿಗ್ಗಿಸಿದರು. ಇವರಲ್ಲಿ ಲಂಕೇಶ್ ಪತ್ರಕರ್ತರಾಗಿ ಈ ಕೆಲಸಮಾಡಿದರೆ, ನಾಗರಾಜ್ ಒಬ್ಬ ಬಹು ಶಿಸ್ತೀಯ ಚಿಂತಕ, ಸಂಶೋಧಕ ಮತ್ತು ಬುದ್ಧಿಜೀವಿಯಾಗಿ ಈ ಕೆಲಸ ಮಾಡಿದರು. ಇವರಿಬ್ಬರಿಗೂ ಬೇರೆ ಬೇರೆ ನೆಲೆಗಳಲ್ಲಿ 'ಶಿಷ್ಯ'ರಾಗಿದ್ದ ನಟರಾಜ್ ಹುಳಿಯಾರ್ ಈ ಎರಡೂ ವ್ಯಕ್ತಿತ್ವಗಳು ತಮ್ಮ ಪ್ರಜ್ಞೆಯಲ್ಲಿ ಬೆರೆತು ತಮ್ಮ ವ್ಯಕ್ತಿತ್ವವನ್ನು ದಟ್ಟವಾಗಿ ಪ್ರಭಾವಿಸಿರುವ ಬಗೆಯನ್ನು ಒಂದು ಸೃಜನಶೀಲ ಸಂಯೋಜನೆಯ ರೂಪದ ಬರವಣಿಗೆಯಲ್ಲಿ ಇಲ್ಲಿ ದಾಖಲಿಸಿದ್ದಾರೆ. ನಟರಾಜ್ ಲಂಕೇಶರಿಗೆ ಅವರ ಸಾಹಚರ್ಯ ಮತ್ತು ಅವರ ಪತ್ರಿಕೆಯಲ್ಲಿನ ಬರವಣಿಗೆ ಮೂಲಕ ಶಿಷ್ಯರಾದರೆ, ನಾಗರಾಜ್‌ಗೆ ಅವರು ಪಿ.ಎಚ್.ಡಿ. ಶಿಷ್ಯ, ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ರೀತಿಯ ಕೊಡುಗೆ ಎಂದೇ ಹೇಳಬೇಕು.

ಈ ಪುಸ್ತಕ ಆರಂಭದಲ್ಲಿ ಲಂಕೇಶ್ ಕಥನ ಮತ್ತು ನಾಗರಾಜ್ ಕಥನ ಎಂದು ವಿಂಗಡಿಸಬಹುದಾದ ರೀತಿಯಲ್ಲಿ ಸಂಯೋಜಿತವಾಗಿರುವುದಾದರೂ, ಮುಂದೆ ಈ ಎರಡನ್ನೂ ಆಳದಲ್ಲಿ ಕೂಡಿಸುವ ಯೋಜನೆಯೊಂದಿಗೇ ಅವನ್ನು ಕಟ್ಟಲಾಗಿರುವ ಸುಳಿವು ಮತ್ತು ಹೊಳಹುಗಳು ನಮಗೆ ಈ ಎರಡೂ ಕಥನಗಳಲ್ಲಿ ಸಿಗುತ್ತವೆ. ಅಂದರೆ ನಾಗರಾಜರನ್ನು ಕುರಿತ ತಮ್ಮ ಕಥೆ ಹೇಳಲು ಅನುವಾಗುವಂತೆ ಲಂಕೇಶರ ಕಥೆಯನ್ನು ಇಲ್ಲಿ ನಟರಾಜ್ ಹೇಳಿ, ನಂತರ ಇವರಿಬ್ಬರ ಮುಖಾಮುಖಿಯ ತಮ್ಮ ಕಥೆಯನ್ನು ಹೇಳಲು ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಈ ಎರಡೂ ಕಥೆಗಳಲ್ಲಿ ಅವರು ಇವರಿಬ್ಬರ ಸಾಹಿತ್ಯ ಮತ್ತು ಅದರಾಚೆಗಿನ ವ್ಯಕ್ತಿತ್ವಗಳನ್ನು ತಮ್ಮ ವಿಮರ್ಶೆಯ ಕಣ್ಣು ಕಂಡಂತೆ ಪರಿಚಯಿಸುತ್ತಾ ಹೋಗುತ್ತಾರೆ. ಆನಂತರ ನಟರಾಜರ ಪ್ರಕಾರ ಇವರಿಬ್ಬರ ನಡುವಣ ಇದ್ದ ಪ್ರೀತಿ–ದ್ವೇಷ, ಮತ್ಸರ–ಸ್ಪರ್ಧೆಗಳ ಹಿಂದಿನ ತರ್ಕವನ್ನು ಹಲವು ತಾತ್ವಿಕ ಉದಾಹರಣೆ ಮತ್ತು ವಾಸ್ತವ ದೃಷ್ಟಾಂತಗಳ ಮೂಲಕ ವಿವರಿಸುತ್ತಾರೆ. ಪುಸ್ತಕದ ಈ ಭಾಗ ನಟರಾಜರ ಸಾಹಿತ್ಯ ಮತ್ತು ಸಂಸ್ಕೃತಿ ವಿಮರ್ಶೆಯ ಹಿಂದಿನ ಪರಿಶ್ರಮ ಮತ್ತು ಪ್ರತಿಭೆಗಳೆರಡನ್ನೂ ಪರಿಚಯಿಸುವಂತಿದೆ. ಇವರ ಎಲ್ಲ ನಿಲುವು ಮತ್ತು ಅಭಿಪ್ರಾಯಗಳನ್ನು ಒಪ್ಪಲಾಗದಾದರೂ.

ಲಂಕೇಶರ ಎರಡು ದಶಕಗಳಿಗೂ ಮೀರಿದ ಪತ್ರಿಕೋದ್ಯಮ ಬದುಕಿನಲ್ಲಿ ಗುಣಾತ್ಮಕತೆಯ ನೆಲೆಯಲ್ಲಿ ಹಲವು ಏರಿಳಿತಗಳಿದ್ದುದನ್ನು ಪತ್ರಿಕೆಯ ನಿಯಮಿತ ಓದುಗರೆಲ್ಲರೂ ಬಲ್ಲವರಾಗಿದ್ದರು. ಪುಸ್ತಕದ ಸದರಿ ವಿಮರ್ಶಕನೂ ಸೇರಿದಂತೆ ಅವರ ಈ ಪತ್ರಿಕೋದ್ಯಮ ಬದುಕಿಗೆ ಸಾಕ್ಷಿಯಾದ ಹಲವರಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಮಾತು: 'ಅಣ್ಣನ ನೆನಪು' ಪುಸ್ತಕದಲ್ಲಿ ತೇಜಸ್ವಿ ತಮ್ಮ ತಂದೆ ಕುವೆಂಪುರನ್ನು ಚಿಕಿತ್ಸಕವಾಗಿ ನೋಡಿಲ್ಲ (ಹಾಗೆ ನೋಡುವ ಉದ್ದೇಶವೇ ಆ ಪುಸ್ತಕಕ್ಕೆ ಇಲ್ಲದೇ ಇರಬಹುದು ಎಂಬ ಸಾಹಿತ್ಯಿಕ ನೆದರೇ ಇಲ್ಲದೆ) ಎಂಬ ಲಂಕೇಶರ ಟೀಕೆಯನ್ನು ಅನುಮೋದಿಸುವ ನಟರಾಜ್, ಸ್ವತಃ ತಾವೇ ಇಂತಹ ಟೀಕೆಯನ್ನು ಆಹ್ವಾನಿಸುವ ರೀತಿಯಲ್ಲಿ ಲಂಕೇಶರ ಪತ್ರಿಕಾ ಪಾತಿವ್ರತ್ಯ ಧರ್ಮದ ಬಗ್ಗೆ ಇಲ್ಲಿ ಬರೆದಿರುವುದು ಚೋದ್ಯವೆನಿಸುತ್ತದೆ. ಕನಿಷ್ಠ, ನಟರಾಜ್‌ರು ಇಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಚರ್ಚಿಸುವ, ಲಂಕೇಶ್ ತಮ್ಮ ಸಾಹಿತ್ಯ ಮತ್ತು ಪತ್ರಿಕಾ ಬರವಣಿಗೆಯಲ್ಲಿ ಎದುರಿಸಿದ ಕೇಡಿನ ಪ್ರಶ್ನೆಯನ್ನು ಮೊದಲು, ಲಂಕೇಶ್ ಪ್ರಕಾರ ಕೇಡು ಎಂದರೆ ಏನು ಎಂಬ ಪ್ರಶ್ನೆಯ ಹಿಂದೆ ಬಿದ್ದಿದ್ದರೆ, ಈ ಕುರಿತ ನಟರಾಜರ ಚರ್ಚೆ ಕೇವಲ 'ರೊಮಾಂಟಿಕ್' ಆಗದೆ ಉಳಿದು ಲಂಕೇಶರ ವ್ಯಕ್ತಿತ್ವದ ಇನ್ನಷ್ಟು ಆಳದ ಶೋಧನೆಗೆ ಕಾರಣವಾಗಬಹುದಿತ್ತು.

ಲಂಕೇಶ್ ಕಥನಕ್ಕೆ ಹೋಲಿಸಿದರೆ ನಾಗರಾಜರ ಕಥನ ಹೆಚ್ಚು ಸಮತೋಲನದಲ್ಲಿದ್ದಂತಿದೆ. ನಾಗರಾಜರ ಬೌದ್ಧಿಕ ಸಾಧನೆಗಳ ವಿಶಿಷ್ಟತೆಗಳನ್ನು ವಿವರವಾಗಿ ಗುರುತಿಸುತ್ತಲೇ ಅವರ ವ್ಯಕ್ತಿತ್ವದಲ್ಲಿದ್ದ ಮಿತಿಗಳನ್ನೂ– ಪ್ರದರ್ಶನಪ್ರಿಯತೆ, ಉಡಾಫೆ, ಸ್ವಯಂವೈಭವೀಕರಣಕ್ಕಾಗಿ 'ಶತ್ರು ಸಂಹಾರ' ಕಾರ್ಯಕ್ರಮಗಳು ಇತ್ಯಾದಿ–ಸವಿವರವಾಗಿ ಗುರುತಿಸುತ್ತಲೇ, ಇವಕ್ಕೂ ಅವರ ಕೆಲ ವಾದಗಳಲ್ಲಿನ ವಿವರಗಳಲ್ಲಿ ತಾವು ಕಂಡ ಕೆಲ ಅರಕೆ ಮತ್ತು ಹುಸಿತನಕ್ಕೂ ಇರುವ ಸಂಬಂಧಗಳ ಕಡೆ ಬೊಟ್ಟುಮಾಡುತ್ತಾರೆ. ನಾಗರಾಜರ 'ಆದಿಮ' ವರ್ಷಗಳ ಸಾಹಿತ್ಯಿಕ ಮತ್ತು ರಾಜಕೀಯ ಸಾಹಸಗಳು ನಟರಾಜರಿಗೆ ಪರಿಚಯವಿದ್ದಲ್ಲಿ ಈ ಕಥನಭಾಗ ಇನ್ನಷ್ಟು ತಾತ್ವಿಕ ಅನ್ವೇಷಣೆಗಳಿಗೆ ಕಾರಣವಾಗಬಹುದಿತ್ತು. (ವಿಶೇಷವಾಗಿ ಸಿ.ಪಿ.ಎಂ ಪಕ್ಷದ ಎಂ.ಕೆ.ಭಟ್ಟರ ಜೊತೆ ಸೇರಿ ಬಂಡಾಯ ಸಾಹಿತ್ಯವೆಂಬ ರೂಕ್ಷ ರಾಜಕೀಯ ಸಾಹಿತ್ಯ ಚಳುವಳಿಯೊಂದನ್ನು ಹುಟ್ಟಿಹಾಕಿ ಸಾಕಷ್ಟು ಕಾಲ ಅದರ ಪೋಷಕರಾಗಿ ಮಾಡಿದ ಭಾನಗಡಿಯ ಪರಿಣಾಮಗಳನ್ನು ಇಂದೂ ಕಾಣುತ್ತಿದ್ದೇವೆ) ಆದರೆ ಮತ್ತೆ ಇಲ್ಲಿಯೂ ಅದೇ ದೋಷವಿದೆ: ನಾಗರಾಜರ ಎಲ್ಲ ಮುಖ್ಯ ತಾತ್ವಿಕ ಪ್ರಮೇಯಗಳನ್ನೂ–ಎಲ್ಲವನ್ನೂ ತಾತ್ವೀಕರಿಸುವುದು ಅವರಿಗೊಂದು ವ್ಯಸನವೇ ಆಗಿತ್ತೆಂದು ಹೇಳುತ್ತಲೇ–ಸಮೂಹ ಸನ್ನಿಗೆ ಒಳಗಾದವರಂತೆ ಪ್ರಶ್ನೆಯಿಲ್ಲದೆ ಅವನ್ನು ಒಪ್ಪುತ್ತಾರೆ. ಅದೂ ತಮ್ಮ ಪ್ರತಿ ಬರವಣಿಗೆಯ ನಂತರ ಅದರ ಬಗ್ಗೆ ಅಸಮಧಾನ ಬೆಳೆಸಿಕೊಳ್ಳುತ್ತಿದ್ದರೆಂದು ನಟರಾಜರೇ ಹೇಳುವ ನಾಗರಾಜರ ಬಗ್ಗೆ!

ಈ ಸಂಬಂಧವಾಗಿ ನಾಗರಾಜರ ಪ್ರಮೇಯಗಳಲ್ಲಿ ನನಗೆ ಕಂಡ ಸಮಸ್ಯೆಗಳ ಬಗ್ಗೆ ಮೂರು ಸಂಗತಿಗಳನ್ನು ಇಲ್ಲಿ ಹೇಳಬೇಕು. ಒಂದು, ಅವರು ಭಾರತಕ್ಕೆ ಮುಕ್ತಿದಾಯಕವಾಗಬಹುದೆಂದು ಗುರುತಿಸುವ ಅವೈದಿಕ ಸಾಂಸ್ಕೃತಿಕ ಧಾರೆಗಳು ತಮ್ಮ ಬಹುತ್ವದಿಂದಾಗಿಯೇ ಅರ್ಥಪೂರ್ಣ ಮತ್ತು ಧಾರಣೀಯವಾಗುವುದು(sustainable) ಇಂದಿನ ಸ್ವರೂಪದ ಆಧುನಿಕ ರಾಷ್ಟ್ರ ಪ್ರಭುತ್ವದಿಂದ( Modern Nation State) ದೂರವಾದ ವಿಕೇಂದ್ರೀಕರಣ ತತ್ವದ ಚೌಕಟ್ಟಿನಲ್ಲಿ ಮಾತ್ರ ಎಂಬುದನ್ನು ನಾಗರಾಜ್ ಎಲ್ಲಿಯೂ ಗಮನಿಸದಿರುವುದು. ಮತ್ತು ಆ ಕಾರಣದಿಂದಾಗಿಯೇ ಅವರ ನುಡಿಗಟ್ಟು ಅಖಿಲ ಭಾರತ ದೃಷ್ಟಿಕೋನಕ್ಕೆ ಬಂಧಿತವಾಗಿ ಅವರ ಪ್ರಮೇಯಗಳು ಎಷ್ಟೇ ಬೌದ್ಧಿಕ ಪರಿಶ್ರಮದಿಂದ ತುಡಿಯುತ್ತಿದ್ದರೂ ತಂತಾನೇ ವಿರೋಧಾಭಾಸಕ್ಕೂ ಪಕ್ಕಾಗಿರುಉದು. ಎರಡನೆಯದು, ಈ ವಿರೋಧಭಾಸದ ನೇರ ಫಲ: ಅವೈದಿಕ ಧಾರೆಗಳನ್ನು(ಇವನ್ನು ಶ್ರಮಣ ಧಾರೆಗಳೆನ್ನುವುದೇ ಸೂಕ್ತವಾದರೂ) ಇವರು ಅನಾತ್ಮವಾದಿ ನೆಲೆಯಲ್ಲಿ ನೋಡುವ ಪ್ರಯತ್ನವನ್ನೇ ಮಾಡದೆ ಆತ್ಮವಾದಿ ನೆಲೆಯಲ್ಲೇ ನಿಂತು ತಮ್ಮ ಪ್ರಮೇಯಗಳನ್ನು ಮಂಡಿಸುವುದು. ಮೂರನೆಯದು: ಇವರು ಹೇಳುವ 'ವಿಸ್ಮೃತಿ'ಗೂ ಆಧುನಿಕತೆಯ ದಾಹಕ್ಕೂ ಇರುವ ಸಂಬಂಧಗಳನ್ನು ವಿಶ್ಲೇಷಿಸದೆ ಹೋಗಿರುವುದರಿಂದ 'ವಿಸ್ಮೃತಿ' ಪರಿಕಲ್ಪನೆಯನ್ನು ಸಾವಯವವಾಗಿ ಶೋಧಿಸಲಾಗದಿರುವುದು.

ನಟರಾಜರ ಈ ಪುಸ್ತಕ ಒಳಗೊಂಡ ವಿಶಿಷ್ಟ ಕಥನದ ಎಲ್ಲ ವಿವರಗಳನ್ನೂ ಈ ಪತ್ರಿಕೆಯ ಈ ಅಂಕಣದಲ್ಲಿ ಚರ್ಚಿಸುವುದು ಸಾಧುವೂ ಅಲ್ಲ, ಸಾಧ್ಯವೂ ಅಲ್ಲ. ಏಕೆಂದರೆ, ಇಲ್ಲಿ ನಟರಾಜರು ಈ ಎರಡೂ ವ್ಯಕ್ತಿತ್ವಗಳು ಮತ್ತು ಅವುಗಳ ಮುಖಾಮುಖಿಯ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಮತ್ತು ಆಳಕ್ಕೆ ಇಳಿದು ನೋಡಬೇಕಾದ ಹಲವು ತಾತ್ವಿಕ ವಿಶ್ಲೇಷಣೆಗಳೊಂದಿಗೆ ಬರೆದಿದ್ದಾರೆ.

ಆದರೆ ಒಂದು ಮಾತನ್ನಂತೂ ಹೇಳಬಹುದು: ಪುಸ್ತಕವನ್ನು ಓದುತ್ತಾ ಹೋದಂತೆ ನಟರಾಜರ ಬರವಣಿಗೆ ಲಂಕೇಶರ ಬರವಣಿಗೆಯ ವಿಚಿತ್ರ ಆಕರ್ಷಣೆ ಮತ್ತು ನಾಗರಾಜರ ಬೌದ್ಧಿಕತೆಯ ವೈಭವಗಳು ಹದವಾಗಿ ಬೆರೆತು ಓದಿನ ಒಂದು ಹೊಸ ರುಚಿಯನ್ನು ಸೃಷ್ಟಿಸುತ್ತದೆ. ಇದಕ್ಕೆ ಈ ಬರವಣಿಗೆಯ ಹಿಂದೆ ಒಂದು ಸುಪ್ತ ಆರಾಧನೆಯ ಅಂಶವೂ ಕೆಲಸ ಮಾಡಿರುವುದು ಕಾರಣವಾಗಿರಬಹುದು. ನಿಜ, ಅವರು ಈ ಇಬ್ಬರ ವ್ಯಕ್ತಿತ್ವಗಳ ಹಲವು ಕೊರೆಗಳ ಬಗ್ಗೆ ಬರೆದಿರುವರಾದರೂ, ಅವು ಈ ಆರಾಧನೆಯ ಶೈಲಿಗೆ ತಕ್ಕುನಾಗಿಯೇ 'ಕ್ಷಮಾರ್ಹ' ಎಂದು ಹೇಳಲು ಅವರು ಬಳಸಿರುವ ತರ್ಕ ಸ್ವಲ್ಪ ಅನುಮಾನಾಸ್ಪದವಾದುದೇ ಆಗಿ ಕಾಣುತ್ತದೆ.

ಒಂದೇ ಮಾತಲ್ಲಿ ಹೇಳುವುದಾದರೆ, ಈ ಕೊರೆಗಳು ಬರೀ ಯಃಕಶ್ಚಿತ್ ಕೊರೆಗಳೇ ಅಥವಾ ಅವು ಎಲ್ಲಿಯಾದರೂ, ನಟರಾಜ್ ಚಿತ್ರಿಸುವ ಇವರಿಬ್ಬರ–ಬರವಣಿಗೆಯೂ ಸೇರಿದಂತೆ–ವ್ಯಕ್ತಿತ್ವಗಳು ಪರಸ್ಪರ ಮುಖಾಮುಖಿಗಳ ಮೂಲಕ ಕಟ್ಟಲ್ಪಟ್ಟಿದೆಯೆಂದು ಹೇಳಲಾಗುವ ಒಂದು ಕನ್ನಡ ಮನಸ್ಸಿನ ಮಾದರಿಯ ಸಮಗ್ರತೆಗೆ ಭಂಗ ಉಂಟುಮಾಡಿವೆಯೇ ಎಂಬ ಪ್ರಶ್ನೆಯನ್ನು ಚರ್ಚಿಸುವ ಗೋಜಿಗೇ ನಟರಾಜ್ ಇಲ್ಲಿ ಹೋಗಿಲ್ಲ. ಹಾಗಾಗಿ, ಇಂತಹ ಚರ್ಚೆಗಳಲ್ಲಿ ಲಂಕೇಶರನ್ನು ಮುಂದಿಟ್ಟುಕೊಂಡು ಅವರು ಇಡೀ ಪುಸ್ತಕದುದ್ದಕ್ಕೂ ಎತ್ತಿ ಹಿಡಿಯುವ ಸಾರ್ವಜನಿಕ ಚರ್ಚೆಗಳ ನೈತಿಕ ನೆಲೆಯ ಪ್ರಶ್ನೆಯ ಜವಾಬ್ದಾರಿಯನ್ನು ಸ್ವತಃ ಇವರೇ ಮರೆತಿದ್ದಾರೆ ಎಂದು ಹೇಳಬೇಕಾಗುತ್ತದೆ. ಇದರ ಹಿಂದೆ, ಒಂದೆಡೆ ಲಂಕೇಶ್ ಮತ್ತು ನಾಗರಾಜ್ ಒಂದು ಸಂಗತಿಯ ಬಗ್ಗೆ ವಿಭಿನ್ನ ನಿಲುವುಗಳನ್ನು ತಳೆದುದನ್ನು ವಿಶ್ಲೇಷಿಸುತ್ತಾ, ಇದರಲ್ಲಿ ಲಂಕೇಶ್ ನಿಲುವು ಬೌದ್ಧಿಕ ನೆಲೆಯಲ್ಲೂ, ನಾಗರಾಜರ ನಿಲುವು ಬೌದ್ಧಿಕ ನೆಲೆಯಿಂದಲೂ ಸರಿ ಎಂದು ತೀರ್ಮಾನ ಕೊಡುವ–ನೈತಿಕ ಮತ್ತು ಬೌದ್ಧಿಕ ನೆಲೆಗಳೆರಡರಲ್ಲೂ ಪ್ರಶ್ನಾರ್ಹವಾಗಿರುವ–ನಟರಾಜರ ನಿಲುವಿದ್ದಂತಿದೆ. ಜೊತೆಗೆ ಇಂಗ್ಲಿಷ್ ಮೇಷ್ಟ್ರಾಗಿ ನಟರಾಜ್ ತಾವು ಓದಿಕೊಂಡಿದ್ದನ್ನೆಲ್ಲ ಈ ಎರಡು ವ್ಯಕ್ತಿತ್ವಗಳ ವಿಷದೀಕರಣಕ್ಕಾಗಿ ಉಲ್ಲೇಖಗಳ ರೂಪದಲ್ಲಿ ಚೆಲ್ಲಾಡಿರುವುದನ್ನು ಮತ್ತು ಲಂಕೇಶರ ಮುದ್ದು ಶಬ್ದಗಳೆನಿಸಿದ ವಿಸ್ಮಯ, ಚಕಿತ, ಕಾತರ, ದುಗುಡ, ಬಲ್ಲೆ ಮುಂತಾದವನ್ನು ಶಬ್ಧಮುಗ್ಧರಾದಂತೆ ವಿಪುಲವಾಗಿ ಬಳಸುತ್ತಾ ಲಂಕೇಶರಂತೆಯೇ ಬರೆಯಲು ಪ್ರಯತ್ನಪಟ್ಟಿರುವುದನ್ನು ನೋಡಿದರೆ, ಅವರು ಒಂದು ಸರಳ ಮಂತ್ರಮುಗ್ಧತೆಯಲ್ಲಿ ಈ ಕಥನವನ್ನು ಕಟ್ಟಿರುವ ಭಾವನೆ ಮೂಡುತ್ತದೆ. ಜೊತೆಗೆ ಈ ಕಥನವನ್ನು ಇವರ ಕಾಲದ ಸಾಂಸ್ಕೃತಿಕ ಚರಿತ್ರೆಯ ಭಾಗವಾಗಿ ಕಟ್ಟದೇ ಹೋಗಿರುವ–ಅಂದರೆ ಈ ಕಥನದಲ್ಲಿ ಇವರಿಬ್ಬರ ಕಥೆಗೆ ಇನ್ನಾರ ಕಥೆಯೂ ಕಿರುಧಾರೆಯಾಗಿ ಕೂಡ ಜೋಡಣೆಯಾಗದೆ ಹೋಗಿರುವ– ಕಾರಣದಿಂದಾಗಿ ಕಥನದ ಉದ್ದೇಶವೂ ಅಷ್ಟು ಘನವೆನಿಸುವುದಿಲ್ಲ.

ಹಾಗಾಗಿ ಈ ಪುಸ್ತಕ ಕನ್ನಡದ ಸಂಸ್ಕೃತಿ ಲೋಕದ ಇಬ್ಬರು 'ನಾಯಕ'ರ ವ್ಯಕ್ತಿತ್ವ ಆರಾಧನೆಯ ಒಂದು ವಿಶಿಷ್ಟ ರೋಚಕ ಶೈಲಿಯಿಂದಾಗಿ ಇತ್ತೀಚೆಗೆ ಸಾಹಿತ್ಯ ಲೋಕವನ್ನು ಪ್ರವೇಶಿಸುವ ಎಳೆಯರನ್ನೂ ಮತ್ತು ಕನ್ನಡ ಮನಸ್ಸನ್ನು ತಮ್ಮದೇ ರೀತಿಯಲ್ಲಿ ಕಟ್ಟಿದ ಎರಡು ಸೃಜನಶೀಲ ಮನಸ್ಸುಗಳ ಚಲನವಲನಗಳನ್ನು ಆಸಕ್ತಿದಾಯಕವಾಗಿ ಪರಿಶೀಲಿಸುವ ಪ್ರಯತ್ನವೊಂದಾಗಿ ಸಾಹಿತ್ಯದ ಗಂಭೀರ ಓದುಗರನ್ನೂ ಮೊದಲ ನೋಟಕ್ಕೇ ಸೆಳೆಯುವಂತಿದೆಯಾದರೂ, ಇದರ ಸಾರ್ಥಕತೆ ನಿಜವಾಗಿ ಒರೆಗೆ ಹಚ್ಚಲ್ಪಡುವುದು ಅದರ ವ್ಯವಧಾನದ ಓದಿನಲ್ಲಿ ಮತ್ತು ಚರ್ಚೆಯಲ್ಲಿ ಮಾತ್ರ ಎಂದು ಕಾಣುತ್ತದೆ.

**–ಡಿ.ಎಸ್. ನಾಗಭೂಷಣ**



# ‘ಹೊಸ ಮನುಷ್ಯ’ದ ಮುನ್ನಡೆ: ಒಂದು ವರ್ಷದ ಹಿನ್ನೋಟ

–ಎಂ. ಚಂದ್ರಶೇಖರಯ್ಯ

**ಸ**ಮಾಜವಾದಿ ಮಾಸಿಕ ೨೦ ಪುಟಗಳಲ್ಲಿ (ಕೊನೆ ಎರಡು ಪುಟ ಜಾಹಿರಾತು) ಹೊಸ ಮನುಷ್ಯ ಕೇವಲ ೧೫೦ ರೂ. ವಾರ್ಷಿಕ ಚಂದಾದಲ್ಲಿ ೪ನೇ ವರ್ಷಕ್ಕೆ ಕಾಲಿಡುತ್ತಿದೆ. ಇಡೀ ಸಂಚಿಕೆ ಮನುಷ್ಯಪರ ನಿಲುವುಗಳ ಗಾಂಧಿ ಲೋಹಿಯಾ ಅಂಬೇಡ್ಕರ್ ಚಿಂತನೆ ಆವರಿಸಿಕೊಂಡು ಖಚಿತ ನಿಲುವುಗಳನ್ನು ಅವಾಹಿಸಿಕೊಂಡು, ಅತ್ಯಂತ ನಿಷ್ಠುರ ಧ್ವನಿ ಅನುರಣಿಸಿಕೊಂಡು ನಿಯಮಿತ ಚೌಕಟ್ಟುಗಳಲ್ಲಿ ಹೀಗೆ ಕಾಣಿಸಿಕೊಳ್ಳುತ್ತದೆ: ೧. ಸಂಪಾದಕರ ಟಿಪ್ಪಣಿಗಳು ೨. ನಮ್ಮ ಸಮಾಜವಾದಿಗಳು ೩. ಪ್ರೊ: ಬಿ.ಕೃಷ್ಣಪ್ಪ ನೆನಪಿನ ಮಾಲೆ(ಮುಗಿಯುವವರೆಗೆ) ೪. ಸಮಕಾಲೀನ ೫. ಪುಸ್ತಕಾವಲೋಕನ. ಈ ಚೌಕಟ್ಟಿನ ಆಚೆಗೂ ಕೆಲವೊಮ್ಮೆ ಲೇಖನಗಳು; ಸಾಹಿತ್ಯ ಸಂಸ್ಕೃತಿ ಬರಹಗಳು; ಬಾಷೆ ಕುರಿತ ಚಿಂತನೆಗಳು ಆತ್ಮೀಯರ ಅಗಲಿಕೆಗಳು ದಾಖಲಾಗಿವೆ. ಓದುಗರ ಪ್ರತಿಕ್ರಿಯೆಗಳಿವೆ. ವಿರಳವಾಗಿ ಸಾಹಿತ್ಯ–ಚಿಂತನ ಕಮ್ಮಟಗಳ ವರದಿಗಳಿವೆ.

ಆರ್ಥಿಕ ನೀತಿ, ರಾಜಕಾರಣದ ಹೆಜ್ಜೆಗುರುತು, ಭಾಷಾ ನೀತಿಯ ಗೊಂದಲ, ಸಮಾನತೆಯ ಚಿಂತನೆಗಳೇ ಲೇಖನಗಳ ಮೂಲ ದ್ರವ್ಯವಾದ್ದರಿಂದ ಮುದ, ಖುಷಿ, ಕಚಗುಳಿ, ಸಾಹಿತ್ಯ–ಇವಕ್ಕೆಲ್ಲಾ ಅವಕಾಶವಿಲ್ಲದೆ ಹೊಸ ಮನುಷ್ಯನನ್ನು ಸ್ವಾಗತಿಸಬೇಕಾಗುತ್ತದೆ. ಈ ಬದ್ಧತೆಯೇ ಪತ್ರಿಕೆಯ ಶಕ್ತಿ. ಹೊಸ ಮನುಷ್ಯ ಕಳೆದ ಆಗಸ್ಟ್‌ನಿಂದ ಈ ಜುಲೈವರೆಗೆ ಕಾಣಿಸಿಕೊಂಡದ್ದು ಹೀಗೆ:

**ಸಂಪಾದಕರ ಟಿಪ್ಪಣಿಗಳು** : ಮಾತೃಭಾಷಾ ವಿವಾದ ಕುರಿತಂತೆ ಸುಪ್ರೀಂ ಕೋರ್ಟ್ ನೀಡಿದ ಮಧ್ಯಂತರ ಆಜ್ಞೆ, ಶಿಕ್ಷಣ ಉದ್ಯಮ ಲಾಬಿ ಮತ್ತು ನ್ಯಾಯಾಂಗದ ತರ್ಕ ನಿರಾಶೆ ಮೂಡಿಸಿದೆ.(ಆಗಸ್ಟ್) ಮಾಹಿತಿ ಹಕ್ಕು ಕಾಯ್ದೆಯಿಂದ ರಾಜಕೀಯ ಪಕ್ಷ ಹೊರಗಿಡುವ ಕುತಂತ್ರಕ್ಕೆ ಸಂಪಾದಕರ ‘ಜನ ಶಕ್ತಿಯ ಮುಖದ ಮೇಲೆ ಉಗುಳುವ ಕೆಲಸ’, ‘ತನ್ನ ಒಡಲಲ್ಲಿ ಮೂರನೇ ಒಂದು ಭಾಗದಷ್ಟು ಪರಮ ಭ್ರಷ್ಟರನ್ನು ತುಂಬಿಕೊಂಡಿರುವ ಈ ಸಂಸತ್ತು ನೈತಿಕ ಹಕ್ಕು ಕಳಕೊಂಡಿದೆ’ ಎಂಬ ಉಗ್ರ ಟೀಕೆಗಳು ಸೂಕ್ತವಾಗಿಯೇ ಇವೆ. (ಸೆಪ್ಟೆಂಬರ್) ಮೋದಿ ಗುಜರಾತಿನಲ್ಲಿ ೩ನೇ ಬಾರಿ ಮುಖ್ಯಮಂತ್ರಿ ಆದರೂ ಅಲ್ಲಿ ಶೇ ೪೫ ಕ್ಕೂ ಕಡಿಮೆ ಮತ ಚಲಾವಣೆ ಆಗಿವೆ– ಇದು ಸೂಕ್ತ ಪ್ರತಿಕ್ರಿಯೆ ಆಗಲಾರದು. ರಾಹುಲ್ ಪಡ್ಡೆಯಾಗಿರುವುದು ನರೇಂದ್ರಮೋದಿ ನಿರಾಳ ಮುನ್ನಡೆಗೆ ಸಹಾಯ–(ಅಕ್ಟೋಬರ್) (ನವೆಂಬರ್) ಹೀಗೆ ಟಿಪ್ಪಣಿಗಳು ಮೋದಿ ನಿರಾಕರಣೆ, ಸಿದ್ದರಾಮಯ್ಯನವರ ಮೇಲಿದ್ದ ಭರವಸೆ ಕರಗುತ್ತಾ ಹೋಗುವುದು, ಆಮ್‌ಆದ್ಮಿಯ ಕೇಜ್ರಿವಾಲರ ಬಗ್ಗೆ ಅಭಿಮಾನ ವೃದ್ಧಿಸುವುದು ಅವರು ಐಲು–ಪೈಲು ನಿರ್ಣಯಗಳ ಆಟ ಆಡಿದಾಗ ವಿಷಾದಿಸುವುದು, ಇವೇ ಆಗಿ ಬಿಡುತ್ತದೆ. ರಾಜಕಾರಣದಾಚೆ ಸಂಪಾದಕೀಯ ಬಹುಪಾಲು ನೋಡಲಾಗಿಲ್ಲವೆನ್ನುವುದೇ ಸಣ್ಣ ಕೊರತೆ.

ಮೋದಿ, ಸಿದ್ದರಾಮಯ್ಯ ಕೇಜ್ರಿವಾಲರ ಆಯಾ ಕ್ಷಣಗಳ ಆಯಾ ತಿಂಗಳುಗಳ ನಡೆಗಳೊಂದಿಗೆ ಕಟು ಟೀಕೆ ಮಾಡುವ, ಸಂಭ್ರಮಿಸುವ ಸಂಪಾದಕರು ಕೇಜ್ರಿವಾಲರ ಮೇಲೆ ಹೆಚ್ಚು ಭರವಸೆ ಇಟ್ಟಂತೆ ಆಡಿದ ಶಬ್ದಗಳು ಹೇಳುತ್ತವೆ. ಉದಾ: (ಜನವರಿ) ಕೇಜ್ರಿವಾಲರ ಗೆಲುವು ಕ್ರಾಂತಿ, ಗಾಂಧಿಯ ಸ್ವರಾಜ್ಯ ಮಾದರಿ. ಅಡ್ಡ ಮಾತಾಡಿದ್ದರೆಂದು ‘ಅಣ್ಣಾ’ರನ್ನೂ ಟೀಕಿಸಿ ‘ಪರಿಮಿತಿ ವ್ಯಕ್ತಿತ್ವದವ’ ಎನ್ನುತ್ತಾರೆ ಸಂಪಾದಕರು. ಇದು ಮನೋಲೋಕದ ಜಾರು ಸಂಭ್ರಮದ ಊರುಭಂಗವೇ. ಕೇಜ್ರಿವಾಲರೇ ತಪ್ಪು ಮಾಡಿದಾಗ ಸಂಪಾದಕೀಯದಲ್ಲಿ ಮುಖ್ಯಮಂತ್ರಿಯೇ ಧರಣಿ ಕೂತದ್ದು ಸರಿ ಕಾಣುತ್ತದೆ. ೪೯ ದಿನಗಳ ಆಡಳಿತ ಚೆನ್ನಾಗಿತ್ತೆಂಬ ಸಮರ್ಥನೆ ಸಂಪಾದಕರ ನಂಬಿಕೆ. ಅದರ ಮುಂದೆಯೇ ರಾಜಕೀಯ ಸೈದ್ಧಾಂತಿಕತೆಯನ್ನು ಸರಿಯಾಗಿ ಹೊರಗೆಡವಲಿಲ್ಲವೆಂದು ಆಕ್ಷೇಪಣೆ. ನಾವು ನೀವು ಮಾಡದ್ದನ್ನು ಕೇಜ್ರಿವಾಲ್ ಮಾಡಿದ್ದಾರೆನ್ನುವುದು, ಸಂಪಾದಕರು ವಾಸ್ತವವಾದೀ ಪ್ರಜ್ಞಾಸ್ತರ ದಾಟಿ ಬಿಟ್ಟರೆ ಎನಿಸುತ್ತದೆ. (ಮಾರ್ಚ್) ಮೋದಿ ಗೆಲ್ಲುವ ಮೊದಲ ಸಂಪಾದಕೀಯಗಳಲ್ಲಿದ್ದ ಬಿಗುವು ಗೆದ್ದ ನಂತರ ಬದಲಾಗುತ್ತದೆ. ಇದು ಸಂಪಾದಕರ ಸ್ವಯಂನಡೆ ಹೌದಾದರೂ ತತ್‌ಕ್ಷಣದ ಸಂಭ್ರಮ ಸರಿಯೆ? ಸ್ವಲ್ಪ ಕಾಯಬೇಕು, “ದಕ್ಷ ಸೇವಕ”ನೇ ಎಂದು ತಿಳಿಯಲು. ಹೀಗೆ ಸಂಪಾದಕೀಯ ನಿರ್ಣಯಗಳು ಆ ಕ್ಷಣಕ್ಕೆ ಸರಿ ಕಂಡದ್ದು ಚರಿತ್ರೆಯಾದಾಗ ಅರ್ಥ ಕಳೆದುಕೊಳ್ಳುವುದೂ ಸತ್ಯವೇ. ಕಾಲ ಯಾವಾಗಲೂ ಹಾಗೆಯೇ.

**ಸಮಕಾಲೀನ:** ಪತ್ರಿಕೆಯ ಆತ್ಮವೇ ಈ ಸಮಕಾಲಿನ ವಸ್ತುವಿನಲ್ಲಿ ಹೆಪ್ಪುಗಟ್ಟಿದಂತಿದೆ. ಪಂಚಾಯತ್ ರಾಜ್ ಸಾಗಿರುವ ಪರಿ, ಗಾಂಧಿ ಪ್ರಸ್ತುತತೆ, ಕನ್ನಡದ ಕಷ್ಟ, ಮಾಧ್ಯಮದ ಮಾಯಾಬಜಾರ್, ಸೆಕ್ಯೂಲರಿಸಂ, ಕೋಮುವಾದ, ಕೇಜ್ರಿವಾಲ್, ಮೋದಿ, ಪರಿಸರ–ಅಭಿವೃದ್ಧಿ, ಗಾಂಧಿ, ಚುನಾವಣೆಯ ಪಾಠಗಳು–ಇವೆಲ್ಲ ಅತ್ಯಂತ ಗಂಭೀರವಾದ ಚಿಂತನೆಗಳು. ಇಲ್ಲಿ ಲೇಖಕರುಗಳು ಮಂಡಿಸುವ ವೈಚಾರಿಕ ನಿಲುವುಗಳನ್ನು ಜೋಡಿಸುವಾಗ ಕ್ರಮ ತಪ್ಪಿದರೆ ಉದ್ದೇಶವೇ ಜಾಳಾಗಬಹುದು. ಸಮಾಜವಾದೀ ಚಿಂತನೆಯ ನೆಲೆಯಲ್ಲಿ ಸಮಕಾಲೀನ ಸಂಕಥನ ನಡೆಸಿ ಓದುಗರನ್ನು ತೊಡಗಿಸಲು ಸಂಪಾದಕರು ಈ ಪ್ರಯತ್ನದಲ್ಲಿ ಯಶ ಕಂಡಿದ್ದಾರೆ. ಉದಾಹರಣೆಗೆ ನಮ್ಮ ಪಂಚಾಯ್ತ್‌ರಾಜ್ ಎತ್ತ ಸಾಗಿದೆ ಚರ್ಚೆಯಲ್ಲಿ ರಾಜೀವ್‌ಗಾಂಧಿ ಕನಸು ವಿಕೇಂದ್ರೀಕರಣ ರೂಪದಲ್ಲಿ, ರಾಜ್ಯದಲ್ಲಿ ಜಾರಿಯಾಗಿ ಕಾಲಾಂತರದಲ್ಲಿ ಪಂಚಾಯ್ತಿಗಳು ಭ್ರಷ್ಟಾಚಾರ ರೂಪದಲ್ಲಿ ಬಿದ್ದು ಕೊಳೆತು ಯಾಕೆ ನಾರತೊಡಗಿದವು? ಹಳ್ಳಿಗಳಿಗೆ ದಕ್ಕಬೇಕಾದ್ದನ್ನು ಕದ್ದರೇಕೆ? ಸಮಾಜವಾದದಲ್ಲಿ ಫಲನುಭವಿಗಳನ್ನು ರಕ್ಕಸ ‘ರಾಜಕಾರಣ ನಾಶಮಾಡತೊಡಗಿದ್ದರ ಬಗ್ಗೆ ಹತಾಶೆ ಇಲ್ಲ. ಇಲ್ಲಿ ಕೋಪ ಮಡುಗಟ್ಟಿದೆ. ಆರ್.ಪಿ.ವೆಂಕಟೇಶಮೂರ್ತಿ, ಅಪೂರ್ವ ಡಿಸಿಲ್ವ ಹೇಳುವುದು ಇದನ್ನೇ. ತಾಳ್ಮೆಯಿಂದ ಅರ್ಥೈಸಿಕೊಂಡರೆ ಪಂಚಾಯ್ತಿಗಳನ್ನು ರಿಪೇರಿ ಮಾಡಲಾಗದ ಸ್ಥಿತಿಗೆ ಯಾಕೆ ತಂದು ನಿಲ್ಲಿಸಿದ್ದೇವೆ? ಇದೇ ಸಾಮಾಜಿಕ ಜವಾಬ್ದಾರಿ ಎಂದು ಸಮಕಾಲೀನ ಓದುಗರನ್ನು ನೆನಪಿಸುತ್ತದೆ. (ಸೆಪ್ಟೆಂಬರ್)

ಗಾಂಧಿ ಕುರಿತ ಚಿಂತನೆಗಳೂ ಅಷ್ಟೆಯೇ. ರಂಗಕರ್ಮಿ ಪ್ರಸನ್ನ ರಭಸದ ವೇಗದ ಜೀವನ ಕ್ರಮದಿಂದ ಯಂತ್ರಗಳನ್ನು ಕಳಚುವ ಮಾತಾಡುತ್ತಾರೆ. ಹೊಸ ಮನುಷ್ಯ ಇದನ್ನು ಗಂಭೀರವಾಗಿ ನೋಡುತ್ತದೆ. ಯಾವ ವೃತ್ತಿ ಹವ್ಯಾಸದವರಾದರೂ ತಮ್ಮೊಳಗೆ ಗಾಂಧಿಯನ್ನು ಸ್ವೀಕರಿಸಲು ಸಾಧ್ಯವೆಂದು ರಸಿಕರೂ ಆಗಿದ್ದ ಖುಷ್ವಂತ್ ಸಿಂಗ್ ಆಶಾವಾದಿಯಾಗಿದ್ದಾರೆ. (ಅಕ್ಟೋಬರ್) ಹೀಗೆ ಚಿಂತನೆಯ ಗಾಂಭೀರ್ಯವೇ ಹೊಸ ಮನುಷ್ಯದ ಮುಂಗಾಣ್ಕೆ ಆಗಿದೆ.

ಕನ್ನಡ ಪರ ಚಿಂತನೆ ಸಂಪಾದಕರ ಅನುಭವ ಜನ್ಯ ಪ್ರತಿಪಾದನೆ. ಸುಪ್ರೀಂಕೋರ್ಟ್ ಸಹ ‘ಹಕ್ಕು’ ನೆಲೆಯಲ್ಲಿ ನೋಡಿ ಆಗಿರುವ ಅನ್ಯಾಯದ ಬಗ್ಗೆ ಕಣ್ಣು ಕಿವಿ, ಬಾಯಿ ಮೂರನ್ನೂ ಮುಚ್ಚಿಕೊಳ್ಳುತ್ತಿದೆ. ಸಂಪಾದಕರು ಸುಧೀರ್ಘ ಚಾರಿತ್ರಿಕ ಕನ್ನಡ ರಕ್ಷಣಾ ಕವಚದ (ತಾಯಿ ಮಗುವನ್ನು ಕಾಪಾಡಿದಂತಹ) ವಿವರ ಉಲ್ಲೇಖಿಸಿ ಪ್ರಥಮ ಭಾಷೆ ಸ್ಥಾನಕ್ಕೆ ಕಂಟಕಪ್ರಾಯ ಆಗಿರುವ ಎಲ್ಲಾ ವಿವರ ಒದಗಿಸಿ ಕೊನೆಗೆ “ಜೀವನಶೈಲಿ ಕ್ರಮ ’ ಮತ್ತು ದೃಷ್ಟಿಗಳನ್ನು ಬದಲಾಯಿಸಿ ಕೊಳ್ಳಲು ನಿಶ್ಚಯಿಸಿಕೊಳ್ಳದ ಹೊರತು ಕನ್ನಡಕ್ಕೆ ಮುಕ್ತಿ ಇಲ್ಲ” ಎನ್ನುತ್ತಾರೆ. ಈಚೆಗೆ ಸುಪ್ರೀಂ ಕೋರ್ಟ್ ಕೂಡಾ ಗದಾಪ್ರಹಾರ ಮಾಡಿದೆ. ಕನ್ನಡದ ಮಗು ಅಳುತ್ತಿಲ್ಲ. ಹಾಲು ಕುಡಿಸುವವರು ಯಾರು?












ಅಣಬೆ ಇಂಗ್ಲಿಷ್ ಶಾಲೆಗಳು ಹುಟ್ಟುವಾಗ ನವೆಂಬರ್ ತಿಂಗಳ ಹಾರಾಟದ ಕನ್ನಡ ಬಾವುಟದ ಮೊಳಕೆಗಳು ಸಾಯುತ್ತಿವೆ. ಇದು ಅತ್ಯಂತ ಗಂಭೀರ ಚಿಂತನೆ ಅಲ್ಲವೆ? ಒಂದು ಪತ್ರಿಕೆ ಇನ್ನೇನು ಮಾಡಬೇಕು?.

ಮಾಧ್ಯಮಗಳ ಮಾಯಾಬಜಾರ್– ಮತ್ತೆ ವಿವರಿಸಿದರೆ ಹಳಸಲಾದೀತೇನೋ. ಸೆಕ್ಯುಲರಿಸಂ ಮತ್ತು ಕೋಮುವಾದ ಅತ್ಯಂತ ಅಗತ್ಯವಾದ ಹಿಂದು ಮುಸ್ಲಿಂ ಕರುಳು ಬಳ್ಳಿ ಸಂಬಂಧದ ಸಮಕಾಲೀನ ಚರ್ಚೆಗಳಾಗಿವೆ. ಡಾ.ರಾಜಾರಾಂ ತೊಳ್ಪಾಡಿ, ಡಾ.ವಾಸುದೇವ ಬೆಳ್ಳೆ, ಸಬಿತಾ ಬನ್ನಾಡಿ–ಎಲ್ಲರೂ ಆಶೀಶ್ ನಂದಿಯವರ ಗೊಂದಲಗಳಿಗೆ ತಮ್ಮ ಅಭಿಪ್ರಾಯಗಳ ಮೂಲಕ ಒಂದು ಮಿತಿಯಲ್ಲಿ ತಿರುಗೇಟು ನೀಡಿದ್ದಾರೆ. ನಿಜಾರ್ಥದಲ್ಲಿ ಕೋಮು ಸೌಹಾರ್ದ ಇದು ಪಶ್ಚಿಮದ ಆಮದು ಅಲ್ಲ ಎಂದೇ ಚರ್ಚೆ ಸಾಗುತ್ತದೆ. (ಜನವರಿ) ಇದರ ಮುಂದುವರಿದ ಭಾಗವಾಗಿ ಮುಂದಿನ ತಿಂಗಳ ಸಮಕಾಲೀನ ಕೋಮುವಾದ ಕುರಿತು ಪ್ರದೀಪ್ ಕುಮಾರ್ ಶೆಟ್ಟಿ. ಮಧು ಲಿಮೆಯೆ, ನಿತ್ಯಾನಂದ ಶೆಟ್ಟಿ–ಇವರ ನಿಲುವುಗಳು ಸಕಾಲಿಕವಾಗಿವೆ. (ಫೆಬ್ರವರಿ) ಕೇಜ್ರಿವಾಲರ ನಡೆಯನ್ನು ಸಮರ್ಥಿಸುವಂತೆ ಹೆಚ್.ಎಸ್.ದೊರೆಸ್ವಾಮಿ, ಕಡಿದಾಳ್ ಶಾಮಣ್ಣ, ವೆಂಕಟೇಶ್ ಮಾಚಕನೂರು, ಜಿ.ಪಿ.ಬಸವರಾಜು, ಸುಜಯಕುಮಾರ್, ಮಲ್ಲಿಕಾ ಬಸವರಾಜು, ಅಜ್ಜಪ್ಪ ಬಿರಡಿ, ಅಪೂರ್ವ ಡಿ'ಸಿಲ್ವ, ಇವರೆಲ್ಲರೂ ಕಹಿ ಔಷದ ಸೇವಿಸುವಾಗ ಉಂಟಾಗುವ ತಾಪತ್ರಯವನ್ನು ಹೇಗೋ ನೀಗಿಕೊಳ್ಳಬಹುದಲ್ಲವೆ ಎಂಬಂತೆ ಬರೆದಿದ್ದಾರೆ. ರಾಜೇಂದ್ರ ಚೆನ್ನಿಯವರು ಮಾತ್ರ ಅನುಮಾನ ಉಳಿಸಿಕೊಂಡಿದ್ದಾರೆ. (ಮಾರ್ಚ್) ಹೀಗೆಯೇ ಮೋದಿ ಯಾಕೆ ಪ್ರಧಾನಿ ಆಗಬಾರದು ಎಂಬ ಚರ್ಚೆಯಲ್ಲಿ ಕೋಚೆ, ಸುರೇಂದ್ರ ಕೌಲಗಿ, ಕಾಸರವಳ್ಳಿ, ಪ್ರಸನ್ನ, ಜಿ.ಕೆ.ಗೋವಿಂದ ರಾವ್ ಮುಂತಾದ ದೊಡ್ಡ ಪಡೆ ಪ್ರಧಾನಿ ಆಗ ಬಾರದೆಂದೇ ಸಕಾರಣ ಪ್ರತಿಪಾದನೆ ಮಾಡಿದ್ದಾರೆ. ಅಭಿಪ್ರಾಯಗಳು ಇತಿಹಾಸಕ್ಕೆ ಸೇರಿ ಮೋದಿ ಪ್ರಧಾನಿ ಆಗಿಬಿಟ್ಟಿದ್ದಾರೆ. ಹಾಗಾದರೆ ಪ್ರಜಾತಂತ್ರಕ್ಕೆ ಎಲ್ಲಿ ರೋಗಬಾಧೆ ತಟ್ಟಿದೆ? (ಏಪ್ರಿಲ್) ಮೋದಿ ಇರುವವರೆಗೆ ಈ ಚರ್ಚೆ ಇರುತ್ತದೆ. ಇಂತಹ ಸಮಕಾಲೀನ ನಿಲುವುಗಳೇ ಸ್ತುತ್ಯಾರ್ಹ ಆರೋಗ್ಯಕರ ಜನಪರ ನಿಲುವುಗಳಿಗೆ ಹೊಸ ಮನುಷ್ಯ ಉದಾರವಾಗಿ ಸ್ಪಂದಿಸಿದೆ.

**ನಮ್ಮ ಸಮಾಜವಾದಿಗಳು:** ಈ ವರ್ಷದ ಮಾಲಿಕೆಯಲ್ಲಿ ಕಾಣಿಸಿಕೊಂಡವರು: ಎಸ್.ವೆಂಕಟರಾಂ, ಜೆ.ಹೆಚ್.ಪಟೇಲ್, ಖಾದ್ರಿ ಶಾಮಣ್ಣ, ಪೊನ್ನಮ್ಮಾಳ್, ಕೆ.ಜಿ.ಮಹೇಶ್ವರಪ್ಪ, ಕಾಶೀನಾಥ್ ಬೇಲೂರೆ–ಒಂದಿಷ್ಟು ಜನಪ್ರಿಯರು. ಆದರೆ ಗೇರುಕಲ್ಲು ಕರಿಬಸಪ್ಪ ಗೌಡರು, ಎನ್.ಕಿಟ್ಟಪ್ಪಗೌಡರು, ಮೂಡಬಾಗಿಲು ರಾಮಪ್ಪ, ಮಲೆನಾಡಿನ ಸೆರಗಿನವರು. ಸೋಗಾಲ ನಾಗಭೂಷಣರ ಪರಿಚಯವೇ ಅದ್ಭುತ ಶೋಧನೆಯಂತಿದೆ. ಅವರ ಸಹೋದರ ಪರಿಚಯಿಸದಿದ್ದರೆ ಇವರ ಕಮಿಟ್‌ಮೆಂಟ್ ಶಿಸ್ತು ತಿಳಿಯುತ್ತಲೇ ಇರಲಿಲ್ಲ. ಹೊಸ ಮನುಷ್ಯ ಇಂತಹ ನೆನಪುಗಳನ್ನು ಹುಡುಕುತ್ತದೆ. ಹೀಗೆ ನವೆದು ಸವೆದು ನೊಂದು ಪಕ್ಷ ಕಟ್ಟಿದ ಬಾ.ಸು.ಕೃಷ್ಣಮೂರ್ತಿ, ಬಳ್ಳಾರಿ ಪ್ರದೇಶದ ಕಾರ್ಮಿಕ ಹೋರಾಟಗಾರ ಸಾಲೋಮನ್ ದಾಸನ್ ಅಪೂರ್ವ ಹೋರಾಟದ ನಮ್ಮ ಸಮಾಜವಾದಿಗಳನ್ನು ಶೋಧಿಸಿ ದಾಖಲಿಸುತ್ತಿರುವ ಸಂಪಾದಕರು ಈ ಕೆಲಸಕ್ಕಾಗಿ ಅಭಿನಂದನಾರ್ಹರು.

**ಪುಸ್ತಕಾವಲೋಕನ:** ಸಮಾಜವಾದಿಗಳನ್ನು ಕುರಿತ ಕೃತಿಗಳಲ್ಲದೆ ಲೋಹಿಯಾ ಕೃತಿಗಳು, ಅಸಮಾನತೆ, ಆರ್.ಎಸ್.ಎಸ್., ಕೇಜ್ರಿವಾಲ್‌ರ ಸಿದ್ಧಾಂತ, ಗಾಂಧಿಕೊಲೆಗಾರನ ವಿಕ್ಷಿಪ್ತತೆ– ಇಂತಹ ಮತ್ತು ಸಮಾಜಪರ ಕೃತಿಗಳ ಸಂಕ್ಷಿಪ್ತ ವಿಮರ್ಶೆ ಕೂಡ ಅರ್ಥಪೂರ್ಣವಾಗಿ ಮೂಡಿಬಂದಿವೆ.

**ಪ್ರೊ: ಬಿ.ಕೃಷ್ಣಪ್ಪ ನೆನಪಿನ ಮಾಲೆ:** ದಲಿತ ಸಂಘರ್ಷ ಸಮಿತಿಯನ್ನು ಹುಟ್ಟುಹಾಕಿ ಕಟ್ಟಿ ಬೆಳೆಸಿ ಕಣ್ಮರೆಯಾದ ಕೃಷ್ಣಪ್ಪನವರ ಪತ್ನಿ ಶ್ರೀಮತಿ ಇಂದಿರಾ ಅವರೇ ಇದನ್ನು ಬರೆಯುತ್ತಿರುವುದರಿಂದ ಇಲ್ಲಿ




ದಾಖಲಾಗುವ ಅಥೆಂಟಿಕ್ ವಿವರಗಳು ಇನ್ನೆಲ್ಲಿಯೂ ನಮಗೆ ಸಿಕ್ಕಿಲ್ಲ. ಅಂತರ್ಜಾತಿ ವಿವಾಹ, ಚಳುವಳಿ,ದಲಿತ ವಿಮೋಚನೆ, ಪ್ರಗತಿಪರ ನಿಲುವು, ಮತ್ತು ಸಾಹಿತ್ಯ ಹೀಗೆ ಪ್ರೊ: ಕೃಷ್ಣಪ್ಪನವರ ಬದುಕಿನ ವಿವರಗಳು ಇಲ್ಲಿ ಪ್ರತಿ ತಿಂಗಳೂ ಪ್ರಧಾನ ಘಟನೆಯೊಂದರ ಮೂಲಕ ಮೈದಾಳಿ ರೂಪುಗೊಳ್ಳುತ್ತಿವೆ. ಶ್ರೀಮತಿ ಇಂದಿರಾ ಕೂಡ ಅಭಿನಂದನಾರ್ಹರು.

ಈ ಚೌಕಟ್ಟಿನ ಹೊರಗೆ ಕೂಡ ದಾಖಲಾಗಿರುವ ಕೆಲವು ಮುಖ್ಯ ಲೇಖನಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ. ಸಾವಯುವ ಕೃಷಿ– ಸಾವಯವ ಬದುಕು: ನನ್ನ ಅನುಭವಗಳು– ಡಾ.ಎ.ಎನ್. ನಾಗರಾಜ್ ವಿಜ್ಞಾನಿ ಆಗಿದ್ದವರು ಕೃಷಿಯೊಂದಿಗೆ ಸರಳ ಬದುಕಿನ ಸಂತೊಷ ನೆಮ್ಮದಿಗಳನ್ನು ಹೇಳುತ್ತಿದ್ದಾರೆ. (ಅಕ್ಟೋಬರ್) ಎಲ್.ಕೆ.ಪೂರ್ಣಿಮಾ– ಕೃಷಿ, ಚಿತ್ರಕಲೆ, ಪ್ರವಾಸ ಹಲವು ಮಾದರಿಗಳಲ್ಲಿ ಚಿಂತಕರು ಇವರು ಮಲೆನಾಡಿಗೆ ಬಂದಿರುವ ಅಕೇಶಿಯಾ ಪಿಡುಗಿನ ವಿರುದ್ದ ಬರೆದಿರುವ ಲೇಖನ (ನವೆಂಬರ್) ಭೂಪಾಲದ ಮಾನವ ಸಂಗ್ರಹಾಲಯ, ಮ್ಯೂಸಿಯಂನ ವಿಶೇಷ ವರದಿ (ಫೆಬ್ರವರಿ) ವಿಭಿನ್ನ ಪ್ರತಿಪಾದನೆಯಂತೆ ಮೂಡಿವೆ.


ಕಳೆದ ವರ್ಷದ ವಿಶೇಷ ಸಂಚಿಕೆ ಪರಿಚಯಿಸುವ ಗೋಪಾಲಗೌಡ, ಕಿಷನ್ ಪಟ್ನಾಯಕ್ ಪ್ರೊ. ಎಂ.ಡಿ.ನಂಜುಂಡಸ್ವಾಮಿ, ಲೋಹಿಯಾ ಹೀಗೆ ಇಡೀ ಸಂಚಿಕೆ ಸಮಾಜವಾದೀ ತಲಸ್ಪರ್ಶದಿಂದ ಸಿಂಗಾರಗೊಂಡಿದೆ–ಹೀಗೆ ಹೇಳುತ್ತಲೇ ಪತ್ರಿಕೆ ಕೊರತೆಗಳನ್ನು ಕಾಣಿಸಿದೆ.

(೧) ಗಾಂಧಿ ಅಂಬೇಡ್ಕರ್ ಲೋಹಿಯಾ– ಇವರನ್ನು ಗುರ್ತಿಸುವಾಗ ಕಾಣುವ ಪ್ರಬುದ್ಧತೆ, ದೂರದರ್ಶಿತ್ವ, ಸಂಯಮ ಕೇಜ್ರಿವಾಲ್, ಮೋದಿಯವರನ್ನು ಸೀಳು ನೋಟದಲ್ಲಿ ನೋಡುವಾಗ ಕಾಣುವುದಿಲ್ಲ. ಲೇಖಕರುಗಳು ಬೀಳಿಸಿದ ಮೋದಿ ಮೇಲಕ್ಕೆದ್ದಿದ್ದಾರೆ. ಸಂಪಾದಕರೇ ಎತ್ತಿ ಹಿಡಿದಿದ್ದ ಕೇಜ್ರಿವಾಲ್ ಎಡವಿದಾಗ ತಪ್ಪು ನಡೆ ಖಂಡಿಸಿ ಕಟುವಾದ ಲೇಖನ ಬರೆಯಲು, ಬರೆಸಲು ಸಾಧ್ಯವಾಗಿಲ್ಲ.

(೨) ಸಂಪಾದಕರ ಟಿಪ್ಪಣಿಗಳು ಬಹುತೇಕ ಒಂದು ಪುಟ, ಕೆಲವೊಮ್ಮೆ ಎರಡು ಪುಟ ಇರಲಿ. ಆದರೆ ಮೇ ತಿಂಗಳಲ್ಲಿ ಅದು ನಾಲ್ಕು ಪುಟಕ್ಕೆ ಹರಿದಾಡಿದೆ. ಸಂಪಾದಕರ ಬರಹ, ಟಿಪ್ಪಣಿ, ಕೆಲವೊಮ್ಮೆ ೧೮ ಪುಟಗಳಲ್ಲಿ ೬–೭ ಪುಟಗಳಷ್ಟಾಗಿ ವಿಭಿನ್ನ ನಿಲುವುಗಳ ಬೇರೆ ಬರಹಗಳ ಮಂಡನೆಗೆ ಅವಕಾಶ ಕೊರತೆಯಾಗಿದೆ.

(೩) ವೈಚಾರಿಕತೆಯ ಗಾಂಭಿರ್ಯ ಭಾರವಾಗಿ ಪತ್ರಿಕೆ ಎಸ್‌ಎಸ್‌ಎಲ್‌ಸಿ ಮಟ್ಟದ ಅಥವಾ ಸಾಮಾನ್ಯ ಓದುಗನನ್ನು ಆಕರ್ಷಿಸಲು ಸೋಲುತ್ತದೆ. ಲಂಕೇಶರು ಈ ಕೊರತೆ ನಿವಾರಿಸಿಕೊಂಡಂತೆ ಬದಲಾವಣೆ ಮಾಡಿಕೊಳ್ಳಬಹುದೆ?

(೪) ನಾಲ್ಕನೇ ವರ್ಷದಲ್ಲಿ ವೈವಿಧ್ಯತೆ ಕಡೆ ಗಮನ ನೀಡಿ ೪ ಪುಟ ಹೆಚ್ಚಿಸಿ, ಹೊಸ ಮನುಷ್ಯನಿಗೆ ಇನ್ನೊಂದಿಷ್ಟು ಚೈತನ್ಯ ನೀಡಬಹುದೆ? ಸ್ವಲ್ಪ ಚಂದಾವನ್ನು ಹೆಚ್ಚಿಸಿರಿ.



ಇಷ್ಟಾಗಿಯೂ ಇದು ಕರ್ನಾಟಕದ, ಕನ್ನಡದ ಏಕೈಕ ಗಂಭೀರ ಚಿಂತನೆಯ ಸಮಾಜವಾದೀ ಪತ್ರಿಕೆ; ನಮ್ಮೆಲ್ಲರ ಪತ್ರಿಕೆ.

**ಕನ್ನಡದ ಹಿರಿಯ ಕಥೆಗಾರರಲ್ಲೊಬ್ಬರಾದ ಎಂ.ಚಂದ್ರಶೇಖರಯ್ಯ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿ ಈಗ ಭದ್ರಾವತಿಯಲ್ಲಿ ನೆಲೆಸಿದ್ದಾರೆ.**

ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ

ನಮ್ಮ ಶುಭಾಶಯಗಳು

**ಅಮರ್ ಟ್ರೇಡರ್ಸ್**

**ಪ್ರೊ: ಶ್ರೀಮತಿ ಹೇಮಾ ಶೆಟ್ಟಿ**

ಏಷಿಯನ್ ಪೇಂಟ್ಸ್ ಡೀಲರ್ಸ್

ಲೈನ್ ಬಜಾರ್

**ಧಾರವಾಡ**

**ದೂ:9880447728**

## ನಾಲ್ಕನೇ ವರ್ಷಕ್ಕೆ
## ಕಾಲಿಡುತ್ತಿರುವ
## '**ಹೊಸ ಮನುಷ್ಯ**' ಪತ್ರಿಕೆಗೆ
## ಹಾರ್ದಿಕ ಶುಭಾಶಯಗಳು

**ಸಿ.ಎಂ ಅಂಗಡಿ**
ಸುಪ್ರೀಂ ಕೋರ್ಟ್ ವಕೀಲರು
ಲಾಯರ್ಸ್ ಚೇಂಬರ್ಸ್(ಓಲ್ಡ್ ಬ್ಲಾಕ್)
ಸುಪ್ರೀಂ ಕೋರ್ಟ್, ನ್ಯೂಡೆಲ್ಲಿ-110 001

**ಮನೆ**: ಫ್ಲ್ಯಾಟ್ ನಂ: 604/2ನೇ ಬ್ಲಾಕ್
ಕೀರ್ತಿ ಅಪಾರ್ಟ್‌ಮೆಂಟ್ಸ್, ಮಯೂರ
ವಿಹಾರ ಫೇಸ್-1(ಎಕ್ಸಟೆನ್ಷನ್)
ದೆಹಲಿ-110 091
ದೂರವಾಣಿ- **09811118334**

**ಪತ್ರಿಕೆಯ ಭವಿಷ್ಯ ಉಜ್ವಲವಾಗಲಿ**
**ಎಂದು ಹಾರೈಸುವ**

# ಶ್ರೀ ವಿಘ್ನೇಶ್ವರ ಪಾಲಿಮರ್ಸ್

ಪಾಲುದಾರರು: **ಮಹಾಂತೇಶ್ ಎಸ್. ನರಗುಂದ**
**ಶೋಭಾ ನರಗುಂದ**

ಎಚ್.ಡಿ.ಪಿ.ಇ. ಪೈಪ್ ತಯಾರಕರು
ಹಾಗೂ ಸೊನಾಲಿಕಾ ಟ್ರ್ಯಾಕ್ಟರ್
ಮತ್ತು ಕೃಷಿ ಉಪಕರಣಗಳ ತಯಾರಕರು

**ಬೇಲೂರು ಕೈಗಾರಿಕಾ ಕೇತ್ರ,**
**ಪಿ.ಬಿ. ರಸ್ತೆ**
**ಧಾರವಾಡ ಜಿಲ್ಲೆ**

ಪತ್ರಿಕೆಯ ನಾಲ್ಕನೇ ವರ್ಷದ
ಹುಟ್ಟುಹಬ್ಬಕ್ಕೆ
ನಮ್ಮ ಶುಭಾಶಯಗಳು

**ಮೆ। ಡಿ.ಎಂ. ಅರಳಿಕಟ್ಟಿ ಇಂಜಿನಿಯರಿಂಗ್ ವರ್ಕ್ಸ್**
(ಫ್ಯಾಬ್ರಿಕೇಶನ್ಸ್ ಕೆಲಸಗಳಲ್ಲಿ ಪರಿಣತರು)

**ಪ್ರೊ: ದವಲ್ ಸಾಬ್ ಎಂ. ಅರಳಿಕಟ್ಟಿ**
ಯಾಲಕ್ಕಿ ಶೆಟ್ಟಿ ಕಾಲೋನಿ
**ಧಾರವಾಡ**

**ಪತ್ರಿಕೆಯ ಎಲ್ಲ ಓದುಗರಿಗೆ**
**ಹಾರ್ದಿಕ ಶುಭಾಶಯಗಳು**

**ಮೆ। ಎಸ್.ಐ. ಅರಳಿಕಟ್ಟಿ ಇಂಜಿನಿಯರಿಂಗ್ ವರ್ಕ್ಸ್**

**ಪ್ರೊ: ಸುಬಾನ್ ಐ. ಅರಳಿಕಟ್ಟಿ**
(ಕಂಟ್ರ್ಯಾಕ್ಟರ್: ಫ್ಯಾಬ್ರಿಕೇಶನ್ಸ್ ಮತ್ತು ಸ್ಟೀಲ್ ಕನ್‌ಸ್ಟ್ರಕ್ಷನ್ ಕೆಲಸಗಳು)

ಯಾಲಕ್ಕಿ ಶೆಟ್ಟಿ ಕಾಲೋನಿ
**ಧಾರವಾಡ**

ದೂ: **9900335142**

ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ
**'ಹೊಸ ಮನುಷ್ಯ'** ಪತ್ರಿಕೆಗೆ

ಹಾರ್ದಿಕ ಶುಭಾಶಯಗಳು

**ಜಿ.ಎಂ. ಪಾಟೀಲ್**
**ಮತ್ತು ಆರ್.ಜಿ ಹೊಸಮನಿ**

ಸಿವಿಲ್ ಕ್ಲಾಸ್ ಕಂಟ್ರಾಕ್ಟರ್‌ಗಳು,

ಹುಬ್ಬಳ್ಳಿ

ದೂ: 95591317402

## ಪತ್ರಿಕೆಯ ನಾಲ್ಕನೇ ವರ್ಷದ
## ಹುಟ್ಟುಹಬ್ಬಕ್ಕೆ
## ನಮ್ಮ ಶುಭಾಶಯಗಳು

**ಟೀಂ ವರ್ಕ್ ಸ್ಪ್ರೇಪೇಂಟಿಂಗ್ ಸಲ್ಯೂಶನ್ಸ್**

**ಪ್ರೊ: ಮೊಯಿನುದ್ದೀನ್ ನದಾಫ್**

ಟಾಟಾ ಮೋಟಾರ್ಸ್ ಮತ್ತು ಟಾಟಾ ಮಾರ್ಕೋಪೋಲೋ
ಕಂಪನಿಗಳ ಲೇಬರ್ ಕಂಟ್ರಾಕ್ಟುದಾರರು
ಧಾರವಾಡ
**ದೂ**: 9036767862

## ಪತ್ರಿಕೆಯ ಎಲ್ಲ ಓದುಗರಿಗೆ
## ಹಾರ್ದಿಕ ಶುಭಾಶಯಗಳು




ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು

ಸಂಪರ್ಕಿಸಿ: ೩೦೬೦೦೦

**ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ**
**ನಮ್ಮ ಶುಭಾಶಯಗಳು**

**ಗ್ಲೋಬಲ್ ಸೇಲ್ಸ್ ಕಾರ್ಪೋರೇಷನ್**


(ಮ್ಯಾಕ್ ಲೂಬ್ರಿಕೆಂಟ್ಸ್ (ಬಿ.ಪಿ.ಸಿ.ಎಲ್)ನ ಸಗಟು ವಿತರಕರು)


ಪಾಲುದಾರರು: **ವಿಜಯ ಸಾಬಳೆ**
ಮತ್ತು **ಉತ್ಕರ್ಷ ಸಾಬಳೆ**

**ಲಕ್ಕಮನಹಳ್ಳಿ ಕೈಗಾರಿಕಾ ಪ್ರದೇಶ**
**ಧಾರವಾಡ**


ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು


ನಮ್ಮ ಪ್ರಕಾಶನದ ಇತ್ತೀಚಿನ ಪ್ರಕಟಣೆಗಳು











ಪುಟ: 76 ಬೆಲೆ: 125 ಪುಟ: 148 ಬೆಲೆ: ರೂ..50 ಪುಟ: 208 ಬೆಲೆ: ರೂ.125 ಪುಟ:318 ಬೆಲೆ: ರೂ.250 ಪುಟ:318 ಬೆಲೆ: ರೂ.250

ಲೋಹಿಯಾ ಪ್ರಕಾಶನ
'ಕ್ಷಿತಿಜ' ಕಪ್ಪಗಲ್ಲು ರಸ್ತೆ, ಗಾಂಧಿನಗರ
ಬಳ್ಳಾರಿ-3
ದೂರವಾಣಿ:08392-257412

ಪತ್ರಿಕೆಯ ಭವಿಷ್ಯ ಉಜ್ವಲವಾಗಲಿ
ಎಂದು ಹಾರೈಸುವ

**ದೊಗ್ಗಳ್ಳಿಗೌಡ್ರು ಪುಟ್ಟರಾಜು**

ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ಸದಸ್ಯರು,
ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ

**SET DeMS ®**

# ಜೆ. ಹೆಚ್. ಪಟೇಲ್ ಕಾಲೇಜು

ಹೇಮಾವತಿ ಹಾಸ್ಟೆಲ್ ಹತ್ತಿರ, ಬಿ.ಐ.ಇ.ಟಿ ರಸ್ತೆ,
ದಾವಣಗೆರೆ-577004.

ನಮ್ಮ ತಂದೆ
ದಿ| .ಟಿ.ಆರ್. ರಾಧಾಕೃಷ್ಣ ಅವರ ನೆನಪಿನಲ್ಲಿ

ಹೊಸ ಮನುಷ್ಯ ವಾರ್ಷಿಕ ವಿಶೇಷಾಂಕ-೨೦೧೮ಕ್ಕೆ
ಹಾರ್ದಿಕ ಶುಭಾಶಯಗಳು

ತಾರಿಣಿ ಶುಭದಾಯಿನಿ
ಮತ್ತು ಕುಟುಂಬ ವರ್ಗ
ಚಿತ್ರದುರ್ಗ

ಪತ್ರಿಕೆಯ ಭವಿಷ್ಯ ಉಜ್ವಲವಾಗಲಿ
ಎಂದು ಹಾರೈಸುವ

**ಡಾ. ಹೆಚ್. ವಿಶ್ವನಾಥ್**

ಪ್ರಾಂಶುಪಾಲರು
ಹಾಗೂ
ಆಡಳಿತ ಮಂಡಳಿ ಸದಸ್ಯರು,
ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ

**ಎಸ್. ಜಿ. ಆರ್ ಪದವಿಪೂರ್ವ ಕಾಲೇಜು**

**ಎಸ್. ಎಂ. ಕೃಷ್ಣ ಶಿಕ್ಷಣ ಮಹಾವಿದ್ಯಾಲಯ**

ಕೈಲಾಸ ರಸ್ತೆ, ಗಾಂಧಿನಗರ, ದಾವಣಗೆರೆ–577004.

**ಪತ್ರಿಕೆಯ ಎಲ್ಲ ಓದುಗರಿಗೆ**
**ಹಾರ್ದಿಕ ಶುಭಾಶಯಗಳು**

ಉತ್ತಮ ವಿಡಿಯೋ ಚಿತ್ರೀಕರಣ
ಮತ್ತು ಛಾಯಾಚಿತ್ರಗಳಿಗಾಗಿ ಸಂಪರ್ಕಿಸಿ

**ಸ್ಟಾರ್ ಸ್ಟುಡಿಯೋ**

**ಪ್ರೊ: ಎಚ್. ಎಂ. ಮೇಸ್ತ್ರಿ**

ಮಳಿಗೆ ನಂ.2, ತಾಲ್ಲೂಕು ಪಂಚಾಯ್ತ್ ಸಂಕೀರ್ಣ
ರೇಲ್ವೇ ಸ್ಟೇಷನ್ ರಸ್ತೆ
**ಧಾರವಾಡ** ದೂ: 9740565552

ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ
'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು

**ಮೆ। ಬ್ರೈಟ್ ಏಜೆನ್ಸೀಸ್**
ಎಲ್.ಎಲ್. ಆರ್. ರಸ್ತೆ
ಶಿವಮೊಗ್ಗ–577201(ಕರ್ನಾಟಕ)

ದೂ: 08182–290057
ಟೆಲಿಫ್ಯಾಕ್ಸ್: 08182–279850
e-mail: brightagency@dataone.in
brightagenciessmg@gmail.com

ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ
'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು

**ಅಶೋಕ ಸಬರದ ಮತ್ತು ಕುಟುಂಬ**
ಶ್ರೀನಗರ, **ಧಾರವಾಡ**

---

ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು

**ಡಾ. ಕೊಟ್ರೇಶ್ ಉತ್ತಂಗಿ, ಎಂ. ಗುರುಸಿದ್ದಸ್ವಾಮಿ, ಕಲಿವೀರ ಕಳ್ಳಿಮನಿ,**

**ಆರ್. ಬಿ. ಹನುಮಂತಪ್ಪ, ಉಮೇಶ್‌ಬಾಬು, ಪ್ರೊ. ಪ್ರಶಾಂತ್‌ರಾಜ್,**

**ಪ್ರಹ್ಲಾದ್ ಎಸ್ ಭಟ್, ಪ್ರೊ. ಚಂದ್ರವೀರಣ್ಣ, ಗಿರೀಶ್ ಎಸ್ ದೇವರಮನೆ,**

**ಎನ್. ಎಸ್. ಸತೀಶ್, ಲಲಿತ್‌ಕುಮಾರ್ ಜೈನ್, ಎನ್. ಬಿ. ಲೀಲಾ,**

**ಪಿ. ಎಸ್. ರಾಧಾ, ಹೆಚ್. ಎನ್ ಶೋಭಾ,**

ಸಂಪನ್ಮೂಲ ವ್ಯಕ್ತಿಗಳು:

**ಜಿಲ್ಲಾ ಬಾಲಭವನ, ದಾವಣಗೆರೆ**

**ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ**
**ನಮ್ಮ ಶುಭಾಶಯಗಳು**

ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು, ಮುಳಗಲೀಯದು ಬೆಂಡು
ಇಂತಿಪ್ಪ ಸಂಸಾರ ಶರಧಿಯ ದಾಟಿಸಿ, ಕಾಲಂತಕನೇ ಕಾಯೋ
ಕೂಡಲ ಸಂಗಮದೇವ

ನಮ್ಮನ್ನಗಲಿದ
ಜ್ಞಾನೇಂದ್ರ ಪ್ರಭು ಅವರ ನೆನಪಿನಲ್ಲಿ.

ಟಿಎ.ಲ್ ರೇಖಾಂಬ
ಚಿ। ಸತ್ಯಕಾಮ.

ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ
ನಮ್ಮ ಶುಭಾಶಯಗಳು

**ಜಿ.ಎಸ್. ಜಯದೇವ**
ಚಾಮರಾಜನಗರ

ಪತ್ರಿಕೆಯ ನಾಲ್ಕನೇ ವರ್ಷದ
ಹುಟ್ಟುಹಬ್ಬಕ್ಕೆ
ನಮ್ಮ ಶುಭಾಶಯಗಳು

**ಜಾಕೀರ್ ಹುಸೇನ್ ಟಿ. ಶಿಬಾರಗಟ್ಟಿ**

ಮೊದಲ ದರ್ಜೆ ಸಿವಿಲ್ ಕಂಟ್ರ್ಯಾಕ್ಟುದಾರರು

**ಕಲ್ಯಾಣ ನಗರ**

**ಧಾರವಾಡ**

ದೂ: 9902673193

**ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ**
**ನಮ್ಮ ಶುಭಾಶಯಗಳು**

**ಎಂ. ಚಂದ್ರಶೇಖರಯ್ಯ**
**ಮತ್ತು ಶ್ರೀಮತಿ ರೇಣುಕಾ**
**ಭದ್ರಾವತಿ**

ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು

ಫ್ಲ್ಯಾಟುಗಳು ಮತ್ತು ಸ್ವತಂತ್ರ ಮನೆಗಳ
ಖರೀದಿ ಮತ್ತು ನಿರ್ಮಾಣಕ್ಕಾಗಿ ಸಂಪರ್ಕಿಸಿ:

**ಶಿವ ಬಿಲ್ಡರ್ಸ್ ಅಂಡ್ ಡೆವಲಪರ್ಸ್**
**ಪ್ರೊ.: ಶಶಿಧರ್ ಎಸ್. ಕಡಲೂರು**
ನಂ.3, ಎಸ್.ಜೆ.ವಿ. ಕಾಂಪ್ಲೆಕ್ಸ್
ಮೆಂಟಲ್ ಆಸ್ಪತ್ರೆ ಎದುರು, ಧಾರವಾಡ

ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ
'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್(ರಿ)**
**ಗೋಕಾಕ**

ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ
'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು

**ಎ. ಪ್ರಸನ್ನ**
**ಬಿ.ಕೆ. ಮೂರ್ತಿ**
**ಬಿ.ಎಸ್. ತಿಪ್ಪೇಸ್ವಾಮಿ**
**ಕೆ.ಪುಟ್ಟಸ್ವಾಮಿ**

ಪತ್ರಿಕೆಯ ಭವಿಷ್ಯ ಉಜ್ವಲವಾಗಲಿ
ಎಂದು ಹಾರೈಸುವ

**ಆಡಳಿತ ಮಂಡಳಿ ಸದಸ್ಯರು,**

**ಮುಖ್ಯೋಪಾಧ್ಯಾಯರು, ಶಿಕ್ಷಕರು**
**ಹಾಗೂ ಸಿಬ್ಬಂದಿ ವರ್ಗ**

**ನಿಸರ್ಗ ವಿದ್ಯಾನಿಕೇತನ**

**ಸಿಡೇದಹಳ್ಳಿ, ನಾಗಸಂದ್ರ ಅಂಚೆ,**
**ಬೆಂಗಳೂರು–560073.**

**ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ**
**ನಮ್ಮ ಶುಭಾಶಯಗಳು**

**ನಮ್ ಟೀಮ್ !?**
**ಶಿವಮೊಗ್ಗ**
**ಸ್ಥಾ:2000**



- 45ಕ್ಕೂ ಹೆಚ್ಚು ಸ್ವಂತ ಪ್ರಯೋಗ
- 100ಕ್ಕೂ ಹೆಚ್ಚು ನಾಟಕಗಳ ಆಹ್ವಾನ
- ಪ್ರತಿ ವರ್ಷ ನೀನಾಸಂ ನಾಟಕೋತ್ಸವ
- ರಂಗಸುಗ್ಗಿ, ರಂಗರಂಗು, ವೈಶಾಖ ರಂಗ, ತೇಜಸ್ವಿ ನೆನಪಿನ ನಾಟಕೋತ್ಸವ, ಕಾಲೇಜುರಂಗ, ಏಕವ್ಯಕ್ತಿ ರಂಗೋತ್ಸವ, ಮಳೆಬಿಲ್ಲು...

ಸಂಪರ್ಕ ವಿಳಾಸ:
ನಂ.159, ಅಂಬರ, ಮೂರನೇ ಮುಖ್ಯ ರಸ್ತೆ,
ಮೊದಲನೇ ತಿರುವು, ಎಲ್‌ಬಿಎಸ್ ನಗರ,
ಶಿವಮೊಗ್ಗ. ಮೊ: 9844518866

ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ
ನಮ್ಮ ಶುಭಾಶಯಗಳು

**ಪ್ರತಿಭಾ ಪಿ ದೊಗ್ಗಳ್ಳಿ**
**ಅಧ್ಯಕ್ಷರು ಹಾಗೂ ಸದಸ್ಯರು,**
**ಎಂ. ಸಿ. ಸಿ ಯೂತ್ಸ್ ಕ್ಲಬ್**
(SET DeMS)
**ದಾವಣಗೆರೆ**

ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು

**ಪ್ರಜ್ಞಾ**
ಸ್ವಸ್ಥ ಬದುಕು ಮತ್ತು ಪರಿಸರಕ್ಕಾಗಿ ವೇದಿಕೆ
ನೇಸರ, ಪ್ರಶಾಂತನಗರ
ದೇವರಾಯಪಟ್ಟಣ ಮುಖ್ಯ ರಸ್ತೆ
ತುಮಕೂರು–4
ಮೊ: 9343563409

*'ನೀವು ನಿಮ್ಮ ಜನರಿಗೆ ಭೂಮಿ, ಹಕ್ಕಿ,*
*ಹೂವು, ಮರಗಳನ್ನು ಪ್ರೀತಿಸುವುದನ್ನು*
*ಹೇಳಿಕೊಡದಿದ್ದಲ್ಲಿ*
*ಉಳಿದೆಲ್ಲ ಕಲಿಕೆಗಳೂ ವ್ಯರ್ಥ*
*ಬನ್ನಿ, ಗೆಳೆಯರೇ, ನಮ್ಮೊಡನೆ ಸೇರಿಕೊಳ್ಳಿ'*
–ರಸ್ಕಿನ್

ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ
'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು

**ಶಶಿಧರ್ ಎಸ್. ಕಡಲೂರು**
*ಡ್ರಗಿಸ್ಟ್ಸ್ ಅಂಡ್ ಕೆಮಿಸ್ಟ್ಸ್*
ನಂ.3, ಎಸ್.ಜೆ.ವಿ. ಕಾಂಪ್ಲೆಕ್ಸ್
ಮೆಂಟಲ್ ಆಸ್ಪತ್ರೆ ಎದುರು, **ಧಾರವಾಡ**

ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು

**ಎಚ್.ಎಸ್. ಪುಷ್ಪ**
ನಂ. 95, ವೈ.ವಿ. ಅಣ್ಣಯ್ಯ ರಸ್ತೆ
ಯಲಚೇನಹಳ್ಳಿ
**ಬೆಂಗಳೂರು-78**

ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು

**ಡಾ. ಎಚ್.ಎಸ್. ರುದ್ರೇಶ್**
**ಎದೆರೋಗ ತಜ್ಞರು**
**ಶಿವಮೊಗ್ಗ**

**ಪತ್ರಿಕೆಯ ಭವಿಷ್ಯ ಉಜ್ವಲವಾಗಲಿ**
**ಎಂದು ಹಾರೈಸುವ**

**ವೈ.ಎಸ್. ವತ್ಸಲಾ**
**ಮ್ಯಾನೇಜರ್,: ಕೆನರಾ ಬ್ಯಾಂಕ್**
**ಮನೆ ನಂ.1505, 26ನೇ ಮೇನ್**
**40ನೇ ಕ್ರಾಸ್, 9ನೇ ಬ್ಲಾಕ್,**
**ಜಯನಗರ, ಬೆಂಗಳೂರು-69**

**ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ**
**ನಮ್ಮ ಶುಭಾಶಯಗಳು**

**ಸಿ. ಚಿದಾನಂದ**
**ವಿಜಯಲಕ್ಷ್ಮಿ ಹಿರೇಮಠ**
ಬೆಂಗಳೂರು

---

**ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ**
**'ಹೊಸ ಮನುಷ್ಯ' ಪತ್ರಿಕೆಗೆ**
**ಹಾರ್ದಿಕ ಶುಭಾಶಯಗಳು**

**ಅನಘ ಪ್ರಶಾಂತ್**
**ಇವರ ತಾತ ಮತ್ತು ಅಜ್ಜಿ**
ಬೆಂಗಳೂರು

ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ
'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು

**ಎಂ. ನಾಗೇಂದ್ರ ರಾವ್**
**ಹಿರಿಯ ಸಮಾಜವಾದಿ ಮತ್ತು ವಕೀಲರು**
**ಬೆಂಗಳೂರು**

---

ಪತ್ರಿಕೆಯ ಭವಿಷ್ಯ ಉಜ್ವಲವಾಗಲಿ
ಎಂದು ಹಾರೈಸುವ

**ಡಾ. ಹನೂರು ಕೃಷ್ಣಮೂರ್ತಿ**
**ಮತ್ತು ಕುಟುಂಬ**
**ಮೈಸೂರು**

ಆ ಪುಟ್ಟ ಹಕ್ಕಿಯೂ ಆಗಲೇ ಎದ್ದುಬಿಟ್ಟಿದೆ
ಅಗೋ ಗಲಾಟೆ ಮಾಡುತ್ತಾ ಗೂಡು ಸರಿ ಮಾಡಿಕೊಳ್ಳುತ್ತಿದೆ
ಜಗಳವೋ ಸ್ನೇಹವೋ,
ಸುತ್ತಲ ಜಗದೊಡನೆ ತನ್ನ ಬೆಸೆದುಕೊಳ್ಳುತ್ತಿದೆ
ಗೊತ್ತಾಯಿತೇ ಮಾನವ>
ಆ ಪುಟ್ಟ ಹಕ್ಕಿಗೆ ತಿಳಿದದ್ದು ನಿನಗೆ ತಿಳಿಯುವುದಿಲ್ಲವೇ?

–ಟ್ಯಾಗೋರ್

ಎಂ.ಎಸ್. ರುದ್ರೇಶ್ವರ ಸ್ವಾಮಿ
ಶ್ರೀಮತಿ ವನಜಾಕ್ಷಿ
ಬೆಂಗಳೂರು

ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು

ಎಚ್. ಎಸ್. ಅನುಪಮಾ
ಕವಲಕ್ಕಿ

ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ
ನಮ್ಮ ಶುಭಾಶಯಗಳು

ಎಂ. ರಾಜು
ಮಂಜುಳಾ ರಾಜು
ಶಿವಮೊಗ್ಗ

ಪತ್ರಿಕೆಯ ಎಲ್ಲ ಓದುಗರಿಗೆ
ಹಾರ್ದಿಕ ಶುಭಾಶಯಗಳು

ಕೆ. ಶ್ರೀದೇವಿ
ಉಪನಿರ್ದೇಶಕರು
ಅಂಚೆ ತರಬೇತಿ ಕೇಂದ್ರ
ಮೈಸೂರು

ಪತ್ರಿಕೆಯ ಭವಿಷ್ಯ ಉಜ್ವಲವಾಗಲಿ
ಎಂದು ಹಾರೈಸುವ

**ಪ್ರೊ. ಬಿ.ಪಿ. ವೀರೇಂದ್ರ ಕುಮಾರ್**
**ಶ್ರೀಮತಿ ರೂಪಕಲಾ**
ಬೆಂಗಳೂರು

ಪತ್ರಿಕೆಯ ನಾಲ್ಕನೇ ವರ್ಷದ ಹುಟ್ಟುಹಬ್ಬಕ್ಕೆ
ನಮ್ಮ ಶುಭಾಶಯಗಳು

**ಎನ್. ಆರ್. ಬಾಲಸುಬ್ರಮಣ್ಯ**
**(ಹಿರಿಯ ಮ್ಯಾನೇಜರ್, ಕೆನರಾ ಬ್ಯಾಂಕ್)**
**ಮತ್ತು ಕುಟುಂಬ ವರ್ಗ**
**ಮುಂಬೈ**

**ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವ**
**'ಹೊಸ ಮನುಷ್ಯ' ಪತ್ರಿಕೆಗೆ**
**ಹಾರ್ದಿಕ ಶುಭಾಶಯಗಳು**

**ರವಿ ಸಸಿತೋಟ**
**ಶಿವಮೊಗ್ಗ**

**ತಿಂಗಳ ಸಾಲುಗಳು**

ನೀವು ನಿಮ್ಮ ನೌಕರರಿಗೆ ನೀವು ತಿನ್ನುವುದನ್ನು ತಿನ್ನಿಸಿ, ನೀವು ಉಡುವುದನ್ನು ಉಡಿಸಿ

**ಕುರ್ರಾನ್**

**ವಿಶೇಷ ಸಂಚಿಕೆಗೆ ಶುಭಾಶಯಗಳು**

–ಬಿ. ಸುರೇಶ
ಡಾ. ವಿಜಯಾ

ಐದನೇ ವರ್ಷಕ್ಕೆ ಯಶಸ್ವಿಯಾಗಿ ಕಾಲಿಡುತ್ತಿರುವ ಹೊಸ ಮನುಷ್ಯ ಮಾಸಿಕಕ್ಕೆ ಹಾರ್ದಿಕ ಶುಭಾಶಯಗಳು



# ವಿವೇಕ ಬ್ಯೂರೊ ಹಾಸನ.

ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದು, ಕೇಂದ್ರ ಲೋಕಸೇವಾ ಆಯೋಗದ 2014ರ ನಾಗರೀಕ ಸೇವೆಗಳ(ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್ ಇತ್ಯಾದಿ) ಪರೀಕ್ಷೆಯಲ್ಲಿ 291ನೇ ರ್‍ಯಾಂಕ್ ಗಳಿಸಿ ಆಯ್ಕೆಯಾಗಿರುವ

**IAS IPS**

## ಡಾ. ವಿನೋದ್‌ಕುಮಾರ್ ಅವರಿಗೆ

## ಹೃತ್ಪೂರ್ವಕ ಅಭಿನಂದನೆಗಳು

**IFS IRS**

**"I am very glad to inform the CSP-2015 Aspirants that Vinod has achieved success In his FIRST ATTEMPT as per my Expectations with my First Batch of 50 days Residential Training Programme Specially Designed for him."**
**-B. Shivakumar**




**"Shivakumar Sir is the best in Karnataka for Mental Ability topics. There is discipline and methodology in teaching from him. So I did my NTSE and IAS Prelims with him."**
**- Dr. Vinod Kumar**

# ಡಿಗ್ರಿ ನಂತರ ಮುಂದೇನು? ಉದ್ಯೋಗ !

ಸರಿಯಾದ ಮಾಹಿತಿ-ಮಾರ್ಗದರ್ಶನ-ತರಬೇತಿಯಿಂದ ಸಮಯ-ಪರಿಶ್ರಮ-ಹಣ ಇವುಗಳು ಅನಗತ್ಯವಾಗಿ ವ್ಯಯವಾಗುವುದನ್ನು ತಡೆಯಬಹುದು.

ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ **IBPS, RBI, SBI, RRB**

ಇವುಗಳ ಮೂಲಕ ಸಾವಿರಾರು ಕ್ಲರಿಕಲ್ ಹಾಗೂ ಆಫೀಸರ್ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಭರ್ತಿ ಮಾಡಲಾಗುತ್ತಿದೆ.
ಡಿಗ್ರಿ ಪಾಸಾಗಿರುವ ವಿದ್ಯಾರ್ಥಿಗಳು (ಬಿಎ, ಬಿಕಾಂ, ಬಿಎಸ್ಸಿ, ಬಿಬಿಎಂ, ಬಿಸಿಎ, ಬಿಇ ಇತ್ಯಾದಿ)
ಸರಿಯಾದ ಮಾಹಿತಿ-ಮಾರ್ಗದರ್ಶನ ತರಬೇತಿ ಹಾಗೂ ನಿರಂತರ ಪರಿಶ್ರಮ ಇವುಗಳಿಂದ ತಮಗೆ ಇಷ್ಟವಾದ ಉದ್ಯೋಗ ಪಡೆಯಬಹುದು.
ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಯಾರಿಗೂ ಲಂಚ ಕೊಡದೇ ಯಾರ ಶಿಫಾರಸ್ಸಿಗೂ ಹೆಣಗಾಡದೆ ಉದ್ಯೋಗ ಪಡೆಯಲು ಸಾಧ್ಯವಿದೆ.

ಬ್ಯಾಂಕಿಂಗ್ ಕ್ಷೇತ್ರ ಇಷ್ಟವಾಗದಿದ್ದರೆ

# UPSC, SSC, KPSC, RRB, NIC, LIC

ಇನ್ನೂ ಮುಂತಾದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಂಸ್ಥೆಗಳು ರಾಷ್ಟ್ರಾದ್ಯಂತ ಪ್ರತಿ ವರ್ಷ ಖಾಲಿ ಆಗುವ ಸಾವಿರಾರು ವಿವಿಧ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಭರ್ತಿ ಮಾಡುತ್ತದೆ.

ಎಸ್.ಜಿ.ಪಾರ್ಕ್ ರಸ್ತೆ, ಕೆ.ಆರ್. ಪುರಂ, ಹಾಸನ. ದೂ : 08172-268253, 9448867087

Regd. News Paper RNI No. KARKAN/2012/47568 Rgd. No. KA/SK/SMG - 1209/2013 - 15





# ಕನ್ನಡವೇ ಸತ್ಯ–ಕನ್ನಡವೇ ನಿತ್ಯ

ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು
– ಕುವೆಂಪು

ಒಂದೇ ಒಂದೇ ಒಂದೇ
ಕರ್ನಾಟಕ ಒಂದೇ
ಇಂದೇ, ಮುಂದೇ, ಎಂದೇ
ಕರ್ನಾಟಕ ಒಂದೇ
– ಅಂಬಿಕಾತನಯದತ್ತ

ಆರಂಕುಶವಿಟ್ಟೊಡಂ ನೆನೆವುದೆನ್ನ
ಮನಂ ಬನವಾಸಿ ದೇಶಮಂ
– ಪಂಪ

"ಕನ್ನಡಂ ಕತ್ತುರಿಯಲ್ತೆ ?"
- ಮುದ್ದಣ-ಮನೋರಮೆ

**ಈ ಸಾಲುಗಳು 2000 ವರ್ಷಗಳ ಇತಿಹಾಸವುಳ್ಳ ಕನ್ನಡ ನಾಡು, ಕನ್ನಡಿಗರು ಮತ್ತು ಕನ್ನಡ ಭಾಷೆಯ ಕುರಿತು ಅದ್ಭುತ ಕಲ್ಪನೆ ಮೂಡಿಸುತ್ತವೆ. ಸರಳ, ಸುಂದರ ಮತ್ತು ಸಮೃದ್ಧವಾಗಿರುವ ಕನ್ನಡ ಭಾಷೆಯ ಸಾತ್ವಿಕತೆ, ಕಾವೇರಿಯಿಂದ ಗೋದಾವರಿಯವರೆಗೆ ವಿಶಾಲವಾಗಿ ಹರಡಿ ಮೆರೆದ ಕನ್ನಡನಾಡಿನ ಭವ್ಯತೆ ಕನ್ನಡಿಗರೆಲ್ಲರನ್ನು ಪುಳಕಿತಗೊಳಿಸುತ್ತವೆ.**

ಕುಮಾರ ಗಂಧರ್ವ, ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ, ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್, ವೀಣೆ ಶೇಷಣ್ಣ, ಪಿಟೀಲು ಚೌಡಯ್ಯ, ದೊರೆಸ್ವಾಮಿ ಅಯ್ಯಂಗಾರ್, ಅಬ್ದುಲ್ ಕರೀಂ ಖಾನ್‌ರಂತಹ ಶ್ರೇಷ್ಠ ಸಂಗೀತ ಕಲಾವಿದರ ಪರಂಪರೆಯ ಹೆಮ್ಮೆ ಈ ನಾಡಿನದು.

ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಕನ್ನಡ ಸಾಹಿತ್ಯ ಸಿರಿಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಹೊಸ ಮೆರುಗನ್ನು ನೀಡಿವೆ.

ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ, ಸರ್ ಸಿ.ವಿ. ರಾಮನ್‌ರಂತಹ ದಕ್ಷ ಆಡಳಿತಗಾರರು, ವಿಜ್ಞಾನಿಗಳು ಈ ನಾಡಿನಲ್ಲಿ ಹೆಮ್ಮೆಯ ಕುಡಿಗಳಾಗಿ ವಿಶ್ವ ವಿಖ್ಯಾತಿಯನ್ನು ಗಳಿಸಿರುವುದು ಕನ್ನಡ ಮತ್ತು ಕರ್ನಾಟಕದ ಸರ್ವತೋಮುಖ ವೈಭವಕ್ಕೆ ಕನ್ನಡಿಯಾಗಿದೆ.

ಇಂದು ಕರ್ನಾಟಕದ ರಾಜಧಾನಿ ಬೆಂಗಳೂರು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ "ಭಾರತದ ಸಿಲಿಕಾನ್ ಕಣಿವೆ" ಎಂದೇ ಅಂತರ್‌ರಾಷ್ಟ್ರೀಯ ಮನ್ನಣೆ ಗಳಿಸಿದೆ.

ಹೀಗೆ ಕನ್ನಡ ನಾಡು ಸಾಹಿತ್ಯ, ಸಂಗೀತ, ಕಲೆ, ಕ್ರೀಡೆ, ವಿಜ್ಞಾನ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನುಪಮ ಪ್ರಗತಿ ಸಾಧಿಸಿದೆ. ಈ ಅದ್ಭುತ ಪ್ರಗತಿಗೆ ಕಾಲಕಾಲಕ್ಕೆ ಬೆನ್ನೆಲುಬಾಗಿ ನಿಂತು ಪೋಷಿಸಿದ ಆಡಳಿತಗಾರರ ಕೊಡುಗೆಗಳು ಸಹ ಅಮೂಲ್ಯ.



